ಸಂಚಿಕೆ 19 | ಆಗಸ್ಟ್ 2024
ಚಾತುರ್ಮಾಸಿಕ | ಬೆಂಗಳೂರು

Azim Premji University

ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿ

# ಲರ್ನಿಂಗ್ ಕರ್ವ್

ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯ ಒಂದು ಪ್ರಕಟಣೆ



## ಸುಸ್ಥಿರ ಶಾಲಾ ಸಂಸ್ಕೃತಿಗೆ ಅಭ್ಯಾಸಗಳು

**ಸಂಪಾದಕ ಮಂಡಳಿ**

**ಶೆಫಾಲಿ ತ್ರಿಪಾಠಿ ಮೆಹ್ತಾ,** ಸಹ ಸಂಪಾದಕರು
ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
ಸರ್ವೆ ಸಂ. 66, ಬೂರುಗುಂಟೆ ಗ್ರಾಮ
ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
ಬೆಂಗಳೂರು 562125, ಕರ್ನಾಟಕ
shefali.mehta@azimpremjifoundation.org

**ಶೋಭಾ ಲೋಕನಾಥನ್ ಕವೂರಿ**
ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
ಸರ್ವೆ ಸಂ. 66, ಬೂರುಗುಂಟೆ ಗ್ರಾಮ
ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
ಬೆಂಗಳೂರು 562125, ಕರ್ನಾಟಕ
chandrika@azimpremjifoundation.org

**ಚಂದ್ರಿಕಾ ಮುರಳೀಧರ್**
ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
ಸರ್ವೆ ಸಂ. 66, ಬೂರುಗುಂಟೆ ಗ್ರಾಮ
ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
ಬೆಂಗಳೂರು 562125, ಕರ್ನಾಟಕ
nimrat.kaur@azimpremjifoundaation.org

**ನಿಮ್ರತ್ ಖಾಂಡ್‌ಪುರ್**
ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
ಸರ್ವೆ ಸಂ. 66, ಬೂರುಗುಂಟೆ ಗ್ರಾಮ
ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
ಬೆಂಗಳೂರು 562125, ಕರ್ನಾಟಕ
shobha.kavoori@azimpremjifoundation.org

**ಸಲಹೆಗಾರರು**

**ಹೃದಯ್ ಕಾಂತ್ ದಿವಾನ್**
**ಸಚಿನ್ ಮುಲೆ**
**ಸುಧೀಶ್ ವೆಂಕಟೇಶ್**
**ಉಮಾಶಂಕರ ಪೆರಿಯೋಡಿ**

**ಪಬ್ಲಿಕೇಶನ್ಸ್ ತಂಡ**

**ಲೋಕರಾಮ್ ವಿ ಜಿ**
**ಮೀರಾ ಪ್ರಭು**
**ಸಂಬಿತ್ ಮಹಾಪಾತ್ರ**
**ಶಹನಾಜ್ ಬೇಗಂ**

---

**ಅನುವಾದ ಸಂಪಾದಕರು**
ಮಧುಕರ ಎಸ್ ಪುಟ್ಟಿ (ಕನ್ನಡ)
ರಾಜೇಶ್ ಉತ್ಸಾಹಿ (ಹಿಂದಿ)

**ಸಂಪಾದಕರ ಕಛೇರಿ**
ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ
ಸರ್ವೆ ಸಂ. 66, ಬೂರುಗುಂಟೆ ಗ್ರಾಮ
ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
ಬೆಂಗಳೂರು 562125, ಕರ್ನಾಟಕ
Email: publications@apu.edu.in
Website: www.azimpremjiuniversity.edu.in

**ಮುಖಪುಟ ಚಿತ್ರ**
ಅಜೀಂ ಪ್ರೇಮ್‌ಜಿ ಫೌಂಡೇಷನ್ ಆರ್ಕೈವ್ಸ್

**ವಿನ್ಯಾಸ**
ಶ್ರೀಜ ಕ್ರಿಯೇಷನ್

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಲರ್ನಿಂಗ್ ಕರ್ವ್, ಎಂಬುದು ಶಿಕ್ಷಣವನ್ನು ಕುರಿತಾದ ಪ್ರಕಟನೆಯಾಗಿದೆ. ಇದು ಸಾರ್ವಕಾಲಿಕ ಮಹತ್ವವುಳ್ಳ ಮತ್ತು ಮೌಲ್ಯವುಳ್ಳ ಸಾಂದರ್ಭಿಕ ಹಾಗೂ ನಿರ್ದಿಷ್ಟ ವಿಷಯಾಧಾರಿತ ಚರ್ಚಾ ವಿಷಯಗಳನ್ನು ಶಿಕ್ಷಕರು, ಶಿಕ್ಷಕ ಶಿಕ್ಷಕರು, ಶಾಲಾ ಮುಖ್ಯಸ್ಥರು, ಶಿಕ್ಷಣ ಕಾರ್ಯಕರ್ತರು, ಪೋಷಕರು ಹಾಗೂ ಸರ್ಕಾರೇತರ ಸಂಸ್ಥೆಗಳಿಗೆ ತಲುಪಿಸುವ ಮಹತ್ತರ ಆಶಯವನ್ನು ಹೊಂದಿದೆ. ಇದು ವಿಭಿನ್ನ ಅಭಿಪ್ರಾಯಗಳನ್ನು ಮತ್ತು ದೃಷ್ಟಿಕೋನಗಳನ್ನು ವ್ಯಕ್ತಪಡಿಸಲು ವೇದಿಕೆಯನ್ನು ಒದಗಿಸುವುದೇ ಅಲ್ಲದೆ ಹೊಸ ಹೊಸ ಮತ್ತು ತಜ್ಞ ವಿಚಾರಧಾರೆಗಳನ್ನು, ಆಲೋಚನೆಯನ್ನು ಪ್ರಚೋದಿಸುವ ದೃಷ್ಟಿಕೋನಗಳನ್ನು ಹಾಗೂ ನವೀನ ಬೋಧನಾ ವಿಧಾನಗಳ ಕಥನಗಳನ್ನು ಹಂಚಿಕೊಳ್ಳಲು ಉತ್ತೇಜಿಸುತ್ತದೆ. ಶೈಕ್ಷಣಿಕ ರಂಗದ ಈ ವಿಚಾರ ಮಂಥನದಲ್ಲಿ ಶೈಕ್ಷಣಿಕ ಜ್ಞಾನ ಮತ್ತು ಪ್ರಾಯೋಗಿಕ ಅನುಭವಗಳ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವ ಪ್ರಯತ್ನ ನಮ್ಮದಾಗಿದೆ.

ಈ ಸಂಚಿಕೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಆಯಾ ಲೇಖಕರದ್ದೇ ಆಗಿರುತ್ತವೆ ಮತ್ತು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಅಧಿಕೃತ ಕಾರ್ಯನೀತಿ ಅಥವಾ ನಿಲುವನ್ನು ಪ್ರತಿಬಿಂಬಿಸುವುದಿಲ್ಲ.

# ಸಂಪಾದಕರ ಮಾತು



ನಾಲ್ಕನೇ ತರಗತಿಯ ವಿದ್ಯಾರ್ಥಿನಿಯೊಬ್ಬಳು ಅವಳ ತಂದೆಯನ್ನು ಕಳೆದುಕೊಂಡಿದ್ದಳು. ಒಂದು ತಿಂಗಳ ನಂತರ ಅವಳು ಮತ್ತೆ ಶಾಲೆಗೆ ಮರಳಿ ಬಂದಳು. ವಾಪಸು ಬಂದ ಅವಳು ಯಾರೊಡನೆಯೂ ಮಾತನಾಡಲಿಲ್ಲ ಮತ್ತು ಯಾರನ್ನೂ ದಿಟ್ಟಿಸದೆ ತರಗತಿಯ ಕೊನೆಯ ಬೆಂಚಿನಲ್ಲಿ ಕುಳಿತುಕೊಳ್ಳಲು ಹೋದಳು. ಪ್ರತಿದಿನವೂ ತರಗತಿಗೆ ಬರುತ್ತಿದ್ದ ಅವಳು ಯಾರೊಡನೆಯೂ ಮಾತನಾಡದೆ ಕೊನೆಯ ಬೆಂಚಿನಲ್ಲಿ ಕೂರುತ್ತಿದ್ದಳು ಮತ್ತು ಯಾವುದೇ ತರಗತಿ ಚಟುವಟಿಕೆಗಳಲ್ಲಿ ಅಥವಾ ಆಟೋಟಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಮತ್ತೆ ಅವಳೆಂದೂ ನಗಲಿಲ್ಲ ಅಥವಾ ಆಟವಾಡಲಿಲ್ಲ. ಅವಳ ಎಲ್ಲಾ ಸಹಪಾಠಿಗಳು 9 ರ ವಯಸ್ಸಿನ ಮಕ್ಕಳಿಗೆ ಸಹಜವಾದ ಕುತೂಹಲ ಹಾಗೂ ಬಾಲ ಕುಚೇಷ್ಟೆಗಳಿಂದ ಅವಳನ್ನು ಸುತ್ತುವರಿಯುತ್ತಿದ್ದರು. ಅವರಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ, ಅವರುಅವಳೊಡನೆ ಮಾತನಾಡಬೇಕಾ ಅಥವಾ ಅವಳನ್ನು ಆಟಕ್ಕೆ ಕರೆಯಬೇಕಾ ಗೊತ್ತಿರಲಿಲ್ಲ. ಕೆಲವರಿಗೆ ಅವಳ ಕತೆ ಕೇಳಿ ತುಂಬಾ ಬೇಜಾರಾಗಿತ್ತು, ಕೆಲವರು ಅಲಕ್ಷ್ಯ ತೋರುತ್ತಿದ್ದರು. ಅವಳು ಯಾರೊಂದಿಗೂ ಬೆರೆಯದೆ ತನ್ನ ಪಾಡಿಗೆ ತಾನಿದ್ದದ್ದು ಅವರಿಗೆ ಅನುಕೂಲವೇ ಆಗಿ ತೋರಿತು. ಅವರು ಯಾರೂ 'ಕಠಿಣ'ವೆನಿಸಿದ ಏನನ್ನೂ ಮಾಡಲಿಲ್ಲ.

ದಶಕಗಳ ನಂತರ, ಆ ಹುಡುಗಿಯ  ಸಹಪಾಠಿಗಳಲ್ಲಿ ಒಬ್ಬಳಾಗಿದ್ದ ನನಗೆ ಆ ಘಟನೆಯನ್ನು ಮರೆಯಲಾಗಲೇ ಇಲ್ಲ. ಆದರೀಗ ತುಂಬಾ ತಡವಾಗಿತ್ತು. ಏನನ್ನೂ ಮಾಡಲು ಸಾಧ್ಯವಿರಲಿಲ್ಲ. ಆದರೆ ನನಗೆ ನಾನೇ ಕೇಳಿಕೊಳ್ಳುತ್ತೇನೆ, ಅದು ಶಾಲೆಯಲ್ಲಿದ್ದ ನಮ್ಮೆಲ್ಲರ ಜವಾಬ್ದಾರಿಯಾಗಿತ್ತಲ್ಲವೇ, ಪ್ರಿನ್ಸಿಪಾಲರು, ಶಿಕ್ಷಕರು ಮತ್ತು ಅವಳ ಸುತ್ತಲಿದ್ದ ನಾವೆಲ್ಲ ಜೊತೆಗೂಡಿ ಅವಳನ್ನು ಸಮಾಧಾನಿಸಲು ಏನಾದರೂ ನಮ್ಮ ಕೈಲಾದ ಪ್ರಯತ್ನ ಮಾಡಬೇಕಿತ್ತಲ್ಲವೇ? ಮಕ್ಕಳಾದ ನಮಗೆ ಈ ವಿಷಯದಲ್ಲಿ ಶಿಕ್ಷಕರ ಮಾರ್ಗದರ್ಶನ ಬೇಕಾಗಿತ್ತಲ್ಲವೇ? ದುಃಖಕರವಾದ ವಿಷಯವೆಂದರೆ, ಶಾಲೆಯಲ್ಲಿ ಅಂತಹದೊಂದು, ಅನುಕಂಪ ತೋರುವ ವಾತಾವರಣವೇ ಇರಲಿಲ್ಲ. ಅದು ಅಷ್ಟು ಮುಖ್ಯವೆನಿಸಿದ್ದರೆ ಶಾಲೆಯ ಪ್ರಿನ್ಸಿಪಾಲರು ಅವಳು ಶಾಲೆಗೆ ಹಿಂದಿರುಗುವ ಮುನ್ನವೇ ಅದರ ಬಗ್ಗೆ ತಿಳಿದಿರುತ್ತಿದ್ದರು. ಶಿಕ್ಷಕರೂ ಅವಳನ್ನು ಸಂತೈಸಲು, ಅವಳಿಗಾಗಿ ಕೆಲವು ನಿಮಿಷ ಮೀಸಲಿಡಲು ತಯಾರಾಗಿರುತ್ತಿದ್ದರು. ತಂದೆಯ ಮರಣದಿಂದಾಗಿ ಒಂದು ತಿಂಗಳು ಗೈರುಹಾಜರಾದ ಅವಳು ಮರಳಿ ಬರುವ ಹೊತ್ತಿಗೆ ನಮ್ಮೊಂದಿಗೆ ಅವಳ ಮನಸ್ಥಿತಿಯ ಬಗ್ಗೆ ಮಾತಾಡಿರಬೇಕಾಗಿತ್ತಲ್ಲವೇ? ಆ ದುಃಖಿತ ಮಗು ಶಾಲೆಗೆ ವಾಪಸು ಬಂದಾಗ ಶಿಕ್ಷಕರು ಅವಳಿಗೆ ಸಹಾನುಭೂತಿ ತೋರಿಸಬೇಕಿತ್ತಲ್ಲವೇ ಅಥವಾ ಆ ಬಗೆಯ ಕಾಳಜಿಯನ್ನು ವ್ಯಕ್ತಪಡಿಸಬೇಕಿತ್ತಲ್ಲವೇ? ಅವಳು ಎಲ್ಲಿ ಕೂರಲು ಇಷ್ಟಪಡುತ್ತಾಳೆ, ಯಾರ ಪಕ್ಕ ಕೂರಲು ಬಯಸುತ್ತಾಳೆ ಎಂದು ಕೇಳಬೇಕಿತ್ತಲ್ಲವೇ? ಮಕ್ಕಳು ಆಟವಾಡಲು ಹೋದಾಗ ಅವಳನ್ನು ಜೊತೆಯಲ್ಲಿ ಕರೆದೊಯ್ಯುವಂತೆ ಇತರ ಮಕ್ಕಳಿಗೆ ಹೇಳಬೇಕಿತ್ತಲ್ಲವೇ? ಅವಳ ಕೈ ಹಿಡಿದು ಜೊತೆಯಲ್ಲಿ ಕರೆದೊಯ್ಯಲು ಸೂಚಿಸಬೇಕಿತ್ತಲ್ಲವೇ? ಈ ಯಾವುದಾದರೂ ವರ್ತನೆ ಆ ಮಗುವಿಗೆ ಸ್ವಲ್ಪ ನೋವು, ದುಃಖ ಮರೆಯಲು ಸಹಕರಿಸುತ್ತಿತ್ತಲ್ಲವೇ, ಅವಳನ್ನು ಸಮಾಧಾನಿಸ ಬಹುದಾಗಿತ್ತಲ್ಲವೇ? ಅವಳ ದುಃಖವನ್ನು ಅರಿತು ಅವಳಿಗೆ ಒಂದಿಷ್ಟಾದರೂ ಸಮಾಧಾನ ಸಾಂತ್ವನ ನೀಡಬಹುದಾಗಿತ್ತಲ್ಲವೇ? ಹಾಗೆ ಮಾಡಿದ್ದರೆ ಅದು ಇಡೀ ತರಗತಿಗೆ ಸಹಾಯವಾಗುತ್ತಿತ್ತು. ಮಕ್ಕಳಾದ ನಾವು ಇತರರ ದುಃಖವನ್ನು ಅರ್ಥಮಾಡಿಕೊಳ್ಳುತ್ತಿದ್ದೆವು ಮತ್ತು ಶೋಕತಪ್ತರಿಗೆ ಸಮಾಧಾನ ಮಾಡುವುದನ್ನು ಕಲಿಯುತ್ತಿದ್ದೆವು.

ನಾವು ಈ ವಿಷಯ ಕುರಿತು ಲರ್ನಿಂಗ್ ಕರ್ವ್ ಸಂಚಿಕೆಯನ್ನು ಮಾಡಲು ತೀರ್ಮಾನಿಸಿದಾಗ, ನಮಗೆ ಏನು ಮಾಡಬೇಕು ಯಾವ ವಿಷಯದ ಬಗ್ಗೆ ಕೇಂದ್ರೀಕರಿಸಬೇಕೆಂದು ಗೊತ್ತಿತ್ತು. ನಾವು ಶಾಲಾ ಆಚರಣೆಗಳನ್ನು, ಆ ಶಾಲೆಗೆ ವಿಶಿಷ್ಟವಾದ ಸಂಸ್ಕೃತಿಯನ್ನು ಕಟ್ಟುವ, ದೀರ್ಘಕಾಲ ಉಳಿಯುವ ಮತ್ತು ಆ ಶಾಲೆಯ ಎಲ್ಲರನ್ನೂ ಒಳಗೊಳ್ಳುವ ಆಚರಣೆಯೊಂದನ್ನು ಹುಡುಕುತ್ತಿದ್ದೆವು. ಅಂತಹ ಆಚರಣೆಗಳ ಬೆಳವಣಿಗೆಗೆ ಕಾರಣಕರ್ತರಾದವರು ಆ ಶಾಲೆಯನ್ನು ಬಿಟ್ಟು ಹೋದರೂ ಆ ಸಂಸ್ಕೃತಿಯು ಆ ಶಾಲೆಯ ಪರಿಸರದ ಒಂದು ಭಾಗವೇ ಆಗಿರುವಂಥದನ್ನು ನಾವು ನೋಡಲು ಹೊರಟಿದ್ದೆವು.

ನಾವು ಈ ಸಂಚಿಕೆಯನ್ನು ಬಹಳ ಉತ್ಸುಕರಾಗಿ ಮತ್ತು ದೇಶದಾದ್ಯಂತ ಶಿಕ್ಷಕರಿಗೆ ಅವರವರ ಶಾಲೆಗಳಲ್ಲಿ ಇಂಥದೊಂದು ಸಂಸ್ಕೃತಿಯನ್ನು

ಹುಟ್ಟುಹಾಕುವ ಭರವಸೆ ನೀಡುತ್ತದೆ ಎಂಬ ಆಶಯದೊಂದಿಗೆ ಒಂದೆಡೆ ಕಲೆಹಾಕಿ ಇಲ್ಲಿ ಪ್ರಸ್ತುತ ಪಡಿಸುತ್ತಿದ್ದೇವೆ. ಆ ಮೂಲಕ ವಿದ್ಯಾರ್ಥಿಗಳಿಗೆ ಸುರಕ್ಷಿತ, ಉತ್ಸಾಹದಿಂದ ತೊಡಗುವ, ಬೆಂಬಲಿಸುವ ಮತ್ತು ಒಟ್ಟಾರೆಯಾಗಿ ಅವರ ಸರ್ವತೋಮುಖ– ಶೈಕ್ಷಣಿಕ ಹಾಗೂ ವೈಯಕ್ತಿಕ – ಬೆಳವಣಿಗೆಯನ್ನು ಉತ್ತೇಜಿಸುವ ವಾತಾವರಣ ದೊರೆಯುತ್ತದೆ ಎಂದು ಆಶಿಸುತ್ತೇವೆ. ಒಂದು ಶಾಲೆಯಲ್ಲಿ 'ಧನಾತ್ಮಕ' ಸಂಸ್ಕೃತಿಯನ್ನು ಬೆಳೆಸಲು ಅನೇಕ ಅಂಶಗಳಿದ್ದರೂ ನಾವಿಲ್ಲಿ ಕೆಲವನ್ನು ವಿವರಿಸಿದ್ದೇವೆ. ಕೆಲವನ್ನು ಆರಿಸಿಕೊಂಡಿದ್ದೇವೆ ಕೆಲವನ್ನು ಬಿಟ್ಟಿದ್ದೇವೆ. ಪೋಷಕರಾಗಿ, ಶಿಕ್ಷಕರಾಗಿ ಅಥವಾ ಪ್ರಶಿಕ್ಷಕರಾಗಿ ನಿಮ್ಮ ಅನುಭವವೇನು? ನಾವು ಈ ವಿಷಯದ ಕುರಿತು ನಿಮ್ಮ ಅಭಿಪ್ರಾಯವನ್ನು ಎದುರು ನೋಡುತ್ತೇವೆ.

ಕೊನೆಯದಾಗಿ, ಲರ್ನಿಂಗ್ ಕರ್ವ್ ನಿಯತಕಾಲಿಕೆಯ ಪಯಣವು ಫೌಂಡೇಷನ್‌ನ ಪ್ರಥಮ ಪ್ರಕಟಣೆಯಾಗಿ 2003 ರಲ್ಲಿ ಹೊರತಂದ ಸಂಚಿಕೆಯೊಂದಿಗೆ ಆರಂಭವಾಯಿತು. ಈ ನಿಯತಕಾಲಿಕೆಯು ಶೀಘ್ರದಲ್ಲೇ ಬದಲಾವಣೆಗೊಳಗಾಗುತ್ತಿದೆ. ಇದು ಅದರ ವರ್ತಮಾನ ರೂಪದ ಅಂತಿಮ ಸಂಚಿಕೆಯಾಗಿರುತ್ತದೆ. ನಾವೇನೂ ಇದರ ಪ್ರಕಟಣೆಯನ್ನು ನಿಲ್ಲಿಸುತ್ತಿಲ್ಲ, ಅದರ ಅವತಾರವನ್ನು ಮಾರ್ಪಡಿಸುತ್ತಿದ್ದೇವೆ ಅಷ್ಟೇ.

ನಮ್ಮ ಸಂಪಾದಕ ಮಂಡಳಿಯು, ಎಲ್ಲ ಓದುಗರಿಗೆ ಮತ್ತು ಅಷ್ಟೂ ವರ್ಷಗಳಿಂದ ನಮಗೆ ಬೆಂಬಲ ನೀಡುತ್ತಿರುವವರಿಗೆ ಅಪಾರ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

**ಶೆಫಾಲೀ ತ್ರಿಪಾಠಿ ಮೆಹ್ತಾ**
ಸಹ ಸಂಪಾದಕರು
shefali.mehta@azimpremjifoundation.org

● ಅನುವಾದ: **ನಾಗಮಣಿ ಶಿವರ** | ಪರಿಶೀಲನೆ: **ಲತಾ ಕೆ. ಸಿ.**

# ಪ ರಿ ವಿ ಡಿ


**ಯಾವುದು ಶಾಲಾ ಸಂಸ್ಕೃತಿಯನ್ನು ರೂಪಿಸುತ್ತದೆ?** **7**
ಹೃದಯ್ ಕಾಂತ್ ದಿವಾನ್

**ಶಾಲಾ ಸಂಸ್ಕೃತಿಯ ಸ್ವರೂಪ ಮತ್ತು ಉದ್ದೇಶ** **10**
ಪ್ರಕಾಶ್ ಐಯ್ಯರ್

**ಶಾಲೆ ಮತ್ತು ತರಗತಿಯ ಸಂಸ್ಕೃತಿಯ ಹೃದಯದಲ್ಲಿ ವೈವಿಧ್ಯತೆ** **13**
ಮಧುಸೂದನ ರಮೇಶ್

ಶಾಲೆಯಲ್ಲಿ ಲಿಂಗತ್ವದ ಎಲ್ಲೆಗಳನ್ನು ಪ್ರಶ್ನಿಸುವುದು 16
ನಿಧಿ ಗುಲಾಟಿ

ಧ್ವನಿಗಳು

**ತರಗತಿಯಲ್ಲಿ ಮಕ್ಕಳ ಕುತೂಹಲವನ್ನು ಪೋಷಿಸುವುದು | ವೈಯಕ್ತಿಕ ಅನುಭವದ ಆಲೋಚನೆಗಳು**
ಅನಘ್ ಪುರಂದರೆ 20

**ಸಮನ್ವಯ ಸಂಸ್ಕೃತಿಯ ಪೋಷಣೆ | ಒಂದು ತರಗತಿಯ ಕಥೆ**
ಅನನ್ಯ ಬ್ಯಾನರ್ಜಿ

**ಬೆದರಿಕೆಯಿಲ್ಲದ ಶಾಲಾ ಪರಿಸರವನ್ನು ಸ್ಥಾಪಿಸುವುದು | ಒಂದು ತರಗತಿಯ ನಿದರ್ಶನ** **25**
ಅನಿಲ್ ಎಸ್. ಅಂಗಡಿಕಿ

# ಪರಿವಿಡಿ


ಶಾಲೆ, ಪೋಷಕರು ಮತ್ತು ಸಮುದಾಯಗಳ ನಡುವೆ
ಬಲವಾದ ಸಂಬಂಧಗಳ ಸಂಸ್ಕೃತಿಯನ್ನು ರಚಿಸುವುದು 30
ಅರ್ಧೇಂದು ಶೇಖರ್ ದಾಶ್

ಓದುವ ಸಂಸ್ಕೃತಿಯನ್ನು ಬೆಳೆಸುವುದು | ಗ್ರಾಮೀಣ ಶಾಲೆಯೊಂದರ ಯಶೋಗಾಥೆ 35
ಮೆಲೊಡಿ ಕ್ಸಲಕ್ಸೋ

ಎಲ್ಲ ವಿದ್ಯಾರ್ಥಿಗಳಲ್ಲೂ ತಾವು ಸುರಕ್ಷಿತರು, ಮಾನ್ಯರು ಮತ್ತು
ಪರಿಗಣಿಸಲ್ಪಟ್ಟವರು ಎಂಬ ಭಾವನೆ ಮೂಡಿಸುವ ಶಾಲೆ 38
ಪ್ರಿಯಾಂಕಾ ಡಿ.

ಶಾಲಾ ಸಂಸ್ಕೃತಿಯ ಒಂದು ನಿರ್ಣಾಯಕ ಅಂಶ ಮಾಲೀಕತ್ವ ಹಾಗೂ ಜವಾಬ್ದಾರಿಕೆಯ ಪ್ರಜ್ಞೆ 42
ಶೋಭನ್ ಸಿಂಗ್ ನೇಗಿ

ಬೆಂಬಲಪೂರಿತ ಮತ್ತು ಸಶಕ್ತರನ್ನಾಗಿಸುವ ಒಂದು ಪರಿಸರವನ್ನು ಸೃಷ್ಟಿಸುವುದು
ಏಕ-ಶಿಕ್ಷಕರುಳ್ಳ ಗ್ರಾಮೀಣ ಶಾಲೆಯಿಂದ ಕಲಿಕೆಗಳು 45
ಸ್ವಾತಿ ಭಂಡಾರಿ

ಮಕ್ಕಳು ಹೇಗೆ ಸಾಮಾಜಿಕ ವರ್ತನೆ ಮತ್ತು ನಡೆವಳಿಕೆಗಳನ್ನು ಅಂತರ್ಗತಗೊಳಿಸಿಕೊಳ್ಳುತ್ತಾರೆ? 48
ಉಮಾಶಂಕರ ಪೆರಿಯೋಡಿ

ಗಣಿತದ ಭೀತಿಯನ್ನು ತೊಲಗಿಸುವುದು 51
ರಜನಿ ದ್ವಿವೇದಿ

ಶಾಲಾ ಸಂಸ್ಕೃತಿ | ಸಮಯ ಮತ್ತು ಸನ್ನಿವೇಶ ಆಧಾರಿತ ಭಿನ್ನತೆಗಳು 55
ರಾಹುಲ್ ಮುಖ್ಯೋಪಾಧ್ಯಾಯ

ಶಿಶು-ಸ್ನೇಹಿ ಶಾಲಾ ಉಪಕ್ರಮ | ಶಾಲಾ ಸಂಸ್ಕೃತಿಯ ಮೇಲೆ ಶಾಶ್ವತವಾದ ಪ್ರಭಾವ 59
ರುದ್ರೇಶ್ ಎಸ್.

# ಯಾವುದು ಶಾಲಾ ಸಂಸ್ಕೃತಿಯನ್ನು ರೂಪಿಸುತ್ತದೆ?

ಹೃದಯ್ ಕಾಂತ್ ದಿವಾನ್

ಮಕ್ಕಳಿಗೆ ಶಿಕ್ಷಣ ನೀಡುವ ಪ್ರಕ್ರಿಯೆಯ ಅತ್ಯಗತ್ಯ ಭಾಗವಾಗಿ, ಶಾಲೆಯು ಪರಿಕಲ್ಪನೆ ಮತ್ತು ಬೌದ್ಧಿಕ ಸಾಮರ್ಥ್ಯಗಳ ಬೆಳವಣಿಗೆಯಲ್ಲಿ ಹಾಗೂ ಸಮಾಜದಲ್ಲಿ ಮೌಲ್ಯಯುತವಾದ ವರ್ತನೆಗಳು, ಸ್ವಭಾವಗಳು ಮತ್ತು ಜೀವನ ಮೌಲ್ಯಗಳ ಬೆಳವಣಿಗೆಯಲ್ಲಿ ಮಹತ್ತ್ವದ ಪಾತ್ರವನ್ನು ಹೊಂದಿದೆ. ಆದರ್ಶ ಅರ್ಥದಲ್ಲಿ, ಮೇಲೆ ಪಟ್ಟಿ ಮಾಡಲಾದ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಶಿಕ್ಷಣವು ತಿಳುವಳಿಕೆಯುಳ್ಳ ಆಯ್ಕೆಗಳನ್ನು ಮಾಡಲು ಮತ್ತು ಸಮಾಜದಲ್ಲಿ ಜೀವನಕ್ಕೆ ರಚನಾತ್ಮಕ ಕೊಡುಗೆಗಳನ್ನು ನೀಡುವ ಅಗತ್ಯವಿದೆ. ಈ ಕೊಡುಗೆಗಳು ವ್ಯಕ್ತಿಯ ಪ್ರಗತಿ ಮತ್ತು ಯಶಸ್ಸಿಗೆ ಮಾತ್ರವಲ್ಲದೆ ಸಾಮೂಹಿಕ ಒಳಿತಿಗಾಗಿಯೂ ಅವಶ್ಯಕವಾಗಿವೆ. ಶಾಲೆಗಳು, ಮಕ್ಕಳನ್ನು ಕುತೂಹಲ, ಆತ್ಮವಿಶ್ವಾಸ ಮತ್ತು ಉತ್ಸಾಹದಿಂದ ಕಲಿಯುವಂತೆ ಮಾಡುವುದರ ಜೊತೆಗೆ, ಸಮಾಜದಲ್ಲಿ ಭ್ರಾತೃತ್ವದ ಭಾವನೆಯನ್ನು ಬಲಪಡಿಸಲು ನೆರವಾಗುವ ರೀತಿಯಲ್ಲಿ ಅವರ ಬೆಳವಣಿಗೆಗೆ ಪ್ರಯತ್ನಿಸಬೇಕು. ಹೆಚ್ಚಿನ ಶಾಲೆಗಳು ವಿದ್ಯಾರ್ಥಿಗಳ ಸಮನ್ವಯ ಮತ್ತು ಬೌದ್ಧಿಕ ಕ್ಷೇತ್ರದಲ್ಲಿ ಉತ್ಕೃಷ್ಟತೆಯ ಜೊತೆಗೆ ಇದನ್ನು ಮಾಡುತ್ತಿವೆ. ಆದಾಗ್ಯೂ, ಈ ಅಂಶಗಳಲ್ಲಿನ ಯಶಸ್ಸಿನ ಮಟ್ಟವು ಶಾಲೆಯಿಂದ ಶಾಲೆಗೆ ಬದಲಾಗುತ್ತದೆ.

> ರಾಜ್ಯ ಸರ್ಕಾರಿ ಶಾಲೆಗಳ ಜೊತೆ ಕೆಲಸ ಮಾಡಿ ಅವುಗಳ ಕಾರ್ಯವಿಧಾನದಲ್ಲಿ ಇರುವ ಅಂತರವನ್ನು ಗಮನಿಸಿದ್ದು ನನಗೆ ನೆನಪಿದೆ. ಆ ಬಗೆಯ ಅಂತರಗಳು ಈಗಲೂ ಅಸ್ತಿತ್ವದಲ್ಲಿದೆ. ನನಗೆ ಆಶ್ಚರ್ಯ ಹುಟ್ಟಿಸಿದ್ದೆಂದರೆ ಅದೇ ಪ್ರದೇಶದ ಒಳಗಿದ್ದ (ಪಕ್ಕದ ಹಳ್ಳಿಗಳು) ಶಾಲೆ ಮತ್ತು ಶಿಕ್ಷಕರು ವಿಭಿನ್ನವಾಗಿ ಕಾರ್ಯನಿರ್ವಹಿಸುತ್ತಿದ್ದುದು. ಹಾಗೆಯೇ, ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಶಾಲೆಯೊಂದಕ್ಕೆ ಯಾವುದೇ ಹೊಸ ಶಿಕ್ಷಕರು ಬಂದಾಗ, ಅವರ ಈ ಹಿಂದಿನ ಯಶಸ್ಸು ಏನೇ ಇದ್ದರೂ ಅದನ್ನು ಲೆಕ್ಕಿಸದೇ ಉದ್ದೇಶಪೂರ್ವಕವಾಗಿ ಮಕ್ಕಳೊಂದಿಗೆ, ಸಮುದಾಯದೊಂದಿಗೆ ಮತ್ತು ಇತರ ಶಿಕ್ಷಕರೊಂದಿಗೆ ಕೂಡಲೆ ಬೆರೆಯಲು ಪ್ರಾರಂಭಿಸುತ್ತಿದ್ದರು. ಅದೇ ರೀತಿ ಉತ್ತಮವಾಗಿ ಸಂವಹನ ನಡೆಸುವ ಶಿಕ್ಷಕನೊಬ್ಬ, ಅಷ್ಟೇನೂ ಚೆನ್ನಾಗಿ ಕಾರ್ಯನಿರ್ವಹಿಸದ ಶಾಲೆಗೆ ವರ್ಗಾವಣೆಯಾಗಿ ಬಂದಾಗ ಆತನೂ ಆ ಶಾಲೆಯ ಇತರ ಶಿಕ್ಷಕರ ತರ ಶೀಘ್ರದಲ್ಲೇ ಕಾರ್ಯ ನಿರ್ವಹಿಸಲು ತೊಡಗುತ್ತಾನೆ. ಶಿಕ್ಷಕರು ಬೇರೆ ಬೇರೆ ರೀತಿಯಲ್ಲಿ ಕಾರ್ಯ ನಿರ್ವಹಿಸುವಂತೆ ಮಾಡುವ ಶಾಲೆಗಳಲ್ಲೇ ಏನೋ ಇದೆ.

ಶಾಲೆಗಳಲ್ಲಿ ನಡೆದಾಡುವ ನಮ್ಮ ಅನುಭವದ ಮೂಲಕವೇ ಶಾಲೆಯ ವಾತಾವರಣದಲ್ಲಿ ಅದರ ಕಾರ್ಯನಿರ್ವಹಣೆಯ ಕೆಲವು ಅಂಶಗಳನ್ನಾದರೂ ಗ್ರಹಿಸಬಹುದು. ಕೆಲವು ಶಾಲೆಗಳಲ್ಲಿ ಜನ ನಗುತ್ತಾ, ಉತ್ಸಾಹದಿಂದ ಓಡಾಡುತ್ತಿರುವುದನ್ನು ಕಾಣುತ್ತೇವೆ. ಅಲ್ಲಿ ಇಲ್ಲಿ ಸಣ್ಣ ಸಣ್ಣ ಗುಂಪುಗಳು ಮಾತುಕತೆಯಲ್ಲಿ ತೊಡಗಿರುವುದನ್ನು ಅಥವಾ ತಮ್ಮಷ್ಟಕ್ಕೆ ತಾವು ಯಾವುದೋ ಕೆಲಸದಲ್ಲಿ ತೊಡಗಿಕೊಂಡಿರುವುದನ್ನು ನೋಡುತ್ತೇವೆ. ಅಲ್ಲಿ ನಗು ಮತ್ತು ಗುಸುಗುಸು ಇದೆ ಆದರೇ ಗಲಾಟೆಯಿಲ್ಲ. ಚರ್ಚೆ– ವಾದಗಳಿವೆ ಆದರೆ ಕಿರುಚಾಟವಿಲ್ಲ.

ಆಟದ ಮೈದಾನದಲ್ಲಿ ತರಗತಿಯ ಶಿಕ್ಷಕರು ಹಾಗೂ ಮಕ್ಕಳು ಒಟ್ಟಿಗೆ ಇದ್ದ ಶಾಲೆಗಳು ನನಗೆ ನೆನಪಾಗುತ್ತವೆ. ಶಿಕ್ಷಕರು ಸುಮ್ಮನೆ ನಿಂತುಕೊಂಡು ಮೇಲ್ವಿಚಾರಣೆ ಅಥವಾ ತರಬೇತಿಯನ್ನಷ್ಟೇ ನೀಡದೇ, ಆಟದಲ್ಲಿ ಮಕ್ಕಳಿಗೆ ಸಮಾನವಾಗಿ ಅವರೊಂದಿಗೆ ಬೆರೆಯುವುದನ್ನು ನಾನು ವಿಶೇಷವಾಗಿ ನೆನಪಿಸಿಕೊಳ್ಳುತ್ತೇನೆ;– ಬೆನ್ನಟ್ಟುವುದು ಮತ್ತು ಬೆನ್ನಟ್ಟಿಸಿಕೊಳ್ಳುವುದು. ಇದನ್ನು ಸಾಧ್ಯವಾಗಿಸಲು ಶಿಕ್ಷಕರು ಮತ್ತು ಮಕ್ಕಳ ನಡುವೆ ಇರಬೇಕಾದ ಸಂಬಂಧವನ್ನು ಒಬ್ಬರು ಗ್ರಹಿಸಬಹುದು. ಅಂತಹ ಶಾಲೆಗಳಲ್ಲಿ, ಶಿಕ್ಷಕರು ತಮ್ಮ ಕೆಲಸದ ಬಗ್ಗೆ ಉತ್ಸಾಹ ಮತ್ತು ವೃತ್ತಿಪರತೆಯೊಂದಿಗೆ ಮಾತನಾಡುತ್ತಾರೆ. ಮತ್ತು ತಮ್ಮ ಕೆಲಸದ ಗಾಂಭೀರ್ಯದ ಅರಿವಿದ್ದರೂ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಒತ್ತಡಕ್ಕಿಂತ ಹೆಚ್ಚಾಗಿ ಸಂತೋಷ ಮತ್ತು ಆತ್ಮವಿಶ್ವಾಸದಿಂದ ಕಾಣಿಸಿಕೊಳ್ಳುತ್ತಾರೆ. ಪ್ರತಿಯೊಬ್ಬರಿಗೂ ತಾವು ಅಲ್ಲಿ ಏಕಿದ್ದೇವೆ ಎಂಬುದು ತಿಳಿದಿರುವ ಹಾಗಿದೆ. ಪ್ರಮುಖ ಉದ್ಯಮವೊಂದರಲ್ಲಿ ಪೂರ್ಣ ಪಾಲುದಾರರಂತೆ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಪರಸ್ಪರ ಗೌರವದಿಂದ ವರ್ತಿಸುತ್ತಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಒಂದು ಶಾಲೆಗೆ ಎಲ್ಲಾ ವಿದ್ಯಾರ್ಥಿಗಳನ್ನು ಬರಮಾಡಿಕೊಳ್ಳುವ ಹಾಗೂ ಅವರಿಗೆ ಪ್ರಾಮುಖ್ಯತೆ ಇದೆ ಎಂಬ ಭಾವ ಹುಟ್ಟಿಸುವ ಸುರಕ್ಷಿತ ಮತ್ತು ಕಾಳಜಿಪೂರ್ಣ ವಾತಾವರಣದ ಅಗತ್ಯವಿದೆ. ವಿದ್ಯಾರ್ಥಿಗಳು ಮತ್ತು ಅವರ ಶಿಕ್ಷಕರು ಶಾಲೆಯಲ್ಲಿ ಪಾಲುದಾರಿಕೆ ಮತ್ತು ಮಾಲೀಕತ್ವದ ಪ್ರಜ್ಞೆಯನ್ನು ಹೊಂದಿರುವ ಸಾಮಾಜಿಕ ವಾತಾವರಣ ಬೇಕಾಗಿದೆ.

ತರಗತಿಗಳನ್ನು ಮತ್ತು ಕಾಗದ ಪತ್ರಗಳನ್ನು ನಿರ್ವಹಿಸಲು ಶಿಕ್ಷಕರು ಉನ್ನತ ತರಗತಿಯ ಮಕ್ಕಳನ್ನು ಕಿರಿಯ ತರಗತಿಯ ಮೇಲ್ವಿಚಾರಣೆಗೆ ಬಳಸಿಕೊಳ್ಳುವುದನ್ನು ನಾನು ನೋಡಿದ್ದೇನೆ. ಈ ಮಕ್ಕಳು ಕಿರಿಯ ಮಕ್ಕಳನ್ನು ಹದ್ದುಬಸ್ತಿನಲ್ಲಿಡಲು ಬೆತ್ತ ಬಳಸಲೂ ಹಿಂಜರಿಯುವುದಿಲ್ಲ. ಇಂತಹ ಶಾಲೆಗಳಲ್ಲಿ ನಿಶ್ಶಬ್ದ ನೆಲೆಸಬಹುದು ಆದರೆ ಶಿಸ್ತು ಎನ್ನುವುದು ಅಧೀನತೆ ಮತ್ತು ನಿರ್ಬಂಧತೆಯಿಂದ ಹುಟ್ಟುತ್ತದೆ ಎಂಬ ನಂಬಿಕೆಯನ್ನು ಮಕ್ಕಳಲ್ಲಿ ಬಿತ್ತುವ ಸಾಧ್ಯತೆ ಇರುತ್ತದೆ. ಶಾಲೆಯು ಮಕ್ಕಳನ್ನು ಅಂತಹ ರೀತಿಯಲ್ಲಿ ನಿರ್ಬಂಧಿಸಿದಾಗ – ಸಂಭಾಷಣೆಗಳು, ಸಂವಹನಗಳು ಮತ್ತು ಚಟುವಟಿಕೆಗಳಲ್ಲಿ– ಒಂದು ಕಡೆ, ಅರ್ಥಪೂರ್ಣ, ಉಪಯುಕ್ತ ವಾದ ಒಳಗೊಳ್ಳುವಿಕೆ ಮತ್ತು ಸುಮ್ಮನಿರುವಿಕೆ ಮತ್ತು ಇನ್ನೊಂದು ಕಡೆ ಅವ್ಯವಸ್ಥೆ ಹಾಗೂ ಗಲಾಟೆ ಇವುಗಳ ನಡುವಿನ ಅಂತರವನ್ನು ಅರ್ಥ ಮಾಡಿಸುವ ಅವಕಾಶವನ್ನು ಕಳೆದುಕೊಳ್ಳುತ್ತದೆ.

ಶಾಲೆಯು ಏಕೆ ಹೀಗೆಯೇ ಇದೆ ಮತ್ತು ಅದರ ಸಾಂಸ್ಕೃತಿಕ ಸೂಚ್ಯಾರ್ಥಗಳನ್ನು ಉತ್ತರಿಸುವುದು ಸುಲಭವಲ್ಲವಾದರೂ, ಇದನ್ನು ರೂಪಿಸುವ ಕೆಲವು ಅಂಶಗಳನ್ನು ನಾವು ಗುರುತಿಸಬಹುದು:– ಧನಾತ್ಮಕ ಸಂಸ್ಕೃತಿಯನ್ನು ಹೇಗೆ ಬೆಳೆಸಬಹುದು ಎಂಬುದರ ಕೆಲವು ವಿಶಾಲ ಲಕ್ಷಣಗಳು; ಮತ್ತು ಅದನ್ನು ಉಳಿಸಿಕೊಳ್ಳಲು ಇರುವ ಸವಾಲುಗಳೇನು?

### ಸಂಸ್ಕೃತಿಯ ಪ್ರಮುಖ ಅಂಶಗಳು

ಸಕಾರಾತ್ಮಕ ಸಂಸ್ಕೃತಿಯ ಪ್ರಮುಖ ಅಂಶವೆಂದರೆ ಮಕ್ಕಳಿಗೆ ಕಲಿಯಲು ಅನುವು ಮಾಡಿಕೊಡುವ ರೀತಿಯಲ್ಲಿ ಸಕಾರಾತ್ಮಕ ಪ್ರೋತ್ಸಾಹ ನೀಡುವುದು. ಕಲಿಕೆಯ ದೃಷ್ಟಿಕೋನದಿಂದ ಶಾಲೆಯು ಪ್ರತಿಯೊಬ್ಬ ಮಕ್ಕಳು ಕಲಿಯಲು ಸಮರ್ಥರಾಗಿದ್ದಾರೆ ಎಂಬ ಭರವಸೆ ಹೊಂದಿರಬೇಕು ಮತ್ತು ಪ್ರೋತ್ಸಾಹ ಹಾಗೂ ಉತ್ಸಾಹದಿಂದ ಕಲಿಸಿದಾಗ ಮಕ್ಕಳು ಉತ್ತಮವಾಗಿ ಕಲಿಯುತ್ತಾರೆಯೇ ಹೊರತು ಬೆದರಿಕೆಯಿಂದ ಅಥವಾ ಶಿಕ್ಷಿಸುವುದರಿಂದ ಅಲ್ಲ ಎಂಬುದನ್ನು ಶಾಲೆಯು ಮನಗಾಣಬೇಕು.

ಸಂಸ್ಕೃತಿಯ ಮತ್ತೊಂದು ಅಂಶವು ಶಾಲೆಯು ಯಾವುದನ್ನು ಕಲಿಕೆ ಎಂದು ಭಾವಿಸುತ್ತದೆ ಎಂಬುದನ್ನು ಪ್ರತಿಫಲಿಸುತ್ತದೆ. ಉದಾಹರಣೆಗೆ, ರಾಷ್ಟ್ರೀಯ ಶಿಕ್ಷಣ ನೀತಿ (NEP) 2020ರ ಪೂರ್ವಗಾಮಿಯಾದ ವಿವರವಾದ ಕರಡು ರಾಷ್ಟ್ರೀಯ ನೀತಿ, 2019 ಹೀಗೆ ಹೇಳುತ್ತದೆ, 'ಎಲ್ಲಾ ಹಂತಗಳಲ್ಲಿ ಪಠ್ಯಕ್ರಮ ಮತ್ತು ಶಿಕ್ಷಣಶಾಸ್ತ್ರದ ಸುಧಾರಣೆಯ ಪ್ರಮುಖ ಒಟ್ಟಾರೆ ಒತ್ತಡವು ಶಿಕ್ಷಣ ವ್ಯವಸ್ಥೆಯನ್ನು ನೈಜ ತಿಳುವಳಿಕೆಯತ್ತ ಮತ್ತು ಇಂದು ಬಹುಮಟ್ಟಿಗೆ ಇರುವಂತಹ ಮೌಖಿಕ ಕಲಿಕೆಯ ಸಂಸ್ಕೃತಿಯಿಂದ ದೂರ ಸಾಗಿ, ಹೇಗೆ ಕಲಿಯಬೇಕೆಂದು ಕಲಿಯುವುದಾಗಿದೆ (ಪು.76 4.2.). ಆದ್ದರಿಂದ, ಶಾಲೆಯು ಮಕ್ಕಳಿಗೆ ಸಮೀಪ ಮಾರ್ಗ (ಶಾರ್ಟ್‌ಕಟ್ ) ಗಳನ್ನು ನೀಡುವುದಕ್ಕಿಂತ ಹೆಚ್ಚಾಗಿ ಕಲಿಯಲು ಮತ್ತು ಅರ್ಥಮಾಡಿಕೊಳ್ಳಲು ಮಕ್ಕಳನ್ನು ಬೆಂಬಲಿಸುವ ಸಂಸ್ಕೃತಿಯನ್ನು ಹೊಂದಿರಬೇಕು. ಶಾಲೆಯ ಬೌದ್ಧಿಕ ವಾತಾವರಣ ಹೇಗಿರಬೇಕೆಂದರೆ ಮಕ್ಕಳು ತಾವೇ ಸ್ವತಃ ಪ್ರಯತ್ನ ಪಟ್ಟು ಕಲಿಯುವ ನಿರೀಕ್ಷೆ ಇರಬೇಕು ಮತ್ತು ಅವರೆಲ್ಲರಿಗೂ ಅಗತ್ಯ ಬೆಂಬಲ ಹಾಗೂ ಅತ್ಯುತ್ತಮವಾದವನ್ನು ಸಾಧಿಸಲು ಸವಾಲುಗಳನ್ನ ಹಾಕಬೇಕು. ಕೇವಲ ತೋರಿಕೆಗಾಗಿ ಕಲಿಕೆ ಅಥವಾ ಅಲ್ಪಾವಧಿಯ ಬದಲಿಗೆ ಶಿಕ್ಷಣವು ಜೀವನ ಪೂರ್ತಿ ಕಲಿಕೆಯ ಭಾಗವಾಗುವಂತಿರಬೇಕು. ಇದು ಸಾಧ್ಯವಾಗಬೇಕಾದರೆ, ಶಾಲೆಗಳಲ್ಲಿ ಕುತೂಹಲ, ಅನ್ವೇಷಣೆ ಮತ್ತು ಕಲಿಕೆಯ ಸಂಸ್ಕೃತಿ ಇರಬೇಕು, ಶಿಕ್ಷಕರು ಅದರ ಭಾಗವಾಗಿರಬೇಕು.

ಶಾಲೆಯ ಸಂಸ್ಕೃತಿಯ ಮೂರನೇ ಪ್ರಮುಖ ಅಂಶವೆಂದರೆ, ಶಿಕ್ಷಕರು ಸಹ ಕಲಿಕೆಯ ಕಡೆಗೆ ಬಲವಾದ ಒಲವನ್ನು ಪ್ರದರ್ಶಿಸಬೇಕು. ತರಗತಿಯಲ್ಲಿ ಹೇಳಿದ ವಿಷಯಗಳು ಮತ್ತು ಶಿಕ್ಷಕರು ಉಲ್ಲೇಖಿಸಿದ ಪುಸ್ತಕಗಳ ಬಗ್ಗೆ ಹೆಚ್ಚು ಉತ್ಸುಕತೆಯಿಂದ ಕೂಡಿದ್ದರೆ ಮಕ್ಕಳು ಗ್ರಂಥಾಲಯದ ಕಡೆಗೆ ಒಲವು ತೋರುತ್ತಾರೆ. ಶಾಲೆಯು ತನ್ನ ಎಲ್ಲ ಸದಸ್ಯರ ನಡೆವಳಿಕೆಯಲ್ಲಿ ಪ್ರತಿಫಲಿಸಿದಾಗ ಮಾತ್ರ ವಿದ್ಯಾರ್ಥಿಗಳಲ್ಲಿ ನಿರೀಕ್ಷೆ ಹುಟ್ಟುಹಾಕಬಹುದು. ಆದ್ದರಿಂದ, ವಿದ್ಯಾರ್ಥಿಗಳಿಂದ ಹೆಚ್ಚಿನ ನಿರೀಕ್ಷೆಯೊಂದಿಗೆ ಪೋಷಣೆಯ ವಾತಾವರಣಕ್ಕಾಗಿ, ಶಾಲೆಯು ಶಿಕ್ಷಕರಿಗೆ ಸಹ ಅಂತಹ ವಾತಾವರಣವನ್ನು ನೀಡಬೇಕು.

ಶಾಲೆಯ ಸ್ವರೂಪಗಳು (ಉದಾಹರಣೆಗೆ ಸಿಬ್ಬಂದಿ/ಶಿಕ್ಷಕ/ವಿದ್ಯಾರ್ಥಿ ಮಂಡಳಿಗಳು) ಶಾಲೆಯಲ್ಲಿ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಧ್ವನಿಯಾಗುವುದರ ಜೊತೆಗೆ ಜವಾಬ್ದಾರಿಯನ್ನೂ ಹಂಚುವುದು ಮತ್ತೊಂದು ಪ್ರಮುಖ ಅಂಶವಾಗಿದೆ. ಶಾಲೆಯ ಪ್ರತಿಯೊಬ್ಬರಿಗೂ ಶಾಲೆಯು ತನ್ನದೇ ಎನ್ನುವ ಮಾಲೀಕತ್ವದ ಭಾವನೆ ಬರಬೇಕು. ಇದರ ಜವಾಬ್ದಾರಿ ಶಾಲೆಯ ಮುಖಂಡರ ಮೇಲಿರುತ್ತದೆ. ಶಾಲೆಯ ಕಾರ್ಯನಿರ್ವಹಣೆಯಲ್ಲಿ ಪ್ರತಿಯೊಬ್ಬರ ಪಾತ್ರಗಳ ಸ್ಪಷ್ಟತೆ ಮತ್ತು ಪ್ರತಿಯೊಬ್ಬರ ಜವಾಬ್ದಾರಿಗಳ ಅರಿವನ್ನು ಖಾತ್ರಿಪಡಿಸುವುದರ ಜೊತೆಗೆ ಪ್ರತಿಯೊಬ್ಬರಲ್ಲೂ ಶಾಲಾ ಸಂಬಂಧಿತ ನಿರ್ಧಾರ ತೆಗೆದುಕೊಳ್ಳುವಲ್ಲಿ ಮತ್ತು ಸಮಸ್ಯೆಗಳನ್ನು ಪರಿಹರಿಸುವಲ್ಲಿ ತಾವೂ ಪಾಲುದಾರರು ಎಂಬ ಭಾವನೆ ಬರುವಂತಿರಬೇಕು. ಶಿಕ್ಷಕರಿಗೆ ನೀಡಲಾಗುವ ಕಾರ್ಯಭಾರ ಮತ್ತು ಸ್ವಾಯತ್ತತೆ, ಶಾಲೆಯನ್ನು ಅದರ ವಿದ್ಯಾರ್ಥಿಗಳು ಮತ್ತು ಸಂಬಂಧಿಸಿದವರು ಪರಿಭಾವಿಸುವ ರೀತಿಯ ಮೇಲೆ ವಿಮರ್ಶಾತ್ಮಕ ಪರಿಣಾಮ ಬೀರುತ್ತದೆ.

ಸಮನ್ವಯ ಸಂಸ್ಕೃತಿಯನ್ನು ನಿರ್ಮಿಸುವ ಮತ್ತೊಂದು ಮೂಲಭೂತ ಅಂಶವೆಂದರೆ ಶಿಕ್ಷಕರನ್ನು ಒಳಗೊಂಡಂತೆ ಎಲ್ಲಾ ನಾಯಕತ್ವವು ಮಾದರಿಯಾಗಿ ಕಾರ್ಯ ನಿರ್ವಹಿಸಬೇಕು. ಪ್ರಾಂಶುಪಾಲರು ಶಿಕ್ಷಕರೊಂದಿಗೆ ಸ್ನೇಹಪರರಾಗಿರಬೇಕು ಮತ್ತು ನಿಕಟವಾಗಿರಬೇಕು ಆದರೆ ವೈಯಕ್ತಿಕ ಮತ್ತು ವೃತ್ತಿಪರ ಸಂಬಂಧಗಳ ನಡುವೆ ಅಗತ್ಯವಿರುವ ಅಂತರವನ್ನು ಕಾಯ್ದುಕೊಳ್ಳಬೇಕು. ಇದೇ ಸಮತೋಲನವನ್ನು ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಕಾಪಾಡಿಕೊಳ್ಳಬೇಕು. – ಸ್ನೇಹಿತರಾಗಿದ್ದರೂ ಅವರು ತಮ್ಮ ರೋಲ್ ಮಾಡೆಲ್ ಎಂಬುದನ್ನು ಮರೆಯಬಾರದು. ಕ್ರೀಡೆ, ಕಲೆ ಮತ್ತು ಕರಕುಶಲಗಳಲ್ಲಿ ಭಾಗವಹಿಸುವ ಮೂಲಕ ಶಿಕ್ಷಕರು ಮತ್ತು ಕಲಿಸಿದವರನ್ನು ಹೊರತುಪಡಿಸಿ ಇತರ ವಿಧಾನಗಳಲ್ಲಿನ ಸಂವಹನಗಳನ್ನು ಸುಗಮಗೊಳಿಸಬೇಕು. ವಿದ್ಯಾರ್ಥಿಗಳೊಂದಿಗೆ ಸಮಾನತೆಯ ಭಾವನೆಯನ್ನು ಹೊಂದಲು ಅವರಿಗೆ ಕಾಳಜಿಯ ಸುರಕ್ಷಿತ ಭಾವಣೆಯನ್ನು ಒದಗಿಸುವುದು ವಿದ್ಯಾರ್ಥಿಗಳ ಆತ್ಮವಿಶ್ವಾಸ ಮತ್ತು ಆಟದ ಮೈದಾನದಲ್ಲಿರುವಂತೆ ನ್ಯಾಯಯುತ ಆಟದ ಮನೋಭಾವವನ್ನು ನಿರ್ಮಿಸಲು ನಿರ್ಣಾಯಕವಾಗಿದೆ. ಅದೇ ರೀತಿ ಕುಣಿತ ಅಥವಾ ಹಾಡುಗಾರಿಕೆಯ ವಿಷಯಕ್ಕೆ ಬಂದಾಗ ಶಿಕ್ಷಕರು ಹಿಂಜರಿದಲ್ಲಿ ಇದು ಉತ್ತಮವಾದವರಿಗೆ ಮಾತ್ರ ಎಂಬ ಕಲ್ಪನೆ ಮಕ್ಕಳಲ್ಲಿ ಮೂಡುತ್ತದೆ. ಇದನ್ನು ಹೋಗಲಾಡಿಸಲು ಸಾಮಾನ್ಯ ನಿರೀಕ್ಷೆ ಮತ್ತು ಸ್ವಯಂ ಪ್ರಜ್ಞೆಯಿಲ್ಲದೆ ಭಾಗವಹಿಸಲು ಎಲ್ಲರಿಗೂ ಅವಕಾಶವಿದೆ ಎಂಬ ನಡೆ ನುಡಿಯ ಅಗತ್ಯವಿದೆ.

ಪರಸ್ಪರ ಗೌರವದ ಭಾವನೆಯು ಮಕ್ಕಳಿಗೆ ಸಂಕೀರ್ಣ ಮತ್ತು ಮಾತನಾಡಲು ಕಷ್ಟಕರವಾಗಿದ್ದರೂ ಸಹ ಅವರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಶಿಕ್ಷಕರೊಂದಿಗೆ ಮಾತನಾಡಲು ಆತ್ಮವಿಶ್ವಾಸವನ್ನು ನೀಡುತ್ತದೆ. ಹೇಳುವ ವಿಧಾನವು ಪರಸ್ಪರ ಕ್ರಿಯೆಯ ಸ್ವರೂಪ ಮತ್ತು ಜನರು ಪರಸ್ಪರ ಗ್ರಹಿಸುವ ವಿಧಾನದ ಮೇಲೆ ದೊಡ್ಡ ಪರಿಣಾಮವನ್ನು ಬೀರುತ್ತದೆ, ಹೀಗಾಗಿ, ಸಹಾನುಭೂತಿ, ಕಾಳಜಿ, ಶ್ರೇಷ್ಠತೆ ಮತ್ತು ನೈತಿಕ ಅಭ್ಯಾಸದ 'ವೃತ್ತಿಪರ' ಸಂಸ್ಕೃತಿಯನ್ನು ರಚಿಸುವ ಸಂಬಂಧಗಳು ಮತ್ತು ನಡೆವಳಿಕೆಗಳಿಗೆ ರೂಢಿಗಳು ಇರಬೇಕು. ಇದು ಒಂದು ದೊಡ್ಡ ಸವಾಲಾಗಿದೆ ಏಕೆಂದರೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇಬ್ಬರೂ ಅವರು ಸೇರಿರುವ ಸಮುದಾಯಗಳ ಬಗ್ಗೆ ಸಂಬಂಧ ಮತ್ತು ಕಲ್ಪನೆಗಳ ಸಾಂಸ್ಕೃತಿಕ ಮತ್ತು ಸಾಮಾಜಿಕ ಭಾರದೊಂದಿಗೆ ಬರುತ್ತಾರೆ. ಇಲ್ಲಿ ಅತ್ಯಂತ ನಿರ್ಣಾಯಕ ಅಂಶವೆಂದರೆ ಈ ಕರಗುವ ಮಡಕೆಯಲ್ಲಿರುವ ಜನರು ಟೀಕೆ ಮತ್ತು ಸಲಹೆಗಳನ್ನು ವಸ್ತುನಿಷ್ಠವಾಗಿ ಸ್ವೀಕರಿಸುವ ಸಾಮರ್ಥ್ಯ. ಈ ರೀತಿಯ ಪ್ರಕ್ರಿಯೆಗೆ ವಿಶೇಷವಾಗಿ ಅಧಿಕಾರ ಮತ್ತು ನಾಯಕತ್ವದ ಸ್ಥಾನದಲ್ಲಿರುವವರಿಂದ ತಾಳ್ಮೆ ಮತ್ತು ತಿಳುವಳಿಕೆ ಅಗತ್ಯವಿರುತ್ತದೆ.

### ನೀತಿ ಹೇಳಿಕೆಗಳ ಮೇಲೆ ಒಂದು ನೋಟ

ಸಮಾಜದ ಪ್ರಗತಿಯನ್ನು ಉತ್ತೇಜಿಸುವ ನೈತಿಕತೆಯನ್ನು ಮಕ್ಕಳಲ್ಲಿ ತುಂಬುವುದು ಶಿಕ್ಷಣದ ಪ್ರಮುಖ ಕಾರ್ಯವೆಂದು ಸಮುದಾಯಗಳು ಮತ್ತು ಸರ್ಕಾರಗಳು ಗುರುತಿಸುತ್ತವೆ. ಮೌಲ್ಯಮಾಪನ ಮತ್ತು ಶ್ರೇಯಾಂಕದ ಹೊರತಾಗಿಯೂ, ಶಿಕ್ಷಣವು ವ್ಯಕ್ತಿಯನ್ನು 'ಸುಸಂಸ್ಕೃತ'ನನ್ನಾಗಿ ಮಾಡುತ್ತದೆ ಎಂಬ ನಿರೀಕ್ಷೆ ಉಳಿದಿದೆ.

ನಿರೀಕ್ಷೆಗಳನ್ನು ಪಠ್ಯಕ್ರಮದ ದಾಖಲೆಗಳಲ್ಲಿ ವಿವರಿಸಲಾಗಿದೆ. ಮತ್ತು ಶಾಲೆಗಳು ಹಾಗೂ ಶಿಕ್ಷಕರಿಗೆ ಮಾರ್ಗದರ್ಶಿ ಸೂತ್ರಗಳನ್ನು ಮತ್ತು ಕೈಪಿಡಿಗಳಲ್ಲಿ ಪ್ರತಿಫಲಿಸಲಾಗಿದೆ.

ಶಾಲೆಯಲ್ಲಿನ ವಾತಾವರಣ ಮತ್ತು ವಿದ್ಯಾರ್ಥಿಗಳು ಅದನ್ನು ಹೇಗೆ ಗ್ರಹಿಸುತ್ತಾರೆ ಎಂಬುದರ ಕುರಿತು ನೀತಿ ದಾಖಲೆಗಳು ಕಾಳಜಿವಹಿಸಿವೆ. ರಾಷ್ಟ್ರೀಯ ಶಿಕ್ಷಣ ನೀತಿ (NEP) 2020, ಶ್ರೇಷ್ಠತೆ, ಕುತೂಹಲ, ಸಹಾನುಭೂತಿ ಮತ್ತು ಸಮಾನತೆಯನ್ನು ಪ್ರೋತ್ಸಾಹಿಸುವ ಸಮಗ್ರ ವಾತಾವರಣ ಮತ್ತು ಕಾಳಜಿಯುಳ್ಳ ಸಂಸ್ಕೃತಿಯನ್ನು ಹೊಂದಿರಬೇಕಾದ ಅಗತ್ಯವನ್ನು ಒತ್ತಿಹೇಳುತ್ತದೆ. ಇದು ಮಕ್ಕಳಲ್ಲಿ ಸಾಂವಿಧಾನಿಕ ಮತ್ತು ಸಕಾರಾತ್ಮಕ ಭಾರತೀಯ ಮೌಲ್ಯಗಳ ಬೆಳವಣಿಗೆಯನ್ನು ಒತ್ತಿಹೇಳುತ್ತದೆ, ಇದನ್ನು ಶಿಕ್ಷಕರು ತಮ್ಮ ಕೆಲಸದಲ್ಲಿ ಅನುಭವಿಸಬೇಕು.

NEP 2020 (NCF 2005) ದೀರ್ಘಕಾಲೀನ, ಬೆಳವಣಿಗೆಯ ಪ್ರಭಾವವನ್ನು ಹೊಂದಿರುವ ಸಂಸ್ಕೃತಿಯ ಪ್ರಜ್ಞಾಪೂರ್ವಕ ರಚನೆಯನ್ನು ಉಲ್ಲೇಖಿಸುತ್ತದೆ, ಇದು ''ಮಕ್ಕಳು ಒಂದು ದಿನ ಬೆಳಿಗ್ಗೆ ಎಚ್ಚರಗೊಂಡು ಪ್ರಜಾಪ್ರಭುತ್ವದಲ್ಲಿ ಭಾಗವಹಿಸುವುದು, ಸಂರಕ್ಷಿಸುವುದು ಮತ್ತು ಬೆಳೆಸುವುದು ಹೇಗೆಂದು ತಿಳಿಯಲು ಸಾಧ್ಯವಿಲ್ಲ'' ಎಂದು ವಾದಿಸುತ್ತಾರೆ. ವಿಶೇಷವಾಗಿ ಅವರು ಯಾವುದೇ ವೈಯಕ್ತಿಕ ಅಥವಾ ಸೆಕೆಂಡ್ ಹ್ಯಾಂಡ್ ಅನುಭವವನ್ನು ಹೊಂದಿಲ್ಲದಿದ್ದಾಗ ಅಥವಾ ಕಲಿಯಲು ಯಾವುದೇ ಮಾದರಿಗಳು ಇಲ್ಲದಿದ್ದಾಗ, 'NCF 2005, NEP 2020 ಮತ್ತು NCF-SE 2023 ರ ಪ್ರಕಾರ, ಶಾಲೆಗಳು ವಿದ್ಯಾರ್ಥಿಗಳಿಗೆ ಅಂತಹ ಮೌಲ್ಯಗಳನ್ನು ಅನುಭವಿಸುವಂತೆ ಮಾಡುವ ಸಂಸ್ಕೃತಿಯನ್ನು ದೊರಕಿಸಿಕೊಡಬೇಕು. ಪ್ರಜಾಪ್ರಭುತ್ವ, ಭ್ರಾತೃತ್ವ, ಬಹುತ್ವ ಮತ್ತು ಸಮಾನತೆ ಈ ಮೌಲ್ಯಗಳನ್ನು ಮನೆಯ ಅನುಭವದ ಭಾಗವಾಗಿಸಲು ಪೋಷಕರು ಮತ್ತು ಸಮುದಾಯದೊಂದಿಗೆ ಸಂವಹನ ನಡೆಸುವ ಅಗತ್ಯವಿರುತ್ತದೆ.

ಇದರ ಹೊರತಾಗಿ, ನೀತಿ ದಾಖಲೆಗಳು ಕುತೂಹಲ, ಪ್ರಶ್ನಿಸುವ ಮತ್ತು ಸಮರ್ಥಿಸುವ ಹಾಗೂ ಪುರಾವೆಗಳನ್ನು ಹುಡುಕುವ ಸಂಸ್ಕೃತಿಯನ್ನು ಶಿಫಾರಸು ಮಾಡುವುದರ ಜೊತೆಗೆ ಮುಕ್ತ ಮನಸ್ಸು, ನಾವೀನ್ಯತೆ ಮತ್ತು ಪ್ರಾಯೋಗಿಕ ಕ್ರಿಯೆಯ ಮೌಲ್ಯ ಮತ್ತು ಸಂಸ್ಕೃತಿಯನ್ನು ಬೆಳೆಸುತ್ತವೆ. ಗಣಿತದ ಭಯದ ಬೆಳವಣಿಗೆಯನ್ನು ತಡೆಯುವುದು; ಬಹುಭಾಷಾ ಸಂಭಾಷಣೆಗಳನ್ನು ಅನುಮತಿಸುವುದು; ಮತ್ತು ಮಕ್ಕಳು ಸಮುದಾಯ ದಿಂದ ತರುವ ಭಾಷೆ, ಸಂಸ್ಕೃತಿ ಮತ್ತು ಜ್ಞಾನವನ್ನು ಗೌರವಿಸುವುದು ಮತ್ತು ಇವುಗಳೊಂದಿಗೆ ತೊಡಗಿಸಿಕೊಳ್ಳುವುದಕ್ಕೆ ಒತ್ತು ನೀಡುತ್ತೇವೆ.

ದಾಖಲೆಗಳು ಕಾಳಜಿ ಮತ್ತು ಪೋಷಣೆಯ ವಾತಾವರಣವನ್ನು ಶಿಫಾರಸು ಮಾಡುತ್ತವೆ. ಶಿಕ್ಷಕರ ಮೇಲಿನ ಅಧ್ಯಾಯಗಳಲ್ಲಿ, ಎನ್.ಇ.ಪಿ. 2020ರಲ್ಲಿ ಶಾಲೆಗಳು ಸಕಾರಾತ್ಮಕ ಕಲಿಕಾ ಪರಿಸರವನ್ನು ಹೊಂದಿವೆ ಎಂದು ಖಚಿತಪಡಿಸಿಕೊಳ್ಳಲು ಪ್ರಾಂಶುಪಾಲರು ಮತ್ತು ಶಿಕ್ಷಕರ ಪಾತ್ರವು ಪರಿಣಾಮಕಾರಿಯಾಗಿ ಕಲಿಕೆ ಮತ್ತು ಎಲ್ಲಾ ಸಂಬಂಧಿಸಿದವರ ಪ್ರಯೋಜನಕ್ಕಾಗಿ ತಮ್ಮ ಶಾಲೆಗಳಲ್ಲಿ ಕಾಳಜಿಯುಳ್ಳ ಮತ್ತು ಸಮನ್ವಯ ಸಂಸ್ಕೃತಿಯನ್ನು ಬೆಳೆಸುವುದನ್ನು ಒಳಗೊಂಡಿರುತ್ತದೆ (NEP 2020 ಅಂತಿಮ 5.13. p.12).

ಕರಡು (NEP 2019), ಶಾಲೆಗಳು ಕಾಳಜಿ, ಸಹಕಾರ ಮತ್ತು ಸಮನ್ವಯ ಶಾಲಾ ಸಂಸ್ಕೃತಿಯನ್ನು ಹೊಂದಿರಬೇಕು ಎಂದು ಉಲ್ಲೇಖಿಸುತ್ತದೆ, ಇದು ಶ್ರೇಷ್ಠತೆ, ಕುತೂಹಲ, ಸಹಾನುಭೂತಿ ಮತ್ತು ಸಮಾನತೆಯನ್ನು ಪ್ರೋತ್ಸಾಹಿಸುತ್ತದೆ. ಈ ಶಾಲಾ ಸಂಸ್ಕೃತಿಯ ಹೆಚ್ಚಿನ ಭಾಗವನ್ನು ಶಾಲಾ ಮುಖ್ಯಸ್ಥರು, ಶಾಲಾ ಸಂಕೀರ್ಣ ನಾಯಕರು, ಶಾಲಾ ನಿರ್ವಹಣಾ ಸಮಿತಿಗಳು (SMC ಗಳು) ಮತ್ತು ಶಾಲಾ ಸಂಕೀರ್ಣ ನಿರ್ವಹಣಾ ಸಮಿತಿಗಳು (SCMC ಗಳು) (NEP ಡ್ರಾಫ್ಟ್ 2019, ಅಧ್ಯಾಯ 5 ಶಿಕ್ಷಕರು, p.114) ನಿರ್ವಹಿಸಬೇಕು ಎಂದು ಹೇಳುತ್ತದೆ.

NEP 2019 ರ ಕರಡು ಮತ್ತಷ್ಟು ಹೇಳುತ್ತದೆ ''ಶಾಲೆಗಳು ಸಕಾರಾತ್ಮಕ ಕಲಿಕೆಯ ವಾತಾವರಣವನ್ನು ಹೊಂದಲು ಪ್ರಾಂಶುಪಾಲರು ಮತ್ತು ಶಿಕ್ಷಕರಿಂದ ಶಾಲೆಯಲ್ಲಿ ಎಲ್ಲರಿಗೂ ಪರಿಣಾಮಕಾರಿ ಕಲಿಕೆಗಾಗಿ ಮತ್ತು ಸಮುದಾಯದ ಪ್ರಯೋಜನಕ್ಕಾಗಿ, ಕಾಳಜಿಯುಳ್ಳ ಸಮನ್ವಯ ಸಂಸ್ಕೃತಿಯ ವಾತಾವರಣವನ್ನು ಬೆಳೆಸುವ ಹೊಣೆಗಾರಿಕೆಯನ್ನು ಒಳಗೊಂಡಿರುತ್ತದೆ.'' (NEP ಡ್ರಾಫ್ಟ್ 2019, ಅಧ್ಯಾಯ 5 ಶಿಕ್ಷಕರು, p.118)

ಶಿಕ್ಷಣ ಹಕ್ಕು ಕಾಯಿದೆ 2009 (RtE) ಸಕಾರಾತ್ಮಕ ಶಾಲಾ ಸಂಸ್ಕೃತಿಯನ್ನು ಬೆಳೆಸುವ ಬಗ್ಗೆ ಮಾತನಾಡಿದೆ ಮತ್ತು ''ಯಾವುದೇ ಮಗು ದೈಹಿಕವಾಗಿ ಶಿಕ್ಷೆಯನ್ನು ಅನುಭವಿಸಬಾರದು ಅಥವಾ ಮಾನಸಿಕ ಕಿರುಕುಳಕ್ಕೆ ಒಳಗಾಗಬಾರದು'' ಎಂದು ಹೇಳಿದೆ. ಶಿಸ್ತು, ಶಿಕ್ಷೆ ಮತ್ತು ವಿದ್ಯಾರ್ಥಿ-ಶಿಕ್ಷಕರ ಸಂಬಂಧಗಳ ಕಲ್ಪನೆಗಳನ್ನು ಮರುವ್ಯಾಖ್ಯಾನಿಸುವ ಅಗತ್ಯವಿರುವ ಕಲಿಯುವ-ಕೇಂದ್ರಿತ ತರಗತಿಯ ವಾತಾವರಣದೊಂದಿಗೆ ಶಾಲೆಯನ್ನು ಒತ್ತಡ-ಮುಕ್ತ, ಮಕ್ಕಳ-ಸ್ನೇಹಿ ಸ್ಥಳವನ್ನಾಗಿ ಮಾಡುವತ್ತ ಗಮನಹರಿಸುವಂತೆ ಇದು ಶಾಲಾ ಮುಖ್ಯಸ್ಥರಿಗೆ ಕರೆ ನೀಡುತ್ತದೆ.

ಶಾಲೆಗಳಲ್ಲಿ ಯಾವುದೇ ರೂಪಾಂತರ ಪ್ರಕ್ರಿಯೆಯು ಸಕಾರಾತ್ಮಕ ಮತ್ತು ಸುಸಂಬದ್ಧ ಸಂಸ್ಕೃತಿ ಮತ್ತು ಸಂಪ್ರದಾಯವನ್ನು ಬೆಳೆಸುವ ಪ್ರಕ್ರಿಯೆಯಿಂದ ಮುನ್ನಡೆಯಬೇಕು. ಈ ಪ್ರಯಾಣವು ಸುಲಭವಲ್ಲ ಮತ್ತು ಈ ಮೊದಲು ಹೇಳಿದಂತೆ, ಭಾಗಿದಾರರ ನಂಬಿಕೆ ಹಾಗೂ ಸಮುದಾಯಗಳಲ್ಲಿ ಮತ್ತು ಶಿಕ್ಷಕರಲ್ಲಿನ ಸಾಂಪ್ರದಾಯಿಕ ನಂಬಿಕೆಗಳಿಂದ ವಿರೋಧ ಎದುರಿಸಬೇಕಾಗುತ್ತದೆ.

● ಅನುವಾದ: **ಕಿರಣ್ ಮಂಜುನಾಥ್** | ಪರಿಶೀಲನೆ: **ಲತಾ ಕೆ. ಸಿ.**



**ಹೃದಯ್ ಕಾಂತ್ ದಿವಾನ್** ಅವರು 40 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ವಿವಿಧ ಸಾಮರ್ಥ್ಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಪ್ರಸ್ತುತ ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಭೋಪಾಲ್‌ನಲ್ಲಿರುವ ಏಕಲವ್ಯದ ಸ್ಥಾಪಕ-ಸದಸ್ಯರಾಗಿದ್ದಾರೆ ಮತ್ತು ಉದಯಪುರದಲ್ಲಿನ ವಿದ್ಯಾಭವನ ಸೊಸೈಟಿಗೆ ಶೈಕ್ಷಣಿಕ ಸಲಹೆಗಾರರಾಗಿದ್ದಾರೆ. ಅವರು ಶೈಕ್ಷಣಿಕ ನಾವೀನ್ಯತೆ ಮತ್ತು ರಾಜ್ಯ ಶೈಕ್ಷಣಿಕ ಸ್ವರೂಪ ಮತ್ತು ಸಾಮಗ್ರಿಗಳ ಮಾರ್ಪಾಡಿನ ಪ್ರಯತ್ನದಲ್ಲಿ ಸಹಭಾಗಿತ್ವ ಹೊಂದಿದ್ದಾರೆ.
ಅವರನ್ನು **hardy@azimpremjifoundation.org** ಮೂಲಕ ಸಂಪರ್ಕಿಸಬಹುದು.

# ಶಾಲಾ ಸಂಸ್ಕೃತಿಯ ಸ್ವರೂಪ ಮತ್ತು ಉದ್ದೇಶ

ಪ್ರಕಾಶ್ ಐಯ್ಯರ್

### ಸಮಾಜಕ್ಕೆ ಪ್ರವೇಶಿಕೆಯಾಗಿ ಶಾಲಾ ಶಿಕ್ಷಣ

ನಾವು ಶಾಲೆಯನ್ನು ಪ್ರಾಥಮಿಕವಾಗಿ ಅದರ ಪಠ್ಯಕ್ರಮದೊಂದಿಗೆ ಜೋಡಿಸಿ ನೋಡುತ್ತೇವೆ ಮತ್ತು ಪಠ್ಯಕ್ರಮವೊಂದನ್ನೇ ಶಿಕ್ಷಣದ ಸಾಧನವಾಗಿ ಪರಿಗಣಿಸುವುದು ಸಾಮಾನ್ಯವಾಗಿದೆ. ಆದರೇ ಶಾಲೆಗಳೆಂದರೆ ಇದಕ್ಕಿಂತ ಮಿಗಿಲಾದದ್ದು. ಮೊದಲ ಕೆಲವು ವರ್ಷ, ಮಕ್ಕಳು ಸೀಮಿತ ಭೌಗೋಳಿಕತೆಯಲ್ಲಿ, ತಮ್ಮ ಕುಟುಂಬ, ಸಂಬಂಧಿಕರು ಮತ್ತು ನೆರೆಹೊರೆಯವರ ಜೊತೆ ಬೆಳೆಯುತ್ತ ಅವರ ಸಂಪ್ರದಾಯ ಮತ್ತು ಆಚರಣೆಗಳಿಗೆ ಒಗ್ಗಿಕೊಂಡಿರುತ್ತಾರೆ. ಇಲ್ಲಿಂದ ಮುಂದೆ ಮಕ್ಕಳು, ತಮಗೆ ಬೇರೆಯದೇ ಜಗತ್ತು ಎನಿಸುವಂತೆ ಶಾಲೆಗಳಿಗೆ ತೆರಳುತ್ತಾರೆ. ಅಲ್ಲಿ ಭೇಟಿಯಾಗುವ ಜನ, ಅನುಸರಿಸುವ ಸಂಸ್ಕೃತಿ ಮತ್ತು ಆಚರಣೆಗಳು ಯಾವುದೋ ಬೇರೆಯದೇ ಲೋಕವೆಂದೆನಿಸುತ್ತದೆ. ಶಾಲೆಗಳು ಮಕ್ಕಳ ಮೊದಲ ಸಾಮಾಜಿಕ ಸ್ಥಳವಾಗಿದೆ. ಮತ್ತು ಮಕ್ಕಳನ್ನು ಸಾಮಾಜಿಕ ಸಂಸ್ಥೆಗಳ ಪ್ರವೇಶಕ್ಕೆ ಗುರುತಿಸುತ್ತೇವೆ. ಅಲ್ಲಿ ಅವರು ಸ್ವಾಯತ್ತತೆಯ ವ್ಯಕ್ತಿಗಳಾಗಿಯೇ ಬಾಳುತ್ತಾರೆ.

ಮಕ್ಕಳು ಸಂಬಂಧಗಳನ್ನು ರೂಪಿಸಿಕೊಳ್ಳುತ್ತಾರೆ. ನಿಯಮಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ. ಮತ್ತು ಹೊಸ ಅಭ್ಯಾಸಗಳೊಂದಿಗೆ ತಮ್ಮನ್ನು ತಾವು ಪರಿಚಿತರನ್ನಾಗಿಸಿಕೊಳ್ಳುತ್ತಾರೆ. ಶಾಲೆಯ ನಿಯಮಗಳ ಪಾಲನೆ, ತರಗತಿಯಲ್ಲಿ ಗಮನ ಕೊಡುವುದು, ತರಗತಿಯ ಪಾಠ ಮತ್ತು ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು, ಜವಾಬ್ದಾರಿ ತೆಗೆದುಕೊಳ್ಳುವುದು, ಗೆಳೆಯರನ್ನು ಮಾಡಿಕೊಳ್ಳುವುದು ಮತ್ತು ಅವರೊಂದಿಗೆ ಹಂಚಿಕೊಳ್ಳುವುದು ಹಾಗೂ ಕ್ರಮೇಣ, ಮಾಧ್ಯಮಿಕ ಶಾಲೆಯ ಹೊತ್ತಿಗೆ ಸ್ವತಂತ್ರ ವ್ಯಕ್ತಿ ಅಂದರೆ ಯಾರು ಎಂದು ಯೋಚಿಸಲು ತೊಡಗುತ್ತಾರೆ. ಈ ಪ್ರಕ್ರಿಯೆಯಲ್ಲಿ ಅವರು ಜಾಗೃತರಾಗಿ ವಿಶಿಷ್ಟವಾದ ಸಾಮಾಜಿಕ ಮತ್ತು ವೈಯಕ್ತಿಕ ಐಡೆಂಟಿಟಿ(ಅಸ್ಮಿತೆ)ಯನ್ನು ರೂಪಿಸಿಕೊಳ್ಳುತ್ತಾರೆ. ಒಂದರ್ಥದಲ್ಲಿ ಶಾಲೆಗಳು ವಯಸ್ಕ ಜೀವನ ಮತ್ತು ಆತ್ಮಸಂಕಲ್ಪದ ಪ್ರಕ್ರಿಯೆಯ ಹೆಬ್ಬಾಗಿಲು.

**ಶಾಲೆಯ ಅನುಭವದ ಮೂರು ಅಂಶಗಳನ್ನು ಗಮನಿಸುವ ಅಗತ್ಯವಿದೆ. ಮೊದಲನೆಯದಾಗಿ ಶಾಲೆಗಳು ಸ್ವತಂತ್ರ ಬದುಕಿನ ಪ್ರಾರಂಭ. ಜೊತೆಗೆ ಪಠ್ಯಕ್ರಮವನ್ನು ಕಲಿಯುವುದಷ್ಟೇ ಅಲ್ಲದೆ, ಕಲಿತದ್ದನ್ನು ತೋರಿಸುವ ಜವಾಬ್ದಾರಿ. ಎರಡನೆಯದಾಗಿ ಅವರು ಇತರರೊಂದಿಗೆ ಹೇಗೆ ಬೆರೆಯುತ್ತಾರೆ ಮತ್ತು ಬದುಕಿನ ಇಷ್ಟಾನಿಷ್ಟಗಳ ಬಗ್ಗೆ ಆಯ್ಕೆಗಳನ್ನು ಮಾಡುವುದರ ಮೇಲೆ ಅವರ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಮೂರನೆಯದಾಗಿ ಈ ಅನುಭವದಿಂದ ಈ ಸಮಾಜ ಹೇಗೆ ಕಾರ್ಯನಿರ್ವಹಿಸುತ್ತದೆ ಎನ್ನುವುದರ ಮೇಲೆ ಒಂದು ದೃಷ್ಟಿಕೋನ ಬೆಳೆಸಿಕೊಳ್ಳುತ್ತಾರೆ ಮತ್ತು ವಯಸ್ಕನಾಗುವುದು ಎಂದರೆ ಏನು ಎಂಬುದನ್ನು ಕಂಡುಕೊಳ್ಳುತ್ತಾರೆ.**

ಮಕ್ಕಳು ತಮಗೆ ಕಲಿಸಿದ್ದೆಲ್ಲವನ್ನು ಪ್ರಶ್ನೆ ಮಾಡದೇ ಒಪ್ಪಿಕೊಳ್ಳುವಷ್ಟು ನಿಷ್ಕ್ರಿಯರಾಗಿರುವುದಿಲ್ಲ.. ಮನುಷ್ಯರು ಸ್ವಾಭಾವಿಕವಾಗಿ ಸ್ವತಂತ್ರರು. ಒಂದು ನಿರ್ದಿಷ್ಟ ವಯಸ್ಸಿನ ನಂತರ ತಮಗೆ ಶಿಕ್ಷಣವನ್ನು ಕಲಿಸ ಲಾಗುತ್ತಿದೆ ಮತ್ತು ತಮ್ಮಿಂದ ಕಲಿಯುವುದನ್ನು ನಿರೀಕ್ಷಿಸಲಾಗುತ್ತಿದೆ ಎಂಬುದನ್ನು ಔಪಚಾರಿಕವಾಗಿ ಗ್ರಹಿಸಲು ಪ್ರಾರಂಭಿಸುತ್ತಾರೆ. ಈ ಸ್ವಾಯತ್ತತೆ ಅವರು ಸಾಂಸ್ಕೃತಿಕ ಅಭ್ಯಾಸಗಳಲ್ಲಿ ವ್ಯವಹರಿಸುವ ರೀತಿಯಲ್ಲಿ ಸ್ವತಃ ಪ್ರಕಟವಾಗುತ್ತದೆ– ಬೇಕೆನಿಸಿದಾಗ ಮಾತ್ರ ವಿಧೇಯತೆ ತೋರಿಸುವುದು, ತಮಗೆ ಮನವರಿಕೆಯಾಗದ ವಿಧಾನಗಳ ರೂಢಿಗಳನ್ನು ಹಾಳುಗೆಡಹುವುದು, ಕೆಲವೊಮ್ಮೆ ಪ್ರತಿಭಟನೆ ಮತ್ತು ದಂಗೆಯ ಮೂಲಕ. ಉದಾಹರಣೆಗೆ ಕೆಲವು ವರ್ಷಗಳ ಶಾಲಾ ಶಿಕ್ಷಣದ ನಂತರ ವಿದ್ಯಾರ್ಥಿಗಳು ಕೆಲವು ಶಿಕ್ಷಕರು ಮತ್ತು ಕೆಲವು ವಿಷಯಗಳ ಕಡೆಗೆ ಪಕ್ಷಪಾತಿಗಳಾಗುತ್ತಾರೆ. ಕೆಲವು ತರಗತಿ ಮತ್ತು ಶಿಕ್ಷಕರ ಕಡೆ ಇತರರಿಗಿಂತ ಹೆಚ್ಚು ಗಮನ ಕೊಡುವುದು, ಇನ್ನು ಕೆಲವು ಶಿಕ್ಷಕರನ್ನು ಮತ್ತು ವಿಷಯಗಳನ್ನು ಕಡೆಗಣಿಸುವುದು. ಶಾಲಾ ನಿಯಮಗಳನ್ನು ನಾಶ ಮಾಡುವುದು ಬೇರೆ ಬೇರೆ ರೀತಿಯಲ್ಲಿ ಪ್ರಕಟವಾಗುತ್ತದೆ– ಮನೆ ಕೆಲಸ (ಹೋಮ್ ವರ್ಕ್) ತಪ್ಪಿಸುವುದು, ಬೇಕೆಂದೇ ತರಗತಿಗೆ ತಡವಾಗಿ ಬರುವುದು, ಡೂಡ್ಲಿಂಗ್ ಮಾಡುವುದು, ತರಗತಿಯ ಕಡೆ ಗಮನ ಕೊಡುವ ಬದಲು ಕಾಮಿಕ್ಸ್ ಓದುವುದು. ಪ್ರತಿಭಟನೆ ಮತ್ತು ದಂಗೆಗಳು ಮೌನವಾಗಿ ನಡೆಯುತ್ತವೆ. ಉದಾಹರಣೆಗೆ ಕೆಲವು ವಿಷಯಗಳನ್ನು ಅಧ್ಯಯನ ಮಾಡದೇ ನಿರಾಕರಿಸುವುದು ಮತ್ತು ಅವುಗಳನ್ನು ಕಲಿಯುವ ಕಾಳಜಿ ತೋರಿಸದೇ ಇರುವುದು.

### ಔಪಚಾರಿಕ ಪಠ್ಯಕ್ರಮ ಮತ್ತು ಶಾಲಾ ಸಂಸ್ಕೃತಿ

ಶಾಲೆಗಳಲ್ಲಿ ಬೋಧನೆ ಮತ್ತು ಕಲಿಕೆ ಕೇವಲ ಔಪಚಾರಿಕ ಪಠ್ಯಕ್ರಮದ ಮೇಲೆ ಮಾತ್ರ ನಡೆಯುವುದಿಲ್ಲ. ಶಾಲೆಗಳು ಪಠ್ಯಕ್ರಮವನ್ನು ಸುಗಮವಾಗಿ ನಡೆಸಲು ಪ್ರಕ್ರಿಯೆಗಳನ್ನು, ಶಿಷ್ಟಾಚಾರವನ್ನು ಮತ್ತು ನಿಯಮಗಳನ್ನು ಸಹ ರಚಿಸುತ್ತವೆ. ಈ ಎಲ್ಲ ಹೆಚ್ಚುವರಿ ಪ್ರಕ್ರಿಯೆಗಳು ಮತ್ತು ನಿಯಮಗಳು ಶಾಲೆಯ ಅಸ್ಮಿತೆಯನ್ನು ರೂಪಿಸುವಲ್ಲಿ ಕೊಡುಗೆ ನೀಡುತ್ತವೆ. ಉದಾಹರಣೆಗೆ, ಸಮವಸ್ತ್ರಗಳು ಅಥವಾ ಡ್ರೆಸ್ ಕೋಡ್‌ಗಳು, ತರಗತಿಯಲ್ಲಿ ಆಸನ ವ್ಯವಸ್ಥೆ, ಶಿಕ್ಷಕ–ವಿದ್ಯಾರ್ಥಿ ಸಂಬಂಧಗಳು, ಶಿಕ್ಷಕರಿಗೆ ನೀಡಿದ ಸ್ವಾಯತ್ತತೆಯ ಮಟ್ಟ, ವಿದ್ಯಾರ್ಥಿಗಳ ನಡೆವಳಿಕೆಗೆ ಸಂಬಂಧಿಸಿದ ನಿಯಮಗಳು, ಬೆಳಗಿನ ಸಭೆಯ ಸ್ವರೂಪ, ಆವರ್ತನ ಮತ್ತು ಸ್ವಭಾವ, ಶಿಕ್ಷಕರ ಸಭೆಗಳು ಮತ್ತು ಪೋಷಕ–ಶಿಕ್ಷಕರ ಸಭೆಗಳು ಇತ್ಯಾದಿ. ಇವೆಲ್ಲವೂ ಶಾಲೆಯ ಪರಿಸರ ವ್ಯವಸ್ಥೆಯ ಭಾಗವಾಗಿದ್ದು ಮಕ್ಕಳು ಈ ಅನುಭವವನ್ನು ಪಡೆದುಕೊಳ್ಳುತ್ತ ಕಲಿಯುತ್ತಾರೆ.

ಯಾವುದೇ ಅಭ್ಯಾಸವು ಗಟ್ಟಿಯಾಗಿ ಅಡಿಪಾಯ ಹಾಕಿದ ಮೌಲ್ಯದಿಂದಲೇ ಬೆಳೆದು ಬರುತ್ತದೆ. ಉದಾಹರಣೆಗೆ, ಶಾಲೆಯ ಬೆಳಗ್ಗಿನ ಸಭೆಯಲ್ಲಿ ಜಾತ್ಯತೀತ ಪ್ರಾರ್ಥನೆಯನ್ನು ಸೇರಿಸಲು ನಿರ್ಧರಿಸಿದರೆ, ಅದು ಶಾಲೆಯು ಜಾತ್ಯತೀತ ಮೌಲ್ಯವನ್ನು ಮತ್ತು

ಎಲ್ಲರ ಸಮನ್ವಯತೆಯನ್ನು ಬಯಸುವುದನ್ನು ತೋರಿಸುತ್ತದೆ. ಒಂದು ವೇಳೆ ಶಾಲೆಯು ಬೆಳಗ್ಗಿನ ಸಭೆಯಲ್ಲಿ ಪ್ರಾರ್ಥನೆಯ ಬದಲಿಗೆ ದೇಶಕ್ಕಾಗಿ ಪ್ರಮಾಣವನ್ನು ಬೋಧಿಸಿದರೆ ಅವರು ಧಾರ್ಮಿಕ ಸಂಬಂಧಕ್ಕಿಂತ ದೇಶಭಕ್ತಿಯ ಮೇಲಿನ ಒಲವನ್ನು ಪ್ರದರ್ಶಿಸುತ್ತಿದ್ದಾರೆ ಎಂಬುದು ತಿಳಿಯುತ್ತದೆ. ಅಭ್ಯಾಸದ ಮಹತ್ವವು ಅವರು ಪ್ರದರ್ಶಿಸುವ ಮೌಲ್ಯಗಳಲ್ಲಿದೆ ಮತ್ತು ಶಾಲೆಯು ಇವುಗಳಲ್ಲಿ ಮಾಡಿಕೊಳ್ಳುವ ಆಯ್ಕೆಯು ಮಕ್ಕಳಲ್ಲಿ ಅದು ಏನನ್ನು ಬಿತ್ತಲು ಬಯಸುತ್ತದೆ ಎಂಬುದನ್ನು ತೋರಿಸುತ್ತದೆ.

ಎರಡನೆಯದಾಗಿ ನಾವು ನಡೆವಳಿಕೆಗಳನ್ನು ಅಭ್ಯಾಸಗಳೆಂದು ಯಾವಾಗ ಕರೆಯಬಹುದೆಂದರೆ, ಅವುಗಳನ್ನು ಸತತವಾಗಿ ಅಭ್ಯಾಸ ಮಾಡಿ ಅದರೊಳಗಿನ ತಿಳುವಳಿಕೆ, ಉದ್ದೇಶಗಳನ್ನು ಅರ್ಥ ಮಾಡಿಕೊಂಡಾಗ. ಉದಾಹರಣೆಗೆ ಮೇಲೆ ತಿಳಿಸಲಾದ ಬೆಳಗಿನ ಪ್ರಾರ್ಥನಾ ಸಭೆಯ ನಿಯಮಗಳು ಏಕೆ ಅಸ್ತಿತ್ವದಲ್ಲಿದೆ ಎಂಬುದಕ್ಕೆ ಕಾರಣಗಳು ಎಲ್ಲರಿಗೂ ಅರಿವಾಗದ ಹೊರತು ಈ ಆಚರಣೆಗಳು ನಿಯಮಗಳೆನಿಸಿಕೊಳ್ಳುವುದಿಲ್ಲ. ಹೊಸ ಶಿಕ್ಷಕರು ಮತ್ತು ಶಾಲೆಯ ಸದಸ್ಯರು ಸಾಮಾನ್ಯವಾಗಿ ಅಸ್ತಿತ್ವದಲ್ಲಿರುವ ರೂಢಿಯನ್ನು ಮುಂದುವರಿಸಿಕೊಂಡು ಹೋಗುವ ಮೂಲಕ ಶಾಲೆಯ ಸಂಸ್ಕೃತಿಯಲ್ಲಿ ನಿರಂತರತೆ ಮತ್ತು ಖಚಿತತೆಯನ್ನು ಖಾತರಿ ಪಡಿಸುತ್ತಾರೆ.

### ಶಾಲಾ ಸಂಸ್ಕೃತಿ ಮತ್ತು ಶಿಕ್ಷಣದ ಉದ್ದೇಶಗಳು

ಶಾಲೆಯ ಸಂಸ್ಕೃತಿ ಮತ್ತು ಅದರ ಪಠ್ಯಕ್ರಮವು ಜೊತೆ ಜೊತೆಗೆ ಸಾಗುವುದರಿಂದ ಅವು ಒಂದರಿಂದ ಇನ್ನೊಂದು ಸ್ವತಂತ್ರವಲ್ಲ. ಶಾಲಾ ಸಂಸ್ಕೃತಿಯು, ಆ ಶಾಲೆಗೇ ನಿರ್ದಿಷ್ಟವಾದ ಶಿಕ್ಷಣದ ಹೆಚ್ಚುವರಿ ಗುರಿಗಳನ್ನು ಪ್ರತಿನಿಧಿಸುತ್ತದೆ, ಉದಾಹರಣೆಗೆ ನಾಳಿನ ನಾಯಕರನ್ನು ಬೆಳೆಸುವುದು, ಆತ್ಮಸಾಕ್ಷಿಯ ಪ್ರಜಾಪ್ರಭುತ್ವದ ನಾಗರಿಕರು, ಅಥವಾ ಪರಿಸರ ಮತ್ತು ಸುಸ್ಥಿರತೆಯನ್ನು ಗೌರವಿಸುವ ವ್ಯಕ್ತಿಗಳು. ಶಾಲೆಗಳು ಈ ಘೋಷಿತ ಗುರಿಗಳನ್ನು ತಲುಪುವ ನಿಟ್ಟಿನಲ್ಲಿ ನಿಯಮಗಳನ್ನು ಮತ್ತು ಅಭ್ಯಾಸಗಳನ್ನು ರೂಪಿಸುತ್ತದೆ. ಸಾಮಾನ್ಯವಾಗಿ ಇದನ್ನು ಎರಡು ರೀತಿಯಲ್ಲಿ ಸಾಧಿಸಲಾಗುತ್ತದೆ:

- ವೇಳಾಪಟ್ಟಿಯಿಂದ ಸ್ಪಷ್ಟವಾಗುವ ಪಠ್ಯಕ್ರಮ ಅಥವಾ ವಿಷಯಗಳ, ಅಂಶಗಳ ಮೇಲೆ ಸಾಂದರ್ಭಿಕ ಒತ್ತು ನೀಡುವುದು.
- ಶಾಲೆಗಳು ನಡೆಸುವ ಹೆಚ್ಚುವರಿ ಪ್ರಕ್ರಿಯೆಗಳು ಮತ್ತು ಚಟುವಟಿಕೆಗಳು ಶಾಲೆಯನ್ನು ನಡೆಸುವ ವಿಧಾನದ ಭಾಗವಾಗಿ, ಬೇರೆ ರೀತಿಯಲ್ಲಿ ಹೇಳಬೇಕೆಂದರೆ ಶಾಲೆಯ ಸಂಸ್ಕೃತಿ.

ಶಾಲೆಯ ಸಂಸ್ಕೃತಿಯನ್ನು ಎರಡು ಕೇಂದ್ರೀಕೃತ ವೃತ್ತದ ರೂಪದಲ್ಲಿ ನೋಡಬಹುದು. ಕೋರ್ ಅಥವಾ ಮುಖ್ಯ ಪಠ್ಯಕ್ರಮವು ಒಳಗಿನ ಆಂತರಿಕ ವೃತ್ತದಲ್ಲಿದೆ ಮತ್ತು ದೊಡ್ಡ ವೃತ್ತವು ಶಾಲಾ ಸಂಸ್ಕೃತಿಯಾಗಿದ್ದು ಅದು ಪಠ್ಯಕ್ರಮದ ಸುತ್ತಲೂ ಬೃಹತ್ ಆದ ಪದರವೊಂದನ್ನು ನಿರ್ಮಿಸಿ ಅದು ಮುನ್ನಡೆಯುವಂತೆ ಮಾಡುತ್ತದೆ. ಹೊರಗಿನ ವೃತ್ತವು ಕೇವಲ ಪಠ್ಯಕ್ರಮವನ್ನು ಮುಂದುವರೆಸಿಕೊಂಡು ಹೋಗಲು ಇರುವ ಪ್ರಕ್ರಿಯೆ ಮತ್ತು ಶಿಷ್ಟಾಚಾರ ಮಾತ್ರವಲ್ಲ. ಔಪಚಾರಿಕ ಶಿಕ್ಷಣದಂತೆಯೇ ಅದು ಶಿಕ್ಷಣದ ಗುರಿ ಮತ್ತು ಉದ್ದೇಶಗಳನ್ನು ಪ್ರತಿನಿಧಿಸುತ್ತದೆ. ನಾವು ಅರ್ಥ ಮಾಡಿಕೊಳ್ಳ ಬೇಕಿರುವುದು ಏನೆಂದರೆ ಸಂಸ್ಕೃತಿಯಲ್ಲಿ ಸಾಧಿಸಬೇಕಾದ ಉದ್ದೇಶಗಳು ಇರುವಂತೆಯೇ ನಾವು ಅನುಭವಿಸುವ ಸಂಸ್ಕೃತಿಯೂ ಇರುತ್ತದೆ. ಇವೆರಡರ ನಡುವೆ ಗಮನಾರ್ಹವಾದ ವ್ಯತ್ಯಾಸವಿದೆ. ಮಕ್ಕಳು ಒಂದು ನಿರ್ದಿಷ್ಟ ರೀತಿಯಲ್ಲಿ ವರ್ತಿಸುವುದನ್ನು ನಾವು ನೋಡುತ್ತೇವೆ. ಇದು ಶಾಲೆಯಲ್ಲಿರುವಷ್ಟು ಸಮಯಕ್ಕೆ ಸೀಮಿತವಾಗಿದೆ. ಶಾಲೆಯ ನಿರೀಕ್ಷೆಗೆ ತಕ್ಕಂತೆ ತಮ್ಮ ನಡೆವಳಿಕೆಗಳನ್ನು ಬದಲಾಯಿಸಿಕೊಳ್ಳುತ್ತಾರೆ. ತಮ್ಮ ನಡೆವಳಿಕೆ ಗಳನ್ನು ಮತ್ತು ಆ ನಡೆವಳಿಕೆಯಲ್ಲಿ ಹುದುಗಿರುವ ಮೌಲ್ಯಗಳನ್ನು ತಮ್ಮ ಇಚ್ಛೆ ಬಂದಂತೆ ಅರ್ಥೈಸಿಕೊಳ್ಳುತ್ತಾರೆ. ಮನೆ, ಕುಟುಂಬ ದಂತಹ ಅನೌಪಚಾರಿಕ ಸ್ಥಳಗಳಲ್ಲಿ ಅಥವಾ ಶಿಕ್ಷಕರ ಅಥವಾ ಸಿಬ್ಬಂದಿಗಳ ಅನುಪಸ್ಥಿತಿಯಲ್ಲಿ ವಿದ್ಯಾರ್ಥಿಗಳು ಚರ್ಚಿಸುತ್ತಾರೆ, ವಿಮರ್ಶಿಸುತ್ತಾರೆ ಮತ್ತು ತಮ್ಮ ಉದ್ದೇಶಿತ ಕಲಿಕೆಗಳನ್ನು ತಿರಸ್ಕರಿಸುತ್ತಾರೆ. ಆದರೆ ನಂತರ, ಈ ಸಾಂಸ್ಕೃತಿಕ ಆಚರಣೆಗಳನ್ನು ಚರ್ಚಿಸುವುದು, ಕಲಿತದ್ದನ್ನು ತಿರಸ್ಕರಿಸುವುದು ಕಲಿಕೆಯ ಮೂಲಭೂತ ಉದ್ದೇಶಗಳ ಚರ್ಚೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದಂತಾಗುತ್ತದೆ. ಶಾಲೆಗಳು ಅಸ್ತಿತ್ವದಲ್ಲಿರುವ ಈ ಅನಿವಾರ್ಯತೆಯನ್ನು ಒಪ್ಪಿಕೊಳ್ಳಬೇಕು. ಮತ್ತು ಪರಿಸ್ಥಿತಿಗೆ ತಕ್ಕಂತೆ ಪ್ರತಿಕ್ರಿಯಿಸಬೇಕು. ಇದು ಶಿಕ್ಷಣದ ಎರಡು ನಿರ್ಣಾಯಕ ಅಂಶಗಳನ್ನು– ನೈತಿಕ ಮತ್ತು ರಾಜಕೀಯ ಶಿಕ್ಷಣ– ಮುನ್ನೆಲೆಗೆ ತರುತ್ತದೆ. ಇದನ್ನು ಶಾಲೆಯಲ್ಲಿ ಬೆಳೆಸಿದ ಸಂಸ್ಕೃತಿಯಿಂದ ಮಾತ್ರ ಚರ್ಚಿಸಲು ಸಾಧ್ಯ.

### ನೈತಿಕ ಶಿಕ್ಷಣ

ನೈತಿಕ ಶಿಕ್ಷಣವನ್ನು ಮೂಲಭೂತ ತತ್ವಗಳ ಕಂತೆಯೆಂದೂ, ತದನಂತರ ಇವುಗಳನ್ನು ನಿಜ ಜೀವನದ ಸನ್ನಿವೇಶಗಳಿಗೆ ಅನ್ವಯಿಸಲು ಬೇಕಾದ ಸಾಮರ್ಥ್ಯವನ್ನು ಬೆಳೆಸುವುದೆಂದೂ ಗ್ರಹಿಸುವುದು ಸಹಜವಾಗಿದೆ. ಈ ಮಾರ್ಗವು ನೈತಿಕ ಶಿಕ್ಷಣ ಮತ್ತು ನೈತಿಕ ವಿಜ್ಞಾನ ವಿಷಯಗಳ ಮೂಲಾಧಾರವಾಗಿದೆ. ಮಕ್ಕಳಿಗೆ 'ಸ್ವಚ್ಛತೆ ಎಂದರೆ ದೇವರು' ಎಂಬಂತಹ ಗಾದೆಮಾತುಗಳನ್ನು ಕಲಿಸುವುದು, ಅಥವಾ 'ಈ ಕತೆಯ ತಾತ್ಪರ್ಯವೆಂದರೆ..' ಎಂದು ಮುಗಿಸುವ ಹಿತೋಪದೇಶ ಅಥವಾ ಜಾತಕ ಕತೆಗಳಿಂದ ಕತೆಗಳನ್ನು ಓದುವುದು. ಈ ವಿಧಾನದಲ್ಲಿ ಎರಡು ಗಂಭೀರ ಮಿತಿಗಳಿವೆ. ಮೊದಲನೆಯದಾಗಿ, ನೈತಿಕ ಶಿಕ್ಷಣವನ್ನು ಕಂಠಪಾಠಕ್ಕೆ ಅಥವಾ ಕೆಲವು ತತ್ವಗಳನ್ನು ಹೇಗೆ ಅರ್ಥ ಮಾಡಿಕೊಳ್ಳುವುದು ಎಂಬುದಷ್ಟಕ್ಕೆ ಸೀಮಿತ ಮಾಡಲಾಗಿದೆ. ನಿಜ ಜೀವನದ ಸನ್ನಿವೇಶಗಳಲ್ಲಿ ಅದನ್ನು ಹೇಗೆ ಅನ್ವಯಿಸಬಹುದು ಎನ್ನುವುದನ್ನು ಕಲಿಯುವವರ ಕಲ್ಪನೆಗೆ ಬಿಡಲಾಗಿದೆ. ಎಲ್ಲರ ಅನುಭವಗಳು ಒಂದೇ ಆಗಿರುವುದಿಲ್ಲ. ಆದ್ದರಿಂದ ನೈತಿಕ ತತ್ವಗಳನ್ನು ನಿಜ ಜೀವನದಲ್ಲಿ ಅಳವಡಿಸಿಕೊಳ್ಳಲು ಬೇಕಾದ ಸೃಜನಶೀಲತೆ ಮತ್ತು ಬೌದ್ಧಿಕ ಸಾಮರ್ಥ್ಯವನ್ನು ವಿದ್ಯಾರ್ಥಿಗಳಿಗೆ ಕಲಿಸುವುದು ಅಸಾಧ್ಯವಲ್ಲವಾದರೂ ಕಷ್ಟವಂತೂ ಹೌದು.

ಎರಡನೆಯದಾಗಿ, ಕತೆಗಳು ಸಹಾಯಕವೇನೋ ಹೌದು ಆದರೆ ಕತೆಗಳು ಸಂಪೂರ್ಣವಾಗಿ ವಿಭಿನ್ನ ದೇಶ ಕಾಲದಲ್ಲಿ ಸಂಭವಿಸುವುದರಿಂದ ಅವುಗಳಿಂದ ಆದರ್ಶಗಳನ್ನು ಕಲಿತು ಅದನ್ನು ಸಮಕಾಲೀನ ಸಮಯ ಮತ್ತು ಸನ್ನಿವೇಶಗಳಿಗೆ ಅನ್ವಯಿಸಲು ಬಹಳಷ್ಟು ಸೃಜನಶೀಲತೆ ಮತ್ತು ಕಲ್ಪನೆಯ ಅಗತ್ಯವಿರುತ್ತದೆ. ಮೇಲಾಗಿ ಜಾತಕ ಕತೆಗಳ ಹಾಗೆ ಶತಮಾನಗಳ ಹಿಂದೆ ಜನರ ಅನುಭವಗಳನ್ನು ನಾವು ಅನುಭವಿಸಿರುವುದಿಲ್ಲ, ರಾಜಕುಮಾರರಿಗಾಗಿ ಬರೆದ ಹಿತೋಪದೇಶದ ಜೀವನಾನುಭವಗಳು ಸಹ ನಮಗಾಗಿರುವುದಿಲ್ಲ. ನಾವು ಗಾಂಧಿ ಅಥವಾ ಅಬ್ದುಲ್ ಕಲಾಮ್ ಅವರಂತಹ ಆದರ್ಶಪ್ರಾಯ ವ್ಯಕ್ತಿಗಳ ಕಥೆಗಳನ್ನು ಹೇಳುವಾಗಲೂ ಇದು ಅನ್ವಯಿಸುತ್ತದೆ. ನಮ್ಮ ಜೀವನ

ಅನುಭವಗಳು ಎಂದಿಗೂ ಅವರೊಂದಿಗೆ ಹೊಂದಿಕೆಯಾಗುವುದಿಲ್ಲ ಹಾಗೆಯೇ ನಮ್ಮ ಸಾಮರ್ಥ್ಯವೂ. ಈ ವಿಧಾನದಲ್ಲಿ ನೈತಿಕತೆಯು ಕೇವಲ ವಾಕ್ ಚಾತುರ್ಯಕ್ಕೆ ಬಳಸುವ ಮಟ್ಟಕ್ಕೆ ಕುಸಿದಿದೆ ಮತ್ತು ಕೇವಲ ವಿಶಾಲವಾದ ಸರಳವಾದ ಸಭ್ಯತೆ, ಸತ್ಯ, ಪ್ರಾಮಾಣಿಕತೆ ಇತ್ಯಾದಿಗೆ ಸೀಮಿತವಾಗಿದೆ. ವಾಸ್ತವದಲ್ಲಿ ನೈತಿಕತೆಯು ಸಾಮಾಜಿಕ ಆಚರಣೆಗಳಲ್ಲಿ ಅಂತರ್ಗತವಾಗಿರುತ್ತದೆ. ನಮ್ಮ ಭಾವನೆಗಳು ಮತ್ತು ಅರಿವಿನ ನೈಜ ಸಂದರ್ಭಗಳು ಪರಸ್ಪರ ಸಂಘರ್ಷದಲ್ಲಿದ್ದಾಗ ನಾವು ಹೇಗೆ ವರ್ತಿಸುತ್ತೇವೆ ಎಂಬುದರ ಮೇಲೆ ನೈತಿಕತೆಗಳನ್ನು ನಿರ್ಧರಿಸಲಾಗುತ್ತದೆ.

ನೈತಿಕ ಸನ್ನಿವೇಶಗಳು ಸಾಮಾನ್ಯವಾಗಿ ಎರಡು ಅಥವಾ ಹೆಚ್ಚಿನ ಪ್ರಮುಖ ಮೌಲ್ಯಗಳ ನಡುವೆ ಸಂಘರ್ಷವನ್ನು ಉಂಟುಮಾಡುತ್ತದೆ ಆಗ ನಿರ್ಧಾರ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಜಟಿಲ ಸಮಸ್ಯೆಗಳನ್ನು ಎದುರಿಸಿದಾಗ ನಾವು ಯಾವ ನಿರ್ಧಾರ ತೆಗೆದುಕೊಳ್ಳುತ್ತೇವೆ– ಸತ್ಯ ಹೇಳಿದರೆ ಯಾರಿಗಾದರೂ ಹಾನಿಯಾಗುತ್ತದೆ ಎಂದು ನಂಬಿ ಸುಳ್ಳು ಹೇಳುವುದು ಸರಿಯೇ? ಸಾಕಷ್ಟು ಹೊಂದಿರುವ ವ್ಯಕ್ತಿಯಿಂದ ಏನನ್ನಾದರೂ ಕದಿಯುವುದು ಸಮರ್ಥನೀಯವೇ? ಈ ಬಗೆಯ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಅನುಭವಿಸಿಯೇ ತೀರುತ್ತಾರೆ. ಶಿಕ್ಷಣವು ಇಂತಹ ಸಮಸ್ಯೆಗಳನ್ನು ನಿರ್ವಹಿಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕು.

ಇಂತಹ ಸಮಯದಲ್ಲಿ ಶಾಲೆಗಳಲ್ಲಿ ಅಸ್ತಿತ್ವದಲ್ಲಿರುವ ಸಂಸ್ಕೃತಿಯು ನೆರವಿಗೆ ಬರುತ್ತದೆ. ನಾವು ಮೊದಲ ವಿಭಾಗದಲ್ಲಿ ನೋಡಿದಂತೆ ಸಂಸ್ಕೃತಿಯು, ಮೌಲ್ಯಗಳನ್ನು ತಮ್ಮೊಳಗೆ ಹುದುಗಿಸಿಕೊಂಡಿರುವ ಆಚರಣೆಗಳು. ಮಕ್ಕಳು ಅಭ್ಯಾಸಗಳನ್ನು ಅನುಸರಿಸುವುದನ್ನ ನಿರೀಕ್ಷಿಸುವುದು ಮತ್ತು ಸ್ಥಾಪಿತ ಆಚರಣೆಗಳ ಹಿಂದಿನ ತರ್ಕವನ್ನು ಪ್ರಶ್ನಿಸಲು ಅವರನ್ನು ಉತ್ತೇಜಿಸುವುದು ನೈತಿಕ ಶಿಕ್ಷಣದ ಅತ್ಯಂತ ನೇರವಾದ ಮತ್ತು ಮೌಲ್ಯಯುತ ವಿಧಾನವಾಗಿದೆ.

ಶಾಲೆಯಲ್ಲಿನ ಸ್ಥಾಪಿತ ಮಾನದಂಡಗಳನ್ನು ಪ್ರಶ್ನಿಸಿ, ರೂಢಿಯಲ್ಲಿರುವ ಆಚರಣೆಯನ್ನು ಮುರಿಯಲು ಪ್ರಯತ್ನಿಸಿ ಪರಿಣಾಮವನ್ನು ಗ್ರಹಿಸಲು ಪ್ರಯತ್ನಿಸಿದಾಗ ವಿದ್ಯಾರ್ಥಿಗಳಿಗೆ ಗಮನಾರ್ಹ ಮಟ್ಟದ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ನೀಡುವುದು ಅವರ ನೈತಿಕ ಸ್ವಾಯತ್ತತೆಯ ಬೆಳವಣಿಗೆಗೆ ಅಮೂಲ್ಯವಾದ ಕೊಡುಗೆ ನೀಡಿದಂತಾಗುತ್ತದೆ.

### ರಾಜಕೀಯ ಶಿಕ್ಷಣ

ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವವನ್ನು ಪರಿಚಯಿಸಲು ಮತ್ತು ಅವರಿಗೆ ರಾಜಕೀಯ ಶಿಕ್ಷಣ ನೀಡಲು ಇದೇ ವಾದವನ್ನು ಮುಂದಿಡಬಹುದು. ಪೌರನೀತಿಯ ಮೂಲಕ ವಿದ್ಯಾರ್ಥಿಗಳಿಗೆ ನಮ್ಮ ಸಂವಿಧಾನದ ಬಗ್ಗೆ ಶಿಕ್ಷಣ ನೀಡುತ್ತಿರುವುದು ಅವಮಾನಕರ ಮತ್ತು ಅಸಮರ್ಪಕ. ಇದು ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ ಮತ್ತು ಸಮಾನತೆಯಂತಹ ಪ್ರಾಥಮಿಕ ತತ್ವಗಳನ್ನು ಸಮರ್ಪಕವಾಗಿ ಅರ್ಥ ಮಾಡಿಸಿಕೊಡುವುದಿಲ್ಲ ಮತ್ತು ಸಾಂವಿಧಾನಿಕ ಮೌಲ್ಯಗಳ ಪರಿಚಯವನ್ನೂ ಸಹ ನೀಡುವುದಿಲ್ಲ. ಇದಕ್ಕಾಗಿ ಉತ್ತಮ ಪರಿಹಾರವೆಂದರೆ ಶಾಲೆಗಳು, ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಸದಸ್ಯರಾಗಿ ಹೊಂದಿರುವ ಸಂಸತ್ತಿನ ಮಾದರಿಯನ್ನು ಕಾರ್ಯಗತಗೊಳಿಸುವುದು. ಇದು ಪ್ರಜಾಪ್ರಭುತ್ವದ ಸದೃಢ ವಾಸ್ತವಿಕ ಶಿಕ್ಷಣವನ್ನು ಬೆಳೆಸಲು ಸಹಾಯವಾಗುತ್ತದೆ. ಶಾಲೆಗಳು ವಿದ್ಯಾರ್ಥಿಗಳು ತರಗತಿಯಲ್ಲಿ ಕಲಿಯುವ–ಕಲಿಸುವ ಪಠ್ಯವನ್ನು ನಿರ್ವಹಿಸುವಂತಹ ಕೆಲವು ಪ್ರಮುಖ ಚಟುವಟಿಕೆಗಳಿಗೆ ಹೊಣೆಗಾರರಾಗುವ ಸಾಂಸ್ಕೃತಿಕ ಪರಿಸರವನ್ನು ಅಭಿವೃದ್ಧಿ ಪಡಿಸಬೇಕು, ಅಂದರೆ ತರಗತಿಯಲ್ಲಿ ಬೋಧನಾ–ಕಲಿಕಾ ಸಾಮಗ್ರಿ (ಟಿಎಲ್ ಎಮ್) ಮತ್ತು ಗ್ರಂಥಾಲಯದಲ್ಲಿ ಪುಸ್ತಕಗಳನ್ನು ನಿರ್ವಹಿಸುವಂತಹ ಚಟುವಟಿಕೆಗಳನ್ನು ಪ್ರಾಥಮಿಕ ಶಾಲೆಯಿಂದಲೇ ಪ್ರಾರಂಭಿಸಬೇಕು. ಈ ರೀತಿಯ ಚಟುವಟಿಕೆಗಳು ನಿಯಮ ಮತ್ತು ಮಾರ್ಗಸೂಚಿಗಳನ್ನು ಹೊಂದಲು ಮತ್ತು ಇತರರೊಂದಿಗೆ ಔಪಚಾರಿಕ ಸಂಬಂಧಗಳನ್ನು ಅಭಿವೃದ್ಧಿಪಡಿಸಲು ನೆರವಾಗುತ್ತವೆ. ಈ ಹೊಣೆಗಾರಿಕೆಯ ಸಂಕೀರ್ಣತೆಯು ಪ್ರಾಥಮಿಕ ಶಾಲೆಯಿಂದ ಮಧ್ಯಮ ಶಾಲೆಗೆ ಹಂತ ಹಂತವಾಗಿ ಹೆಚ್ಚಾಗಬಹುದು, ಮತ್ತು ವಿದ್ಯಾರ್ಥಿ ಸಂಸತ್ತಿನಂತಹ ಪ್ರಜಾಸತ್ತಾತ್ಮಕ ರಚನೆಗಳೊಂದಿಗೆ ಪ್ರಾತಿನಿಧಿಕ ಸಮಿತಿಗಳೊಂದಿಗೆ ಸೇರಬಹುದು.

ತರ್ಕಸಮ್ಮತ ಆಯ್ಕೆಯು (ನೈತಿಕ ಅಥವಾ ರಾಜಕೀಯ) ನಿಷ್ಪಕ್ಷಪಾತ, ಸೈದ್ಧಾಂತಿಕ ತೀರ್ಪುಗಳ ಫಲಿತಾಂಶವನ್ನು ಅನ್ವಯಿಸುವ ವಿಷಯವಾಗಿಲ್ಲ, ಆದರೆ ನಮ್ಮ ನಿರ್ದಿಷ್ಟ ಪರಿಸ್ಥಿತಿಗಳ ಅನುಸಾರವಾಗಿ ನಿಖರವಾಗಿ ಯಶಸ್ವಿಯಾದ ಪ್ರಯೋಗಗಳನ್ನು ಅನುಸರಿಸುವುದು ಅಥವಾ ಸೂಕ್ತವಾಗಿ ರೂಪಾಂತರಿಸುವುದಾಗಿದೆ.

### ವಿದ್ಯಾರ್ಥಿ ಸ್ವಾಯತ್ತತೆ ಮತ್ತು ಶಾಲಾ ಸಂಸ್ಕೃತಿ

ಕೊನೆಗೆ, ಇದನ್ನು ಸಾಧ್ಯವಾಗಿಸಲು, ಶಾಲಾ ಸಾಂಸ್ಕೃತಿಕತೆ ವಿದ್ಯಾರ್ಥಿಗಳ ತರ್ಕಸಮ್ಮತ ಆಯ್ಕೆಯ ಸ್ವಾಯತ್ತತೆಯನ್ನು ತಜ್ಞ ವಿಚಾರವಾಗಿ ಒಪ್ಪಿಕೊಳ್ಳಬೇಕು. ಶಾಲೆಯ ಸಾಂಸ್ಕೃತಿಕತೆಯು ವಿದ್ಯಾರ್ಥಿಗಳನ್ನು ಪಠ್ಯಕ್ರಮದಿಂದ ಅಥವಾ ಶಾಲೆಯಲ್ಲಿನ ವಯಸ್ಕರಿಂದ ನಿಷ್ಕ್ರಿಯರನ್ನಾಗಿ ಮಾಡಬಾರದು ಎಂದು ಖಾತರಿ ಪಡಿಸಬೇಕು. ಬದಲಾಗಿ, ಶಾಲಾ ಸಾಂಸ್ಕೃತಿಕತೆಯ ಮೂಲಭೂತ ಅಂಶವೆಂದರೆ ಪಠ್ಯಕ್ರಮದಲ್ಲಿ ಅಥವಾ ಶಾಲಾ ಸಂಸ್ಕೃತಿಯ ಮೂಲಕ ಬಲಪಡಿಸಲಾದ ಮೌಲ್ಯಗಳನ್ನು ಮತ್ತು ನಿಯಮಗಳನ್ನು ಪ್ರಶ್ನಿಸುವ ಮತ್ತು ತಕ್ಷಣವೇ ಸವಾಲು ಹಾಕುವ ಸ್ವಾತಂತ್ರ್ಯ. ಈ ಪ್ರಶ್ನೆಗಳಿಂದ ವ್ಯಾಸಂಗವು ತರ್ಕ ಮತ್ತು ಯುಕ್ತಿಯ ನೆರವಿನಿಂದ ನಡೆಯಬೇಕು, ಇದನ್ನು ಶಿಕ್ಷಣಾತ್ಮಕವಾಗಿರುವಂತೆ ಮಾಡಬೇಕು ಮತ್ತು ಟೀಕೆಯ ಕಾರಣಕ್ಕೆ ಟೀಕೆ ಮಾಡುವುದು, ವಿರೋಧ ಮಾಡಬೇಕೆಂದು ವಿರೋಧಿಸುವುದು ಎಂದಾಗಬಾರದು.



**ಪ್ರಕಾಶ್ ಅಯ್ಯರ್** ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಎಜುಕೇಶನ್‌ನಲ್ಲಿ ಸಹ ಪ್ರಾಧ್ಯಾಪಕರಾಗಿದ್ದಾರೆ. ಅವರು ಶಿಕ್ಷಣದ ತತ್ವಶಾಸ್ತ್ರ ಮತ್ತು ಪಠ್ಯಕ್ರಮದ ಸಿದ್ಧಾಂತವನ್ನು ಕಲಿಸುತ್ತಾರೆ. ಮತ್ತು ಅವರ ಸಂಶೋಧನಾ ಆಸಕ್ತಿಗಳು ನೈತಿಕ ಮತ್ತು ರಾಜಕೀಯ ಶಿಕ್ಷಣದ ಕುರಿತಾಗಿವೆ. ಅವರನ್ನು
**prakash.iyer@apu.edu.in** ಮೂಲಕ ಸಂಪರ್ಕಿಸಬಹುದು.

● ಅನುವಾದ: **ಕಿರಣ್ ಮಂಜುನಾಥ್** | ಪರಿಶೀಲನೆ: **ಲತಾ ಕೆ. ಸಿ.**

# ಶಾಲೆ ಮತ್ತು ತರಗತಿಯ ಸಂಸ್ಕೃತಿಯ ಹೃದಯದಲ್ಲಿ ವೈವಿಧ್ಯತೆ

**ಮಧುಸೂದನ ರಮೇಶ್**

ಈ ಪ್ರಬಂಧದಲ್ಲಿ, ನಾನು ವೈವಿಧ್ಯತೆಯ ಬಗ್ಗೆ ತಿಳುವಳಿಕೆಯನ್ನು ಹುಟ್ಟಿಸಲು, ವೈವಿಧ್ಯತೆಯೊಂದಿಗೆ ಕೆಲಸ ಮಾಡುವ ಅಭ್ಯಾಸಗಳನ್ನು ನಿರೂಪಿಸಲು ಮತ್ತು ವೈವಿಧ್ಯತೆಯ ಕಡೆಗೆ ಶಿಕ್ಷಣ ಮತ್ತು ಶಿಕ್ಷಕರಿಗೆ ವಿಶಾಲವಾದ ವಿಧಾನವನ್ನು ಸೂಚಿಸಲು ಪ್ರಯತ್ನಿಸುತ್ತೇನೆ.

**ವೈವಿಧ್ಯತೆಯನ್ನು ಗುರುತಿಸುವುದು:**

ಎಜುಕೇಶನ್ ಫಾರ್ ಆಲ್ (ಇ.ಎಫ್.ಎ) ಆಂದೋಲನ ಮತ್ತು ಸರ್ವ ಶಿಕ್ಷಣ ಅಭಿಯಾನ (ಎಸ್.ಎಸ್.ಎ, 2001) ಮೂಲಕ ರಾಷ್ಟ್ರೀಯವಾಗಿ ಈ ಜಾಗತಿಕ ಬದ್ಧತೆಗೆ ಪ್ರಾಮುಖ್ಯತೆ ನೀಡಿರುವುದರಿಂದ ಭಾರತದಲ್ಲಿನ ಶಾಲೆಗಳು ಹೆಚ್ಚು ವೈವಿಧ್ಯಮಯವಾಗುತ್ತಿವೆ ಮತ್ತು ಪ್ರಮುಖವಾಗಿ, ಮಕ್ಕಳಿಗೆ ಶಿಕ್ಷಣ ನೀಡಲು ಶಿಕ್ಷಕರು ಮತ್ತು ಪೋಷಕರು ಪರಿಶ್ರಮಿಸಿದ ಕಾರಣದಿಂದಾಗಿ (ಎಲ್ಲಾ ಕಷ್ಟ ಕಾರ್ಪಣ್ಯಗಳನ್ನು ಎದುರಿಸಿಕೊಂಡು). ಇಂದು ತರಗತಿಗಳು ಹೆಚ್ಚಿನ ವೈವಿಧ್ಯತೆಯನ್ನು ಹೊಂದಿವೆ, ಉದಾಹರಣೆಗೆ ಭಾಷಿಕವಾಗಿ, ಸಾಮಾಜಿಕ-ಸಾಂಸ್ಕೃತಿಕವಾಗಿ, ಸಾಮರ್ಥ್ಯಗಳು, ಅಸಾಮರ್ಥ್ಯಗಳು ಮತ್ತು ಲಿಂಗಗಳಲ್ಲಿ. ವೈವಿಧ್ಯತೆಯನ್ನು ಗುರುತಿಸಲು ಸರಳವಾದ ಚೌಕಟ್ಟು ಎಂದರೆ 'ಪ್ರತ್ಯಕ್ಷ' ಮತ್ತು 'ಪರೋಕ್ಷ' ಪ್ರಭಾವಗಳ ಪರಿಭಾಷೆಯಲ್ಲಿ ಯೋಚಿಸುವುದು, ಹಾಗೂ ಈ ಎರಡರ ನಡುವೆ ಅತಿಕ್ರಮಣಗಳು ಇರುತ್ತವೆ ಎಂಬ ತಿಳುವಳಿಕೆ ಹೊಂದಿರುವುದು. ವಲಸೆ ಹೋಗುವುದು ನೇರ ಪ್ರಭಾವದ ಒಂದು ರೂಪವಾಗಿದೆ, ಆದರೂ ವಲಸೆಯ ಸ್ವರೂಪವು ಸಮಾನವಾಗಿ ಮುಖ್ಯವಾಗಿದೆ – ಒಳ್ಳೆಯ ಉದ್ಯೋಗ ನಿರೀಕ್ಷೆಗಳಿಗಾಗಿ ಒಂದು ಕುಟುಂಬವು ಮೆಟ್ರೋಪಾಲಿಟನ್ ನಗರಕ್ಕೆ ಸ್ಥಳಾಂತರಗೊಳ್ಳಬಹುದು ಮತ್ತು ಇನ್ನೊಂದು ತಮ್ಮ ರಾಜ್ಯದಲ್ಲಿನ ಅಶಾಂತಿಯಿಂದಾಗಿ ನೆರೆಯ ರಾಜ್ಯಕ್ಕೆ ವಲಸೆ ಹೋಗಬಹುದು.

ತರಗತಿಯ ವೈವಿಧ್ಯತೆಯ ಮೇಲೆ ಪರೋಕ್ಷ ಪ್ರಭಾವದ ಉದಾಹರಣೆಗಳೆಂದರೆ, ಶಾಲೆಯ ಆಯ್ಕೆಗಳಲ್ಲಿ ಬದಲಾವಣೆಗೆ ಕಾರಣವಾಗುವ ಕುಟುಂಬಗಳ ಆಕಾಂಕ್ಷೆಗಳು ಅಥವಾ ಪ್ರಗತಿಪರ ಚಿಂತನೆಯಂತಹ ಸ್ಥೂಲ ಅಂಶಗಳಾಗಿವೆ, ಉದಾಹರಣೆಗೆ ಕುಟುಂಬ/ಪೋಷಕರು ತಮ್ಮ ವಿಶೇಷಚೇತನ ಮಗುವಿಗೆ 'ನಿಯಮಿತ' ನೆರೆಹೊರೆಯ ಶಾಲೆಯಲ್ಲಿ ಅಧ್ಯಯನ ಮಾಡಲು ಪ್ರತಿಪಾದಿಸುವುದು. (ಇದನ್ನು ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ಅನುಮೋದಿಸಲಾಗಿದೆ). ವೇಗವಾಗಿ ಬದಲಾಗುತ್ತಿರುವ ಮಾರುಕಟ್ಟೆಗಳು ಹಾಗೂ ಉದ್ಯೋಗಗಳ ಸ್ವರೂಪದ ಮೇಲೆ ಆಗುವ ಅವುಗಳ ಪ್ರಭಾವ, ಸಾಮಾಜಿಕ ಮಾಧ್ಯಮದಿಂದ ಜನಪ್ರಿಯ ಸಂಸ್ಕೃತಿ, ಹೊಸ ವಿದ್ಯಾರ್ಥಿ ಆಸಕ್ತಿಗಳ ಒಂದು ಶ್ರೇಣಿ ಮತ್ತು ಮೂರನೇ ಸಹಸ್ರಮಾನದಲ್ಲಿ ಜನಿಸಿದ ಯುವ ಪೀಳಿಗೆಯ ವಿಕಸನಗೊಳ್ಳುತ್ತಿರುವ ಗುರುತುಗಳಿಂದ ಉಂಟಾಗುವ ಪರೋಕ್ಷ ಪ್ರಭಾವಗಳನ್ನು ಗುರುತಿಸುವುದು ಕಷ್ಟವಾಗುತ್ತದೆ.

ತರಗತಿಯ ವೈವಿಧ್ಯತೆಯು ಆಕಾರವನ್ನು ಪಡೆದುಕೊಳ್ಳುವ ವೇಗ ಮತ್ತು ವಿಧಾನಕ್ಕೆ ವಿಮರ್ಶಾತ್ಮಕ ನೋಟದ ಅಗತ್ಯವಿದ್ದರೂ, ಶಿಕ್ಷಣತಜ್ಞರಾಗಿ, ನಾವು ಇದನ್ನು ಸ್ವಾಗತಿಸಬೇಕು ಮತ್ತು ಹೆಚ್ಚಿನ ವೈವಿಧ್ಯತೆಗಾಗಿ ಸಿದ್ಧರಾಗಿರಬೇಕು. ಈ ಹೊಸ ವೈವಿಧ್ಯತೆಗಾಗಿ ನಾವು ಶಾಲೆ ಮತ್ತು ತರಗತಿಯ ಸಂಸ್ಕೃತಿಯನ್ನು ಹೇಗೆ ನಿರ್ಮಿಸಬಹುದು ಎಂಬ ಕಾರ್ಯಶೀಲ ಪ್ರಶ್ನೆಯನ್ನು ಇದು ಹುಟ್ಟುಹಾಕುತ್ತದೆ.

**ವೈವಿಧ್ಯತೆಯೊಂದಿಗೆ ಕೆಲಸ ಮಾಡುವ ಅಭ್ಯಾಸ:**

ಶಿಕ್ಷಣತಜ್ಞರಾಗಿ, ವೈವಿಧ್ಯತೆಯೊಂದಿಗೆ ತೊಡಗಿಸಿಕೊಳ್ಳುವುದು ಎಂದರೆ ಮಕ್ಕಳು ವಿಭಿನ್ನ ಹಿನ್ನೆಲೆಗಳ ಬಗ್ಗೆ ಸಹಾನುಭೂತಿಯನ್ನು ಬೆಳೆಸಿಕೊಳ್ಳುವುದೊಂದೇಯಲ್ಲ, ಆದರೆ ಅದರೊಂದಿಗೆ ಶಿಕ್ಷಣದ ಅರ್ಥದಲ್ಲಿ ತೊಡಗಿಸಿಕೊಳ್ಳುವುದೂ ಸಹ ಆಗಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ನನ್ನ ಬೋಧನೆ ಮತ್ತು ಕಲಿಕೆಯಲ್ಲಿ ನನ್ನ ಎಲ್ಲಾ ವಿದ್ಯಾರ್ಥಿಗಳು ಜೀವಂತ ಅನುಭವಗಳನ್ನು ನಾನು ಹೇಗೆ ಸೇರಿಸಬಹುದು ಎಂಬಂತಹ ಪ್ರಮುಖ ಪ್ರಶ್ನೆಗಳನ್ನು ಇದು ಕೇಳುತ್ತದೆ; ಮತ್ತು ಮಕ್ಕಳು ಪರಸ್ಪರರಿಂದ ಏನನ್ನು ಕಲಿಯಬಹುದು, ಕೇವಲ ಕಲ್ಪನಾತ್ಮಕವಾಗಿ ಅಲ್ಲ, ಆದರೆ ಅವರು ವಾಸಿಸುವ ಪ್ರಪಂಚದ ಸಾಮಾಜಿಕ ತಿಳುವಳಿಕೆಯನ್ನು ನಿರ್ಮಿಸಲು ಸಹ ಸಹಾಯವಾಗುವಂತೆ. ವೈವಿಧ್ಯಮಯ ತರಗತಿಗಳು ಮಕ್ಕಳು ಪರಸ್ಪರ ಕಲಿಯಲು ಮತ್ತು ಸಮಾಜದ ಸಾಮಾಜಿಕ ರಚನೆಯನ್ನು ಪ್ರಶಂಸಿಸಲು ಹೆಚ್ಚಿನ ಅವಕಾಶಗಳನ್ನು ಕಲ್ಪಿಸುತ್ತದೆ. ಈ ರೀತಿಯ ವೈವಿಧ್ಯತೆಯಲ್ಲಿ ತೊಡಗಿಸಿಕೊಳ್ಳುವುದೆಂದರೆ ಎಲ್ಲಾ ವಿಭಿನ್ನ ರೀತಿಯ ಹಿನ್ನೆಲೆಗಳಿಗೆ ಸ್ವೀಕಾರವನ್ನು ತೋರಿಸುವುದು.

ಇತ್ತೀಚಿನ ವೆಬಿನಾರ್* ಒಂದರಲ್ಲಿ, ಸಮನ್ವಯ ಅಭ್ಯಾಸಗಳ ಕುರಿತು, ದೆಹಲಿಯ ಸರ್ಕಾರಿ ಶಾಲೆಯ ಮಾರ್ಗದರ್ಶಕ ಶಿಕ್ಷಕ ಮುರಾರಿ ಝಾ ಶಿಕ್ಷಣವನ್ನು ಹೇಗೆ ರಚಿಸಲಾಗಿದೆ ಮತ್ತು ಕಲಿಸಲಾಗುತ್ತದೆ ಹಾಗೂ ಈ ಮಕ್ಕಳು ಯಾರು ಎಂಬುದರ ನಡುವಿನ ಅಂತರದ ಕುರಿತು ಮಾತನಾಡಿದರು. ಅವರು ಉಲ್ಲೇಖಿಸಿದ ಸಾಂಸ್ಕೃತಿಕ ಅಂತರವು, ತಮ್ಮ ಕುಟುಂಬವನ್ನು ಬೆಂಬಲಿಸಲು ಕೆಲಸ ಮಾಡುವ ಮತ್ತು ಆಗಾಗ್ಗೆ ಶಾಲೆಯನ್ನು ತಪ್ಪಿಸುವ ಮಕ್ಕಳಿರುವ ಸಮುದಾಯದ್ದಾಗಿದೆ, ಈ ಮಕ್ಕಳು ಶಾಲೆಗೆ ಬರಲು ಪ್ರೇರೇಪಿಸಲು ವಿದ್ಯಾರ್ಥಿಗಳ ನೂರು ಪ್ರತಿಶತ ಹಾಜರಾತಿಯನ್ನು ಆಚರಿಸುವುದು. ಅವರು ತಮ್ಮ ತರಗತಿಯು ಮಾಡುವ ಆಲೋಚನಾತ್ಮಕ ಡೈರಿ–

ಬರೆಯುವ ಕಾರ್ಯದ ಅಭ್ಯಾಸದ ಬಗ್ಗೆ ಮಾತನಾಡಿದರು, ಇದು ಅವರ ಬೋಧನೆಯನ್ನು ರಚಿಸಲು ಸಹಾಯ ಮಾಡುತ್ತದೆ ಮತ್ತು ಶಿಕ್ಷಕರು ಮತ್ತು ತಮ್ಮ ಗೆಳೆಯರಿಂದ ಮಕ್ಕಳಿಗೆ ಕೇಳಲು ಮತ್ತು ಅರ್ಥಮಾಡಿಕೊಳ್ಳಲು ಸ್ಥಳವನ್ನು ಒದಗಿಸುತ್ತದೆ. ಅಂತಹ ಅಭ್ಯಾಸವನ್ನು ಸಹ–ಸಂಸ್ಥೆ ಅಭ್ಯಾಸ ಎಂದು ವರ್ಗೀಕರಿಸಬಹುದು, ಇದು ಕಲಿಕೆಯನ್ನು ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಹಂಚಿಕೆಯ ಪ್ರಯತ್ನವೆಂದು ವಾದಿಸುತ್ತದೆ. ಸಹ–ಸಂಸ್ಥೆಯ ಕಲ್ಪನೆಯ ಮೇಲೆ ತರಗತಿಯ ಸಂಸ್ಕೃತಿಯನ್ನು ರಚಿಸಿದಾಗ, ವಿದ್ಯಾರ್ಥಿಗಳು ತಮ್ಮ ಸ್ವಂತ ಕಲಿಕೆಯ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಇದು ಸ್ಥಳವನ್ನು ಸೃಷ್ಟಿಸುತ್ತದೆ, ಮಕ್ಕಳು ಅವರು ಹೇಗೆ ಕಲಿಯುತ್ತಾರೆ ಎಂಬುದನ್ನು ಕಂಡುಕೊಳ್ಳುವ ಹೆಚ್ಚಿನ ಸಾಧ್ಯತೆಗೆ ಕಾರಣವಾಗುತ್ತದೆ. ಉದಾಹರಣೆಗೆ, ವಿದ್ಯಾರ್ಥಿಗೆ ಓದುವ ತೊಂದರೆ ಇದೆ ಎಂದು ನಾವು ಪರಿಗಣಿಸಿದರೆ ಮತ್ತು ಆ ಪಾಠದಲ್ಲಿ ವಿದ್ಯಾರ್ಥಿಗಳು ಸಣ್ಣ ಕಥೆಯನ್ನು ಓದಬೇಕು ಮತ್ತು ಪ್ರಶ್ನೆಗಳಿಗೆ ಉತ್ತರಿಸಬೇಕು. ಎಂಬ ಅಂಶಗಳಿದ್ದರೆ ಸಹ– ಸಂಸ್ಥೆಯೊಂದಿಗಿನ ತರಗತಿಯು ಎಲ್ಲಾ ವಿದ್ಯಾರ್ಥಿಗಳಿಗೆ ಮುಕ್ತತೆ ಮತ್ತು ಆಯ್ಕೆಯನ್ನು ಸಂಯೋಜಿಸುತ್ತದೆ. ಸಂಭವನೀಯ ಆಯ್ಕೆಗಳು ಕಥೆಯ ಆಯ್ಕೆ, ಪ್ರಶ್ನೆಯನ್ನು ಓದಲು ಮತ್ತು ಉತ್ತರಿಸಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂಬುದರ ಆಯ್ಕೆ, ಓದುವ ಪ್ರಕ್ರಿಯೆಯಲ್ಲಿ ಆಯ್ಕೆ– ಇದನ್ನು ಏಕಾಂಗಿಯಾಗಿ ಅಥವಾ ಜೋಡಿಯಾಗಿ ಮಾಡಲು ಅಥವಾ ಪಠ್ಯದಿಂದ ಮಾತನಾಡುವ ತಂತ್ರಜ್ಞಾನವನ್ನು ಬಳಸಿಕೊಂಡು ಆಲಿಸುವ ಆಯ್ಕೆಯನ್ನು ಒಳಗೊಂಡಿರುತ್ತದೆ. ಪ್ರಶ್ನೆಗಳಲ್ಲಿ ಆಯ್ಕೆ ಅಥವಾ ಪ್ರಶ್ನೆಗಳ ಸಂಖ್ಯೆ, ಆಡಿಯೊ ಟಿಪ್ಪಣಿಯ ಮೂಲಕ ಉತ್ತರಿಸುವ ಆಯ್ಕೆ ಮತ್ತು ಇತ್ಯಾದಿ. ಈ ಆಯ್ಕೆಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೆ ವಿಸ್ತರಿಸುವುದು ತುಂಬಾ ಮುಖ್ಯವಾಗಿದೆ. ಏಕೆಂದರೆ ವ್ಯತ್ಯಾಸವನ್ನು ಹೊಂದಿರುವವರಿಗೆ ಮಾತ್ರ ಆಯ್ಕೆಗಳನ್ನು ಲಭ್ಯವಾಗುವಂತೆ ಮಾಡುವುದು ವಿದ್ಯಾರ್ಥಿಗಳಲ್ಲಿ ತಮ್ಮನ್ನು ಇತರರಿಂದ ಬೇರ್ಪಡಿಸಿದಂತಹ ಭಾವನೆಗಳನ್ನು ಉಂಟು ಮಾಡುತ್ತದೆ. ಅಂತಹ ತರಗತಿಯಲ್ಲಿ ಓದುವ ತೊಂದರೆಯನ್ನು ಹೊಂದಿರುವ ವಿದ್ಯಾರ್ಥಿಯು ಕಡಿಮೆ ಆಸಕ್ತಿ ಹೊಂದಿರುತ್ತಾನೆ ಮತ್ತು ಅವರಿಗೆ ಸೂಕ್ತವೆನಿಸುವ ವೇಗದಲ್ಲಿ ಓದುವ ಮತ್ತು ಕಲಿಯುವ ಕೌಶಲವನ್ನು ಅಭಿವೃದ್ಧಿಪಡಿಸಲು ಮುಕ್ತನಾಗಿರುತ್ತಾನೆ. ಈ ರೀತಿಯ ಆಯ್ಕೆಯು ಮತ್ತು ಮುಕ್ತ–ಅಂತ್ಯವು ಇತರ ಎಲ್ಲಾ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತದೆ. ಏಕೆಂದರೆ ಅವರು ಹೇಗೆ ಕಲಿಯುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಹಾಗೂ ತಮ್ಮದೇ ಆದ ವಿಶಿಷ್ಟವಾದ ಕಲಿಕೆಯ ವಿಧಾನಗಳನ್ನು ಅಭಿವೃದ್ಧಿಪಡಿಸುತ್ತಾರೆ. ಸಹ–ಸಂಸ್ಥೆ ಎಂದರೆ ವಿದ್ಯಾರ್ಥಿಗಳಿಗೆ ಮುಕ್ತ ಆಯ್ಕೆಗಳನ್ನು ನೀಡುವುದು ಮಾತ್ರವಲ್ಲ, ಇದು ಶಿಕ್ಷಕರು ವಿದ್ಯಾರ್ಥಿಗಳು ತಮ್ಮ ಪ್ರಕ್ರಿಯೆಯನ್ನು ಪ್ರತಿಬಿಂಬಿಸಲು ಪ್ರಶ್ನೆಗಳನ್ನು ಕೇಳುವುದನ್ನು ಮತ್ತು ಅವರು ಅದನ್ನು ಹೇಗೆ ಸುಧಾರಿಸಬಹುದು – ಕಲಿಕೆಯನ್ನು ಹಂಚಿಕೆಯ ಜವಾಬ್ದಾರಿಯನ್ನಾಗಿ ಮಾಡುವುದನ್ನು ಒಳಗೊಂಡಿರುತ್ತದೆ

ತತ್ವಗಳು ಮತ್ತು ಅಭ್ಯಾಸಗಳನ್ನು ಹೊರತುಪಡಿಸಿ, ವೈವಿಧ್ಯತೆಯನ್ನು ಅರ್ಥಮಾಡಿಕೊಳ್ಳುವುದು ವಿದ್ಯಾರ್ಥಿಗಳನ್ನು ತಿಳಿದುಕೊಳ್ಳುವಲ್ಲಿ ದಿನನಿತ್ಯದ 'ಸಣ್ಣ' ಪ್ರಯತ್ನಗಳ (ಮತ್ತು ಪ್ರತಿಬಿಂಬಗಳು) ಬಗ್ಗೆ ಆಗಿರುತ್ತದೆ. ಮಧ್ಯಮ ಆದಾಯದ ಪ್ರೌಢಶಾಲಾ ಶಿಕ್ಷಕಿಯಾದ ಕಾವ್ಯಾ ಅವರು ವಿಶ್ವ ಸಂಗೀತದಲ್ಲಿ ಹೆಚ್ಚಿನ ಆಸಕ್ತಿಯ ಕೇಳುಗರಾಗಿದ್ದಾರೆ. ಆಕೆ ತನ್ನ ವಿದ್ಯಾರ್ಥಿಗಳು ಕೇಳುತ್ತಿರುವ ಸಂಗೀತವನ್ನು ಕೇಳಲು ಪ್ರಯತ್ನಿಸುತ್ತಾಳೆ ಮತ್ತು ವರ್ಷವಿಡೀ ವಿವಿಧ ಮಧ್ಯಂತರಗಳಲ್ಲಿ ಅದರ ಬಗ್ಗೆ ಸಂಕ್ಷಿಪ್ತ ಚರ್ಚೆಗಳನ್ನು ಮಾಡುತ್ತಾಳೆ. ಇದು ತನ್ನ ಆಸಕ್ತಿಗಳ ಆಧಾರದ ಮೇಲೆ ಮಕ್ಕಳೊಂದಿಗೆ ಸಂಪರ್ಕ ಸಾಧಿಸುವ ಮಾರ್ಗವಾಗಿದೆ, ಇದು ವಿದ್ಯಾರ್ಥಿಗಳೊಂದಿಗೆ ಆಕೆ ಹೊಂದಿರುವ ಒಂದು ರೀತಿಯ ಅನನ್ಯ ಸಂಪರ್ಕವನ್ನು ಬೇರ್ಪಡಿಸಲಾಗದಂತೆ ಸುಗಮಗೊಳಿಸುತ್ತದೆ, ಈ ರೀತಿಯ ಹೊಂದಾಣಿಕೆಯು ಸಿಬ್ಬಂದಿ ಕೊಠಡಿಯಲ್ಲಿರುವ ಬೇರೆ ಯಾವ ಶಿಕ್ಷಕರೂ ಹೊಂದಿರುವುದಿಲ್ಲ.

ವೈವಿಧ್ಯತೆಯಲ್ಲಿ ಸಮನ್ವಯತೆಯನ್ನು ಜಾರಿಗೊಳಿಸುವ ಮೂಲ ತತ್ವ

ತರಗತಿಯಲ್ಲಿನ ವೈವಿಧ್ಯತೆ ಮತ್ತು ವ್ಯತ್ಯಾಸದ ಕಲ್ಪನೆಯನ್ನು ಪರಿಶೋಧಿಸುವುದರಲ್ಲಿ, ನಿರ್ದಿಷ್ಟ ಸ್ಥಳದ ಪ್ರಬಲ ವೈಶಿಷ್ಟ್ಯಕ್ಕೆ ಸಂಬಂಧಿಸಿದಂತೆ ಆ ವ್ಯತ್ಯಾಸದ ದುರ್ಬಲತೆಯನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ. ನಾವು ಸಾಮಾನ್ಯ ಉದಾಹರಣೆಯನ್ನು ತೆಗೆದುಕೊಂಡರೆ, ಉದಾಹರಣೆಗೆ ಎಡಗೈ (10% ಜನರು ಎಡಗೈ ಬಳಸಿ ಬರೆಯುವವರು) ಎಡಗೈ ವಿದ್ಯಾರ್ಥಿಯು ಪರಿಣಾಮಕಾರಿಯಾಗಿ ಬರೆಯಲು ಸಾಧ್ಯವಾಗುವಂತೆ ಬೇರೆ ರೀತಿಯಲ್ಲಿ ಕುಳಿತುಕೊಳ್ಳುವುದನ್ನು ನಾವು ಕಂಡುಕೊಳ್ಳಬಹುದು; ಸರಿಯಾದ ತರಬೇತಿಯ ಕೊರತೆಯಿಂದಾಗಿ ಕೈಬರಹದೊಂದಿಗೆ ಕಷ್ಟಪಡಬಹುದು (ಮತ್ತು ಭಾರತದಲ್ಲಿ ಕಲಿಸುವ ಹೆಚ್ಚಿನ ಬರವಣಿಗೆ ವ್ಯವಸ್ಥೆಗಳು ಎಡದಿಂದ ಬಲಕ್ಕೆ ಸ್ವರೂಪವನ್ನು ಅನುಸರಿಸುತ್ತವೆ); ಮತ್ತು ಬಲಗೈ ಜನರಿಗಾಗಿ ಸ್ಥಳಗಳು ಮತ್ತು ವಸ್ತುಗಳು (ಮೇಜುಗಳು, ಕತ್ತರಿಗಳು, ಅಳತೆ ಉಪಕರಣಗಳು, ಇತ್ಯಾದಿ) ಹೇಗೆ ವಿನ್ಯಾಸಗೊಳಿಸಲಾಗಿದೆ ಎಂಬ ಕಾರಣದಿಂದಾಗಿ ಬೃಹದಾಕಾರದಂತೆ ಗ್ರಹಿಸಬಹುದು. ಅಪರೂಪದ ಸಂದರ್ಭಗಳಲ್ಲಿ, ಮಗುವನ್ನು ಎಡಗೈ ಎಂದು ಋಣಾತ್ಮಕವಾಗಿ ಹಣೆಪಟ್ಟಿ ಹಚ್ಚಬಹುದು. ಒಬ್ಬ ಶಿಕ್ಷಣತಜ್ಞನಾಗಿ, ಎಡಗೈಲಿ ಬರೆಯುವವರಿಗೆ ಸಹಾಯವಾಗುವಂತೆ ಹೊಂದಿಕೊಳ್ಳುವ ಆಸನವನ್ನು ನೀಡುವುದು, ಕೈಬರಹಕ್ಕಾಗಿ ತರಬೇತಿ (ಮತ್ತು/ಅಥವಾ ಕೈಬರಹದ ಮಾನದಂಡಗಳಲ್ಲಿ ರಿಯಾಯಿತಿಗಳು) ಮತ್ತು ಎಡಗೈಯನ್ನು ಸಾಮಾನ್ಯಗೊಳಿಸುವತ್ತ ಜಾಗೃತಿ ಮೂಡಿಸುವಂತಹ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಇದಕ್ಕೆ ಪ್ರತಿಕ್ರಿಯಿಸಬಹುದು.

ಈ ವಿಧಾನಗಳಲ್ಲಿ ಹೆಚ್ಚಿನವು ಇಂದು ಎಡಗೈ ಬರವಣಿಗೆ ಸಾಮಾನ್ಯವಾಗಬಹುದು. ಆದರೆ ನಾವು ಇತರ ರೀತಿಯ ವ್ಯತ್ಯಾಸಗಳಿಗೆ ವಿಸ್ತರಿಸಿದಾಗ, ಉದಾಹರಣೆಗೆ ಅಸಾಮರ್ಥ್ಯಗಳು, ಕಲಿಕೆಯ ತೊಂದರೆಗಳು ಅಥವಾ ಲಿಂಗ ಗುರುತಿಸುವಿಕೆ, ನಾವು ಎಲ್ಲಿ ಇದ್ದೇವೆ? ಮೂಲಭೂತ ಮಟ್ಟದಲ್ಲಿ, ಅಂತಹ ವ್ಯತ್ಯಾಸಗಳೊಂದಿಗೆ ವ್ಯವಹರಿಸುವುದು ಎಡಗೈ ಬರವಣಿಗೆಯ ಸಂದರ್ಭದಲ್ಲಿ ನಾವು ತೆಗೆದುಕೊಳ್ಳುವ ವಿಧಾನಕ್ಕಿಂತ ಭಿನ್ನವಾಗಿರುವುದಿಲ್ಲ. ವಿಶೇಷಚೇತನ ಮತ್ತು ಇತರ ವಿಭಾಗಿಸುವ ಸಮಸ್ಯೆಗಳೊಂದಿಗೆ, ಪರಿಗಣಿಸಲು ಹೆಚ್ಚಿನ ಅಸ್ಥಿರಗಳಿವೆ ಆದರೆ ಪ್ರಾರಂಭದ ಹಂತವು ಒಂದೇ ಆಗಿರಬೇಕು. ಶಿಕ್ಷಕ–ಶಿಕ್ಷಣತಜ್ಞನಾಗಿ ನನ್ನ ಅನುಭವದಿಂದ, ಶಿಕ್ಷಕರು ಯಾವಾಗಲೂ ಇದನ್ನು ಆರಂಭಿಕ ಹಂತವಾಗಿ ನೋಡುವುದಿಲ್ಲ ಎಂದು ನಾನು ಕಂಡುಕೊಂಡಿದ್ದೇನೆ. ಏಕೆಂದರೆ ವಿಶೇಷಚೇತನ ಅಥವಾ ತೊಂದರೆ ಇರುವ ಮಕ್ಕಳಿಗೆ ಕಲಿಸುವ ಕೆಲಸವನ್ನು ಸಾಮಾನ್ಯ ಶಾಲಾ ಶಿಕ್ಷಕರ ಕೆಲಸವಾಗಿ ಸ್ವೀಕರಿಸಬೇಕಾಗಿದೆಯೇ ಹೊರತು ವಿಶೇಷ ಶಿಕ್ಷಕರದ್ದಲ್ಲ. ವಿಶೇಷಚೇತನ ಮಕ್ಕಳು ವಿಶೇಷವಾದ ಸೂಚನೆಗಳು ಅಥವಾ ತಂತ್ರಗಳಿಂದ ಮಾತ್ರ ಕಲಿಯಬಹುದು ಎಂಬ ಕಲ್ಪನೆಯು ಆಳವಾಗಿ ಬೇರೂರಿದೆ. ಪುನರುಚ್ಚರಿಸುವುದೇನೆಂದರೆ, ಸಮನ್ವಯ ಶಿಕ್ಷಣದ ಅಭ್ಯಾಸದ ಆರಂಭಿಕ ಹಂತವು ವಿಶೇಷ

ತಂತ್ರಗಳು ಅಥವಾ ಉತ್ತಮ ಅಭ್ಯಾಸಗಳೆಂದು ಕರೆಯಲ್ಪಡುವುದಿಲ್ಲ, ಇದು ನಿಮ್ಮ ಪ್ರಸ್ತುತ ಅಭ್ಯಾಸಗಳನ್ನು ನಿರ್ಮಿಸುವುದು ಮತ್ತು ಅವುಗಳನ್ನು ಹೆಚ್ಚು ಒಳಗೊಳ್ಳುವಂತೆ ಮಾಡುವುದು ಮತ್ತು ಹೊರಗಿಡುವ ಅಭ್ಯಾಸಗಳನ್ನು ತ್ಯಜಿಸುವುದು.

ನಾನು ಈ ಪ್ರಬಂಧವನ್ನು ಈ ಕೆಳಗಿನ (ಪರಸ್ಪರ ಸಂಬಂಧಿತ) ಅಂಶಗಳೊಂದಿಗೆ ಮುಕ್ತಾಯಗೊಳಿಸುತ್ತೇನೆ:

- ಸಮನ್ವಯ ಶಿಕ್ಷಣದ ಅನೇಕ ವಿದ್ವಾಂಸರು ಎತ್ತಿ ಹಿಡಿದಂತೆ, ಸಮನ್ವಯ ಶಿಕ್ಷಣತಜ್ಞರ ಮನಸ್ಥಿತಿಯು ವ್ಯಕ್ತಿಯ ಮೂಲಭೂತ ಭಾಗವಾಗಿ ವ್ಯತ್ಯಾಸ ಅಥವಾ ವಿಭಿನ್ನತೆಯನ್ನು ಪರಿಗಣಿಸುತ್ತದೆ. ನಾವು ಇದನ್ನು ಪರಿಗಣಿಸಿದಾಗ, ನಾವು ಮಕ್ಕಳನ್ನು ಇರಿಸಬಹುದಾದ ಸಾಮರ್ಥ್ಯ–ಆಧಾರಿತ ವರ್ಗವು ಉತ್ತಮ, ಸರಾಸರಿ ಅಥವಾ ಮಂದಬುದ್ಧಿಯಂತಹವುಗಳು ಮರೆಯಾಗುತ್ತವೆ ಎಂದು ನಾವು ಕಂಡುಕೊಳ್ಳುತ್ತೇವೆ. ಮತ್ತು ನಾವು ಅವರನ್ನು ಭಿನ್ನತೆಗಳಿರುವ ವ್ಯಕ್ತಿಗಳಾಗಿ ನೋಡಲು ಸಾಧ್ಯವಾಗುತ್ತದೆ.
- ಸಮನ್ವಯ ಅಭ್ಯಾಸದಲ್ಲಿ ನಮ್ಮ ಗಮನವು'ಅತ್ಯುತ್ತಮ ಅಭ್ಯಾಸಗಳ' ಮೇಲೆ ಕಡಿಮೆ ಇದ್ದು, ನಮಗೆ ತಿಳಿದಿರುವ ವಿಚಾರಗಳ ಅಡಿಪಾಯದ ಮೇಲೆ ಕಟ್ಟುವುದರ ಮೇಲೆ ಹೆಚ್ಚು ಇರಬೇಕು (ಕಾವ್ಯರವರಿಗೆ ಸಂಗೀತ ಮತ್ತು ಮುರಾರಿ ಅವರಿಗೆ ವಿದ್ಯಾರ್ಥಿಗಳ ಜೀವನಾನುಭವಗಳ ಮೇಲೆ ಇರುವ ಕುತೂಹಲ – ಒಟ್ಟಾರೆ ನಮ್ಮ ಶಕ್ತಿ ಮತ್ತು ಆಸಕ್ತಿಗಳು). ಸಮನ್ವಯ ಅಭ್ಯಾಸವು ಒಂದು ರೀತಿಯ ಶಿಕ್ಷಣಶಾಸ್ತ್ರದ ಬೆಳವಣಿಗೆಯಾಗಿದ್ದು ಅದು ಎಲ್ಲಾ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಶಕ್ತಗೊಳಿಸುತ್ತದೆ ಮತ್ತು 'ಬೆಳವಣಿಗೆಯ ಮನಸ್ಥಿತಿ'ಯಂತಹ ವಿಚಾರಗಳಿಂದ ಸಂಯೋಜಿಸಲ್ಪಟ್ಟಿದೆ (ಒಬ್ಬರು ಪ್ರಯತ್ನದ ಮೂಲಕ ಕಲಿಯಬಹುದು ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಸುಧಾರಿಸಬಹುದು ಮತ್ತು ಕಲಿಕೆಯು ಸಹಜ ಸಾಮರ್ಥ್ಯವಲ್ಲ ಎಂಬುದು ನಂಬಿಕೆಯಾಗಿದೆ).
- ಸಮನ್ವಯವನ್ನು ಆಚರಣೆಗೆ ತರಲು, ಎಲ್ಲಾ ಮಕ್ಕಳಿಗೆ ಕಲಿಯಲು, ಎಲ್ಲರೊಂದಿಗೆ ಬೆರೆಯಲು, ಬೆಳೆಯಲು ಮತ್ತು ಸ್ವಯಂ–ತೃಪ್ತಿಯ ಜೀವನಕ್ಕೆ ಹಕ್ಕುಗಳನ್ನು ಖಾತ್ರಿಪಡಿಸುವ ಸ್ವಾತಂತ್ರ್ಯ ಮತ್ತು ಬದ್ಧತೆಯಿರುವ ಜಾಗದಲ್ಲಿ ಶಿಕ್ಷಣವನ್ನು ರೂಪಿಸಲು ಮತ್ತು ಅಭ್ಯಾಸ ಮಾಡಲು ಶಿಕ್ಷಣತಜ್ಞರಿಗೆ ಸಂಸ್ಥೆಯ (ಮತ್ತು ಸ್ವಾಯತ್ತತೆ) ಅಗತ್ಯವಿದೆ.

**ಅಂತಿಮ ಟಿಪ್ಪಣಿಗಳು**

* ಸಮನ್ವಯ ತರಗತಿಗಳನ್ನು ಅಭಿವೃದ್ಧಿಪಡಿಸಲು ಶಿಕ್ಷಕರನ್ನು ಬೆಂಬಲಿಸುವುದು – ಈ ವೆಬ್‌ನಾರ್ ವೀಕ್ಷಿಸಲು, ಲಿಂಕ್ ಬಳಸಿ ಅಥವಾ QR ಕೋಡ್ ಅನ್ನು ಸ್ಕ್ಯಾನ್ ಮಾಡಿ. https://www.youtube.com/watch?v=hucxfxN_cA4&t=3063s

**ಪರಾಮರ್ಶನ**


Dweck, C., 2017. *Mindset- updated edition: Changing the way you think to fulfil your potential*. Hachette UK.

Florian, L., 2014. *What counts as evidence of inclusive education?* European Journal of Special Needs Education, 29(3), pp.286–294.

Florian, L., 2014. *The Sage Handbook of Special Education*: Two-volume set, second edition, SAGE Publications Inc.

Florian, L., 2015. *Conceptualising inclusive pedagogy: The inclusive pedagogical approach in action*. In Inclusive Pedagogy Across the Curriculum (Vol. 7, pp. 11-24). Emerald Group Publishing Limited.

Hart, S., Drummond, M.J. & McIntyre, D., 2004. *Learning Without Limits*, Maidenhead: Open University Press.

Kar, B. and Sinha, S., 2021. *Disadvantages and Segregation through School Choice*. Economic & Political Weekly, 56(12), p.33.


ಅನುವಾದ: **ಅನುರೂಪ** | ಪರಿಶೀಲನೆ: **ಲತಾ ಕೆ. ಸಿ.**




**ಮಧುಸೂದನ್ ರಮೇಶ್** ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಕೂಲ್ ಆಫ್ ಎಜುಕೇಶನ್ (ಶಿಕ್ಷಣ ಶಾಲೆ)ನಲ್ಲಿ ಬೋಧಕವರ್ಗದ ಸದಸ್ಯರಾಗಿದ್ದಾರೆ. ಅವರು ಶಿಕ್ಷಣ ಕಾರ್ಯಕ್ರಮಗಳಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಮತ್ತು ಸ್ನಾತಕೋತ್ತರದಲ್ಲಿ ಸಮನ್ವಯ ಶಿಕ್ಷಣವನ್ನು ಕಲಿಸುತ್ತಾರೆ. ಇದಕ್ಕೂ ಮೊದಲು, ಅವರು ಆರೋಗ್ಯ ಕ್ಷೇತ್ರದಲ್ಲಿ (ಹೆಲ್ತ್ ಕೇರ್) ವಿನ್ಯಾಸ ಸಂಶೋಧಕರಾಗಿದ್ದರು. ಡಿಸ್ಲೆಕ್ಸಿಕ್ ಎಂಬ ಅವರ ಅನುಭವದಿಂದ ಅವರು ಎನ್‌ಜಿಒಗಳೊಂದಿಗೆ ವಿಶೇಷಚೇತನ ಮತ್ತು ಸಮನ್ವಯ ಶಿಕ್ಷಣದ ಸಂಶೋಧನಾ ಯೋಜನೆಗಳಲ್ಲಿ ಕೆಲಸ ಮಾಡಿದ್ದಾರೆ. ಮತ್ತು 2019ರಲ್ಲಿ ಸ್ಕಾಟ್‌ಲ್ಯಾಂಡ್‌ನ ಎಡಿನ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಸಮನ್ವಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಚೆವೆನಿಂಗ್ ವಿದ್ಯಾರ್ಥಿವೇತನವನ್ನು ಪಡೆದುಕೊಂಡಿದ್ದರು ಮತ್ತು ಅಂದಿನಿಂದ ಸಮನ್ವಯ ಅಭ್ಯಾಸಗಳು ಮತ್ತು ಶಿಕ್ಷಕರ ವೃತ್ತಿಪರ ಬೆಳವಣಿಗೆಯನ್ನು ಅಭಿವೃದ್ಧಿಪಡಿಸಲು ಬದ್ಧರಾಗಿದ್ದಾರೆ ಮತ್ತು ವಿಶೇಷಚೇತನ ಮಕ್ಕಳ ಹಕ್ಕುಗಳಿಗಾಗಿ ಪ್ರತಿಪಾದಿಸುತ್ತಾರೆ. ಅವರನ್ನು **madhusudhan.ramesh@apu.edu.in** ಮೂಲಕ ಸಂಪರ್ಕಿಸಬಹುದು

# ಶಾಲೆಯಲ್ಲಿ ಲಿಂಗತ್ವದ ಎಲ್ಲೆಗಳನ್ನು ಪ್ರಶ್ನಿಸುವುದು

ನಿಧಿ ಗುಲಾಟಿ

ಶಾಲೆಯಲ್ಲಿ ಮಕ್ಕಳನ್ನು ಸಭೆ, ದೈಹಿಕ ಶಿಕ್ಷಣದ ತರಗತಿಗಳು ಮತ್ತು ಊಟೋಪಚಾರ ಸೇರಿದಂತೆ ವಿವಿಧ ಚಟುವಟಿಕೆಗಳಿಗೆ ನಾವು ಲಿಂಗದ ಆಧಾರದಲ್ಲಿ ಸಾಲಿನಲ್ಲಿ ನಿಲ್ಲಿಸುತ್ತೇವೆ. ಯಾವುದೇ ತರಗತಿಯತ್ತ ಒಮ್ಮೆ ಕಣ್ಣು ಹಾಯಿಸಿದರೆ, ಲಿಂಗ ಆಧಾರಿತ ಸ್ಪಷ್ಟ ಮತ್ತು ಸ್ಫುಟವಾದ ಎಲ್ಲೆಗಳನ್ನು ನೋಡಬಹುದು. ಹುಡುಗರು ತರಗತಿಯ ಬಾಗಿಲ ಬಳಿ ಇರುವ ಅಥವಾ ತರಗತಿಯ ಹಿಂದಿನ ಡೆಸ್ಕ್ ಗಳ ಸಾಲುಗಳಲ್ಲಿ ಕುಳಿತಿರುತ್ತಾರೆ ಮತ್ತು ಹುಡುಗಿಯರು ಬಾಗಿಲಿನಿಂದ ದೂರವಿರುವ, ಆದರೆ ಶಿಕ್ಷಕರಿಗೆ ಹತ್ತಿರದಲ್ಲಿರುವ ಒಳ ಸಾಲುಗಳನ್ನು ಆಕ್ರಮಿಸುತ್ತಾರೆ. ಈ 'ಲಿಂಗತ್ವದ ಎಲ್ಲೆ'ಗಳನ್ನು (ದೈಹಿಕ ಅಥವಾ ಸಾಮಾಜಿಕ ಅಂತರಗಳು) ಲಿಂಗದ ಆಧಾರದಲ್ಲಿ ನಿರ್ಬಂಧಿಸಲಾಗುತ್ತದೆ ಅಥವಾ ಹೆಸರಿಸಲಾಗುತ್ತದೆ. ಕೆಲವೊಂದು ಕ್ಷೇತ್ರಗಳಲ್ಲಿ ಅಥವಾ ಚಟುವಟಿಕೆಗಳಲ್ಲಿ ಒಂದೇ ಲಿಂಗವು ಪ್ರಾಬಲ್ಯವನ್ನು ಮೆರೆಯುತ್ತಿದ್ದು, ಸ್ಪಷ್ಟ ವಿಂಗಡಣೆಯ ಮೂಲಕ ಈ 'ಎಲ್ಲೆ'ಗಳ ಅಂತರವನ್ನು ಗುರುತಿಸುವಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳಲಾಗಿದೆ. ಈ ಎಲ್ಲೆ ಮೀರಿದ ಸಂವಹನವು ಸೀಮಿತ ಮಟ್ಟದಲ್ಲಿ ಮಾತ್ರವೇ ನಡೆಯುತ್ತದೆ. ಪ್ರಾಯೋಗಿಕವಾಗಿ ಅಗತ್ಯವೇ ಇರದ ಸಂದರ್ಭದಲ್ಲಿಯೂ ಈ ಅಂತರಗಳು ಅಸ್ತಿತ್ವದಲ್ಲಿರುತ್ತವೆ. ಉದಾಹರಣೆಗೆ, ವಾಚನಾಲಯಕ್ಕೆ ಪ್ರವೇಶಿಸುವಾಗ. ಎಲ್ಲಾ ಮಕ್ಕಳು ಒಂದಿಬ್ಬರ ಸಾಲಿನಲ್ಲಿ ಸೇರಿಕೊಳ್ಳಬಹುದು. ಈ ಲೇಖನವು ಅಂತಹ ಕೆಲವು ಪ್ರಶ್ನೆಗಳು ಮತ್ತು ಸಾಧ್ಯತೆಗಳ ಮೇಲೆ ಬೆಳಕು ಹರಿಸುತ್ತದೆ.

ಲಿಂಗ ಆಧಾರಿತ ವಿಂಗಡಣೆಗಳು, ಮಾನದಂಡಗಳು ಮತ್ತು ಅಭ್ಯಾಸಗಳನ್ನು ಹೇಗೆ ತೊಡೆದು ಹಾಕಬಹುದು? ಈ ಅಭ್ಯಾಸಗಳನ್ನು ನಾವು ಒಮ್ಮೆ ಗುರುತಿಸಿದ ನಂತರ ಅವುಗಳನ್ನು ಬದಲಾಯಿಸಲು ನಾವು ಯೋಜನೆಯನ್ನು ರೂಪಿಸಬಹುದು. ಲಿಂಗ ಸಮನ್ವಯದ ಅಂತರಗಳು ಮತ್ತು ಅಭ್ಯಾಸಗಳನ್ನು ಹೇಗೆ ಬೆಳೆಸಬಹುದು? ಶಾಲೆಗಳು ಏನು ಮಾಡಬೇಕು? ರೀತಿಯಲ್ಲಿ ಮಕ್ಕಳನ್ನು ಪ್ರತ್ಯೇಕಿಸುವ ಮತ್ತು ಲಿಂಗ ಆಧಾರಿತ ಸಾಂಪ್ರದಾಯಿಕ ಮಾನದಂಡಗಳನ್ನು ಪ್ರತಿಧ್ವನಿಸುವ ಪಾತ್ರಗಳನ್ನು ನಿಯೋಜಿಸಿದಾಗ ಸಾಮಾಜಿಕ ಪಕ್ಷಪಾತಗಳನ್ನು ಪ್ರತಿಬಿಂಬಿಸುವ ಶಾಲೆಗಳು ರೂಢಮಾದರಿ ಯಂತಹವುಗಳನ್ನು ಉತ್ತೇಜಿಸುವುದು, ಬೆಂಬಲಿಸುವುದು ಮತ್ತು ಪುನರುತ್ಪಾದನೆಯನ್ನು ಮಾಡುತ್ತವೆ. ಈ ಕಠಿಣವಾದ ವಿನ್ಯಾಸವು ಹುಡುಗಿಯರನ್ನು ನಾಯಕತ್ವದ ಪಾತ್ರದಿಂದ ದೂರವಿಟ್ಟು, ಅವರನ್ನು ಆರೈಕೆಯ ಕಾರ್ಯಗಳಿಗಷ್ಟೇ ಸೀಮಿತಗೊಳಿಸುತ್ತದೆ. ಇನ್ನೊಂದೆಡೆ ಹುಡುಗರನ್ನು ಆಕ್ರಮಣಕಾರಿ ಸ್ಪರ್ಧೆಗೆ ತಳ್ಳಲಾಗುತ್ತದೆ. ಇದು ಅವರ ಮಾನಸಿಕ ಬೆಳವಣಿಗೆ ಮತ್ತು ಅನುಭೂತಿಯ ಸಾಮರ್ಥ್ಯದ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ.

**ಲಿಂಗ ಭೇದದ ಪರಿಣಾಮವು ಗಹನವಾಗಿದೆ:**

ತಮ್ಮ ಅರ್ಹತೆಯು ವಿಧೇಯತೆ ಮತ್ತು ಶ್ರದ್ಧೆಯೊಂದಿಗೆ ಗುರುತಿಸಿಕೊಂಡಿದೆ ಎಂಬ ಸಂದೇಶವನ್ನು ಹುಡುಗಿಯರು ವೈಯಕ್ತಿಕವಾಗಿಸಿಕೊಳ್ಳುತ್ತಾರೆ. ಇದು ಅವರ ಸಾಮರ್ಥ್ಯವನ್ನು ನಿರಂತರವಾಗಿ ಕಡೆಗಣಿಸುವಂತೆ ಮಾಡುತ್ತದೆ. ಇದಕ್ಕೆ ವಿರುದ್ಧವಾಗಿ, ಹುಡುಗರು ಅಂತರ್ಗತ ಸಾಮರ್ಥ್ಯವನ್ನು ಹೊಂದಿದ್ದಾರೆ ಎಂದು ಹೇಳಿ ಹಕ್ಕು ಸ್ವಾಧೀನ ಮತ್ತು ಅಂಕೆಯಿಲ್ಲದ ಮಹತ್ವಾಕಾಂಕ್ಷೆಯ ಸಂಸ್ಕೃತಿಯನ್ನು ಅವರಲ್ಲಿ ಬೆಳೆಸಲಾಗುತ್ತದೆ. ಈ ಪ್ರಚೋದಕ ಶಕ್ತಿಯು ವ್ಯಕ್ತಿಯ ಆತ್ಮಾಭಿಮಾನಕ್ಕೆ ಧಕ್ಕೆಯನ್ನುಂಟು ಮಾಡುತ್ತದೆ ಮತ್ತು ಮುಂದಿನ ಜನಾಂಗವು ತಮ್ಮ ವೈಯಕ್ತಿಕ ಹಾಗೂ ಕೆಲಸದ ಬದುಕಿನಲ್ಲಿ ಈ ತಾರತಮ್ಯಗಳನ್ನು ಪುನರಾವರ್ತಿಸುವಂತೆ ಮಾಡುತ್ತದೆ. ಹುಡುಗರು ಮತ್ತು ಹುಡುಗಿಯರಿಬ್ಬರೂ ತಮ್ಮ ಸಾಮರ್ಥ್ಯವನ್ನು ತಲುಪದಂತೆ ಹಿಡಿದಿಡುವ ರಚನಾತ್ಮಕ ಅಸಮಾನತೆಯ ಈ ಚಕ್ರವು ತಪ್ಪಿಸಿಕೊಳ್ಳಲಾದ ದುಷ್ಪ ಪ್ರವೃತ್ತಿಯಾಗಿದೆ. ಕುಟುಂಬಗಳು ಮೆಲ್ಲನೆ ಬದಲಾದಂತೆ, ಶಾಲೆಗಳು ಸಹ ಈ ಚಕ್ರವನ್ನು ತೊಡೆದು ಹಾಕಬೇಕು. ಆಗ ಮಾತ್ರವೇ ಯಾವುದೇ ಭೀತಿ, ನಿರ್ಬಂಧ ಅಥವಾ ಅಪಹಾಸ್ಯಕ್ಕೆ ಒಳಗಾಗದೆ ವಿವಿಧ ಸಾಮರ್ಥ್ಯಗಳನ್ನು ಪರಿಶೋಧಿಸಲು ಪ್ರತಿ ಮಗುವನ್ನು ಸಿದ್ಧಗೊಳಿಸಬಹುದು. ಶಾಲೆಗಳು ಬದಲಾಗದೆ ಹೋದಲ್ಲಿ, ವಿಮರ್ಶಾತ್ಮಕವಾಗಿ ಮತ್ತು ಅನುಭೂತಿಯಿಂದ ಯೋಚಿಸುವ, ಯಾವುದೇ ಪೂರ್ವಾಗ್ರಹವಿಲ್ಲದೆ ನವೀನತೆಯನ್ನು ತರುವ ಹಾಗೂ ಪ್ರತಿ ಹಂತದಲ್ಲಿ ಸಮಾನತೆ ಮತ್ತು ವೈವಿಧ್ಯತೆಯನ್ನು ಗೌರವಿಸುವ ಸಮಾಜಕ್ಕೆ ಕೊಡುಗೆಯನ್ನು ನೀಡುವ ವಿವಿಧ ನಾಯಕರನ್ನು ಪಡೆಯುವುದಾದರೂ ಎಲ್ಲಿ?

ಲಿಂಗವನ್ನು ಅಭಿವಿನಿಯೋಜಿಸುವ ಪದ್ಧತಿ ಮತ್ತು ರೂಢಿಗಳಿಗೆ ಅಡ್ಡಿಯನ್ನುಂಟು ಮಾಡುವ ಯೋಜನೆಯನ್ನು ಶಾಲೆಗಳು ರೂಪಿಸ ಬಹುದು. ಕ್ರೀಡೆ ಮತ್ತು ಸಂಗೀತದ ಶಿಕ್ಷಕರು ಸೇರಿದಂತೆ ಶಾಲೆಯ ಪ್ರತಿ ಸಹಭಾಗಿಯೂ ಸಹ ತಮ್ಮದೇ ಆದ ಯೋಜನೆಗಳನ್ನು ಸಿದ್ಧಪಡಿಸಬಹುದು. ನನ್ನ ಲಿಂಗ ತರಗತಿಯಲ್ಲಿನ ಕೆಲವು ವಿದ್ಯಾರ್ಥಿಗಳು, (ಶಿಕ್ಷಕರಾಗುವುದಕ್ಕಾಗಿ ತರಬೇತಿಯನ್ನು ಪಡೆಯುತ್ತಿರುವವರು) ತರಗತಿಯ ದಿನಚರಿಗಳನ್ನು ಗಮನಿಸಿದ ನಂತರ ಬದಲಾವಣೆಗಳಿಗೆ ಯೋಜನೆಯನ್ನು ರೂಪಿಸುತ್ತಾರೆ.

ಕೆಲವೊಮ್ಮೆ ಅವರು ವಿಷಯವಸ್ತುಗಳೊಂದಿಗೆ ಘಟಕ ಯೋಜನೆಯನ್ನು ಸಿದ್ಧಪಡಿಸುತ್ತಾರೆ. ಅವುಗಳಲ್ಲಿ ಲಿಂಗ ಆಧಾರಿತ ಸಿದ್ಧಮಾದರಿಗೆ ಸವಾಲೊಡ್ಡುವುದು, ಸಮನ್ವಯವನ್ನು ಉತ್ತೇಜಿಸುವುದು, ಮತ್ತು ಲಿಂಗ ಸಮಾನತೆಯ ಶಾಲೆಯನ್ನು ಕಲ್ಪಿಸುವುದು ಇತ್ಯಾದಿಗಳು ಸೇರಿವೆ. ಸಮುದಾಯದ ಮಹಿಳೆಯರನ್ನು ಶಾಲೆಗೆ ಆಹ್ವಾನಿಸುವುದು; ಮಾಧ್ಯಮದ ವಿಶ್ಲೇಷಣೆಗೆ ಸಂಬಂಧಿಸಿದಂತೆ ಚರ್ಚೆಯನ್ನು ನಡೆಸುವುದು (ಒಂದು ಜಾಹೀರಾತು ಯಾವ ಸಂದೇಶವನ್ನು ಸಾರುತ್ತದೆ?); ಕವಯಿತ್ರಿಯರಿಗೆ ಒತ್ತು ನೀಡುವುದು; ಪಾತ್ರಾಭಿನಯ ಚಟುವಟಿಕೆಗಳು (ನಿಜವಾಗಿಯೂ ಮನೆಯ ಮುಖ್ಯಸ್ಥರು ಯಾರು?); ಮತ್ತು ಆತ್ಮಚರಿತ್ರೆಯ ಪ್ರಾಜೆಕ್ಟ್‌ಗಳು ಇತ್ಯಾದಿಗಳನ್ನು ಈ ಕಾರ್ಯತಂತ್ರಗಳು ಒಳಗೊಂಡಿವೆ.

### ಲಿಂಗತ್ವದ ಎಲ್ಲೆಗಳು

ಶಾಲೆಗಳಲ್ಲಿ, ಕಲಿಯುತ್ತಿರುವ ಮಕ್ಕಳ ಸಂಖ್ಯೆಯು ಹೆಚ್ಚಾಗಿರುವ ಕಾರಣಕ್ಕೆ ಲಿಂಗದ ವರ್ಗೀಕರಣವು ಎದ್ದು ಕಾಣುತ್ತದೆ. ಇದು ಸ್ತ್ರೀತ್ವ ಅಥವಾ ಪುರುಷತ್ವದ ಸಂಘಟಿತ ರೂಪವು ಎದ್ದು ಕಾಣುವಂತೆ ಮಾಡುತ್ತದೆ. ಶಾಲಾ ರಚನೆಗಳು, ತರಬೇತಿ ವ್ಯವಸ್ಥೆಗಳು ಮತ್ತು ಪುರಸ್ಕಾರದ ಶ್ರೇಣೀಕರಣಗಳು ಆಕ್ರಮಣಕಾರಿ ಪುರುಷತ್ವ ಮತ್ತು ವಿಧೇಯ ಸ್ತ್ರೀತ್ವವನ್ನು ವರ್ಧಿಸುತ್ತವೆ. ಹುಡುಗರು ಬಾಗಿಲ ಪಕ್ಕದಲ್ಲಿ ಕುಳಿತುಕೊಳ್ಳುವಂತೆ ಮಾಡಿ ಮತ್ತು ಸ್ಪರ್ಧಾತ್ಮಕ ಕ್ರೀಡೆಗಳಲ್ಲಿ ಅವರಿಗೆ ಉತ್ತೇಜನವನ್ನು ನೀಡಿ ಶಾಲೆಗಳು ಪುರುಷತ್ವದ ಬಲವನ್ನು ವರ್ಧಿಸುತ್ತವೆ. ಇದೇ ವೇಳೆ ಹುಡುಗಿಯರನ್ನು ಶಿಕ್ಷಕರ ಪಕ್ಕದಲ್ಲಿ ಕುಳಿತುಕೊಳ್ಳುವಂತೆ ಮಾಡಿ, ಅನುಸರಣೆ, ಸಹಕಾರಿ ಚಟುವಟಿಕೆಗಳು ಮತ್ತು ಪೂರಕ ಪಾತ್ರಗಳನ್ನು ಉತ್ತೇಜಿಸಿ ಸ್ತ್ರೀತ್ವವನ್ನು ಪೋಷಿಸಲಾಗುತ್ತದೆ.

ಶಾಲಾ ಭೇಟಿಗಳ ಸಂದರ್ಭದಲ್ಲಿ, ಲಿಂಗ ಆಧಾರಿತ ಎಲ್ಲೆಗಳ ಉದ್ದೇಶಪೂರ್ವಕ ಮರುಸಂಘಟನೆಗೆ ತಡೆಯೊಡ್ಡಲು ಶಿಕ್ಷಕರು ಯತ್ನಿಸಿದ ಸಂದರ್ಭದಲ್ಲಿಯೂ ಮಕ್ಕಳು ತಾವಾಗಿಯೇ ತಮ್ಮ ದೈನಂದಿನ ಲಿಂಗ ಆಧಾರಿತ ಅಭ್ಯಾಸಗಳಿಗೆ ಮಾರು ಹೋಗುತ್ತಾರೆ. ಮಕ್ಕಳು ಪ್ರಶ್ನಿಸುತ್ತಾರೆ, ಪ್ರತಿರೋಧವನ್ನೊಡ್ಡುತ್ತಾರೆ ಹಾಗೂ ಲಿಂಗವನ್ನು ರೂಪಿಸುತ್ತಾರೆ. ಉದಾಹರಣೆಗೆ, ಶಿಕ್ಷಕರ ಅನುಪಸ್ಥಿತಿಯಲ್ಲಿ ತರಗತಿಯಲ್ಲಿ ನಿಶ್ಶಬ್ದತೆ ಇರಬೇಕೆಂದು ಹುಡುಗಿಯರು ನೆನಪಿಸುತ್ತಾರೆ. 'ಮಾತನಾಡುವ' ವಿದ್ಯಾರ್ಥಿಗಳ ಪಟ್ಟಿಯನ್ನು ತಯಾರಿಸುವುದಕ್ಕಾಗಿ ಕೆಲವು ಹುಡುಗಿಯರು ತಾವಾಗಿಯೇ ಆಸಕ್ತಿ ತೋರುತ್ತಾರೆ. ಅವರು ತರಗತಿಯ ಮೇಲೆ ನಿಗಾ ಇಡುವುದು ಮಾತ್ರವಲ್ಲದೆ, 'ಒಳ್ಳೆಯ, ಶಿಸ್ತಿನ ಹುಡುಗಿಯರಾಗಿಯೂ' ತೋರ್ಪಡಿಸಿಕೊಳ್ಳುತ್ತಾರೆ.

ನಿರಂತರವಾಗಿ ಪುನರಾವರ್ತಿಸುವ ಮೂಲಕ (ಉದಾಹರಣೆಗೆ: 'ಎಲ್ಲಾ ಮಕ್ಕಳು ಫುಟ್ಬಾಲ್ ಆಡಬಹುದು' ಎಂದು ಹೇಳಿ) ಶಾಲೆಗಳು ಲಿಂಗ ಆಧಾರಿತ ವರ್ಗಗಳನ್ನು ಒಡೆಯಬಹುದು. ಅದೇ ವೇಳೆ ಶಾಲೆಗಳು ಹುಡುಗಿಯರ ಸಬಲೀಕರಣಕ್ಕೆ ಕೈ ಹಾಕಬೇಕು: 'ನಮ್ಮಲ್ಲಿ ಹುಡುಗಿಯರ ಕ್ರಿಕೆಟ್ ತಂಡವಿದ್ದು, ಅವರ ಕೌಶಲಗಳನ್ನು ಮೊನಚುಗೊಳಿಸುವುದಕ್ಕಾಗಿ ಅವರಿಗೆ ನಾವು ಸಮಯವನ್ನು ನೀಡಬೇಕು'. ಐತಿಹಾಸಿಕವಾಗಿ, ತರಗತಿಯೊಳಗೆ ಅಥವಾ ಕ್ರೀಡಾಂಗಣದಲ್ಲಿ ನಾಯಕತ್ವದ ಪಾತ್ರವನ್ನು ವಹಿಸಲು ನಾವು ಮಹಿಳೆಯರಿಗೆ ಅವಕಾಶವನ್ನೇ ನೀಡಿಲ್ಲ. ಹುಡುಗಿಯೊಬ್ಬಳು ಕ್ರೀಡಾ ತಂಡದ ನಾಯಕತ್ವವನ್ನು ವಹಿಸಬಹುದೇ? 'ಅಭ್ಯಸಿಸಿದರೆ ಮತ್ತು ಮನಸ್ಸು ಮಾಡಿದರೆ ಯಾರಾದರೂ ಸಹ ವೇಗವಾಗಿ ಓಡಬಹುದು.' ಹುಡುಗಿಯರು ಹಾಗೂ ಹುಡುಗರಿಬ್ಬರಿಗೂ ಪೀಠೋಪಕರಣಗಳನ್ನು ಸಾಗಿಸಲು, ಹಾಜರಾತಿಯ ರಿಜಿಸ್ಟರ್ ಅನ್ನು ನಿರ್ವಹಿಸಲು ಹೇಳುವ ಮೂಲಕ ಈ ನಿಟ್ಟಿನಲ್ಲಿ ಹೆಜ್ಜೆಯನ್ನಿಡಬಹುದು.

### ಆಟದ ಮೈದಾನದಲ್ಲಿ ಹುಡುಗಿಯರು ಮತ್ತು ಹುಡುಗರು

ಶಾಲೆಯ ಆಟದ ಮೈದಾನದಲ್ಲಿ ಹುಡುಗರು ದೊಡ್ಡ ಗುಂಪಿನಲ್ಲಿ ಹೆಚ್ಚಿನ ಸಂದರ್ಭದಲ್ಲಿ ಕೇಂದ್ರ ಸ್ಥಾನವನ್ನು ಆಕ್ರಮಿಸಿಕೊಂಡರೆ, ಹುಡುಗಿಯರು ಒಂದಿಬ್ಬರು ಅಥವಾ ಮೂವರು ಸೇರಿಕೊಂಡು ಗುಂಪು ಕಟ್ಟಿಕೊಂಡು ಮೈದಾನದ ಅಂಚಿನಲ್ಲಿ ನಡೆಯುತ್ತಾ ಅಥವಾ ಮಾತನಾಡುತ್ತಾ ಕಾಲ ಕಳೆಯುತ್ತಾರೆ. 'ಓಹ್! ನೀವು ಹುಡುಗಿಯಾಗಿದ್ದರೂ ತುಂಬಾ ವೇಗವಾಗಿ ಓಡುತ್ತೀರಿ!' ಅಂತ ಹೊಗಳಿದರೂ ಕೂಡಾ ಅದು ಇಡೀ ತರಗತಿಯ ಹುಡುಗಿಯರ ಅಪಮೌಲ್ಯಕ್ಕೆ ಕಾರಣವೆನಿಸುತ್ತದೆ.

ಬೇರೆ ಬೇರೆ ಶಾಲೆಗಳ ಆಟದ ಮೈದಾನಗಳಲ್ಲಿ ಮಾಡಿದ ಕೆಲವೊಂದು ಅವಲೋಕನಗಳನ್ನು ಗಮನಿಸೋಣ ಹಾಗೂ ರೂಢಮಾದರಿಗಳಿಗೆ ಹೇಗೆ ಸವಾಲೊಡ್ಡಬಹುದು ಎಂಬುದನ್ನು ನೋಡೋಣ.

ದೆಹಲಿಯ ಖಾಸಗಿ ಪ್ರಾಥಮಿಕ ಶಾಲೆಯೊಂದರಲ್ಲಿ ನಾನು ಪರಿವೀಕ್ಷಕಿಯಾಗಿ ನನ್ನ ಸಂಶೋಧನೆಗಾಗಿ ನೋಟ್ಸ್ ಗಳನ್ನು ಸಂಗ್ರಹಿಸುತ್ತಿದ್ದ ವೇಳೆ ನಡೆದ ಘಟನೆ ಇದು. ದೈಹಿಕ ಶಿಕ್ಷಣದ ನಂತರ ಮಕ್ಕಳೆಲ್ಲರೂ ತರಗತಿಗೆ ಮರಳಿದ್ದರು. ಶಿಕ್ಷಕರು ಅವರಿಗೆ ಈ ರೀತಿ ಕೇಳಿದರು: 'ಇಂದು ನೀವು ಏನು ಆಟ ಆಡಿದಿರಿ?' ತಕ್ಷಣವೇ ಉತ್ತರ ಬಂತು: 'ಫುಟ್ಬಾಲ್ ಸರ್!'. ಶಿಕ್ಷಕರ ಸ್ವಯಂಚಾಲಿತ ಪ್ರತಿಕ್ರಿಯೆಯು ಹೀಗಿತ್ತು: 'ಒಳ್ಳೆಯದು! ಹುಡುಗಿಯರು ಏನು ಮಾಡುತ್ತಿದ್ದರು?' ಒಬ್ಬ ಹುಡುಗಿ ಹೀಗೆ ಹೇಳಿದಳು, 'ಸರ್, ನಾನೇ ಕ್ಯಾಪ್ಟನ್ ಆಗಿದ್ದೆ!'

ಹತ್ತು ವರ್ಷ ವಯಸ್ಸಿನ ಹುಡುಗಿಯೊಬ್ಬಳು ಹೀಗೆ ಹೇಳಿದಳು: 'ನನ್ನ ತರಗತಿಯವರು ಖೋಖೋ ಆಡುತ್ತಾರೆ. ನಾನು ಸಹ ಆಡುತ್ತೇನೆ. ಆದರೆ ನನಗೆ ಗಾಯ ಆಗಬಹುದೆಂದು ಹೆದರಿಕೆಯಾಗುತ್ತದೆ.'

ಶಿಕ್ಷಕರು ಹೀಗೆ ಉತ್ತರಿಸಿದರು: 'ಗಾಯ ಉಂಟಾಗುವ ಕುರಿತು ನಿನಗಿರುವ ಭೀತಿಯು ನನಗೆ ಅರ್ಥವಾಗುತ್ತದೆ. ಈ ರೀತಿ ಭಾವಿಸುವುದರಲ್ಲಿ ತಪ್ಪೇನಿನಲ್ಲ. ಸದ್ಯಕ್ಕೆ ಸ್ವಲ್ಪ ಆಟವಾಡಿ ಬಾ.'

ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಯೊಬ್ಬ, ತಮ್ಮ ಬಳಿಗೆ ಬಂದು ಹೇಳಿದ ಮಾತನ್ನು ಹಂಚಿಕೊಂಡರು: 'ಟೀಚರ್, ನಾನು ಸಹ ಓಡುತ್ತೇನೆ! ನನಗೂ ಒಂದು ಅವಕಾಶವನ್ನು ಕೊಡಿ. ನನ್ನನ್ನು ಹುಡುಗಿಯರ ಹಿಂದೆ, ಅವರಿಂದ ತುಂಬಾ ದೂರದಲ್ಲಿ ನಿಲ್ಲಿಸಿ ಬಿಡಿ (ಆರಂಭಿಕ ಬಿಂದುವಿನಲ್ಲಿ ). ಆದರೂ ನಾನು ಅವರನ್ನು ಹಿಂದಿಕ್ಕುತ್ತೇನೆ ನೋಡಿ.' ಇದಕ್ಕೆ ಶಿಕ್ಷಕರು ಈ ರೀತಿ ಉತ್ತರಿಸಿದರು: 'ನೀನು ತೋರಿದ ಉತ್ಸಾಹಕ್ಕೆ ಧನ್ಯವಾದಗಳು. ಆದರೆ ಸದ್ಯಕ್ಕೆ ಇತರರನ್ನು ಹುರಿದುಂಬಿಸೋಣ ಹಾಗೂ ಅವರು ಎಷ್ಟು ವೇಗವಾಗಿ ಓಡುತ್ತಾರೆ ಎಂದು ಕುತೂಹಲದಿಂದ ನೋಡೋಣ.'

ನಗರವೊಂದರಲ್ಲಿರುವ ಪ್ರಾಥಮಿಕ ಶಾಲೆಯಲ್ಲಿ, 8-10 ವರ್ಷಗಳ ವಯಸ್ಸಿನ ಹುಡುಗರು ಮತ್ತು ಹುಡುಗಿಯರನ್ನು ಸಹ ಓಟದಲ್ಲಿ ಪ್ರತ್ಯೇಕವಾಗಿ ಗುಂಪುಗೂಡಿಸಿದ್ದನ್ನು ನಾವು ಕಂಡೆವು. ಹುಡುಗಿಯರು ಇತರ ಹುಡುಗಿಯರೊಂದಿಗೆ ಸ್ಪರ್ಧಿಸಿದರೆ ಹುಡುಗರು ಇತರ ಹುಡುಗರ ಜೊತೆಗೆ ಸ್ಪರ್ಧಿಸಿದರು. ಹುಡುಗರು ಓಡಿದಾಗ ಎಲ್ಲರೂ

ಹುರಿದುಂಬಿಸಿದರು. ಆದರೆ ಹುಡುಗಿಯರು ಓಡಿದಾಗ ಕೆಲವೇ ಹುಡುಗಿಯರು, 'ಜಾಗ್ರತೆ!', 'ನೋಡಿ ಮುಂದೆ ಸಾಗು' ಎಂದು ಹೇಳಿ ಅವರನ್ನು ಹುರಿದುಂಬಿಸಿದರು. ಆದರೆ ಇದಕ್ಕೆ ಪ್ರತಿಕ್ರಿಯಿಸಿದ ಹುಡುಗಿಯು, 'ಏನೂ ಆಗುವುದಿಲ್ಲ ಬಿಡು, ನಾನು ನಿಜಕ್ಕೂ ಆನಂದಿಸುತ್ತಿದ್ದೇನೆ' ಎಂದು ಹೇಳಿದಳು.

ಪ್ರೌಢಶಾಲೆಯೊಂದರ ಕ್ರೀಡಾಂಗಣದಲ್ಲಿ ಹುಡುಗಿಯರು ಖೋಖೋ ಆಟವನ್ನಾಡುತ್ತಿದ್ದರು. ಹುಡುಗಿಯೊಬ್ಬಳು ಗೆಲ್ಲುವ ಹಂತದಲ್ಲಿದ್ದಳು. ತಕ್ಷಣವೇ ಹುಡುಗನೊಬ್ಬ ಬೊಬ್ಬಿಟ್ಟ: 'ಓ ಮೇಡಮ್, ಮೊದಲಿಗೆ ನಿಮ್ಮ ದುಪ್ಪಟ್ಟಾವನ್ನು ನೋಡಿಕೊಳ್ಳಿ.' ಇತರ ಮಕ್ಕಳು ನಗಲು ಪ್ರಾರಂಭಿಸಿದರು. ಆ ಹುಡುಗಿಯು ಜಾಗೃತಗೊಂಡಳು ಹಾಗೂ ತಕ್ಷಣವೇ ಆಕೆಯ ಪ್ರದರ್ಶನದಲ್ಲಿ ಕುಸಿತ ಉಂಟಾಯಿತು. ಮುಂದಿನ ತರಗತಿಯಲ್ಲಿ, ಯಾವುದೇ ನಿರ್ಬಂಧವನ್ನುಂಟು ಮಾಡದ ಬಟ್ಟೆಯೊಂದಿಗೆ ಆಟವಾಡುವುದನ್ನು ಶಿಕ್ಷಕರು ಖಚಿತಪಡಿಸಿದರು.

ಹೀಯಾಳಿಕೆಯು ಘಾತಕತನದ ಒತ್ತಡವನ್ನು ಉಂಟುಮಾಡುತ್ತದೆ. ಅಲ್ಲದೆ ರೂಪಕಗಳು, ಅಪಹಾಸ್ಯ ಮತ್ತು ಟೀಕೆಗಳು ಸ್ವಾಭಿಮಾನದ ಮೇಲೆ ಪ್ರಭಾವವನ್ನುಂಟು ಮಾಡುತ್ತವೆ. ನಾವು ಹೀಯಾಳಿಕೆಯನ್ನು ಹೇಗೆ ನಿಲ್ಲಿಸಬಹುದು? ದಬಾವಣೆಯ ವಿರುದ್ಧ ಕಠಿಣ ಕಾನೂನುಗಳನ್ನು ರೂಪಿಸುವುದು, ಪ್ರಜ್ಞಾಪೂರ್ವಕ ಆಲಿಸುವಿಕೆಗಾಗಿ ತರಬೇತಿ ನೀಡುವುದು, ತಾವೇನು ಧರಿಸುತ್ತೇವೆ ಎಂಬುದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದಂತೆ ಮಾಡುವುದು, ಆದರೆ ಅವರೇನು ಹೇಳುತ್ತಿದ್ದಾರೆ ಎಂಬ ಕುರಿತು ಅವರು ಸಾಕಷ್ಟು ತಿಳಿದಿರುವಂತೆ ಮಾಡುವುದು, ಹಾಗೂ ಯಾರಾದರೂ ಉಚ್ಚರಿಸುವ ಪದಗಳ ಪ್ರಾಮುಖ್ಯತೆ ಮತ್ತು ಪ್ರಭಾವದ ಕುರಿತು ಮುಕ್ತವಾಗಿ ಮಾತನಾಡುವುದು ಇತ್ಯಾದಿಗಳು ಸಂವಾದದಲ್ಲಿ ಸಂವೇದನೆಯನ್ನು ತರಲು ಸಹಾಯ ಮಾಡುತ್ತವೆ.

### ಕೆಲಸದಲ್ಲಿ ಲಿಂಗ ಆಧಾರಿತ ವಿಂಗಡಣೆ

ತರಗತಿಯಲ್ಲಿ ಹುಡುಗರು ಪೀಠೋಪಕರಣಗಳನ್ನು ಸರಿಸುವ ಮತ್ತು ಗೇಟುಗಳನ್ನು ತೆರೆಯುವ ಕೆಲಸವನ್ನು ಮಾಡಿದರೆ, ಹುಡುಗಿಯರು ಹಂಚಿಕೆಯ ನಿರ್ವಹಣೆ, ಶಿಕ್ಷಕರಿಗೆ ನೆರವಾಗುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು ಇತ್ಯಾದಿಗಳನ್ನು ಮಾಡುತ್ತಾರೆ. ಇವು ಸಾಮಾಜಿಕ ಪಾತ್ರಗಳನ್ನು ಧ್ವನಿಸುತ್ತವೆ. ಹುಡುಗಿಯರು ದಕ್ಷತೆ ಮತ್ತು ಆರೈಕೆಗೆ ಒತ್ತು ನೀಡುತ್ತಾ, ನೋಟ್ಸ್ ತೆಗೆದುಕೊಳ್ಳುವುದು ಮತ್ತು ಕಾರ್ಯಕ್ರಮಗಳನ್ನು ಯೋಜಿಸುವುದು ಇತ್ಯಾದಿಗಳನ್ನು ನೋಡಿಕೊಂಡರೆ, ಹುಡುಗರನ್ನು ನಾಯಕರಾಗಿ ಆರಿಸಲಾಗುತ್ತದೆ ಹಾಗೂ ತರಗತಿಯನ್ನು ನೋಡಿಕೊಳ್ಳುವುದು ಅಥವಾ ತಂಡದ ನಾಯಕರಾಗುವುದು ಇತ್ಯಾದಿ ನಾಯಕತ್ವದ ಪಾತ್ರವನ್ನು ವಹಿಸಲು ಉತ್ತೇಜಿಸಲಾಗುತ್ತದೆ. ಹುಡುಗರನ್ನು ಸಾರ್ವಜನಿಕ ಪಾತ್ರಗಳು, ನಾಯಕತ್ವ ಮತ್ತು ಔಪಚಾರಿಕ ಕೆಲಸಗಳಿಗಾಗಿ ತರಬೇತುಗೊಳಿಸಿದರೆ, ಹುಡುಗಿಯರನ್ನು ಕಡಿಮೆ ಮೌಲ್ಯದ ಮತ್ತು ಕಡಿಮೆ ವೇತನದ ಕೌಟುಂಬಿಕ ಮತ್ತು ಆರೈಕೆಯ ಕೆಲಸಗಳನ್ನು ನಿಯೋಜಿಸಲಾಗುತ್ತದೆ. ಲಿಂಗ ಆಧಾರಿತ ಪಾತ್ರಗಳು ಸಾಮಾಜಿಕ ವರ್ಗಗಳಿಗೆ ಅನುಗುಣವಾಗಿಯೂ ಸ್ಪಷ್ಟವಾಗಿ ಬದಲಾಗುತ್ತವೆ. ಕೆಳವರ್ಗದ ಹುಡುಗಿಯರು ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸಬೇಕು ಮತ್ತು ವಯಸ್ಕರಾಗಿ ಕೆಲಸದ ಪ್ರಾಥಮಿಕ ಕೌಶಲಗಳನ್ನು ಗಳಿಸಬೇಕು ಎಂದು ನಿರೀಕ್ಷಿಸಿದರೆ, ಉನ್ನತ ವರ್ಗದ ಹುಡುಗಿಯರನ್ನು ಯಶಸ್ವಿ ಪುರುಷನ ಸಂಗಾತಿಯಾಗುವುದಕ್ಕಾಗಿ ಬೆಳೆಸುವ ಸಲುವಾಗಿ ಕೌಟುಂಬಿಕ ಮತ್ತು ನಾಯಕತ್ವದ ಪಾತ್ರಗಳೆರಡರಲ್ಲೂ ತರಬೇತಿ ನೀಡಲಾಗುತ್ತದೆ.

ಶಾಲೆಯೊಂದರಲ್ಲಿ ನಾನೊಂದು ಚರ್ಚೆಯಲ್ಲಿ ಪಾಲ್ಗೊಂಡಿದ್ದೆ. ಹುಡುಗಿಯೊಬ್ಬಳು ತನ್ನ ವಾದವನ್ನು ಮಂಡಿಸಿದ ನಂತರ, ಕಾರ್ಯಕ್ರಮದ ನಿರೂಪಕರು, 'ಎಷ್ಟು ನಿಧಾನವಾಗಿ ಮತ್ತು ಮೆಲು ದನಿಯಿಂದ ಆಕೆ ಮಾತನಾಡಿದಳು ನೋಡಿದಿರಾ? ಹುಡುಗಿಯರು ಈ ರೀತಿ ಚರ್ಚೆಯಲ್ಲಿ ಪಾಲ್ಗೊಳ್ಳುವುದು ಎಷ್ಟು ಸುಂದರವಾಗಿ ಕಾಣುತ್ತದೆ ಅಲ್ಲವೇ!' ಎಂದು ಹೇಳಿದರು. ಹೀಗೆ, ನಾಯಕರಾಗಲು ತರಬೇತಿಯನ್ನು ಪಡೆದರೂ ಸಹ, ಈ ಹುಡುಗಿ ಮತ್ತು ಇತರ ಎಲ್ಲಾ ಹುಡುಗಿಯರಿಗೆ, ಅವರು 'ಮಹಿಳೆ'ಯಂತೆಯೇ ಇರಬೇಕು ಎಂಬುದನ್ನು ನೆನಪಿಸಲಾಗುತ್ತದೆ. ವಿಚಿತ್ರವೆಂದರೆ, ತೀರ್ಪುದಾರರ ಇಡೀ ತಂಡದಲ್ಲಿ ಸಾಧಕ ಮಹಿಳೆಯರೇ ಇದ್ದರು ಹಾಗೂ ಮೆಲುದನಿಯಿಂದ ಮಾತನಾಡಿದ ಹುಡುಗರನ್ನು ಹಾಗೂ ತಮ್ಮ ಅಭಿಪ್ರಾಯದಿಂದ ಹಿಂದಕ್ಕೆ ಸರಿಯದ ಹುಡುಗಿಯರನ್ನು ಅವರು ಶ್ಲಾಘಿಸಿದರು.

ಕಾರ್ಮಿಕ ವಿಂಗಡಣೆಯ ಇನ್ನೊಂದು ಆಯಾಮವೆಂದರೆ ಅದು ಸೇವೆಯಾಗಿದೆ. ಅಂದರೆ ಸಮಾಜದಲ್ಲಿ ಹುಡುಗಿಯರ ಪಾತ್ರವು ಆರೈಕೆ ಮತ್ತು ಪೋಷಣೆಯನ್ನು ಒದಗಿಸುವುದಕ್ಕೆ ಸೀಮಿತವಾಗಿದೆ. ಎಲ್ಲಾ ಮಹಿಳೆಯರು/ಹುಡುಗಿಯರು ಸಹಜವಾಗಿಯೇ ಆದರತೆ ಮತ್ತು ಆರೈಕೆಯ ಸ್ವಭಾವದವರಾಗಿದ್ದು, ತಮ್ಮ ಅಗತ್ಯಕ್ಕಿಂತಲೂ ಇತರರ ಅಗತ್ಯಗಳಿಗೆ ಒತ್ತು ನೀಡುತ್ತಾರೆ ಎಂಬುದಾಗಿ ಯಾವಾಗಲೂ ವಾದಿಸಲಾಗುತ್ತದೆ. ಈ ವಾದದಲ್ಲಿ ಅಂತರ್ಗತವಾದ ಒಂದು ದೋಷವಿದೆ. ಇವು ಸಾಮಾಜಿಕ ಪಾತ್ರಗಳಾಗಿದ್ದು, ನಿರ್ದಿಷ್ಟ ಜೈವಿಕ ವರ್ಗಕ್ಕೆ ಸೀಮಿತವಾಗಿಲ್ಲ. ಉದ್ದನೆಯ ಜನರು ಒಳ್ಳೆಯ ನಿರ್ಧಾರವನ್ನು ಮಾಡುತ್ತಾರೆ ಎಂದು ಹೇಳುವುದು ಎಷ್ಟು ಅಸಂಬದ್ಧವೋ, ಎಲ್ಲಾ ಹುಡುಗಿಯರು ಸಹಜವಾಗಿಯೇ ಹೆಚ್ಚು ಕಾಳಜಿಯ ಮತ್ತು ಭಾವನಾತ್ಮಕ ಸ್ವಭಾವವನ್ನು ಹೊಂದಿರುತ್ತಾರೆ ಮತ್ತು ಎಲ್ಲಾ ಹುಡುಗರು ಹೆಚ್ಚು ತಾರ್ಕಿಕ ಮತ್ತು ಪ್ರಾಯೋಗಿಕ ಸ್ವಭಾವವನ್ನು ಹೊಂದಿರುತ್ತಾರೆ ಎಂದು ಹೇಳುವುದು ಸಹ ತರ್ಕಬದ್ಧವಲ್ಲದ ಮಾತಾಗಿದೆ.

ತಮ್ಮ ಶಾಲೆ ಮತ್ತು ಸಮಾಜದಲ್ಲಿ ಯಾವ ಪಾತ್ರಕ್ಕೆ ಬೆಲೆ ನೀಡಲಾಗುತ್ತದೆಯೋ, ಅದನ್ನೇ ಹುಡುಗಿಯರು ಮತ್ತು ಹುಡುಗರಿಬ್ಬರೂ ಪ್ರಕ್ರಿಯೆಗೊಳಿಸುತ್ತಾರೆ. ಕೆಲಸದ ಪ್ರಜ್ಞೆಯ ಕುರಿತು ಕಾಲಕ್ರಮೇಣ ಉಂಟಾಗುವ ಆಂತರಿಕೀಕರಣವು ಹುಡುಗಿಯರಲ್ಲಿ ಈ ರೀತಿಯ ಸಂವಹನಗಳನ್ನು ಹುಟ್ಟು ಹಾಕಬಹುದು: 'ಪ್ರತಿರೋಧ ತೋರದೆ ಒಪ್ಪಿಕೊಂಡರೆ ಮತ್ತು ವಿಧೇಯತೆ ತೋರಿದರೆ ಶಿಕ್ಷಕರು ನನ್ನನ್ನು ಗೌರವಿಸುತ್ತಾರೆ; ಶಾಲೆಯು ಇನ್ನಷ್ಟು ದಕ್ಷತೆಯಿಂದ ನಡೆಯಲು ಸಹಾಯ ಮಾಡುವ ಕೆಲಸಗಳನ್ನು ಮಾಡಿದರೆ ನನ್ನನ್ನು ಗುರುತಿಸಲಾಗುತ್ತದೆ ಮತ್ತು ಗೌರವಿಸಲಾಗುತ್ತದೆ.' ಹುಡುಗಿಯರು ಶಿಸ್ತಿನಿಂದ, ವಿಧೇಯರಾಗಿ ಹಾಗೂ ಅನುಸರಣೆಯ ಸ್ವಭಾವ ತೋರುವಂತಹ ವಾತಾವರಣವನ್ನು ಶಾಲೆಗಳು ಸೃಷ್ಟಿಸುತ್ತವೆ. ಆದರೆ ಅನುಸರಿಸುವ ಮತ್ತು ಅನುಸರಿಸದಿರುವ, ವಿಧೇಯ ಮತ್ತು ಅವಿಧೇಯ, ಶಿಸ್ತಿನ ಮತ್ತು ವಾಚಾಳಿ ಗುಣಗಳೆರಡಕ್ಕೂ ಮಕ್ಕಳಿಗೆ ಅವಕಾಶ ನೀಡಿದಾಗ ಈ ಮಾದರಿಯನ್ನು ಮುರಿಯಬಹುದು. ಶಾಂತ ಸ್ವಭಾವದ ಹುಡುಗನನ್ನು ಅಥವಾ ಜಗ್ಗದ ಹುಡುಗಿಯನ್ನು ಶಿಕ್ಷಕರು ಪ್ರಶಂಸಿಸಬಹುದು. ಈ ಮೂಲಕ ಗೌರವ ಮತ್ತು ಕೇಳಿಸಿಕೊಳ್ಳುವ ಸಾಮರ್ಥ್ಯದೊಂದಿಗೆ, ಎಲ್ಲಾ ವರ್ತನೆಗಳಿಗೆ

ಅವಕಾಶವನ್ನು ಮಾಡಿಕೊಡಬಹುದು. ಶಿಕ್ಷಕರು ಮತ್ತು ಸಹಪಾಠಿಗಳಿಗೆ ಸಹಾಯ ಮಾಡುವುದಕ್ಕಾಗಿ ಹುಡುಗರು ಮತ್ತು ಹುಡುಗಿಯರಿಬ್ಬರನ್ನೂ ಸಮಾನವಾಗಿ ಕರೆಯಬಹುದು. ತರಗತಿಯ ಸ್ವಚ್ಛತೆ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಎರಡೂ ಲಿಂಗಗಳಿಗೆ ಕೆಲಸಗಳನ್ನು ನಿಯೋಜಿಸಬಹುದು. ಎಲ್ಲಾ ಸ್ಪರ್ಧಾತ್ಮಕ ಕ್ರೀಡೆಗಳು ಮಿಶ್ರ ಲಿಂಗಗಳ ತಂಡಗಳನ್ನು ಹೊಂದಿರಬೇಕು ಮತ್ತು ದೃಢತೆ ಹಾಗೂ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು ಎರಡೂ ಲಿಂಗಗಳಿಗೆ ಉತ್ತೇಜಿಸಬೇಕು.

**ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಒಡನಾಟ**

ಶಾಲೆಯ ಇನ್ನೊಂದು ಪ್ರಮುಖ ಅಂಶವೆಂದರೆ ಅದು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಒಡನಾಟವಾಗಿದೆ. ಈ ಕಲ್ಪನೆಗಳನ್ನು ಅರಿತುಕೊಳ್ಳಲು ಮತ್ತು ಪರಿಶೀಲಿಸಲು ತರಗತಿಯ ಕೆಲವೊಂದು ಉದಾಹರಣೆಗಳನ್ನು ನೋಡೋಣ. ವಿದ್ಯಾರ್ಥಿಗಳು ತರಗತಿಯಲ್ಲಿ ಗದ್ದಲವನ್ನುಂಟು ಮಾಡುತ್ತಿದ್ದಾರೆ. ಶಿಕ್ಷಕಿಯು ಹುಡುಗಿಯರನ್ನು ಈ ರೀತಿ ಕೇಳುತ್ತಾರೆ: 'ನೀವೇಕೆ ಕೇಳುತ್ತಿಲ್ಲ? ನೀವೇಕೆ ಸರಿಯಾಗಿ ವರ್ತಿಸುತ್ತಿಲ್ಲ? ಇದೇ ವೇಳೆ ಹುಡುಗರನ್ನು ಉದ್ದೇಶಿಸಿ ಅವರು ಈ ರೀತಿ ಹೇಳುತ್ತಾರೆ: 'ನೀವೇಕೆ ಗಂಭೀರತೆಯನ್ನು ಹೊಂದಿಲ್ಲ? ನೀವು ಗಂಭೀರತೆಯನ್ನು ಹೊಂದಿಲ್ಲದಿದ್ದರೆ ಹಣವನ್ನು ಹೇಗೆ ಗಳಿಸುತ್ತೀರಿ? ಮತ್ತು ನಿಮ್ಮ ಕುಟುಂಬವನ್ನು ಹೇಗೆ ಸಾಕುತ್ತೀರಿ?'

ಸಾಮಾನ್ಯವಾಗಿ ಮಾತನ್ನು ಪಾಲಿಸದ ಅಥವಾ ವಿಧೇಯತೆಯನ್ನು ತೋರದ ಹುಡುಗಿಯರಿಗೆ ಉಪದೇಶವನ್ನು ನೀಡಲಾಗುತ್ತದೆ. ಆದರೆ ಏರುದನಿಯ ಮತ್ತು ಉದ್ಧಟತನದ ಹುಡುಗರನ್ನು ಬಯ್ಯಲಾಗುತ್ತದೆ ಹಾಗೂ ಅವರು ಗಂಭೀರತೆಯನ್ನು ಮೈಗೂಡಿಸಿಕೊಳ್ಳಬೇಕು ಹಾಗೂ ಜವಾಬ್ದಾರಿಯಿಂದ ವರ್ತಿಸಬೇಕು ಎಂದು ಹೇಳಲಾಗುತ್ತದೆ.

ಒಬ್ಬ ಹುಡುಗಿ ಮತ್ತು ಹುಡುಗ ಒಂದು ಪರೀಕ್ಷೆಯಲ್ಲಿ ಒಂದೇ ಅಂಕಗಳನ್ನು ಗಳಿಸುತ್ತಾರೆ. ಆ ಶಿಕ್ಷಕಿಯು ಹುಡುಗಿಗೆ ಈ ರೀತಿ ಹೇಳುತ್ತಾರೆ: 'ನೀನು ಉತ್ತಮ ಸಾಧನೆ ಮಾಡಿದ್ದೀಯಾ! ನೀನು ನಿಜಕ್ಕೂ ಕಠಿಣ ಶ್ರಮ ಪಟ್ಟಿರುವೆ!' ಹುಡುಗನಿಗೆ ಹೀಗೆ ಹೇಳಲಾಗುತ್ತದೆ: 'ನೀನೂ ಉತ್ತಮ ಸಾಧನೆ ಮಾಡಿದ್ದಿ! ಆದರೆ ಎಲ್ಲಾ ಸೂತ್ರಗಳನ್ನು ತಪ್ಪಾಗಿ ಬರೆದಿದ್ದಿ. ಆದರೆ ನೀನು ಚುರುಕಿನವ. ಇನ್ನೂ ಉತ್ತಮ ಸಾಧನೆ ಮಾಡಬಹುದು.'

ಲಿಂಗ ಆಧಾರಿತ ಅಂತರ್ಗತ ಸಂದೇಶಗಳಲ್ಲಿ ಸೂಕ್ಷ್ಮ ವ್ಯತ್ಯಾಸಗಳಿವೆ. ತಮ್ಮ ಕೆಲಸ, ಪ್ರಯತ್ನ ಮತ್ತು ಈ ಪ್ರಯತ್ನದ ಹಿಂದೆ ಅವರು ಕಳೆಯುವ ಸಮಯಕ್ಕೆ ಗೌರವ ನೀಡಲಾಗುತ್ತದೆ ಎಂದು ಹುಡುಗಿಯರಿಗೆ ಹೇಳಲಾಗುತ್ತದೆ. ಹುಡುಗರಿಗೆ ಮಾತ್ರ, ಅವರು ಪ್ರತಿಭಾವಂತರಾಗಿದ್ದು, ಅವರು ಸಮರ್ಥರಾಗಿದ್ದು, 'ಸಾಮರ್ಥ್ಯ' ಹಾಗೂ 'ಸಾಧ್ಯತೆ'ಗಳನ್ನು ಹೊಂದಿದ್ದಾರೆ ಎಂದು ಹೇಳಲಾಗುತ್ತದೆ. ವೈಯಕ್ತಿಕ ಪ್ರಯತ್ನ ಮತ್ತು ಸಾಮರ್ಥ್ಯಕ್ಕೆ ಗಮನ ನೀಡುವ ಪ್ರತಿಕ್ರಿಯೆಯನ್ನು ನೀಡುವುದಕ್ಕಾಗಿ ಶಿಕ್ಷಕರಿಗೆ ತರಬೇತಿಯನ್ನು ನೀಡಬಹುದಾಗಿದೆ. ಹುಡುಗಿಯರು ಮತ್ತು ಹುಡುಗರನ್ನು, ಅವರ ಕಠಿಣ ಶ್ರಮ ಮತ್ತು ಶ್ರದ್ಧೆಗೆ ಸಮಾನವಾಗಿ ಅವರ ವಿಮರ್ಶಾತ್ಮಕ ಯೋಚನಾ ಶೈಲಿ ಮತ್ತು ಸಮಸ್ಯೆಯನ್ನು ಬಗೆಹರಿಸುವ ಕೌಶಲಗಳಿಗಾಗಿ ಪ್ರಶಂಸಿಸಬಹುದಾಗಿದೆ. ತಮ್ಮ ಸಾಮರ್ಥ್ಯಗಳ ಕುರಿತು ಹುಡುಗಿಯರು ಮತ್ತು ಹುಡುಗರಿಬ್ಬರೂ ಮೈಗೂಡಿಸಿಕೊಳ್ಳುವ ಒಳ ಸಂಭಾಷಣೆಗಳನ್ನು ನಾವು ಹೇಗೆ ಬದಲಾಯಿಸಬಹುದು? ಲಿಂಗ ಯಾವುದೇ ಇರಲಿ, ತರಗತಿಯಲ್ಲಿ ತಮ್ಮ ಭೀತಿಯನ್ನು ವ್ಯಕ್ತಪಡಿಸಲು ಸುರಕ್ಷಿತ ಅವಕಾಶವನ್ನು ಸೃಷ್ಟಿಸುವ ಮೂಲಕ, ಅವರ ಭವಿಷ್ಯಕ್ಕಾಗಿ ಯೋಜನೆಯನ್ನು ರೂಪಿಸುವ ಮೂಲಕ ಹಾಗೂ ಹುಡುಗರು ಮತ್ತು ಹುಡುಗಿಯರಿಬ್ಬರನ್ನೂ ಸಬಲೀಕರಣಗೊಳಿಸುವ ಮೂಲಕ ನಾವಿದನ್ನು ಸಾಧಿಸಬಹುದಾಗಿದೆ.

**ಉಪಸಂಹಾರ**

ಶಾಲಾ ಸಂಸ್ಕೃತಿಯಲ್ಲಿ ಲಿಂಗವೆನ್ನುವುದು ಸರ್ವತ್ರವಾಗಿದೆ. ಇದು ಪಠ್ಯಕ್ರಮದ ವಿಷಯ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಒಡನಾಟ, ಪಠ್ಯೇತರ ಚಟುವಟಿಕೆಗಳು, ಆಟ ಮತ್ತು ಸಾಮಾಜಿಕ ಪ್ರೇರಕ ಶಕ್ತಿಗಳು ಸೇರಿದಂತೆ ಶಾಲೆಯ ದೈನಂದಿನ ಬದುಕಿನ ಮೇಲೆ ಇದು ಪರಿಣಾಮ ಬೀರುತ್ತದೆ. ಶಾಲಾ ಪ್ರೇರಕ ಶಕ್ತಿಗಳು ಮತ್ತು ಗುಪ್ತ ಪಠ್ಯಕ್ರಮವು ಚಾಲ್ತಿಯಲ್ಲಿರುವ ಲಿಂಗತ್ವ ರೂಢಿಗಳನ್ನು ತೊಡೆದುಹಾಕುವ ಬದಲಿಗೆ ಇನ್ನಷ್ಟು ಸ್ಫುಟಗೊಳಿಸುತ್ತವೆ. ಶಾಲಾ ಸಂಸ್ಕೃತಿ ಮತ್ತು ಶಾಲಾ ಅನುಭವವು ವಿದ್ಯಾರ್ಥಿಗಳ ಪಾಲಿಗೆ ಅರ್ಥವನ್ನು ರೂಪಿಸುತ್ತದೆ ಎಂಬುದನ್ನು ಶಿಕ್ಷಕರು, ಶಾಲಾ ನಾಯಕರು ಮತ್ತು ಶಾಲೆಗೆ ಸಂಬಂಧಿಸಿದ ಎಲ್ಲರೂ ಅರಿತುಕೊಳ್ಳಬೇಕು. ಬದಲಾವಣೆಯನ್ನು ಪ್ರಾರಂಭಿಸಬೇಕಾದರೆ, ಶಾಲೆಯಲ್ಲಿ ನಮ್ಮ ದೈನಂದಿನ ಕಾರ್ಯಗಳು, ದಿನಚರಿಗಳು ಮತ್ತು ಅಭ್ಯಾಸಗಳಲ್ಲಿ ಚಿಂತನೆಯನ್ನು ಮೈಗೂಡಿಸಿಕೊಳ್ಳಬೇಕು. ಯಾರಿಗೆ ಏನನ್ನು ಹೇಳಬೇಕು, ಯಾರು ಏನನ್ನು ಮಾಡಬೇಕು ಎಂಬುದನ್ನು ಅತ್ಯಂತ ಪ್ರಜ್ಞಾಪೂರ್ವಕವಾಗಿ ಗುರುತಿಸುವುದು ಅತ್ಯಂತ ಅಗತ್ಯ. ಏಕೆಂದರೆ ಲಿಂಗಗಳ ನಡುವಿನ ಪಾತ್ರದ ಮರುಹಂಚಿಕೆಯಲ್ಲಿ ಶಾಲೆಗೆ ಸಂಬಂಧಿಸಿದ ಎಲ್ಲರೂ ಬದ್ಧತೆಯನ್ನು ತೋರಬೇಕು.

● ಅನುವಾದ: **ಮೆಲ್ವಿನ್ ಮೆಂಡೋನ್ಸ** | ಪರಿಶೀಲನೆ: **ಲತಾ ಕೆ. ಸಿ.**



**ನಿಧಿ ಗುಲಾಟಿ** ಅವರು ದೆಹಲಿ ವಿಶ್ವವಿದ್ಯಾಲಯದಲ್ಲಿ ಶಿಕ್ಷಕ ಶಿಕ್ಷಣದ ಪ್ರಾಧ್ಯಾಪಕರಾಗಿದ್ದಾರೆ. ಅವರು ಕ್ಷೇತ್ರ, ನೀತಿ ಮತ್ತು ಶಿಕ್ಷಣಶಾಸ್ತ್ರ ಸೇರಿದಂತೆ ಎಲ್ಲಾ ಹಂತಗಳಲ್ಲಿ ಶಿಕ್ಷಣದೊಂದಿಗೆ ತೊಡಗಿಸಿಕೊಂಡಿದ್ದಾರೆ. ಅವರ ಸಂಶೋಧನೆಯು ಮಕ್ಕಳ ಬದುಕು ಮತ್ತು ಕಲಿಕೆ, ಶಾಲಾ ಶಿಕ್ಷಣದ ದೃಷ್ಟಿಕೋನಗಳು, ಶಿಕ್ಷಕರ ಅಸ್ಮಿತೆ, ಜನಪ್ರಿಯ ಸಂಸ್ಕೃತಿ ಮತ್ತು ಬಾಲ್ಯದ ಸಹಜ ಗುಣಲಕ್ಷಣಗಳನ್ನು ಹೊಂದಿದೆ. ಅವರು ಅನೇಕ ಪಠ್ಯಕ್ರಮಗಳು, ನೀತಿ, ಮತ್ತು ಶಿಕ್ಷಕ ಶಿಕ್ಷಣ ಸುಧಾರಣಾ ಸಮಿತಿಗಳ ಸದಸ್ಯರಾಗಿದ್ದಾರೆ. ಮಕ್ಕಳ ಚಲನಚಿತ್ರ ಗ್ರಹಿಕೆಯ ಕುರಿತ ನಿರಂತರ ಅಂಕಣಗಳಿಗೆ ಅವರು ತನ್ನ ಕೊಡುಗೆಯನ್ನು ನೀಡುತ್ತಿದ್ದಾರೆ. ಅವರನ್ನು **nidhi.a.gulati@gmail.com** ಮೂಲಕ ಸಂಪರ್ಕಿಸಬಹುದು.

# ತರಗತಿಯಲ್ಲಿ ಮಕ್ಕಳ ಕುತೂಹಲವನ್ನು ಪೋಷಿಸುವುದು- ವೈಯಕ್ತಿಕ ಅನುಭವದ ಆಲೋಚನೆಗಳು

ಅನಘ್ ಪುರಂದರೆ

VOICES

ನಮ್ಮ ಸುತ್ತಲಿರುವ ಜಗತ್ತಿನ ಬಗ್ಗೆ ನಮಗಿರಬಹುದಾದ ಕುತೂಹಲವು ಜಗತ್ತನ್ನು ಅರಿಯಲು ಪ್ರೇರೇಪಿಸಬಲ್ಲದು. ಪ್ರಶ್ನೆಗಳನ್ನು ಕೇಳುವಂತೆ ಮಕ್ಕಳನ್ನು ಉತ್ತೇಜಿಸುವುದು ಹಾಗೂ ಅವರ ಪ್ರಶ್ನೆಗಳಿಗೆ ಅವರೇ ಉತ್ತರವನ್ನು ಹುಡುಕಿಕೊಳ್ಳುವಂತೆ ಬೆಂಬಲಿಸುವುದರ ಮೂಲಕ ಅವರಲ್ಲಿ ಅಂತರ್ಗತವಾಗಿರುವ ಕುತೂಹಲವನ್ನು ನಾವು ಜೀವಂತವಾಗಿಡಬಹುದು. ಇದು ಶಾಲಾ ಕಲಿಕೆಯನ್ನು ಸಹ ಪ್ರೇರೇಪಿಸಬಲ್ಲದು. ಶಿಕ್ಷಕನಾಗಿ ನಾನು ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುವಂತೆ ಉತ್ತೇಜಿಸಲು ಪ್ರಯತ್ನಿಸಿದಾಗ ನನಗೆ ಆದ ಕೆಲವು ಅನುಭವಗಳು ಹಾಗೂ ಆ ಮೂಲಕ ನನಗೆ ದಕ್ಕಿದ ಕೆಲವು ಕಲಿಕೆಗಳನ್ನು ಈ ಲೇಖನದಲ್ಲಿ ಹಂಚಿಕೊಳ್ಳುತ್ತಿದ್ದೇನೆ.

ನಾನು ಬೋಧನೆಯ ಮೊದಲ ಹಂತದಲ್ಲೇ ಇಂತಹದೊಂದು ಸವಾಲನ್ನು ಎದುರಿಸಬೇಕಾಯಿತು. ಕಣ್ತುಂಬ ಕನಸುಗಳನ್ನು ಹೊತ್ತು, ಉತ್ಸಾಹದಿಂದ ತುಂಬಿ ತುಳುಕುತ್ತಿದ್ದ, ಆದರೆ ಅನುಭವವಿರದ, ಇನ್ನೂ ಎಳಸಾಗಿದ್ದ ನಾನು ವಿಜ್ಞಾನ ವಿಷಯದ ಶಿಕ್ಷಕನಾಗಿ ನನ್ನ ವೃತ್ತಿಯನ್ನು ಚಿಕ್ಕದಾಗಿದ್ದ ಪರ್ಯಾಯ ಶಾಲೆಯೊಂದರಲ್ಲಿ ಪ್ರಾರಂಭಿಸಿದೆ. ಆಗ ನನ್ನಷ್ಟೇ ಉತ್ಸಾಹಿ ವಿದ್ಯಾರ್ಥಿಗಳ ಗುಂಪು ಪ್ರಶ್ನೆಗಳ ಮಳೆಯನ್ನೇ ನನ್ನ ಮೇಲೆ ಸುರಿಸಿದ್ದರು. ಹೊಸ ಶಿಕ್ಷಕನಾಗಿ, ವಿದ್ಯಾರ್ಥಿಗಳ ದಿನನಿತ್ಯ ಅನುಭವವು ಹೇಗೆ ಪ್ರಶ್ನೆಗಳನ್ನು ಹುಟ್ಟು ಹಾಕುತ್ತವೆ ಎಂಬುದನ್ನು ನೋಡುವುದೇ ಒಂದು ಅದ್ಭುತವಾದ ಅನುಭವವಾಗಿತ್ತು. ಒಮ್ಮೆ ಮಳೆ ಸುರಿಯುತ್ತಿದ್ದ ದಿನದೊಂದು, ಮೂರನೇ ತರಗತಿಯ ವಿದ್ಯಾರ್ಥಿಯೊಬ್ಬ, ಕೈಯಲ್ಲಿ ಜಾರಿ ಹೋಗುತ್ತಿದ್ದ ಕಪ್ಪೆಯೊಂದನ್ನು ತನ್ನ ಪುಟ್ಟ ಕೈಯಲ್ಲಿ ಮೃದುವಾಗಿ ಹಿಡಿದು ಓಡುತ್ತಾ ನನ್ನ ಬಳಿ ಬಂದು 'ಕಪ್ಪೆಯ ಮೂತ್ರ ಯಾಕೆ ನನ್ನ ಮೂತ್ರದಂತೆ ಬೆಚ್ಚಗಿಲ್ಲ?' ಎಂದು ಕೇಳಿದ. ಈ ಪ್ರಶ್ನೆಯ ಮೂಲವೇನಿರಬಹುದೆಂದು ನಾನು ಆಲೋಚಿಸುವ ಮುನ್ನವೇ, ತನ್ನ ಮೂತ್ರ ಬೆಚ್ಚಗಿರುತ್ತದೆ ಎಂಬುದನ್ನು ಅವನು ಹೇಗೆ ಅರಿತ ಎಂಬುದನ್ನೂ ಅವನು ನನಗೆ ವಿವರಿಸಿದ! ಪ್ರಾಥಮಿಕ ಹಂತಗಳಲ್ಲಿರುವ ಮಕ್ಕಳನ್ನು ಗಮನಿಸಿದಾಗ ಈ ಪ್ರಶ್ನೆ ಹಾಗೂ ಈ ತರಹದ ಪ್ರಶ್ನೆಗಳಿಗೂ, ಅವರ ಅನುಭವಗಳಿಗೂ ಹಾಗೂ ಅವರಲ್ಲಿ ಇರುವಂತಹ ಗಮನಿಸುವ ಶಕ್ತಿಯ ನಡುವೆ ಸಂಬಂಧವಿರುತ್ತದೆ ಎಂಬುದು ನನಗೆ ಸ್ಪಷ್ಟವಾಯಿತು. ಆದರೆ ಇಂತಹ ಸಂದರ್ಭದಲ್ಲಿ ನಾನು ಹೇಗೆ ಮಕ್ಕಳಿಗೆ ಪ್ರತಿಸ್ಪಂದಿಸಬೇಕೆಂಬ ಸ್ಪಷ್ಟತೆ ನನಗಿರಲಿಲ್ಲ.

**ಮರು-ಪ್ರಶ್ನೆಗಳನ್ನು ಕೇಳುವ ತಂತ್ರ/ಮಾರ್ಗ**

ವಿದ್ಯಾರ್ಥಿಗಳಿಗೆ ನಾನೇ ಉತ್ತರವನ್ನು ನೀಡಿದರೆ ಕಲಿಕೆಯಿಂದ ಅವರನ್ನು ವಂಚಿಸಿದಂತಾಗುತ್ತದೆ ಎಂಬುದು ಮೊದಮೊದಲು ನನ್ನ ನಂಬಿಕೆಯಾಗಿತ್ತು. ಅದಲ್ಲದೆ ಎಲ್ಲಾ ಉತ್ತರಗಳನ್ನು ನೀಡುವಂತೆ ನನ್ನ ಮೇಲೆ ಅವರ ಅವಲಂಬನೆಯೂ ಬೆಳೆಯಬಹುದೆಂದು ನನಗನಿಸಿತು. ಆ ಸಮಯದಲ್ಲಿ ಇದು ನನ್ನ ನಂಬಿಕೆಗೆ ವ್ಯತಿರಿಕ್ತವಾಗಿತ್ತು– ಅಂದರೆ, ನನ್ನ ಆಶಯ ಅವರು ಸ್ವತಂತ್ರವಾಗಿ ಹುಡುಕಾಟವನ್ನು ಮಾಡುವಂತಹರಾಗಲು ಸಹಾಯ ಮಾಡಬೇಕೆಂಬುದಾಗಿತ್ತು. ನನ್ನ ಬಳಿಗೆ ಬಂದಂತಹ ಪ್ರಶ್ನೆಗಳನ್ನು ಮರು ಪ್ರಶ್ನೆಗಳನ್ನು ಕೇಳುವ ತಂತ್ರದ ಮೂಲಕ ನಿರ್ವಹಿಸಲು ನಿರ್ಧರಿಸಿದೆ. ಆದ್ದರಿಂದ, ಅವರ ಪ್ರಶ್ನೆಗಳಿಗೆ ಪ್ರತಿಕ್ರಿಯೆಯಾಗಿ, ನಾನು ಅವರಿಗೆ ಮರು ಪ್ರಶ್ನೆಗಳನ್ನು ಕೇಳುತ್ತಿದ್ದೆ; ನನ್ನ ಪ್ರಶ್ನೆಗಳ ಉತ್ತರವು ಅವರಿಗೆ ತಮ್ಮ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಸುಳಿವುಗಳನ್ನು ನೀಡುವಂತೆ ಇರುತ್ತಿದ್ದವು. ನನ್ನ ಮರು ಪ್ರಶ್ನೆಗಳು ಅವರ ವಯಸ್ಸು ಹಾಗೂ ಮಟ್ಟಕ್ಕೆ ತಕ್ಕನಾಗಿರುವಂತೆ ರಚಿಸುತ್ತಿದ್ದೆ. ಇದರ ಅರ್ಥ, ಅವರು ಕೇಳಿರುವ ಪ್ರಶ್ನೆಯನ್ನು ನಾನು ಅರ್ಥಮಾಡಿಕೊಂಡು, ಅದಕ್ಕೆ ಉತ್ತರವನ್ನು ರಚಿಸಿ, ನಂತರ ಮರುಪ್ರಶ್ನೆಯನ್ನು ತಯಾರಿಸಿಕೊಳ್ಳಬೇಕಿತ್ತು. ಈ ತಂತ್ರಕ್ಕೆ ಹೊಂದಿಕೊಳ್ಳಲು ಕೆಲ ಸಮಯ ಬೇಕಾಯಿತು.

ಆದರೆ, ನಾನು ಗಮನಿಸಿದಂತೆ ಮಕ್ಕಳು ಕುತೂಹಲದಿಂದ ಉತ್ತರಕ್ಕೆ ಹುಡುಕಾಟ ಮಾಡುವವರಾಗುವ ಬದಲು, ಕ್ರಮೇಣ ಕೇಳುತ್ತಿದ್ದ ಪ್ರಶ್ನೆಗಳೇ ಕಡಿಮೆಯಾಗುತ್ತಾ ಹೋಯಿತು. ಇದಲ್ಲದೆ, ಅವರ ಪ್ರಶ್ನೆಗಳಿಗೆ ನಾನೆಂದೂ ಉತ್ತರಿಸುವುದಿಲ್ಲವೆಂಬ ದೂರು ಸಹ ಕೇಳಿಬಂತು, ಹೀಗೆ ಮರು ಪ್ರಶ್ನೆಗಳನ್ನು ಕೇಳುವ ನನ್ನ ತಂತ್ರ ವಿಫಲವಾಗುತ್ತಿದೆ ಎಂದು ನನಗೆ ಸ್ಪಷ್ಟವಾಯಿತು.

ಆದರೆ, ಈ ತಂತ್ರವು ಸಂಪೂರ್ಣವಾಗಿ ವಿಫಲವಾಗಲಿಲ್ಲ, ಕಾರಣ ಈ ಮಾರ್ಗವು 5 ಮತ್ತು 6ನೇ ತರಗತಿಯ ಮಕ್ಕಳಿಗೆ ಉತ್ತಮವಾಗಿ ಉಪಯೋಗಕಾರಿಯಾಯಿತು. ಈ ಹಂತದಲ್ಲಿ ಮಕ್ಕಳು ತಮ್ಮ ಮಾತೃಭಾಷೆ ಮರಾಠಿಯಿಂದ ಇಂಗ್ಲೀಷ್ ಅನ್ನು ಬಳಸುವ ಬದಲಾವಣೆಯ ಘಟ್ಟದಲ್ಲಿದ್ದರು. ಅವರಿಗೆ ಅರ್ಥವಾಗದ ಅನೇಕ ಹೊಸ ಇಂಗ್ಲೀಷ್ ಪದಗಳಿಗೆ ಅವರು ಪರಿಚಿತರಾಗುತ್ತಿದ್ದರು. ಈ ಸಮಯದಲ್ಲಿ ತರಗತಿಯಲ್ಲಿ ಅವರು

ಅನೇಕ ಅಪರಿಚಿತ ಪದಗಳಿಗೆ ಅರ್ಥವನ್ನು ನನಗೆ ಕೇಳುತ್ತಿದ್ದರು. ನಾನು ಮರು ಪ್ರಶ್ನೆಯ ತಂತ್ರವನ್ನು ಆಗ ಒಗಟನ್ನು ಸೃಷ್ಟಿಸುವ ತಂತ್ರವನ್ನಾಗಿ ಮಾರ್ಪಡಿಸಿದೆ. ಅಂದರೆ, ನೇರವಾಗಿ ಹೊಸ ಪದದ ಅರ್ಥವನ್ನು ಹೇಳುವ ಬದಲು, ಆ ಹೊಸ ಪದವನ್ನು ಬಳಸಿ ವಾಕ್ಯವನ್ನು ಮಾಡಿ, ಅದರಲ್ಲಿ ಅವರಿಗೆ ತಿಳಿದಿರುವ ಇನ್ನಿತರ ಪದಗಳನ್ನು ಬಳಸುತ್ತಿದ್ದೆ. ಆಗ ಅವರಿಗೆ ಹೊಸ ಪದದ ಅರ್ಥವನ್ನು ಕಂಡುಹಿಡಿಯಲು ಸುಲಭವಾಗುತ್ತಿತ್ತು. ಈ ಒಗಟುಗಳನ್ನು ಬಿಡಿಸಲು ಮಕ್ಕಳಿಗೆ ಖುಷಿಯಾಗುತ್ತಿತ್ತು ಹಾಗೂ ಕಲಿಕೆ ವಿನೋದದಿಂದ ಸಾಗುತ್ತಿತ್ತು.

### ಪ್ರಶ್ನೆಪೆಟ್ಟಿಗೆ

ನನ್ನ ಮೊದಲ ಅನುಭವದ ಬಗ್ಗೆ ಆಲೋಚಿಸುತ್ತಾ, ನಾನು ಎಲ್ಲಾ ಪ್ರಶ್ನೆಗಳನ್ನು ಒಂದೇ ರೀತಿಯಲ್ಲಿ ನೋಡುತ್ತಿದ್ದೇನೆ ಎಂಬುದು ನನಗೆ ಅರಿವಾಯಿತು. ಒಂದು ಚಿಕ್ಕದಾದ ಪರ್ಯಾಯ ಶಾಲೆಗೆ ಬಹುಶಃ ಇದು ದೊಡ್ಡ ಸಮಸ್ಯೆಯಾಗದಿರಬಹುದು. ಸುಲಭವಾಗಿ ಸಿಗದ ಉತ್ತರವೊಂದನ್ನು ಹುಡುಕಿಕೊಂಡು ಹೋಗಲು ಸಾಕಷ್ಟು ಸಮಯವನ್ನು ಮಕ್ಕಳಿಗೆ ನಾವು ನೀಡಲು ನಮಗೆ ಸಾಧ್ಯ. ಆದರೆ, ಈ ಮಾರ್ಗವು ಅನೇಕ ವಿದ್ಯಾರ್ಥಿಗಳು ಇದ್ದಲ್ಲಿ ಬಹಳಷ್ಟು ಸಮಯವನ್ನು ತೆಗೆದುಕೊಳ್ಳುತ್ತದೆ ಎಂಬುದು ನನಗೆ ಅರಿವಾಯಿತು. ವಿದ್ಯಾರ್ಥಿಗಳ ಸಂಖ್ಯೆಯಷ್ಟೇ ಅಲ್ಲ, ಶಾಲೆಯಲ್ಲಿ ಇರಬಹುದಾದ ಇನ್ನಿತರ ಪಠ್ಯಕ್ರಮದ ಬೇಡಿಕೆಗಳ ಮಧ್ಯದಲ್ಲಿ ಈ ಮಾರ್ಗ ಸುಲಭ ಸಾಧ್ಯವಲ್ಲ.

ಹೀಗಾಗಿ, ನಾನು ಚಿಕ್ಕದಾದ, ಪರ್ಯಾಯ ಶಾಲೆಯಿಂದ ದೊಡ್ಡದಾದ ಹಾಗೂ ಹೆಚ್ಚು ಔಪಚಾರಿಕ ಶಾಲಾ ವಾತಾವರಣವಿರುವ ಶಾಲೆಗೆ ಹೋದಾಗ ವಿಭಿನ್ನವಾದ ತಂತ್ರವನ್ನು ಅಳವಡಿಸಿಕೊಳ್ಳಲು ನಿರ್ಧರಿಸಿದೆ. ಇಷ್ಟರ ಹೊತ್ತಿಗೆ, ಶಿಕ್ಷಕನಾಗಿ ಬೋಧನೆಯಲ್ಲಿ ಸ್ವಲ್ಪ ಹೆಚ್ಚು ಅನುಭವವನ್ನು ಹೊಂದಿದ್ದೆ ಹಾಗೂ ಇನ್ನಿತರ ಶಿಕ್ಷಕರೊಂದಿಗೆ ತರಗತಿಯ ಅನುಭವಗಳ ಬಗ್ಗೆ ಚರ್ಚಿಸಲು ಹಾಗೂ ಓದಲು ಪ್ರಾರಂಭಿಸಿದ್ದೆ. ಆ ಸಂದರ್ಭದಲ್ಲಿ ಸಹೋದ್ಯೋಗಿಯೊಬ್ಬರು 'ಪ್ರಶ್ನೆ ಪೆಟ್ಟಿಗೆ' ಕಲ್ಪನೆಯ ಬಗ್ಗೆ ನನಗೆ ಸೂಚಿಸಿದರು.

ಈಗಾಗಲೇ ಕಪ್ಪೆಯ ಮೂತ್ರದ ಬಗ್ಗೆ ಕೇಳಲಾದ ಪ್ರಶ್ನೆಯಂತೆ, ವಿದ್ಯಾರ್ಥಿಗಳ ಪ್ರಶ್ನೆಗಳ ಮೂಲಸ್ಥಾನವು ವೈವಿಧ್ಯತೆಯಿಂದ ಕೂಡಿರುತ್ತದೆ ಹಾಗೂ ಅವುಗಳು ಅನೇಕ ಸಲ ತರಗತಿಯ ಪಾಠಕ್ಕೆ ತಡೆಯನ್ನೂ ಒಡ್ಡಬಹುದು. ಆದರೆ ಪ್ರಶ್ನೆಗಳನ್ನು ಕೇಳುವ ವಿದ್ಯಾರ್ಥಿಗಳ ಉತ್ಸಾಹಕ್ಕೆ ಭಂಗ ತರಲು ನನಗೆ ಇಷ್ಟವಿಲ್ಲ. ಪ್ರಶ್ನೆ ಪೆಟ್ಟಿಗೆಯೊಂದನ್ನು ಮಾಡುವ ಆಲೋಚನೆ ಇದಕ್ಕೆ ಪರಿಹಾರವಾಗಿ ಮೂಡಿತು. ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ, ಪ್ರತಿ ತರಗತಿಯಲ್ಲೂ ಕೆಲವು ವಿದ್ಯಾರ್ಥಿಗಳಿಗೆ ಹಳೆಯ ಶೂ ಬಾಕ್ಸೊಂದನ್ನು ತರಲು ಹೇಳಿದೆ. ಅದನ್ನು ಅಲಂಕರಿಸಿ, ತರಗತಿಯಲ್ಲಿ ಇಡಲಾಯಿತು. ಅದರ ಜೊತೆ ಒಂದು ಬದಿಯಲ್ಲಿ ಬಳಸಿದ ಕಾಗದದ ತುಂಡುಗಳನ್ನು ವಿದ್ಯಾರ್ಥಿಗಳು ತಮ್ಮ ಪ್ರಶ್ನೆಗಳನ್ನು ಬರೆಯಲು ಇಡಲಾಯಿತು. ಯಾರಿಗಾದರೂ ಪ್ರಶ್ನೆಯೊಂದು ಇದ್ದಲ್ಲಿ, ಅದು ನೇರವಾಗಿ ತರಗತಿಯಲ್ಲಿ ನಡೆಯುತ್ತಿರುವ ಪಾಠಕ್ಕೆ ಸಂಬಂಧಿತವಲ್ಲದ್ದಾಗಿದ್ದರೆ, ಅದನ್ನು ಆ ಕಾಗದದ ಹಾಳೆಯ ಮೇಲೆ ಬರೆದು, ಅವರ ಹೆಸರನ್ನೂ ಸಹ ಅದರಲ್ಲಿ ಬರೆದು ಬಾಕ್ಸಿನಲ್ಲಿ ಹಾಕಿ ಬಿಡುತ್ತಿದ್ದರು. ಅವರು ದಿನದಲ್ಲಿ ಯಾವಾಗಲಾದರೂ ಪ್ರಶ್ನೆಗಳನ್ನು ಬರೆದು ಅದರಲ್ಲಿ ಹಾಕಬಹುದೆಂದು ಉತ್ತೇಜಿಸಲಾಗಿತ್ತು. ಆಗಾಗ್ಗೆ, ನಾನು ರೂಪಿಸಿಕೊಂಡಿದ್ದ ಪಾಠವನ್ನು ಮಾಡಿ ಮುಗಿಸಿದ ನಂತರ, ಸ್ವಲ್ಪ ಸಮಯ ಸಿಕ್ಕಾಗ ಆ ಬಾಕ್ಸನ್ನು ತಗೆದು ಅದರಲ್ಲಿರುವ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳುತ್ತಿದ್ದೆ. ಒಟ್ಟಾರೆ, ತರಗತಿಯಾಗಿ ಒಗ್ಗೂಡಿ ಆ ಪ್ರಶ್ನೆಗಳಿಗೆ ಸಾಧ್ಯವಿರಬಹುದಾದ ಉತ್ತರಗಳನ್ನು ಚರ್ಚಿಸುತ್ತಿದ್ದೆವು ಹಾಗೂ ಉತ್ತರಕ್ಕೆ ಬೇಕಾದ ಶೋಧನೆಯನ್ನು ಯೋಜಿಸಿಕೊಳ್ಳುತ್ತಿದ್ದೆವು. ಕೆಲವೊಮ್ಮೆ ಉತ್ತರವನ್ನು ಪಡೆಯಲು ಹೋಗುವ ಮುನ್ನ ನಾವು ನಿರ್ದಿಷ್ಟ ಪ್ರಶ್ನೆಯನ್ನು ಕೇಳಿರುವ ವಿದ್ಯಾರ್ಥಿಯನ್ನು ಅದಕ್ಕೆ ಸಂಬಂಧಿಸಿದಂತೆ ಕೆಲವು ವಿವರಣೆಯನ್ನು ನೀಡುವಂತೆ ಕೇಳುತ್ತಿದ್ದೆವು.

ಪ್ರಶ್ನೆಗಳ ಪೆಟ್ಟಿಗೆಯಿಂದ ಅನೇಕ ಉಪಯೋಗಗಳಾದವು– ಪ್ರಶ್ನೆಗಳನ್ನು ಹುಟ್ಟುಹಾಕುವುದು, ಪ್ರಶ್ನೆಗಳ ಕುರಿತಾಗಿ ವಿದ್ಯಾರ್ಥಿಗಳ ಆಸಕ್ತಿಯು ಮುಂದುವರಿಯುವಂತೆ ನೋಡಿಕೊಳ್ಳುವುದು, ಅದಕ್ಕಿಂತ ಮುಖ್ಯವಾಗಿ ಉತ್ತರಗಳನ್ನು ಕಂಡುಕೊಳ್ಳುವ–ಪಡೆಯುವ ಪ್ರಕ್ರಿಯೆಯಲ್ಲಿ ಅವರು ತೊಡಗುವುದು. ಇದರೊಂದಿಗೆ ಪ್ರಶ್ನೆಪೆಟ್ಟಿಗೆಯನ್ನು ತೆಗೆಯುವುದು ಎಲ್ಲರ ನಿರೀಕ್ಷಿತ ಕ್ಷಣವಾಗುತ್ತಿತ್ತು. ತರಗತಿಯಲ್ಲಿ ಕೊಟ್ಟ ಕೆಲಸವನ್ನು ಸಮಯಕ್ಕೆ ಮುಗಿಸಲು ಇದು ಪ್ರೇರೇಪಿಸುತ್ತಿತ್ತು, ಕಾರಣ ಪ್ರಶ್ನೆಗಳ ಪೆಟ್ಟಿಗೆಯನ್ನು ಆಗ ತೆಗೆಯಲು ಸಮಯ ದೊರೆಯುತ್ತದೆ ಎಂಬುದು ಅವರಿಗೆ ತಿಳಿದಿರುತ್ತಿತ್ತು. ತಮ್ಮ ಹೆಸರನ್ನು ಪ್ರಶ್ನೆಗಳೊಂದಿಗೆ ಬರೆಯುವುದರ ಮೂಲಕ ಅವರಲ್ಲಿ ಅದರ ಕುರಿತಾಗಿ ಮಾಲೀಕತ್ವ ಹಾಗೂ ಜವಾಬ್ದಾರಿಯ ಭಾವನೆಗಳೂ ಬೆಳೆದವು, ಉತ್ತರಗಳ ಹುಡುಕಾಟವನ್ನು ಉಳಿಸಿಕೊಳ್ಳುವಲ್ಲಿ ಇವು ಸಹಾಯಕವಾದವು.

### ನನ್ನ ಕಲಿಕೆಗಳು

ಈ ಅನುಭವಗಳ ಮೂಲಕ, ಶಿಕ್ಷಕನಾಗಿ ನನಗಾದ ಕೆಲವು ಪ್ರಮುಖ ಕಲಿಕೆಗಳನ್ನು ಇಲ್ಲಿ ಪ್ರಸ್ತುತ ಪಡಿಸಲು ನಾನು ಬಯಸುತ್ತೇನೆ:

- ನನ್ನ ಬೋಧನಾಕ್ರಮದ ಆಯ್ಕೆಗಳ ಮೂಲಕ ನಾನು ವಿದ್ಯಾರ್ಥಿಗಳಿಗೆ ವೈವಿಧ್ಯಮಯ ಅನುಭವಗಳನ್ನು ನೀಡಲು ಸಾಧ್ಯವಾಯಿತಲ್ಲದೆ, ಆ ಮೂಲಕ ಅವರು ಹೆಚ್ಚು ವಿಚಾರಗಳನ್ನು ಗಮನಿಸಿ, ವಿವಿಧ ಪ್ರಶ್ನೆಗಳನ್ನು ಕೇಳಲು ಅವಕಾಶಗಳನ್ನು ಮಾಡಿಕೊಟ್ಟಿತು.
- ವಿದ್ಯಾರ್ಥಿಗಳ ಪ್ರಶ್ನೆಗಳನ್ನು ನಿರ್ವಹಿಸಲು ನಾನು ಆರಿಸಿಕೊಂಡ ಮಾರ್ಗವು ಅವರ ವಯಸ್ಸು, ಈಗಾಗಲೇ ವಿದ್ಯಾರ್ಥಿಗಳಿಗಿರುವ ಜ್ಞಾನದ ಮಟ್ಟ, ಪಠ್ಯಕ್ರಮದ ಮಿತಿಗಳು ಹಾಗೂ ಅವಶ್ಯಕತೆಗಳು ಹಾಗೂ ವಿದ್ಯಾರ್ಥಿಗಳು ಬಯಸುವ ಜ್ಞಾನದ ರೂಪಗಳ/ರೀತಿಯ ಮೇಲೆ ನಿರ್ಧರಿತವಾಗಿತ್ತು.
- ಪ್ರಶ್ನೆಗಳ ಬಗ್ಗೆ ಅವರಿಗಿರುವ ಮಾಲೀಕತ್ವದ ಭಾವನೆಯನ್ನೂ ಹಾಗೂ ಸಂದರ್ಭಕ್ಕೆ ತಕ್ಕಂತೆ ಪ್ರಾಮಾಣಿಕವಾದ ಮಾಹಿತಿಯನ್ನು ಪಡೆದುಕೊಳ್ಳಬೇಕಾದ, ಸುರಕ್ಷಿತವಾದ ಜಾಗವನ್ನು ಸೃಷ್ಟಿಸುವುದರ ನಡುವೆ ಸಮತೋಲನವನ್ನು ತರುವುದು ನನ್ನ ಆದ್ಯತೆಯಾಗಿತ್ತು.

ಇವುಗಳನ್ನು ಹೊರತುಪಡಿಸಿ, ವಿದ್ಯಾರ್ಥಿಗಳಲ್ಲಿ ಕುತೂಹಲವನ್ನು ಪೋಷಿಸುವ ಮಾರ್ಗಗಳ ನನ್ನ ಹುಡುಕಾಟದಲ್ಲಿ ಸಹಾಯ ಮಾಡಿದ ಇನ್ನೂ ಕೆಲವು ವಿಚಾರಗಳಿವೆ. ಅದರಲ್ಲಿ ಅತಿ ಮುಖ್ಯವಾದುದು, ನನ್ನ ಜ್ಞಾನದ ಮಿತಿಗಳನ್ನು ಮುಕ್ತವಾಗಿ ಒಪ್ಪಿಕೊಳ್ಳುವುದು, 'ನನಗೆ ಇದರ ಬಗ್ಗೆ ಗೊತ್ತಿಲ್ಲ, ಇದರ ಬಗ್ಗೆ ತಿಳಿದುಕೊಂಡು ಬರುವೆ' ಎಂದು ಹೇಳುವುದನ್ನು ನಾನು ಬಯಸುತ್ತೇನೆ. ಈ ಮೂಲಕ ತಕ್ಕ ಉತ್ತರವನ್ನು ಇಲ್ಲವೇ ಸರಿಯಾದ ಪ್ರತಿಕ್ರಿಯೆಯನ್ನು ಹೇಳಲು ನನಗೆ ಬೇಕಾದ ಸಂದರ್ಭವನ್ನು ಇದು ಸೃಷ್ಟಿಸುತ್ತದೆ ಹಾಗೂ ವಿದ್ಯಾರ್ಥಿಗಳಿಗೆ ಏನಾದರೂ ತಿಳಿಯದೇ ಇದ್ದಲ್ಲಿ ಅವರೂ ಸಹ ಅದರ ಬಗ್ಗೆ ಮುಂದೆ ತಿಳಿದುಕೊಳ್ಳುವ ಅವಕಾಶವಿದೆ ಎಂದು ಈ ಮೂಲಕ ತೋರಿಸಿಕೊಡಬಹುದಾಗಿದೆ. ಎರಡನೆಯದಾಗಿ, ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಕೇಳಲು ಸುರಕ್ಷಿತ ಜಾಗವೊಂದನ್ನು ಸೃಷ್ಟಿಸುವ ಮೂಲಕ ಅವರು ಹೆಚ್ಚು ಪ್ರಶ್ನೆಗಳನ್ನು ಕೇಳುವಂತೆ ಉತ್ತೇಜಿಸವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ಸುರಕ್ಷಿತ ಜಾಗವು ಅವರು ಹಾಗೂ ನಾವು ಮಾಡುವ ತಪ್ಪುಗಳನ್ನು ಹೇಗೆ ನೋಡುತ್ತೇವೆಂಬುದನ್ನು ಸಹ ಒಳಗೊಂಡಿರುತ್ತದೆ. ಕೊನೆಯದಾಗಿ, ಪ್ರಶ್ನೆಗಳಿಂದ ತುಂಬಿರುವ ತರಗತಿಯೊಂದು ಅದರೊಳಗಿರುವ ಎಲ್ಲರಿಗೂ ಒಂದು ಜಂಟಿ ಸಾಹಸವಾಗಬಹುದೆಂಬುದನ್ನು ನಾವು ಮನಗಾಣಬೇಕಾಗಿದೆ.

● ಅನುವಾದ: **ಉಷಾ ಬಿ. ಎನ್.** | ಪರಿಶೀಲನೆ: **ಲತಾ ಕೆ. ಸಿ.**



**ಅನಘ್ ಪುರಂದರೆ** ಅವರು ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. ಜೀವವಿಜ್ಞಾನ ಹಾಗೂ ವಿಜ್ಞಾನ ವಿಷಯದ ಶಿಕ್ಷಕರಾಗಿ, ಮಕ್ಕಳು ಹೇಗೆ ವಿಜ್ಞಾನದ ಬಗ್ಗೆ, ಇನ್ನಿತರ ಕುತೂಹಲಕಾರಿ ವಾಸ್ತವಾಂಶಗಳು, ಆಗುಹೋಗುಗಳ ಬಗ್ಗೆ ಕಲಿಯುತ್ತಾರೆಂಬುದು ಅವರ ಆಸಕ್ತಿಯ ವಿಚಾರಗಳಾಗಿವೆ. ಇವರನ್ನು **anagh.purandare@azimpremjifoundation.org** ಮೂಲಕ ಸಂಪರ್ಕಿಸಬಹುದು.

# ಸಮನ್ವಯ ಸಂಸ್ಕೃತಿಯ ಪೋಷಣೆ

## ಒಂದು ತರಗತಿಯ ಕಥೆ

ಅನನ್ಯ ಬ್ಯಾನರ್ಜಿ

VOICES

ಛತ್ತೀಸ್‌ಗಢದ ರಾಯಗಢದಲ್ಲಿನ ಬಮ್ಹನಪಾಲಿ ಗ್ರಾಮ ಮತ್ತು ಖಾರ್ಸಿಯಾ ಎಂಬ ಸಣ್ಣ ಪಟ್ಟಣಕ್ಕೆ ಒಂದು ಉದ್ದನೆಯ ರಸ್ತೆಯು ಸಂಪರ್ಕ ಕಲ್ಪಿಸುತ್ತದೆ. ಈ ರಸ್ತೆಯ ಪಕ್ಕದಲ್ಲಿ ಬಮ್ಹನಪಾಲಿ ಸರ್ಕಾರಿ ಪ್ರಾಥಮಿಕ ಶಾಲೆಯು ಇದೆ. ಶಾಲೆಯು ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಬ್ಬರಿಗೂ ಅನುಕೂಲಕರವಾದ ಜಾಗದಲ್ಲಿ ಇದೆ. ಶಾಲೆಯನ್ನು ಪ್ರವೇಶಿಸುತ್ತಲೇ, ಅದರ ಆವರಣದಲ್ಲಿ ರಾಶಿ ಬಿದ್ದಿರುವ ದೊಡ್ಡ ದೊಡ್ಡ ಮಣ್ಣು ಹಾಗೂ ಕಲ್ಲಿನ ಗುಡ್ಡ ಕಾಣಿಸಿಕೊಳ್ಳುತ್ತದೆ. ಕಟ್ಟಡದ ಒಳಗೆ ಮೂರು, ನಾಲ್ಕು ಮತ್ತು ಐದನೇ ತರಗತಿಗಳ ವಿದ್ಯಾರ್ಥಿಗಳು ಪಡಸಾಲೆಯಲ್ಲಿ ಕುಳಿತುಕೊಂಡರೆ, ಅದರ ಪಕ್ಕದಲ್ಲೇ ಇರುವ ಕೊಠಡಿಯಲ್ಲಿ ಒಂದು ಮತ್ತು ಎರಡನೇ ತರಗತಿಯ ವಿದ್ಯಾರ್ಥಿಗಳು ಕುಳಿತುಕೊಳ್ಳುತ್ತಾರೆ. ಅಲ್ಲಿ ಮತ್ತೊಂದು ಕೊಠಡಿಯೂ ಇದೆ. ಆದರೆ ಅದನ್ನು ಯಾರೂ ಬಳಸುತ್ತಿಲ್ಲ. ಏಕೆಂದರೆ, ಅದರ ಗೋಡೆಗಳು ಕುಸಿಯುತ್ತಿದ್ದು, ದೀಪಾವಳಿಯ ಸಮಯದಲ್ಲಿ ಸೀಲಿಂಗ್ ಫ್ಯಾನ್ ಕೆಳಗೆ ಬಿದ್ದು ಒಂದು ದುರಂತವೇ ಸಂಭವಿಸಿತ್ತು. ಅದೃಷ್ಟವಶಾತ್, ವಿದ್ಯಾರ್ಥಿಗಳು ಆಗ ರಜೆಯಲ್ಲಿ ಇದ್ದದ್ದರಿಂದ ಯಾರಿಗೂ ಅಪಾಯವಾಗಲಿಲ್ಲ.

ಈ ಶಾಲೆಯಲ್ಲಿ ಓದುವ ಮಕ್ಕಳು ಬಮ್ಹನಪಾಲಿ ಎಂಬ ಗ್ರಾಮಕ್ಕೆ ಸೇರಿದವರಾಗಿದ್ದಾರೆ. ಗ್ರಾಮದಲ್ಲಿ ಎಲ್ಲಾ ಜಾತಿಗಳಿಗೂ ಸೇರಿದ ಜನರಿದ್ದು, ಹೆಚ್ಚಾಗಿ ಪರಿಶಿಷ್ಟ ಜಾತಿ (SC) ಮತ್ತು ಇತರ ಹಿಂದುಳಿದ ವರ್ಗಗಳಿಗೆ (OBC) ಸೇರಿದವರಾಗಿದ್ದಾರೆ. ಕೆಲವರು ಪರಿಶಿಷ್ಟ ಪಂಗಡಕ್ಕೂ ಸೇರಿದ್ದಾರೆ. ಇಲ್ಲಿನ ಮಕ್ಕಳ ಪೋಷಕರು ಕೃಷಿ ಮತ್ತು ಮೀನುಗಾರಿಕೆಯಲ್ಲಿ ತೊಡಗಿಕೊಂಡಿರುವ ಜೊತೆಗೆ ವಲಸೆ ಕಾರ್ಮಿಕರಾಗಿ (ಹೆಚ್ಚಾಗಿ ಮುಂಬೈಯಲ್ಲಿ ) ಸಹ ಕೆಲಸ ಮಾಡುತ್ತಾರೆ. ಈ ವಲಸೆ ಕಾರ್ಮಿಕರ ಕುಟುಂಬಗಳಿಗೆ ಸೇರಿದ ಮಕ್ಕಳು ತಮ್ಮ ಅಜ್ಜ-ಅಜ್ಜಿಯರೊಡನೆಯೋ ಅಥವಾ ಇತರ ಸಂಬಂಧಿಕರೊಡನೆಯೋ ವಾಸಿಸುತ್ತಾರೆ.

ನಾನು ಶಾಲೆಯ ಮುಖ್ಯ ಶಿಕ್ಷಕರಾದ ಪಾಂಡೆ ಸರ್ವ ಅವರ ತರಗತಿಯನ್ನು ವೀಕ್ಷಿಸುವ ಸಲುವಾಗಿ ಅಲ್ಲಿಗೆ ಭೇಟಿ ನೀಡಿದ್ದೆ. ಅವರು, ಗಣಿತ ಮತ್ತು ಪರಿಸರ ಅಧ್ಯಯನವನ್ನು ಬೋಧಿಸುತ್ತಾರೆ. ಈ ಹಿಂದೆಯೂ ಒಂದೆರಡು ಬಾರಿ ನಾನು ಅವರೊಂದಿಗೆ ಮಾತುಕತೆ ನಡೆಸಿದ್ದೆ. ಆ ಮೂಲಕ ಅವರು ಪುಸ್ತಕಗಳನ್ನು ಓದುವುದನ್ನು ಮತ್ತು ಅವುಗಳ ಬಗ್ಗೆ ತಮ್ಮ ತರಗತಿಯಲ್ಲಿ ಉತ್ಸಾಹಭರಿತ ಚರ್ಚೆಗಳನ್ನು ನಡೆಸುವುದನ್ನು ಇಷ್ಟ ಪಡುತ್ತಾರೆ ಎಂಬುದನ್ನು ತಿಳಿದಿದ್ದೆ.

ಅವರು ಮಾಡುವ ಬೋಧನೆಯಲ್ಲಿ ಸಾಮಾನ್ಯವಾಗಿ ವಿಜ್ಞಾನ ಮತ್ತು ಕಥೆಗಳೆರಡೂ ಉತ್ತಮವಾಗಿ ಬೆರೆತಿರುತ್ತವೆ. ಆ ದಿನ, ತರಗತಿಯಲ್ಲಿ (ಮೂರು, ನಾಲ್ಕು ಮತ್ತು ಐದನೇ ತರಗತಿಗಳನ್ನೊಳಗೊಂಡ ಗುಂಪು) ಎನ್‌ಸಿಇಆರ್‌ಟಿ ಐದನೇ ತರಗತಿಯ ಪರಿಸರ ಅಧ್ಯಯನ ಪಠ್ಯಪುಸ್ತಕದ ಯಾಂಟ್ಸ್ ಫ್ರಂ ಲುಕಿಂಗ್ ಅರೌಂಡ್ ಎಂಬ ಅಧ್ಯಾಯವನ್ನು ಓದುತ್ತಿದ್ದರು.

**ತರಗತಿ ಸಂವಹನ**

"ಮಕ್ಕಳೇ, ನೀವು ನಿಮ್ಮ ಸುತ್ತಮುತ್ತ ಇರುವೆಗಳನ್ನು ನೋಡಿದ್ದೀರಾ?" ಎಂಬ ಕೆಲವು ಸರಳ ಪ್ರಶ್ನೆಗಳನ್ನು ಕೇಳುತ್ತಾ ಪಾಂಡೆ ಸರ್ ಇರುವೆಗಳ ಕುರಿತಾದ ಆರಂಭಿಕ ಮಾಹಿತಿಯ ಬಗ್ಗೆ ಚರ್ಚೆಯನ್ನು ಪ್ರಾರಂಭಿಸಿದರು. ಅದಕ್ಕೆ ಸಹಜವಾಗಿ ಮಕ್ಕಳು ಜೋರಾಗಿ ಹೌದು! ಎಂದು ಉತ್ತರಿಸಿದರು. ನಂತರ ಒಬ್ಬೊಬ್ಬರಾಗಿ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಆರಂಭಿಸಿದರು. ಒಬ್ಬ ವಿದ್ಯಾರ್ಥಿ ತನ್ನ ಮನೆಯಲ್ಲಿ ಚಿಮುಟದ ರೀತಿಯ ಕೊಂಡಿಗಳುಳ್ಳ ದೊಡ್ಡ ಕಪ್ಪು ಇರುವೆಗಳನ್ನು ನೋಡಿರುವುದಾಗಿ ಹೇಳಿದ. ಒಮ್ಮೆ, ಅವುಗಳಲ್ಲಿ ಒಂದು ಅವನನ್ನು ಕಚ್ಚಿದ ಕಾರಣ ಒಂದು ದಿನ ಜ್ವರ ಬಂದಿತ್ತು ಎಂದೂ ಹೇಳಿದ. ಇನ್ನೊಂದು ಮಗು, ಗಮನಿಸದೆ ಬಿಟ್ಟ ಆಹಾರಪದಾರ್ಥಗಳಿಗೆ ಮುತ್ತಿಕೊಂಡಿರುವ ಕೆಂಪು ಇರುವೆಗಳನ್ನು ನಾನು ನೋಡಿದ್ದೇನೆ, ಮತ್ತು ಅವು ಕಚ್ಚುವ ಕಾರಣ ಅವುಗಳನ್ನು ತೆಗೆದುಹಾಕುವುದು ಕಷ್ಟ ಎಂದು ಹೇಳಿದ. ಮತ್ತೊಬ್ಬ ವಿದ್ಯಾರ್ಥಿನಿ ಚಿಕ್ಕ ಚಿಕ್ಕ ಕಪ್ಪು ಇರುವೆಗಳು ಯಾರಿಗೂ ಕಚ್ಚಿ ನೋಯಿಸದೆ, ಮೈ ಮೇಲೆ ಹರಿದಾಗ ಕಚಗುಳಿ ನೀಡುವ ಕಾರಣ ತನಗೆ ಅವುಗಳೆಂದರೆ ಇಷ್ಟ ಎಂದು ಹೇಳಿದಳು.

ಮಕ್ಕಳು ಹೇಳುತ್ತಿದ್ದ ಪ್ರತಿಯೊಂದು ಮಾತನ್ನು ಪಾಂಡೆ ಸರ್ ಕಿವಿಗೊಟ್ಟು ಕೇಳುತ್ತಿದ್ದರು ಮತ್ತು ಕೆಲವೊಮ್ಮೆ ತಾವೂ ಅವರೊಂದಿಗೆ ಸಂಭಾಷಣೆಯಲ್ಲಿ ತೊಡಗಿಕೊಂಡು ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಪ್ರೋತ್ಸಾಹಿಸುತ್ತಿದ್ದರು. ನಂತರ, ಅವರು ಪಾಠದ ಕಡೆ ಗಮನ ಹಾಯಿಸಿ ಪಠ್ಯಪುಸ್ತಕವನ್ನು ಓದಲು ಪ್ರಾರಂಭಿಸಿದರು. ಪ್ರತಿಯೊಂದು ಭಾಗವನ್ನು ಓದಿದ ನಂತರ, ಸ್ವಲ್ಪ ತಡೆದು ಮಕ್ಕಳಿಗೆ ತಾನು ಓದುತ್ತಿರುವುದು ಅರ್ಥವಾಗುತ್ತಿದೆಯೇ ಎಂದು ಕೇಳುತ್ತಿದ್ದರು. ಯಾರಾದರೂ ಪ್ರಶ್ನೆಗಳನ್ನು ಕೇಳಿದರೆ, ಅವುಗಳಿಗೆ ಉತ್ತರಿಸುತ್ತಿದ್ದರು. ಪಾಠವು ಇನ್ನೇನು ಮುಗಿಯುತ್ತಾ ಬಂದಾಗ, ಮಕ್ಕಳು ಇರುವೆಗಳ ದೇಹವನ್ನು ಮಾನವ ದೇಹದೊಂದಿಗೆ ಹೋಲಿಸಿ, ಇರುವೆಗಳ ದೇಹರಚನೆಯ ಬಗ್ಗೆ ಸ್ವಲ್ಪ ಗೊಂದಲಕ್ಕೀಡಾದರು. ಅವುಗಳ ದೇಹದ ಉದ್ದಕ್ಕೂ ಆರು ಕಾಲುಗಳಿರುವ ಕಾರಣ ಅವು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಮಕ್ಕಳಿಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಇದನ್ನು ಗಮನಿಸಿದ ಪಾಂಡೆ ಸರ್, ಇರುವೆಗಳ ದೇಹರಚನೆಯನ್ನು ಚೆನ್ನಾಗಿ ಅರ್ಥಮಾಡಿಸಲು ಮರುದಿನ ಒಂದು ಇರುವೆಯನ್ನು ಸೂಕ್ಷ್ಮದರ್ಶಕದ (ಮೈಕ್ರೋಸ್ಕೋಪ್) ಮೂಲಕ ತೋರಿಸುವುದಾಗಿ ಹೇಳಿದರು. ಇದನ್ನು ಕೇಳಿದ ವಿದ್ಯಾರ್ಥಿಗಳು ತಮಗೆ ಸೂಕ್ಷ್ಮ ದರ್ಶಕವನ್ನು ಬಳಸುವ ಅವಕಾಶ ದೊರೆಯುತ್ತಿದೆ ಎಂಬ ಉತ್ಸಾಹದಲ್ಲಿ ಸಂತಸದಲ್ಲಿ ಜೋರಾಗಿ ಕೂಗಿದರು.

ಇಷ್ಟೆಲ್ಲಾ ನಡೆಯುತ್ತಿರುವಾಗ, ಒಬ್ಬ ವಿದ್ಯಾರ್ಥಿನಿ ತನ್ನ ಗೆಳೆಯನೊಂದಿಗೆ ಬಹಳ ಸಂತೋಷದಿಂದ ಮಾತನಾಡುತ್ತಿದ್ದಳು. ಅವರಿಬ್ಬರು ತಮ್ಮ ಚರ್ಚೆಯಲ್ಲಿ ತೀವ್ರವಾಗಿ ಮಗ್ನರಾಗಿದ್ದರು.

ಇದನ್ನು ಗಮನಿಸಿದ ಪಾಂಡೆ ಸರ್, ಅವರು ಏನನ್ನು ಮಾತನಾಡುತ್ತಿದ್ದರು ಎಂಬುದನ್ನು ಎಲ್ಲರ ಬಳಿ ಹಂಚಿಕೊಳ್ಳುವಂತೆ ಹೇಳಿದರು. ವಿದ್ಯಾರ್ಥಿನಿ ಎದ್ದು ನಿಂತಳಾದರೂ ಮಾತನಾಡಲು ಸ್ವಲ್ಪ ಅಂಜಿದಳು. ನಂತರ ಮಾತನಾಡಿದ ಅವಳು, ತನ್ನ ಸಮುದಾಯದ ಜನ ಇರುವೆಗಳನ್ನು ತಿನ್ನುತ್ತಾರೆ ಎಂದು ಹೇಳಿದಳು. ಇದೊಂದು ಅಸಹಜ ಅಭ್ಯಾಸವಾದ್ದರಿಂದ ತಾನು ಹೇಳಿದ್ದಕ್ಕೆ ತನ್ನ ಸಹಪಾಠಿಗಳು ಹೇಗೆ ಪ್ರತಿಕ್ರಿಯಿಸುತ್ತಾರೋ ಎಂದು ಅವಳು ಆತಂಕದಿಂದ ಸುತ್ತಲೂ ನೋಡಿದಳು. ಆದರೆ ಅವಳ ಸಹಪಾಠಿಗಳು ಏನನ್ನಾದರೂ ಹೇಳುವ ಮೊದಲೇ, ಪಾಂಡೆ ಸರ್ ಆಕೆಯನ್ನು ತರಗತಿಯ ಮುಂಭಾಗಕ್ಕೆ ಕರೆದು, ಇರುವೆಗಳು ಪ್ರೋಟೀನ್‌ನ ಉತ್ತಮ ಮೂಲವಾಗಿದ್ದು, ಅನೇಕ ಜನರು ಅವುಗಳನ್ನು ತಿನ್ನುತ್ತಾರೆ ಎಂದು ತರಗತಿಗೆ ತಿಳಿಸಿದರು. ನಂತರ ಆ ಹುಡುಗಿಗೆ ಅವರು ಇರುವೆಗಳನ್ನು ಬಳಸಿ ಯಾವ ರೀತಿ ಅಡುಗೆ ಮಾಡುತ್ತಾರೆ ಮತ್ತು ಅವುಗಳನ್ನು ಹೇಗೆ ತಿನ್ನುತ್ತಾರೆ ಎಂಬುದನ್ನು ವಿವರಿಸುವಂತೆ ಹೇಳಿದರು. ಅದಕ್ಕೆ ಅವಳು, ಮೊದಲಿಗೆ ಅವರು ಇರುವೆಗಳನ್ನು ಸಂಗ್ರಹಿಸಿ ಅವುಗಳನ್ನು ಉಪ್ಪು ಮತ್ತು ಕಾರದ ಪುಡಿ ಸೇರಿಸಿ ರುಬ್ಬಬೇಕು, ಇಲ್ಲವಾದಲ್ಲಿ ಜ್ವರ ಬರುವ ಸಾಧ್ಯತೆ ಇರುತ್ತದೆ. ರುಬ್ಬಿದ ನಂತರ ಆ ಮಿಶ್ರಣದ ಉಂಡೆಗಳನ್ನು ಮಾಡಿ ಅವುಗಳನ್ನು ಎಣ್ಣೆಯಲ್ಲಿ ಕರೆದು ತಿನ್ನುತ್ತಾರೆ ಎಂದು ಹೇಳಿದಳು. ಆಗ ಪಾಂಡೆ ಸರ್ ಒಂದು ವೇಳೆ ಇರುವೆಗಳನ್ನು ತಿಂದ ಮೇಲೆ ಜ್ವರ ಬಂದರೆ ಏನು ಮಾಡುತ್ತೀರಿ? ಎಂದು ಕೇಳಿದಾಗ ಆಕೆ, ಹಾಗೇನಾದರೂ ಆದರೆ, ತಲೆಯ ಮೇಲೆ ಒದ್ದೆ ಬಟ್ಟೆಯನ್ನು ಇಟ್ಟುಕೊಂಡು ಒಂದು ರಾತ್ರಿ ನಿದ್ರೆ ಮಾಡುತ್ತೇವೆ. ಸಾಮಾನ್ಯವಾಗಿ, ಆ ಜ್ವರವು ಮರುದಿನ ಬೆಳಗ್ಗೆಯ ವೇಳೆಗೆ ಮಾಯವಾಗಿರುತ್ತದೆ ಎಂದು ಉತ್ತರಿಸಿದಳು. ಇದರೊಂದಿಗೆ ಆ ತರಗತಿಯು ಮುಕ್ತಾಯಗೊಂಡಿತು.

**ಪ್ರತಿಫಲನ**

ಓರ್ವ ವಿದ್ಯಾರ್ಥಿನಿಯು ತನ್ನ ಸಂಸ್ಕೃತಿಯಲ್ಲಿ ಇರುವೆಗಳನ್ನು ತಿನ್ನುವ ಪರಿಪಾಠವಿದೆ ಎಂಬ ವಿಷಯವನ್ನು ಹಂಚಿಕೊಳ್ಳುವ ಮೂಲಕ ತರಗತಿಯಲ್ಲಿ ಮಹತ್ವದ ಕ್ಷಣ ಉಂಟಾಗಲು ಕಾರಣವಾದಳು. ಇಂತಹ ಒಂದು ಅಭ್ಯಾಸವು ಇರಲು ಸಾಧ್ಯವಿಲ್ಲ ಎಂದು ಆ ಹುಡುಗಿಯ ಮಾತಿಗೆ ಅಸಡ್ಡೆ ತೋರದೆ, ಪಾಂಡೇ ಸರ್ ಆ ಸಂಸ್ಕೃತಿಯ ಮಹತ್ವವನ್ನು ಅರಿಯುವ ಒಂದು ಅವಕಾಶವಾಗಿ ಆ ಘಳಿಗೆಯನ್ನು ಬಳಸಿಕೊಂಡರು. ತರಗತಿಯಲ್ಲಿನ ವೈವಿಧ್ಯಮಯ ಸಾಂಸ್ಕೃತಿಕ ಅಸ್ಮಿತೆಗೆ ಗೌರವ ನೀಡುವುದನ್ನು ಆರಂಭಿಕ ಹಂತದಲ್ಲಿಯೇ ಉತ್ತೇಜಿಸಿದರು. ಈ ಸಮನ್ವಯದ ಧೋರಣೆಯು, ವೈವಿಧ್ಯತೆಯನ್ನು ಸಂಭ್ರಮಿಸುವ ಮತ್ತು ವಿದ್ಯಾರ್ಥಿಗಳ ನಡುವೆ ವಿಭಿನ್ನ ಸಾಂಸ್ಕೃತಿಕ ಅನುಭವಗಳನ್ನು ಉತ್ತೇಜಿಸುವ ಬಹುಸಾಂಸ್ಕೃತಿಕ ಶಿಕ್ಷಣದ ತತ್ತ್ವಗಳೊಂದಿಗೆ ತಾಳೆಯಾಗುತ್ತದೆ.

ಸಮನ್ವಯ ಕಲಿಕಾ ವಾತಾವರಣವನ್ನು ಉತ್ತೇಜಿಸುವಲ್ಲಿ ಶಿಕ್ಷಕರ ಸಹನಶೀಲತೆ ಎಷ್ಟು ಮುಖ್ಯ ಎಂಬುದಕ್ಕೆ ಬಮ್ಹನಪಾಲಿ ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಪಾಂಡೆ ಸರ್ ಮಾದರಿಯಾಗಿದ್ದಾರೆ. ಶಾಲೆಯು ತನ್ನ ವಿದ್ಯಾರ್ಥಿಗಳ ವಿವಿಧ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಸಮನ್ವಯತೆಯ ತತ್ವಶಾಸ್ತ್ರವನ್ನು ಅಳವಡಿಸಿಕೊಂಡಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಬಮ್ಹನಪಾಲಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನಾನು ಕಂಡುಕೊಂಡ ಅನುಭವವು ಸಮನ್ವಯ ಶಿಕ್ಷಣವು ಪರಿವರ್ತನೆಯನ್ನು ತರುವ ಸಾಮರ್ಥ್ಯವನ್ನು ಹೊಂದಿದೆ ಎಂಬ ನನ್ನ ನಂಬಿಕೆಯನ್ನು ಬಲಪಡಿಸಿತು. ವೈವಿಧ್ಯತೆಯನ್ನು ಒಪ್ಪಿಕೊಂಡು, ಸಮಾನತೆಯನ್ನು ಉತ್ತೇಜಿಸಿ, ಸಮನ್ವಯತೆಯ ಸಂಸ್ಕೃತಿಯನ್ನು ಪೋಷಿಸುವ ಮೂಲಕ ನಾವು ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಸಾಮರ್ಥ್ಯಕ್ಕನುಗುಣವಾದ ಸಾಧನೆಯನ್ನು ಮಾಡಲು ಸಾಧ್ಯವಾಗುವಂತಹ ಮೌಲ್ಯಯುತ, ಬೆಂಬಲಿತ ಮತ್ತು ಶಕ್ತಿಯುತವಾದ ಸಮಗ್ರ ಕಲಿಕಾ ಪರಿಸರವನ್ನು ಸೃಷ್ಟಿಸಬಹುದು. ನಿರಂತರವಾದ ಬದ್ಧತೆ ಮತ್ತು ಸಹಕಾರದ ಮೂಲಕ, ನಾವು ವೈವಿಧ್ಯತೆಯನ್ನು ಸಂಭ್ರಮಿಸುವ ಮತ್ತು ಎಲ್ಲಾ ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಯನ್ನು ಉತ್ತೇಜಿಸುವ ಸಮನ್ವಯ ಶೈಕ್ಷಣಿಕ ಸಮುದಾಯಗಳನ್ನು ನಿರ್ಮಿಸಬಹುದು.

ಎಲ್ಲಾ ತೊಡಕುಗಳನ್ನು ತೊಡೆದುಹಾಕಿ ಸಮಾನ ಅವಕಾಶಗಳನ್ನು ಕಲ್ಪಿಸಿದಾಗ ಸಮನ್ವಯ ಚಟವಟಿಕೆಗಳು ವಿಭಿನ್ನ ಹಿನ್ನೆಲೆ, ಸಂಸ್ಕೃತಿ ಮತ್ತು ಸಾಮರ್ಥ್ಯಗಳ ವಿದ್ಯಾರ್ಥಿಗಳಲ್ಲಿ ನಾವು, ನಮ್ಮದು, ನಮ್ಮವರು ಎಂಬ ಭಾವನೆಯನ್ನು ಬೆಳೆಸುತ್ತವೆ. ಈ ರೀತಿಯಾಗಿ ವೈವಿಧ್ಯತೆಯನ್ನು ಸಂಭ್ರಮಿಸಿದರೆ ಅದು ವಿದ್ಯಾರ್ಥಿಗಳಲ್ಲಿ ಸಹಾನುಭೂತಿ, ಅರ್ಥಮಾಡಿಕೊಳ್ಳುವಿಕೆ ಮತ್ತು ಗೌರವವನ್ನು ಪೋಷಿಸುವ ಮೂಲಕ ಸಮನ್ವಯತೆ ಮತ್ತು ಒಗ್ಗಟ್ಟಾದ ಸಮಾಜವನ್ನು ನಿರ್ಮಿಸಲು ಅಡಿಪಾಯ ಹಾಕಲು ಕೊಡುಗೆ ನೀಡುತ್ತದೆ.

ಇದಲ್ಲದೆ, ಸಮನ್ವಯ ಚಟವಟಿಕೆಗಳು ಕಳಂಕ ಮತ್ತು ಭೇದ ಭಾವವನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅವು ಸಿದ್ಧಮಾದರಿಗಳಿಗೆ ಸವಾಲು ಹಾಕುತ್ತವೆ ಮತ್ತು ಎಲ್ಲರನ್ನೂ ಒಳಗೊಳ್ಳುವ ಪರಿಸರವನ್ನು ಸೃಷ್ಟಿಸುತ್ತವೆ. ಆ ಮೂಲಕ ಪ್ರತಿಯೊಬ್ಬ ವಿದ್ಯಾರ್ಥಿಗೂ ಬೆಳೆಯುವ ಅವಕಾಶವನ್ನು ಒದಗಿಸುತ್ತವೆ.

ವಿದ್ಯಾರ್ಥಿಗಳ ಕಲಿಕೆಗೆ ಒಂದು ಪೂರಕವಾದ ತರಗತಿ ಸಂಸ್ಕೃತಿಯು ಅತ್ಯಂತ ಅಗತ್ಯವಾಗಿದೆ. ಏಕೆಂದರೆ ಅದು ವಿದ್ಯಾರ್ಥಿಗಳಿಗೆ ಸುರಕ್ಷಿತ ಭಾವ ಮತ್ತು ಬೆಂಬಲವನ್ನು ಸೂಚಿಸುವ ಜೊತೆಗೆ, ಅವರು ಕಲಿಕೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವಂತೆ ಉತ್ತೇಜಿತರಾಗುವಂತಹ ಪರಿಸರವನ್ನು ನಿರ್ಮಿಸುತ್ತದೆ.

● ಅನುವಾದ: **ನಿವೇದಿತಾ ಗೌಡ** | ಪರಿಶೀಲನೆ: **ಲತಾ ಕೆ. ಸಿ.**



**ಅನನ್ಯ ಬ್ಯಾನರ್ಜಿಯವರು** ಛತ್ತೀಸ್‌ಗಢ, ರಾಯಗಢದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದಕ್ಕೂ ಮೊದಲು ಅವರು ಪಶ್ಚಿಮ ಬಂಗಾಳದ ಬಾರ್ದಮನ್‌ನ ಸೇಂಟ್ ಕ್ಸೇವಿಯರ್ಸ್ ಕಾಲೇಜಿನ ಸಮಾಜವಿಜ್ಞಾನ ವಿಭಾಗದಲ್ಲಿ ಅಧ್ಯಾಪಕರಾಗಿದ್ದರು. ಸಮಾಜಶಾಸ್ತ್ರ ವಿಷಯದಲ್ಲಿ ಎಂಫಿಲ್ ಪದವಿ ಪಡೆದಿರುವ ಅವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಕ್ಷೇತ್ರ–ಆಧಾರಿತ ಸಂಶೋಧನೆ ಮಾಡುವುದರಲ್ಲಿ ಬಹಳ ಆಸಕ್ತಿ ಇದೆ. ಅವರನ್ನು **ananya.banerjee@azimpremjifoundation.org**, ಮೂಲಕ ಸಂಪರ್ಕಿಸಬಹುದು

# ಬೆದರಿಕೆಯಿಲ್ಲದ ಶಾಲಾ ಪರಿಸರವನ್ನು ಸ್ಥಾಪಿಸುವುದು

## ಒಂದು ತರಗತಿಯ ನಿದರ್ಶನ

ಅನಿಲ್ ಎಸ್. ಅಂಗಡಿಕಿ

VOICES

*‘ಶಾಲೆಯ ವಾತಾವರಣ ಚೆನ್ನಾಗಿದೆ, ನಮ್ಮ ಮಗುವನ್ನು ನೀವು ನಮಗಿಂತ ಹೆಚ್ಚಾಗಿ ಕಾಳಜಿ ವಹಿಸುತ್ತಿದ್ದೀರಿ, ಆದರೆ ವಿದ್ಯಾರ್ಥಿಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಅವಶ್ಯಕತೆಯಿದೆ, ಇಲ್ಲದಿದ್ದರೆ ಅವರು ಯಾರ ಸೂಚನೆಗಳನ್ನೂ ಪಾಲಿಸುವುದಿಲ್ಲ.’*

*‘ನೀವು ಮಕ್ಕಳನ್ನು ಶಿಕ್ಷಿಸುತ್ತಿಲ್ಲವಾದ್ದರಿಂದ, ನನ್ನ ಮಗು ನನಗೆ ಮರುಪ್ರಶ್ನೆ ಮಾಡಲು ಶುರುಮಾಡಿದೆ, ಅದು ಆಗಬಾರದು.’*

*‘ನಿಮ್ಮ ತರಗತಿಯಲ್ಲಿ ನಿಮಗೆ ವಿದ್ಯಾರ್ಥಿಗಳ ಮೇಲೆ ನಿಯಂತ್ರಣವಿಲ್ಲದಿದ್ದರೆ, ನೀವು ಅವರಿಗೆ ಹೇಗೆ ಕಲಿಸುತ್ತೀರಿ?’*

*‘ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕಲಿಸುವ ಸರಿಯಾದ ವಿಧಾನ ಇದಲ್ಲ, ನಾವು ಇದನ್ನು ಹಿಂದೆ ನೋಡಿಲ್ಲ; ಇದು ಅವರನ್ನು ಹಾಳು ಮಾಡಬಹುದು.’*

ಪೋಷಕ-ಶಿಕ್ಷಕರ ಸಭೆಗಳು ಅಥವಾ ಮನೆ ಭೇಟಿಗಳ ಸಮಯದಲ್ಲಿ ನಾವು ಪೋಷಕರನ್ನು ಭೇಟಿಯಾದಾಗಲೆಲ್ಲಾ ಇಂತಹ ಹೆಚ್ಚಿನ ಪ್ರತಿಕ್ರಿಯೆಗಳು ಮತ್ತು ಸಲಹೆಗಳು ಅವರಿಂದ ಬರುತ್ತವೆ. ಯಾದಗಿರಿಯ ಅಜೀಂ ಪ್ರೇಮ್‌ಜಿ ಶಾಲೆಯನ್ನು ಸ್ಥಾಪಿಸಿದ ಆರಂಭಿಕ ವರ್ಷಗಳಲ್ಲಿ ನಮ್ಮ ಶಾಲಾ ಮಕ್ಕಳನ್ನು ಭೇಟಿ ಮಾಡಿದ ಇತರ ಭಾಗೀದಾರರಿಂದಲೂ ಸಹ ಈ ರೀತಿಯ ಪ್ರತಿಕ್ರಿಯೆಗಳು ಬಂದಿದ್ದವು. (ಇದು 2012ರಲ್ಲಿ ದೇಶದಾದ್ಯಂತ ಪ್ರಾರಂಭವಾದ ಆರು ಅಜೀಮ್ ಪ್ರೇಮ್‌ಜಿ ಶಾಲೆಗಳಲ್ಲಿ ಒಂದಾಗಿದೆ). ಶಾಶ್ವತ ಶಾಲಾ ಆವರಣ ನಿರ್ಮಾಣ ಹಂತದಲ್ಲಿದ್ದ ಕಾರಣ ಗೋಡೌನ್ ಒಂದನ್ನೇ ಮಾರ್ಪಾಡುಗೊಳಿಸಿ ತರಗತಿಗಳನ್ನು ನಡೆಸಲಾಗುತ್ತಿತ್ತು.

ದೈಹಿಕ ಶಿಕ್ಷೆ, ಮಾನಸಿಕ ಕಿರುಕುಳ ಅಥವಾ ತಾರತಮ್ಯವಿಲ್ಲದ ಭಯ-ಮುಕ್ತ ವಾತಾವರಣವನ್ನು ನಾವು ಸ್ಥಾಪಿಸಲು ಹೊರಟಾಗ ಈ ಮೇಲೆ ಹೇಳಿದ ಪ್ರತಿಕ್ರಿಯೆಗಳು ಮತ್ತು ಪ್ರಶ್ನೆಗಳನ್ನು ಪದೇ ಪದೇ ಎದುರಿಸಿದೆವು. 2012ರಲ್ಲಿ, 32 ವಿದ್ಯಾರ್ಥಿಗಳು 1ನೇ ತರಗತಿಗೆ ದಾಖಲಾದರು. ಅವರೆಲ್ಲರೂ ಹತ್ತಿರದ ಹಳ್ಳಿಗಳಿಂದ ಬಂದವರು ಮತ್ತು ಅವರಲ್ಲಿ ಹೆಚ್ಚಿನವರು ಮೊದಲ ತಲೆಮಾರಿನ ಶಾಲೆಗೆ ಹೋಗುವವರಾಗಿದ್ದರು. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯಿದೆ ಅಥವಾ ಶಿಕ್ಷಣ ಹಕ್ಕು ಕಾಯಿದೆ (RTE) 2009, ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನ ಆಧಾರದ ಮೇಲೆ ಹೆಚ್ಚಿನ ಅಂಶಗಳನ್ನು ಹೊಂದಿರುವ ನಮ್ಮ ಶಾಲಾ ನೀತಿ ಮತ್ತು ಮಾರ್ಗಸೂಚಿಗಳೊಂದಿಗೆ ನಾವು ಸಜ್ಜುಗೊಂಡಿದ್ದೆವು. ಪರ್ಯಾಯ ಶಾಲೆಗಳು, ಎನ್.ಜಿ.ಓ.ಗಳು ಅಥವಾ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯೊಂದಿಗೆ ಕೆಲಸ ಮಾಡಿದ ಅನುಭವ ಹೊಂದಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಫೀಲ್ಡ್ ಇನ್‌ಸ್ಟಿಟ್ಯೂಟ್‌ನ ನಾಯಕರು ಮತ್ತು ಸಂಪನ್ಮೂಲ ವ್ಯಕ್ತಿಗಳ ಒಂದು ತಂಡವಿತ್ತು. ಅವರು ಒಂದು ನಂಬಿಕೆ ವ್ಯವಸ್ಥೆಯನ್ನು ಸ್ಥಾಪಿಸುವಲ್ಲಿ ನಮ್ಮ ಸಾಮರ್ಥ್ಯವನ್ನು ಬೆಳೆಸುವಲ್ಲಿ ನಮಗೆ ಬೆಂಬಲ ನೀಡಿದರು. ಆ ನಂಬಿಕೆ ವ್ಯವಸ್ಥೆಯು ಯಾವುದೇ ಮಗು ಒತ್ತಡ ಅಥವಾ ಭಯವಿಲ್ಲದ, ಉತ್ತಮ ಸಂಬಂಧಗಳನ್ನು ಹೊಂದಿರುವ ಮತ್ತು ಭಾಗವಹಿಸಲು/ಕೊಡುಗೆ ನೀಡಲು ಸ್ಥಿರವಾದ ಅವಕಾಶಗಳನ್ನು ಹೊಂದಿರುವ ತತ್ತ್ವವನ್ನು ಆಧರಿಸಿದೆ. ಅವರು ಆತ್ಮವಿಶ್ವಾಸವನ್ನು ಗಳಿಸುತ್ತಾರೆ ಹಾಗೂ ಕಲಿಕೆ ಮತ್ತು ಅಭಿವ್ಯಕ್ತಿಯಲ್ಲಿ ಸಮರ್ಥರಾಗುತ್ತಾರೆ. ಅಂತಹ ವಾತಾವರಣವನ್ನು ನಿರ್ಮಿಸುವ ಸಾಧ್ಯತೆಯನ್ನು ಮತ್ತು ಮಕ್ಕಳ ಕಲಿಕೆಯ ಮೇಲೆ ಅದರ ಸಕಾರಾತ್ಮಕ ಪರಿಣಾಮವನ್ನು ಪ್ರದರ್ಶಿಸಲು ಇದನ್ನು ಸಾಧಿಸುವುದು ನಮಗೆಲ್ಲರಿಗೂ ಬಹಳ ಮುಖ್ಯವಾಗಿತ್ತು.

### ನಾವು ಎದುರಿಸಿದ ಸವಾಲುಗಳು

ನಾವು ಎದುರಿಸಿದ ಮುಖ್ಯ ಅಡಚಣೆಗಳೆಂದರೆ:

- ನಾವು, ಅಧ್ಯಾಪಕ ವೃಂದವರು, ಈ ಹಿಂದೆ ಔಪಚಾರಿಕ ವ್ಯವಸ್ಥೆಗಳನ್ನು ಹೊಂದಿರುವ ಶಾಲೆಗಳಲ್ಲಿ ಕೆಲಸ ಮಾಡಿದ್ದೇವೆ ಮತ್ತು ಮಕ್ಕಳು ಕಲಿಯಲು ಮತ್ತು ಜವಾಬ್ದಾರಿಯುತ ವ್ಯಕ್ತಿಗಳಾಗಲು ಶಿಕ್ಷೆ ನೀಡುವುದು ಸಹಕಾರಿ ಎಂಬುದನ್ನು ಹೆಚ್ಚಾಗಿ ನಂಬಿದ್ದೇವೆ.
- ‘ಭಯಮುಕ್ತ’ ಶಾಲಾ ವಾತಾವರಣದ ಬಗ್ಗೆ ಯಾವುದೇ ಕಲ್ಪನೆಯನ್ನು ಹೊಂದಿರದ ಪೋಷಕರು ಈ ಸಿದ್ಧಾಂತಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದ್ದರು.
- ಶಾಲಾ ಸಿದ್ಧತೆಯಿಲ್ಲದೆ ನಮ್ಮ ಶಾಲೆಗೆ ಸೇರಿದ ಮಕ್ಕಳು ಸಂಘರ್ಷಗಳನ್ನು ಪರಿಹರಿಸಲು ಅಥವಾ ಸೂಚನೆಗಳನ್ನು ಅನುಸರಿಸಲು ಶಿಕ್ಷಕರ ಸಂವಾದದ ಪ್ರಯತ್ನಗಳನ್ನು ಬಹಳ ಕಷ್ಟಕರವಾಗಿಸಿದರು.

ನಮ್ಮ ನಿರ್ಧಾರ ಮತ್ತು ಆಚರಣೆಗಳ ಮೂಲಕ ಬದಲಾವಣೆಯನ್ನು ಉಂಟುಮಾಡಲು ನಾವು ನಮ್ಮ ನಂಬಿಕೆಗಳಲ್ಲಿ ದೃಢವಾಗಿ ಉಳಿಯಬೇಕಿತ್ತು. ಕಲಿಕೆಯ ವಾತಾವರಣವನ್ನು ಒತ್ತಡ-ಮುಕ್ತವಾಗಿಸಲು, ಮಕ್ಕಳು ಅವರ ಇಚ್ಛೆಯಂತೆ ತರಗತಿಯೊಳಗೆ ಬರುವಂತಹ ವ್ಯವಸ್ಥೆಯನ್ನು ನಾವು ನಿರ್ಮಿಸಿದ್ದೇವೆ. ಆರಂಭದಲ್ಲಿ, ನಾವು ಅವರನ್ನು ಒಳಗೆ ಕರೆದಾಗ, ಹೆಚ್ಚಿನ ಮಕ್ಕಳು ಹೊರಗೆ, ಆಟವಾಡುತ್ತಾ, ಒಂಟಿಯಾಗಿ ಕುಳಿತುಕೊಳ್ಳುತ್ತಿದ್ದರು ಅಥವಾ ಕ್ಯಾಂಪಸ್‌ನಲ್ಲಿ ಸುತ್ತಾಡುತ್ತಿದ್ದರು. ಇದು ಹಲವಾರು ಸವಾಲುಗಳನ್ನು ಮುಂದಿಟ್ಟಿತು – ಕೆಲವು ವಿದ್ಯಾರ್ಥಿಗಳು ತಮ್ಮ ಹಳ್ಳಿಗಳಿಗೆ ಹಿಂದಿರುಗಲು ಶಾಲೆಯ ಗಡಿಯನ್ನು ದಾಟಿ ಪಕ್ಕದ ಹೊಲಗಳಿಗೆ ಓಡುತ್ತಿದ್ದರು. ಅವರನ್ನು ಮರಳಿ ಕರೆತರಲು ನಾವು ಅವರ ಹಿಂದೆ ಓಡಬೇಕಾಯಿತು. ಕೆಲವು ಮಕ್ಕಳು ಆಕ್ರಮಣಕಾರಿ ಮತ್ತು ನಿಂದನೀಯ ಪದಗಳನ್ನು ಬಳಸಿದ ನಿದರ್ಶನಗಳೂ ಇದ್ದವು. ಇಂತಹ ವರ್ತನೆಗಳಿಗೆ ಈ ವಿದ್ಯಾರ್ಥಿಗಳ ಮನೆಯಲ್ಲಿ ಸಿಗುತ್ತಿದ್ದ ಪ್ರತಿಕ್ರಿಯೆಗೆ ಹೋಲಿಸಿದರೆ ಈ ಶಿಕ್ಷಕರ ನಡೆವಳಿಕೆ ಹಾಗೂ ಅವರು ತೋರುತ್ತಿದ್ದ ತಾಳ್ಮೆ ನಿಖರವಾಗಿ ವಿರುದ್ಧವಾಗಿತ್ತು. ಇದು ವಿದ್ಯಾರ್ಥಿಗಳಲ್ಲಿ ಸಕಾರಾತ್ಮಕ ಭಾವನೆಗಳನ್ನು ಮೂಡಿಸುವಲ್ಲಿ

ಪ್ರಮುಖ ಪಾತ್ರ ವಹಿಸಿತು. ನಾವು ಗುಂಪುಗಳಲ್ಲಿ ನಿಯಮಿತ ಸಂವಾದಗಳನ್ನು ಪ್ರಾರಂಭಿಸಿದೆವು ಮತ್ತು ಸಮಸ್ಯೆಯನ್ನು ಗಮನಿಸಿದಾಗಲೆಲ್ಲಾ ವರ್ತನೆಯ ಅಂಶಗಳ ಕುರಿತು ಒಂದಕ್ಕೊಂದು ಸಂವಹನ ನಡೆಸುದೆವು.. ನಾವು, ಇತರರೊಂದಿಗೆ ಹೇಗೆ ಸಂಭಾಷಿಸಬೇಕೆಂದು, ವಿಶೇಷವಾಗಿ ನಿಂದನೀಯ ಭಾಷೆಯನ್ನು ಬಳಸುವುದನ್ನು ತಪ್ಪಿಸಲು ಮತ್ತು ಸಂಘರ್ಷಗಳನ್ನು ಹೇಗೆ ಪರಿಹರಿಸುವುದು ಎಂದು ಅವರಿಗೆ ಕಲಿಸಲು ಪ್ರಾರಂಭಿಸಿದೆವು. ಲ್ಯಾಪ್‌ಟಾಪ್‌ಗಳನ್ನು ಬಳಸಿಕೊಂಡು ಸಣ್ಣ ಗುಂಪುಗಳಲ್ಲಿ ಚಲನಚಿತ್ರ ಪ್ರದರ್ಶನಗಳಂತಹ ಇತರ ಕೆಲವು ಚಟುವಟಿಕೆಗಳು; ಮತ್ತು ಕಥೆ ಹೇಳುವಿಕೆ ಮತ್ತು ಪಾತ್ರಾಭಿನಯಗಳಂತಹ ಒಳಾಂಗಣ ಚಟುವಟಿಕೆಗಳು ವಿದ್ಯಾರ್ಥಿಗಳೊಂದಿಗೆ ಸಕಾರಾತ್ಮಕ ಸಂಬಂಧವನ್ನು ನಿರ್ಮಿಸಲು ನಮಗೆ ಸಹಾಯ ಮಾಡಲು ಪ್ರಾರಂಭಿಸಿದವು. ಇದು ತರಗತಿಯೊಳಗೆ ಹೆಚ್ಚು ಸಮಯ ಕಳೆಯಲು ಕಾರಣವಾಯಿತು. ಕಾಲಕ್ರಮೇಣ ಒಂದಿಬ್ಬರು ವಿದ್ಯಾರ್ಥಿಗಳನ್ನು ಹೊರತುಪಡಿಸಿ ಬಹುತೇಕ ಎಲ್ಲರೂ ಸಮಯಕ್ಕೆ ಸರಿಯಾಗಿ ತರಗತಿಗೆ ಬಂದು ತರಗತಿ ಚಟುವಟಿಕೆಗಳಲ್ಲಿ ಭಾಗವಹಿಸತೊಡಗಿದರು.

**ಮಕ್ಕಳನ್ನು ತೊಡಗಿಸಿಕೊಳ್ಳುವುದು**

ನಾವು ಅಭಿನಯ ಗೀತೆಗಳನ್ನು ಹೇಳುವುದರ ಮೂಲಕ ಮಕ್ಕಳೊಂದಿಗೆ ತೊಡಗಿಸಿಕೊಳ್ಳಲು ಪ್ರಾರಂಭಿಸಿದೆವು. ತರಗತಿಯನ್ನು ಕಥೆ ಹೇಳುವುದು, ಚಿತ್ರ ಬಿಡಿಸುವುದು, ಮಣ್ಣಿನ ಕಲೆ ಮುಂತಾದ ಚಟುವಟಿಕೆಗಳು, ಮತ್ತು ಚಿಕ್ಕ ಸಿನಿಮಾಗಳನ್ನು ತೋರಿಸುವುದರ ಮೂಲಕ ಪ್ರಾರಂಭಿಸಿದೆವು. ಇವುಗಳನ್ನು ಎಲ್ಲಾ ವಿದ್ಯಾರ್ಥಿಗಳು ಆನಂದಿಸಿದರು. ಹೊರಾಂಗಣ ಚಟುವಟಿಕೆಗಳಲ್ಲಿ ಅವರನ್ನು ಶಾಲೆಯ ಆವರಣದ ಸುತ್ತಲೂ ಕರೆದೊಯ್ಯುವುದು (ಪ್ರಕೃತಿಯ ನಡಿಗೆ), ಚರ್ಚಿಸುವುದು ಮತ್ತು ಗಮನಿಸುವುದು, ತೋಟಗಾರಿಕೆ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ಒಳಗೊಳ್ಳುವುದು, ಗುಂಪು ಆಟಗಳು ಮತ್ತು ಆಟಗಳಿಗೆ ನಿಯಮಗಳನ್ನು ಸ್ಥಾಪಿಸುವುದು. ಅಲ್ಲದೆ, ಭಾಷೆ ಮತ್ತು ಗಣಿತದ ಪರಿಕಲ್ಪನೆಗಳಿಗಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಜಂಟಿಯಾಗಿ ಸಿದ್ಧಪಡಿಸಿದ ವಿವಿಧ ಪ್ರದರ್ಶನಗಳನ್ನು ಬಳಸುವುದು ಕಲಿಕೆಯಲ್ಲಿ ಅವರ ಭಾಗವಹಿಸುವಿಕೆಗೆ ಸಹಾಯ ಮಾಡಿತು.

ಈ ಎಲ್ಲಾ ಚಟುವಟಿಕೆಗಳು ಪಠ್ಯಕ್ರಮದ ಆಧಾರದ ಮೇಲೆ, ಆಡುವ ಮತ್ತು ಒಟ್ಟಿಗೆ ಕೆಲಸ ಮಾಡುವ ಹಾಗೂ ಪರಸ್ಪರ ಬೆಂಬಲಿಸುವ ಮತ್ತು ಸಹಾಯ ಮಾಡುವ ಮೂಲಭೂತ ಮೌಲ್ಯಗಳನ್ನು ಅಭಿವೃದ್ಧಿಪಡಿಸಲು ಸಹ ಕೊಡುಗೆ ನೀಡಿತು. ತರಗತಿ ಮತ್ತು ಸಭೆಯ ಸಂಭಾಷಣೆಗಳು ಮತ್ತು ಚರ್ಚೆಗಳ ಸಮಯದಲ್ಲಿ ಉದಾಹರಣೆಗಳ ಬಳಕೆಯು ಧನಾತ್ಮಕ ನಡೆವಳಿಕೆಗಳ ಮಹತ್ವವನ್ನು ಅರ್ಥ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಿತು.



*ಚಿತ್ರ 1. ತರಗತಿಯಲ್ಲಿ ಚಲನಚಿತ್ರ ಪ್ರದರ್ಶನ*

ಉದಾಹರಣೆಗೆ, ಬೆಳಗಿನ ಅಸೆಂಬ್ಲಿಯು ಚಟುವಟಿಕೆಗಳನ್ನು ನಿರ್ವಹಿಸುವಾಗ, ಶಾಲೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುವಾಗ, ಅನುಭವ ಹಂಚಿಕೆ ಇತ್ಯಾದಿಗಳನ್ನು ನಡೆಸುವಾಗ ವಿದ್ಯಾರ್ಥಿಗಳನ್ನು ಒಂದೇ ಸ್ಥಳದಲ್ಲಿ ಇರಿಸಲು ಪೂರಕ ಅವಕಾಶವನ್ನು ಒದಗಿಸಲಾರಂಭಿಸಿತು. ಇದು ಶಾಲೆಯ ಮುಂದಿನ ದಿನಚರಿಗಳಿಗೆ ಅವರನ್ನು ಸಿದ್ಧಗೊಳಿಸಿತು.

ತರಗತಿಯಲ್ಲಿ ಮತ್ತು ಮಧ್ಯಾಹ್ನದ ಊಟದ ಸಮಯದಲ್ಲಿ ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಕುಳಿತುಕೊಳ್ಳುವುದು; ಶಾಲೆಯ ಪರಿಸರವನ್ನು ಸ್ವಚ್ಛವಾಗಿಡಲು ಒಟ್ಟಿಗೆ ಕೆಲಸ ಮಾಡುವುದು – ಹೀಗೆ ಎಲ್ಲ ಕೆಲಸಗಳಲ್ಲೂ ಎಲ್ಲರನ್ನೂ ಸಮಾನವಾಗಿ ನೋಡುವ ಸಂಸ್ಕೃತಿಯನ್ನು ಬಿತ್ತಿ, ತಾರತಮ್ಯವನ್ನು ತಪ್ಪಿಸಿ, ಶ್ರೇಣೀಕೃತವಲ್ಲದ ಪರಿಸರವನ್ನು ಸ್ಥಾಪಿಸಿದೆವು. ಹೆಚ್ಚಿನ ಚಟುವಟಿಕೆಗಳು ಮತ್ತು ಅಭ್ಯಾಸಗಳು ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವೆ ಉತ್ತಮ ಸಂಬಂಧವನ್ನು ನಿರ್ಮಿಸಿವೆ. ವಿದ್ಯಾರ್ಥಿಗಳು ತರಗತಿಯ ಸಮಯದಲ್ಲಿ ತಮ್ಮ ಆಲೋಚನೆಗಳು ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪ್ರಾರಂಭಿಸಿದರು ಹಾಗೂ ತಮ್ಮ ಕುಟುಂಬಗಳಲ್ಲಿನ ಸವಾಲುಗಳಂತಹ ವೈಯಕ್ತಿಕ ಅನುಭವಗಳನ್ನು ಹಂಚಿಕೊಳ್ಳಲು ಪ್ರಾರಂಭಿಸಿದರು.

**ಪ್ರಕ್ರಿಯೆಗಳನ್ನು ಸ್ಥಾಪಿಸುವುದು**

ಕ್ರಮೇಣ, ನಾವು ವಿದ್ಯಾರ್ಥಿಗಳೊಂದಿಗೆ ಚರ್ಚೆಯ ಮೂಲಕ ತರಗತಿಗಳು ಮತ್ತು ಶಾಲೆಗೆ ನಿಯಮಗಳನ್ನು ಅಭಿವೃದ್ಧಿಪಡಿಸಲು ಪ್ರಾರಂಭಿಸಿದೆವು, ಉದಾಹರಣೆಗೆ, ಆಸನ ವ್ಯವಸ್ಥೆಗಳು, ಅವರಿಗೆ ನಿಗದಿಪಡಿಸಿದ ಸ್ಥಳದಲ್ಲಿ ವಸ್ತುಗಳನ್ನು ಅಚ್ಚುಕಟ್ಟಾಗಿ ಇಡುವುದು, ಕಸದಬುಟ್ಟಿಗಳನ್ನು ಬಳಸುವುದು, ಶೌಚಾಲಯಗಳನ್ನು ಸರಿಯಾಗಿ ಉಪಯೋಗಿಸುವುದು, ಮಾತನಾಡಲು ತಮ್ಮ ಸರದಿಗೆ ಕಾಯುವುದು, ನಿಂದನೀಯ ಭಾಷೆ ಬಳಸದಿರುವುದು ಅಥವಾ ಇತರರನ್ನು ಹೊಡೆಯದಿರುವುದು, ಆಹಾರವನ್ನು ವ್ಯರ್ಥ ಮಾಡದಿರುವುದು ಇತ್ಯಾದಿ. ಆರಂಭದಲ್ಲಿ, ಕೆಲವು ಸರಳ ಮತ್ತು ಪ್ರಾಯೋಗಿಕ ನಿಯಮಗಳನ್ನು ರಚಿಸಲಾಯಿತು ಮತ್ತು ತರಗತಿಯ ಒಳಗೆ ಮತ್ತು ಹೊರಗೆ ಅವನ್ನು ಪ್ರದರ್ಶಿಸಲಾಯಿತು. ಘರ್ಷಣೆಗಳು ಉಂಟಾದಾಗ ಸಂವಾದದ ಸಮಯದಲ್ಲಿ ಇದನ್ನು ಉಲ್ಲೇಖಿಸಲಾಗುತ್ತದೆ.

ನಾವೆಲ್ಲ ಶಿಕ್ಷಕರೂ, ನಮ್ಮ ಅನುಭವಗಳು, ಸವಾಲುಗಳು ಮತ್ತು ಪರಿಸ್ಥಿತಿಯನ್ನು ಸುಧಾರಿಸಲು ಏನು ಮಾಡಬಹುದು ಎಂಬುದರ ಕುರಿತು ಚರ್ಚೆಗಳಿಗಾಗಿ ನಿಯಮಿತವಾಗಿ ಗುಂಪಿನ ಸಭೆಗಳನ್ನು ನಡೆಸುತ್ತಿದ್ದೆವು. ಗಿಜುಭಾಯಿ ಬಧೇಕಾರವರ ದಿವಾಸ್ವಪ್ನ, ಟೆಟ್ಸುಕೋ ಕುರೋಯನಗಿಯವರ ಟೊಟೊ–ಚಾನ್: ದಿ ಲಿಟಲ್ ಗರ್ಲ್ ಅಟ್ ದಿ ವಿಂಡೋ, ಹೇಮರಾಜ್ ಭಟ್ ಅವರ ದಿ ಡೈರಿ ಆಫ್ ಎ ಸ್ಕೂಲ್ ಟೀಚರ್, ಎ.ಎಸ್. ನೀಲ್ ಅವರ ಸಮ್ಮರ್‌ಹಿಲ್ ಇತ್ಯಾದಿ ಪುಸ್ತಕಗಳನ್ನು ನಾವು ಗುಂಪುಗಳಲ್ಲಿ ಓದಿ ಚರ್ಚಿಸಿದೆವು. ನಾವು ಪರಸ್ಪರರ ತರಗತಿಗಳನ್ನು ಗಮನಿಸುವ ಅಭ್ಯಾಸವನ್ನು ಪ್ರಾರಂಭಿಸಿದ್ದೇವೆ ಮತ್ತು ಸಕಾರಾತ್ಮಕ ಅಂಶಗಳನ್ನು ಅರ್ಥಮಾಡಿಕೊಳ್ಳಲು ನಮ್ಮ ಸ್ವಂತ ತರಗತಿಗಳ ರೆಕಾರ್ಡಿಂಗ್‌ಗಳನ್ನು ಬಳಸುತ್ತೇವೆ, ವಿಶೇಷವಾಗಿ ಬೋಧನಾ ವಿಧಾನದ ಅಂಶಗಳನ್ನು ಅರಿಯಲು, ಮಕ್ಕಳ ಕೇಂದ್ರಿತ ಅಭ್ಯಾಸವನ್ನು ಸ್ಥಾಪಿಸಲು, ತರಗತಿಯನ್ನು ಉತ್ತಮವಾಗಿ ನಿರ್ವಹಿಸಲು ಮತ್ತು ಮಕ್ಕಳಿಂದ ಉತ್ತಮ ಭಾಗವಹಿಸುವಿಕೆಯನ್ನು ಪಡೆಯಲು ಈ ಧ್ವನಿಮುದ್ರಣವನ್ನು ಬಳಸುತ್ತೇವೆ. ನಿಯಮಿತ ಪೋಷಕ–ಶಿಕ್ಷಕರ ಸಭೆಗಳು ನಮ್ಮ ಅಭ್ಯಾಸ ಮತ್ತು ಮನೆಯಲ್ಲಿ ಪೋಷಕರ ಜವಾಬ್ದಾರಿಗಳನ್ನು ತಿಳಿಸಲು ನಿರಂತರ ಸಂವಾದವನ್ನು ನಿರ್ವಹಿಸಲು ನಮಗೆ ಸಹಾಯ ಮಾಡಿತು.

ಈ ಅಭ್ಯಾಸಗಳು ಶೈಕ್ಷಣಿಕ ವರ್ಷವಿಡೀ ಮುಂದುವರೆಯಿತು ಮತ್ತು ಶಾಲಾ ಸಂಸ್ಕೃತಿಯನ್ನು ಸ್ಥಾಪಿಸಲು ಅನುಕೂಲವಾಯಿತು. ಶಾಲೆಗೆ ಸೇರಿದ ಎರಡನೇ ತಂಡದ ವಿದ್ಯಾರ್ಥಿಗಳು ತರಗತಿಯಲ್ಲಿ ಕುಳಿತು, ಶಿಕ್ಷಕರಿಂದ ಹೆಚ್ಚಿನ ಶ್ರಮವಿಲ್ಲದೆ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರಾರಂಭಿಸಿದಾಗ ನಮಗೆಲ್ಲರಿಗೂ ಆಶ್ಚರ್ಯವಾಯಿತು. ಹಿರಿಯ ಮಕ್ಕಳ ಗುಂಪನ್ನು ಗಮನಿಸಿದ ಹೊಸ ವಿದ್ಯಾರ್ಥಿಗಳು ಇದಕ್ಕೆ ಕಾರಣವೆಂದು ನಾವು ಹೇಳುತ್ತೇವೆ, ಇದು ಶಾಲೆಯಲ್ಲಿ ಬೆದರಿಕೆಯಿಲ್ಲದ ಸಂಸ್ಕೃತಿಯನ್ನು ಸ್ಥಾಪಿಸುವ ಸಾಧ್ಯತೆಯ ಕುರಿತ ನಮ್ಮ ನಂಬಿಕೆ ಮತ್ತು ವಿಶ್ವಾಸವನ್ನು ಬಲಪಡಿಸಿತು.



*ಚಿತ್ರ 2. ತರಗತಿಯ ಹೊರಗೆ ಚಟುವಟಿಕೆಗಳನ್ನು ಆನಂದಿಸುತ್ತಿರುವ ವಿದ್ಯಾರ್ಥಿಗಳು.*

## ‘ಜವಾಬ್ದಾರಿಯೊಂದಿಗೆ ಸ್ವಾತಂತ್ರ್ಯ’

ವಿದ್ಯಾರ್ಥಿಗಳನ್ನು ಜವಾಬ್ದಾರರನ್ನಾಗಿ ಮಾಡಲು, ನಾವು ಶಾಲಾ ದಿನಚರಿಗಳನ್ನು ನಿರ್ವಹಿಸಲು ಸಮಿತಿಗಳನ್ನು ಸ್ಥಾಪಿಸುವಂತಹ ಕೆಲವು ಪ್ರಜಾಸತ್ತಾತ್ಮಕ ಆಚರಣೆಗಳನ್ನು ಜಾರಿಗೆ ತರಲು ಪ್ರಾರಂಭಿಸಿದೆವು. ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಯು ಈ ಸಮಿತಿಗಳಲ್ಲಿ ಒಂದರಲ್ಲಾದರೂ ಪಾಲ್ಗೊಳ್ಳುವುದು ಮತ್ತು ನಿರ್ಧಾರ ತೆಗೆದುಕೊಳ್ಳುವುದು, ಎಲ್ಲರಿಗೂ ಮಾಹಿತಿ ನೀಡುವುದು, ಕಾರ್ಯಗತಗೊಳಿಸುವಿಕೆಯಲ್ಲಿ ಪಾಲ್ಗೊಳ್ಳುವುದು ಮತ್ತು ಭಾವನೆಗಳನ್ನು ನಿಭಾಯಿಸುವುದು ಮತ್ತು ಸ್ಕೂಲ್ ಮಹಾಸಭಾ (ಸಾಮಾನ್ಯ ಅಸೆಂಬ್ಲಿ)ದಂತಹ ವೇದಿಕೆಗಳ ಮೂಲಕ ಸಮಸ್ಯೆ ಪರಿಹರಿಸುವಂತಹ ಜೀವನದ ಕೌಶಲಗಳ ಮೇಲೆ ಕೆಲಸ ಮಾಡುವುದರಲ್ಲಿ ತೊಡಗಿಸಿಕೊಂಡರು. ವಿದ್ಯಾರ್ಥಿಗಳು ತಮ್ಮನ್ನು ತಾವು ವ್ಯಕ್ತಪಡಿಸಲು ಅವಕಾಶವನ್ನು ಒದಗಿಸುವುದು, ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಆಚರಿಸುವುದು ಮತ್ತು ತರಗತಿಯ ಒಳಗೆ ಹಾಗೂ ಹೊರಗೆ ವಿವಿಧ ಚಟುವಟಿಕೆಗಳನ್ನು ವಿನ್ಯಾಸಗೊಳಿಸುವುದು ನಮ್ಮ ಶಾಲಾ ಸಮಾಜವನ್ನು ಸ್ಥಾಪಿಸಲು ನಮಗೆ ಸಹಾಯ ಮಾಡಿತು.

ಸಮ್ಮರ್‌ಹಿಲ್‌ನಲ್ಲಿನ ಎ.ಎಸ್. ನೀಲ್ ಅವರ ಉದಾಹರಣೆಯಂತಹ ವಿವಿಧ ಶಾಲೆಗಳ ಅನುಭವಗಳಿಂದ, ಅವರ ಕಲಿಕೆಯನ್ನು ನಮ್ಮ ಪರಿಸರಕ್ಕೆ ಏನು ಮತ್ತು ಹೇಗೆ ಅಳವಡಿಸಿಕೊಳ್ಳಬಹುದು ಎಂಬುದನ್ನು ನಾವು ನಿರ್ಣಯಿಸಿದ್ದೇವೆ. ಇದು ನಾವು ‘ಜವಾಬ್ದಾರಿಯೊಂದಿಗೆ ಸ್ವಾತಂತ್ರ್ಯ’ ಎಂದು ಪರಿಗಣಿಸುವ ರೀತಿಯಲ್ಲಿ ವಿಕಸನಗೊಂಡಿತು – ಶಿಕ್ಷಕರಾಗಿ (ಮುಖ್ಯ ಶಿಕ್ಷಕರೂ ಸೇರಿದಂತೆ), ನಾವು ಕೇವಲ ಅಭ್ಯಾಸಗಳನ್ನು ಸ್ಥಾಪಿಸುವುದಕ್ಕಷ್ಟೇ ಜವಾಬ್ದಾರರಾಗಿರದೆ, ಅದು ವಿದ್ಯಾರ್ಥಿಗಳಲ್ಲಿ ಜವಾಬ್ದಾರಿಯ ಪ್ರಜ್ಞೆ ಬೆಳೆಸುವುದಕ್ಕೂ ಜವಾಬ್ದಾರರಾಗಿರುತ್ತೇವೆ. ಸಮಿತಿಯ ಸಭೆಗಳಲ್ಲಿ ನಮ್ಮ ಮಧ್ಯಸ್ಥಿಕೆಗಳನ್ನು ನಾವು ಗಮನಿಸಿದ್ದೇವೆ ಮತ್ತು ಮಾತುಕತೆ ನಡೆಸಿದ್ದೇವೆ, ನಾವು ನಮಗೆ ಈ ರೀತಿಯ ಪ್ರಶ್ನೆಗಳನ್ನು



*ಚಿತ್ರ 3. ಹೊರಾಂಗಣ ಚಟುವಟಿಕೆಗಳು ಕಲಿಕೆಯಲ್ಲಿ ಮಕ್ಕಳ ಆಸಕ್ತಿಯನ್ನು ಉಳಿಸಿಕೊಂಡಿವೆ*



*ಚಿತ್ರ 4. ಮಕ್ಕಳ ಶಾಲಾ ಕೆಲಸವನ್ನು ಅವರ ಪೋಷಕರೊಂದಿಗೆ ಹಂಚಿಕೊಳ್ಳಲಾಗುತ್ತಿದೆ*



*ಚಿತ್ರ 5. ಮಕ್ಕಳು ಕ್ರಮೇಣ ಶಾಲಾ ದಿನಚರಿಗಳಿಗೆ ಒಗ್ಗಿಕೊಂಡರು*

ಕೇಳಿಕೊಳ್ಳುತ್ತೇವೆ: ಶಿಕ್ಷಕನಾಗಿ ನಾನು ನನ್ನ ಅಭಿಪ್ರಾಯವನ್ನು ಎಲ್ಲಿ ನೀಡಬೇಕು? ಶಾಲೆಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಸಮಿತಿಯ ನಿರ್ಧಾರಗಳ ಮೇಲೆ ನನ್ನ ಸಲಹೆಗಳು ಎಷ್ಟರ ಮಟ್ಟಿಗೆ ಪ್ರಭಾವ ಬೀರಬೇಕು?

ನಮ್ಮ ಎಲ್ಲಾ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಶಾಲೆಯಲ್ಲಿನ ಕಾಳಜಿಯುಕ್ತ ಮತ್ತು ಬೆದರಿಕೆಯಿಲ್ಲದ ಅಭ್ಯಾಸಗಳ ಬಗ್ಗೆ ಸಂತೋಷಪಟ್ಟಿದ್ದಾರೆ ಮತ್ತು ದಾಖಲಾತಿಗಳ ಸಂಖ್ಯೆ ಸಹ ಗಮನಾರ್ಹವಾಗಿ ಹೆಚ್ಚಾಗಿದೆ. ಈ ಸಂಸ್ಕೃತಿಯನ್ನು ಸೃಷ್ಟಿಸುವ ಪ್ರಯಾಣದ ಸಮಯದಲ್ಲಿ, ವಿಭಿನ್ನ ಮನಸ್ಥಿತಿಯನ್ನು ಹೊಂದಿರುವ ಕೆಲವು ಶಿಕ್ಷಕರು ಬಿಟ್ಟುಹೋದರು ಅಥವಾ ಇನ್ನು ಕೆಲವರನ್ನು ಬಿಡಲು ಕೇಳಿಕೊಳ್ಳಲಾಯಿತು. ಇದು ಈ ಹಂಚಿಕೆಯ ಗುರಿಯನ್ನು ಸಾಧಿಸಲು ಎಲ್ಲಾ ಮಧ್ಯಸ್ಥಗಾರರನ್ನು ಬೆಂಬಲಿಸಿತು. ನಮ್ಮ ಮಕ್ಕಳು ತಮ್ಮ ಉತ್ತಮ ನಡೆವಳಿಕೆ ಮತ್ತು ಆತ್ಮವಿಶ್ವಾಸದ ದೇಹಭಾಷೆಗಾಗಿ ಹೊರಗಿನವರು, ವಿಶೇಷವಾಗಿ ಇತರ ಜಿಲ್ಲೆಗಳ ಸರ್ಕಾರಿ ಶಾಲೆಗಳ ಶಿಕ್ಷಕರಿಂದ ಪ್ರಶಂಸೆಗೆ ಒಳಗಾಗಿದ್ದಾರೆ. ಈ ರೀತಿಯ ಗುರುತಿಸುವಿಕೆ ಮತ್ತು ಪ್ರತಿಕ್ರಿಯೆಯು ಈ ದಿಕ್ಕಿನಲ್ಲಿ ಹೆಚ್ಚಿನದನ್ನು ಸಾಧಿಸಲು ನಮ್ಮನ್ನು ಪ್ರೇರೇಪಿಸುತ್ತದೆ ಮತ್ತು ಅಸ್ತಿತ್ವದಲ್ಲಿರಬಹುದಾದ ಯಾವುದೇ ಅಂತರವನ್ನು ಗುರುತಿಸುವ ಮತ್ತು ತುಂಬುವ ಕೆಲಸ ಮಾಡುತ್ತದೆ.

● ಅನುವಾದ: **ಅನುರೂಪ** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**



**ಅನಿಲ್.ಎಸ್. ಅಂಗಡಿಕಿ** ಅವರು 2012 ರಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿದ್ದು, ಪ್ರಸ್ತುತ ಕರ್ನಾಟಕದ ಯಾದಗಿರಿಯಲ್ಲಿರುವ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಫೌಂಡೇಷನ್‌ಗೆ ಸೇರುವ ಮೊದಲು, ಅವರು XI ಮತ್ತು XII ತರಗತಿಗಳಿಗೆ ರಸಾಯನವಿಜ್ಞಾನವನ್ನು ಬೋಧಿಸುತ್ತಿದ್ದರು. ಅವರನ್ನು **anil.angadiki@azimpremjifoundation.org** ಮೂಲಕ ಸಂಪರ್ಕಿಸಬಹುದು.

VOICES

# ಶಾಲೆ, ಪೋಷಕರು ಮತ್ತು ಸಮುದಾಯಗಳ ನಡುವೆ ಬಲವಾದ ಸಂಬಂಧಗಳ ಸಂಸ್ಕೃತಿಯನ್ನು ರಚಿಸುವುದು

ಅರ್ಧೇಂದು ಶೇಖರ್ ದಾಶ್

ಶಾಲೆಗಳು, ಪೋಷಕರು ಮತ್ತು ಸಮುದಾಯವು ನಿಕಟವಾಗಿ ಸಹಕರಿಸಿದಾಗ ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಯನ್ನು ಉತ್ತಮವಾಗಿ ಸಾಧಿಸಬಹುದು. ಸಮುದಾಯ ಮತ್ತು ಪೋಷಕರೊಂದಿಗೆ ಬಲವಾದ ಸಂಬಂಧವನ್ನು ಬೆಳೆಸುವ ಮೂಲಕ, ಶಾಲೆಗಳು ಹೆಚ್ಚಿನ ಕಲಿಕೆಯ ಅವಕಾಶಗಳನ್ನು ನೀಡಬಹುದು ಮತ್ತು ಮೌಲ್ಯಯುತ ಸಂಪನ್ಮೂಲಗಳು ಮತ್ತು ಸ್ಥಳೀಯ ಜ್ಞಾನವನ್ನು ಪಡೆಯಬಹುದು. ಮಕ್ಕಳು ತಮ್ಮ ಕುಟುಂಬ ಮತ್ತು ಸಮುದಾಯ ದೊಂದಿಗೆ ಗಮನಾರ್ಹ ಸಮಯವನ್ನು ಕಳೆಯುವುದರಿಂದ, ಶಾಲೆಗಳು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಶಾಲಾ ಸಂಸ್ಕೃತಿಯ ಭಾಗವಾಗಿ ಪೋಷಕರು ಮತ್ತು ಸಮುದಾಯದೊಂದಿಗೆ ನಿಯಮಿತ, ರಚನಾತ್ಮಕವಾಗಿ ತೊಡಗಿಸಿಕೊಳ್ಳುವ ಯೋಜನೆಗಳ ಅಗತ್ಯವಿದೆ.

ಛತ್ತೀಸ್‌ಘಡದ ಧಮ್ತರಿಯಲ್ಲಿರುವ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ನಾವು ಪೋಷಕರು ಮತ್ತು ಸಮುದಾಯದೊಂದಿಗೆ ತೊಡಗಿಸಿ ಕೊಳ್ಳುತ್ತಿದ್ದೇವೆ. ಸಮುದಾಯವನ್ನು ಅರ್ಥ ಮಾಡಿಕೊಳ್ಳುವುದು, ಆಳವಾದ ಸಂಬಂಧಗಳನ್ನು ಬೆಳೆಸುವುದು ಮತ್ತು ನಮ್ಮ ವಿದ್ಯಾರ್ಥಿಗಳಿಗೆ ಒಂದು ಉತ್ತಮ ಕಲಿಕಾ ಪರಿಸರವನ್ನು ಸೃಷ್ಟಿಸುವುದು ನಮ್ಮ ಉದ್ದೇಶ. ಸಮುದಾಯದವರೊಂದಿಗೆ ಭೇಟಿಗಳನ್ನು ಆಯೋಜಿಸುವಾಗ, ಅವರು ಬಿಡುವಾಗಿರುವ ಸಮಯವನ್ನು ಗಣನೆಗೆ ತೆಗೆದುಕೊಳ್ಳುವುದರಿಂದ, ಭೇಟಿಗಳು ಫಲಪ್ರದವಾಗುವಂತೆ ಮಾಡಬಹುದು. ಸಕಾರಾತ್ಮಕ ಕಲಿಕೆಯ ವಾತಾವರಣವನ್ನು ಸೃಷ್ಟಿಸಲು ನಮ್ಮ ಶಾಲೆಯು ಕಳೆದ ಕೆಲವು ವರ್ಷಗಳಿಂದ ಜಾರಿಗೆ ತಂದಿರುವ ಕೆಲವು ಅಭ್ಯಾಸಗಳು ಇಲ್ಲಿವೆ. ಸಮುದಾಯದ ಸದಸ್ಯರೊಂದಿಗೆ ತಮ್ಮ ಒಳಗೊಳ್ಳುವಿಕೆಯಲ್ಲಿ ಇದು ಇತರ ಶಾಲೆಗಳಿಗೆ ಸಹಾಯ ಮಾಡುತ್ತದೆ ಎಂದು ನಾನು ಭಾವಿಸುತ್ತೇನೆ.

## ಪೋಷಕರಿಗೆ ತರಬೇತಿ

ಪ್ರತಿಯೊಬ್ಬ ತಂದೆ–ತಾಯಿಯೂ ತಮ್ಮ ಮಗುವಿಗೆ ತಾವು ಓದುವ ಶಾಲೆಯಿಂದ ಉತ್ತಮ ಶಿಕ್ಷಣ ಲಭ್ಯವಾಗಬೇಕು ಎಂದು ಹಾರೈಸುತ್ತಾರೆ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ, ಮಗುವಿನ ಕಲಿಕೆ ಮತ್ತು ಬೆಳವಣಿಗೆಯಲ್ಲಿ ಪೋಷಕರು ತಮ್ಮ ಪಾತ್ರವನ್ನು ತಿಳಿದಿರುವುದಿಲ್ಲ. ಹೆಚ್ಚಿನ ಕುಟುಂಬಗಳಲ್ಲಿ, ಪೋಷಕರು ತಮ್ಮ ಮಕ್ಕಳೊಂದಿಗೆ ಅವರ ಕಲಿಕೆ ಮತ್ತು ಪ್ರಗತಿಯನ್ನು ಚರ್ಚಿಸಲು ಸಮಯ ಕಳೆಯುವುದಿಲ್ಲ, ಹಾಗಾಗಿ ಅವರಿಗೆ ಪಠ್ಯಕ್ರಮದ ನಿರೀಕ್ಷೆಗಳು ಸಹ ಸ್ಪಷ್ಟವಾಗಿರುವುದಿಲ್ಲ. ಈ ಸವಾಲನ್ನು ದಾಟಲು, ನಾವು ಪೋಷಕರಿಗೆ ಹಲವಾರು ಅಗತ್ಯವಿರುವ ಆಧಾರಿತ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತೇವೆ.

- **ಪಠ್ಯಕ್ರಮಕ್ಕೆ ಬೆಂಬಲ:** ತಳಹದಿಯ ಹಂತದಲ್ಲಿರುವ ಮಕ್ಕಳ ಪೋಷಕರೊಂದಿಗೆ ನಾವು ವಿವಿಧ ಶ್ರೇಣಿಗಳ ಪಠ್ಯಕ್ರಮದ ನಿರೀಕ್ಷೆಗಳು, ಬೋಧನೆಯ ವಿಧಾನ ಮತ್ತು ಅವರು ಮನೆಯಲ್ಲಿ ತಮ್ಮ ಮಗುವನ್ನು ಹೇಗೆ ಬೆಂಬಲಿಸಬಹುದು ಎಂಬುದನ್ನು




*ಚಿತ್ರ 1. ಪೋಷಕರ ಕಾರ್ಯಾಗಾರ ಪ್ರಗತಿಯಲ್ಲಿದೆ.*

ಚರ್ಚಿಸುತ್ತೇವೆ. ಕಾರ್ಯಾಗಾರದ ನಂತರ, ತಮ್ಮ ಮಕ್ಕಳಿಗೆ ಶೈಕ್ಷಣಿಕ ಬೆಂಬಲವನ್ನು ನೀಡುವಲ್ಲಿ ತೊಡಗಿಸಿಕೊಂಡಿರುವ ಪೋಷಕರ ಸಂಖ್ಯೆಯಲ್ಲಿ ಹೆಚ್ಚಳವನ್ನು ನಾವು ಕಂಡಿದ್ದೇವೆ ಮತ್ತು ಪೋಷಕರು ಮನೆ-ಪಾಠ ಕೆಲಸ ಇತ್ಯಾದಿಗಳ ಕುರಿತು ಪ್ರಶ್ನೆಗಳೊಂದಿಗೆ ಶಿಕ್ಷಕರನ್ನು ಸಂಪರ್ಕಿಸಿದ್ದಾರೆ.

- **ಕಥೆ ಹೇಳುವಿಕೆ:** ಕಥೆ ಹೇಳುವುದು ಪೋಷಕರು ಮತ್ತು ಮಕ್ಕಳ ನಡುವೆ ಸಂಪರ್ಕ ಏರ್ಪಡಿಸಲು ಸುಲಭವಾದ ಮತ್ತು ಅತ್ಯಂತ ಪರಿಣಾಮಕಾರಿ ಮಾರ್ಗವಾಗಿದೆ. ನಾವು ಕಥೆ ಹೇಳುವ ಕಾರ್ಯಾಗಾರಗಳನ್ನು ನಡೆಸುತ್ತೇವೆ. ಇದರಲ್ಲಿ ನಾವು ಸನ್ನೆಗಳು, ಧ್ವನಿ ಮಾರ್ಪಡಿಸುವ ಮೂಲಕ, ರಂಗಪರಿಕರಗಳ ಬಳಕೆ ಮತ್ತು ಕಥೆಯ ಕೊನೆಯಲ್ಲಿ ಪ್ರಶ್ನೆಗಳನ್ನು ಕೇಳುವುದು ಇತ್ಯಾದಿಗಳ ಮೂಲಕ ಕಥೆ ಹೇಳುವ ಪ್ರಕ್ರಿಯೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಬಹುದು ಎಂಬುದನ್ನು ಪೋಷಕರಿಗೆ ತೋರಿಸುತ್ತೇವೆ. ನಾವು ಪೋಷಕರಿಗೆ ಕೆಲವು ಕಥೆಗಳನ್ನು ಒದಗಿಸುತ್ತೇವೆ ಮತ್ತು ಅವುಗಳನ್ನು ತಮ್ಮ ಮಕ್ಕಳಿಗೆ ಹೇಳಲು ಮತ್ತು ಅವರ ಅನುಭವಗಳನ್ನು ಹಂಚಿಕೊಳ್ಳಲು ಪ್ರೋತ್ಸಾಹಿಸುತ್ತೇವೆ. ಭಾಷಾ ಕೌಶಲಗಳ ಬೆಳವಣಿಗೆಯಲ್ಲಿ ಕಥೆ ಹೇಳುವಿಕೆಯು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ನಾವು ಅವರಿಗೆ ಹೇಳುತ್ತೇವೆ. ಕಾರ್ಯಾಗಾರದ ನಂತರ, ಪೋಷಕರು ತಾವು ಮನೆಯಲ್ಲಿ ಕಥೆ ಹೇಳಿದ ವೀಡಿಯೊಗಳನ್ನು ಹಂಚಿಕೊಳ್ಳುತ್ತಾರೆ ಮತ್ತು ವೀಡಿಯೊಗಳು ಸಕಾರಾತ್ಮಕ ಫಲಿತಾಂಶಗಳನ್ನು ಪ್ರತಿಬಿಂಬಿಸುತ್ತವೆ.
- **ಉತ್ತಮ ಅಭ್ಯಾಸಗಳು:** ಆಹಾರ ಪದ್ಧತಿ ಮತ್ತು ಮನೆ ಕೆಲಸದ ಬಗ್ಗೆ ಎಲ್ಲಾ ಪೋಷಕರಿಗೆ ತರಬೇತಿ ಕಾರ್ಯಕ್ರಮವಿದೆ. ಉತ್ತಮ ಆರೋಗ್ಯ ಮತ್ತು ಪೋಷಣೆಗಾಗಿ ಮೊಟ್ಟೆ ಮತ್ತು ಹಾಲನ್ನು ಸೇವಿಸುವುದರ ಪ್ರಾಮುಖ್ಯತೆ ಮತ್ತು ಮಕ್ಕಳ ಕಲಿಕೆಯ ಮೇಲೆ ಅದು ಬೀರುವ ಪ್ರಭಾವವನ್ನು ನಾವು ಚರ್ಚಿಸುತ್ತೇವೆ. ಧಾರ್ಮಿಕ ನಂಬಿಕೆಗಳ ಹೊರತಾಗಿಯೂ, ಹೆಚ್ಚಿನ ಪೋಷಕರು ಸಾಮಾನ್ಯವಾಗಿ ತಮ್ಮ ಮಕ್ಕಳು ಮೊಟ್ಟೆಗಳನ್ನು ಸೇವಿಸುವುದನ್ನು ಒಪ್ಪುತ್ತಾರೆ. ಅವರ ಮಗುವಿಗೆ ಮನೆಯಲ್ಲಿ ಅಧ್ಯಯನ ಮಾಡಲು ಮತ್ತು ಅವರ ಮನೆಕೆಲಸವನ್ನು ಪೂರ್ಣಗೊಳಿಸಲು ನಿರ್ದಿಷ್ಟ ಸಮಯವನ್ನು ಮೀಸಲಿಡುವ ಪ್ರಾಮುಖ್ಯತೆಯನ್ನು ನಾವು ಚರ್ಚಿಸುತ್ತೇವೆ. ಕಾರ್ಯಾಗಾರದ ನಂತರ, ಅನೇಕ ವಿದ್ಯಾರ್ಥಿಗಳು ತಮ್ಮ ಮನೆಕೆಲಸವನ್ನು ಪೂರ್ಣಗೊಳಿಸಲು ಮನೆಯಲ್ಲಿ ಕೆಲವು ಗಂಟೆಗಳನ್ನು ಮೀಸಲಿಡಲು ಪ್ರಾರಂಭಿಸುತ್ತಾರೆ.

## ಶಾಲಾ ಕಾರ್ಯಕ್ರಮಗಳಿಗೆ ಪೋಷಕರು ಮತ್ತು ಸಮುದಾಯವನ್ನು ಆಹ್ವಾನಿಸುವುದು

ಶಾಲೆಯಲ್ಲಿ ಆಯೋಜಿಸಲಾದ ಎಲ್ಲಾ ಕಾರ್ಯಕ್ರಮಗಳು ಶಾಲೆಯ ಸಂಸ್ಕೃತಿ, ಮಕ್ಕಳ ಆಸಕ್ತಿಯ ಕ್ಷೇತ್ರಗಳು ಮತ್ತು ಶಾಲೆ, ಪೋಷಕರು ಮತ್ತು ಸಮುದಾಯದ ನಡುವಿನ ಬಾಂಧವ್ಯವನ್ನು ಪ್ರದರ್ಶಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ನಮ್ಮ ಶಾಲೆಯಲ್ಲಿನ ಕಾರ್ಯಕ್ರಮಗಳು ಎಲ್ಲಾ ಪೋಷಕರು ಮತ್ತು ಸಮುದಾಯದ ಸಕ್ರಿಯ ಭಾಗವಹಿಸುವಿಕೆಗೆ ಸಾಧ್ಯವಾಗುವಂತೆ ವಿನ್ಯಾಸಗೊಳಿಸಲಾಗಿದೆ ಮತ್ತು ಅವರೆಲ್ಲರನ್ನೂ ಭಾಗವಹಿಸಲು ನಾವು ಆಹ್ವಾನಿಸುತ್ತೇವೆ.

- **ವಾರ್ಷಿಕ ಕ್ರೀಡಾ ದಿನ**ವು ನಮ್ಮ ಶಾಲೆಯ ಅತ್ಯಂತ ಉತ್ಸುಕತೆಯಿಂದ ಕಾಯುತ್ತಿರುವ ಕಾರ್ಯಕ್ರಮವಾಗಿದ್ದು, ಮಕ್ಕಳು, ಪೋಷಕರು, ಸಮುದಾಯ ಮತ್ತು ಶಿಕ್ಷಕರು ಒಟ್ಟಿಗೆ ಸೇರಿ ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ. ಇವರೆಲ್ಲರೂ ತಮ್ಮ ವಯಸ್ಸು, ಪಾತ್ರಗಳನ್ನು ಮರೆತು ಸ್ನೇಹದಿಂದ ಒಟ್ಟಿಗೆ ಆಡುತ್ತಾರೆ ಮತ್ತು ಆನಂದಿಸುತ್ತಾರೆ. ಈ ಕಾರ್ಯಕ್ರಮವು ಅವರಲ್ಲಿ ಉತ್ತಮ




*ಚಿತ್ರ 2. ಶಾಲೆಯಲ್ಲಿ ಬಾಲಶೋಧ ಮೇಳಕ್ಕೆ ಭೇಟಿ ನೀಡುತ್ತಿರುವ ಪೋಷಕರು ಮತ್ತು ಸಮುದಾಯದ ಸದಸ್ಯರು.*

ಸಂವಹನ ಮತ್ತು ಸಂಬಂಧಗಳನ್ನು ನಿರ್ಮಿಸಲು ಸಹಾಯ ಮಾಡುತ್ತದೆ. ಶಿಕ್ಷಕರು ಮತ್ತು ಸಮುದಾಯದ ನಡುವಿನ ಅಡೆತಡೆಗಳನ್ನು ಕಡಿಮೆ ಮಾಡುತ್ತದೆ ಮತ್ತು ಪೋಷಕರು ತಮ್ಮ ಅಭಿಪ್ರಾಯಗಳನ್ನು ಶಿಕ್ಷಕರೊಂದಿಗೆ ಹಂಚಿಕೊಳ್ಳಲು ಹಿತಕರ ವಾತಾವರಣವನ್ನು ಸೃಷ್ಟಿಸುತ್ತದೆ.

- **ಬಾಲಶೋಧ ಮೇಳವು** ಶಾಲೆಯ ಬೋಧನೆ-ಕಲಿಕೆ ಪ್ರಕ್ರಿಯೆಗಳನ್ನು ಪ್ರದರ್ಶಿಸುತ್ತದೆ ಮತ್ತು ಈ ಪ್ರಕ್ರಿಯೆಗಳಿಗೆ ಅದರ ಕೊಡುಗೆಯ ಮಹತ್ವವನ್ನು ಸಮುದಾಯವು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಈ ಸಂದರ್ಭದಲ್ಲಿ, ವಿವಿಧ ಶಾಲೆಗಳ ಮಕ್ಕಳು ಒಂದು ಅಥವಾ ಹೆಚ್ಚಿನ ವಿಷಯಗಳ ಮೇಲೆ ಕೆಲಸ ಮಾಡುತ್ತಾರೆ ಮತ್ತು ಮಾದರಿಗಳು, ಚಾರ್ಟ್‌ಗಳು ಮತ್ತು ಚರ್ಚೆಗಳ ಮೂಲಕ ತಮ್ಮ ತಿಳುವಳಿಕೆಯನ್ನು ಪ್ರಸ್ತುತಪಡಿಸುತ್ತಾರೆ. ಸಮಸ್ಯೆ ಮತ್ತು ಸಾಧ್ಯವಾಗಬಲ್ಲ ಪರಿಹಾರಗಳನ್ನು ಅನ್ವೇಷಿಸಲು ಮತ್ತು ಅರ್ಥ ಮಾಡಿಕೊಳ್ಳಲು ಮತ್ತು ಹೆಚ್ಚಿನ ಪ್ರೇಕ್ಷಕರಿಗೆ ಅವುಗಳನ್ನು ಪ್ರಸ್ತುತಪಡಿಸಲು ಇದು ಅವರಿಗೆ ಸಹಾಯ ಮಾಡುತ್ತದೆ. ಶಿಕ್ಷಕರು ಮತ್ತು ಸಮುದಾಯವು ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುತ್ತಾರೆ ಮತ್ತು ಕಲಿಕೆಯು ಪಠ್ಯಪುಸ್ತಕಗಳಿಗೆ ಸೀಮಿತವಾಗಿಲ್ಲ ಎಂಬುದನ್ನು ಅರಿತುಕೊಳ್ಳುತ್ತಾರೆ. ಇದು ಸ್ಥಳೀಯ ಜ್ಞಾನದ ಪ್ರಾಮುಖ್ಯತೆಯನ್ನು ಸಹ ಗಮನಕ್ಕೆ ತರುತ್ತದೆ. ಕಲಿಕೆಯು ಅವರ ನಿಜ ಜೀವನಕ್ಕೆ ಹೇಗೆ ಸಂಬಂಧಿಸಿದೆ ಮತ್ತು ಸಮಸ್ಯೆಗಳನ್ನು ಪರಿಹರಿಸುವ ವಿಭಿನ್ನ ವಿಧಾನಗಳನ್ನು ಹೊರ ತರುತ್ತದೆ. ಸಮುದಾಯದ ಸದಸ್ಯರು ವಿವಿಧ ವಿಷಯಗಳ ಬಗ್ಗೆ ಮಕ್ಕಳ ಆತ್ಮವಿಶ್ವಾಸವನ್ನು ನೋಡುವ ಮೂಲಕ ಪ್ರೇರಿತರಾಗುತ್ತಾರೆ ಮತ್ತು ಈ ಕಾರ್ಯಾಗಾರವು ಶಿಕ್ಷಣದ ಬಗ್ಗೆ ಅವರ ತಿಳುವಳಿಕೆಯನ್ನು ವಿಸ್ತರಿಸುತ್ತದೆ.

- **ರಾಷ್ಟ್ರೀಯ ಉತ್ಸವಗಳು :** ಶಾಲೆಯಲ್ಲಿ ನಡೆಸಲಾಗುವ ಎಲ್ಲಾ ರಾಷ್ಟ್ರೀಯ ಹಬ್ಬಗಳ ಆಚರಣೆಯಲ್ಲೂ ಭಾಗವಹಿಸುವಂತೆ ನಾವು ಪೋಷಕರು ಮತ್ತು ಸಮುದಾಯದ ಎಲ್ಲಾ ಸದಸ್ಯರಿಗೆ ಆಹ್ವಾನ ನೀಡುತ್ತೇವೆ. ತಮ್ಮ ಪೋಷಕರು ಮತ್ತು ಸಮುದಾಯದ ಎದುರು ತಮ್ಮ ಕೌಶಲಗಳನ್ನು ಪ್ರದರ್ಶಿಸುವುದರ ಮೂಲಕ ಮಕ್ಕಳು ಉತ್ತೇಜಿತರಾಗುತ್ತಾರೆ. ಇದರಿಂದ ಪೋಷಕರು, ಸಮುದಾಯದ ಸದಸ್ಯರು ಕೂಡಾ ಮಕ್ಕಳನ್ನು ಪ್ರೋತ್ಸಾಹಿಸುತ್ತಾರೆ.

- **ಪೋಷಕ-ಶಿಕ್ಷಕರ ಸಭೆಗಳು:** ಪ್ರತಿ ತ್ರೈಮಾಸಿಕದಲ್ಲಿ, ನಾವು ಪೋಷಕ-ಶಿಕ್ಷಕರ ಸಭೆಯನ್ನು ಆಯೋಜಿಸುತ್ತೇವೆ. ಇದರಲ್ಲಿ ಶಿಕ್ಷಕರು ಪ್ರತಿ ವಿದ್ಯಾರ್ಥಿಯ ಕಲಿಕೆಯ ಪ್ರಗತಿಯನ್ನು ಅವರ ಪೋಷಕರೊಂದಿಗೆ ಚರ್ಚಿಸುತ್ತಾರೆ. ಅವರು ತಮ್ಮ ಕೆಲವು ಅವಲೋಕನಗಳನ್ನು ಹಂಚಿಕೊಳ್ಳುತ್ತಾರೆ ಮತ್ತು ಶಾಲೆ ಹಾಗೂ ಪೋಷಕರು ಜೊತೆಗೂಡಿ ಮಗುವಿನ ಕಲಿಕೆ ಮತ್ತು ಬೆಳವಣಿಗೆಗೆ ಹೇಗೆ ಕೊಡುಗೆ ನೀಡಬಹುದು ಎಂಬುದನ್ನು ಚರ್ಚಿಸುತ್ತಾರೆ. ಶಿಕ್ಷಕರೂ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಶಾಲೆಯ ಪ್ರಯತ್ನಗಳನ್ನು ತಿಳಿಸುತ್ತಾರೆ.

- **ಶಾಲಾ ಸಮುದಾಯ ಜಾಲ ಸಭೆ:** ಈ ಸಭೆಗಳಲ್ಲಿ, ಶಾಲೆಯು ಶೈಕ್ಷಣಿಕ ಸಾಧನೆಗಳು ಮತ್ತು ಶಾಲಾ ಸುಧಾರಣಾ ಯೋಜನೆ (School Improvement Plan –SIP) ಯಲ್ಲಿ ತನ್ನ ಒಟ್ಟಾರೆ ಪ್ರಗತಿಯನ್ನು ಹಂಚಿಕೊಳ್ಳುತ್ತದೆ. ನಾವು ಸಮುದಾಯದ ನಿರೀಕ್ಷೆಗಳು ಮತ್ತು ಎಲ್ಲಾ ಮಕ್ಕಳ ಅನುಕೂಲಕ್ಕಾಗಿ ಶಾಲೆ ಮತ್ತು ಸಮುದಾಯವು ಹೇಗೆ ಒಟ್ಟಾಗಿ ಕೆಲಸ ಮಾಡಬಹುದು ಎಂಬುದನ್ನು ಚರ್ಚಿಸುತ್ತೇವೆ. ಈ ಸದಸ್ಯರು ವಿವಿಧ ಸಮುದಾಯಗಳ ಪ್ರತಿನಿಧಿಗಳಾಗಿರುವುದರಿಂದ, ಅವರು ಹಾಜರಾತಿ ಮತ್ತು ಗುರುತಿಸಲ್ಪಟ್ಟ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಹೆಚ್ಚು ಗಮನಹರಿಸುವಂತಹ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಪೋಷಕರೊಂದಿಗೆ ಸಂವಹನ ನಡೆಸುತ್ತಾರೆ. ಅವರು ಶಾಲೆಯ ಸುಗಮ ಕಾರ್ಯನಿರ್ವಹಣೆಯ ಮಾಲೀಕತ್ವವನ್ನು ತೆಗೆದುಕೊಳ್ಳುತ್ತಾರೆ ಮತ್ತು ಶಾಲೆಯ ನಂತರ ಕ್ರೀಡೆ ಮತ್ತು ಸಂಗೀತದಂತಹ ಕೌಶಲಗಳಿಗೆ ಮಕ್ಕಳು ಒಡ್ಡಿಕೊಳ್ಳುವಂತಹ ಸಮುದಾಯದ ಕೆಲವು ನಿರೀಕ್ಷೆಗಳನ್ನು ಹಂಚಿಕೊಳ್ಳುತ್ತಾರೆ.

### ಹಳ್ಳಿಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವುದು

ಶಾಲೆಯು ಸಮುದಾಯವನ್ನು ತಲುಪಲು ಮತ್ತು ಚಟುವಟಿಕೆಗಳನ್ನು ನಡೆಸಲು ಮತ್ತು ಅವರೊಂದಿಗೆ ಯೋಜಿತ ಸಂವಾದಗಳನ್ನು ನಡೆಸಲು ಕೆಲವು ವೇದಿಕೆಗಳನ್ನು ಕಂಡುಕೊಳ್ಳುವುದು ಮುಖ್ಯವಾಗಿದೆ. ಈ ಕಾರ್ಯಕ್ರಮಗಳು ಸಾಮಾಜಿಕ ಸಮಸ್ಯೆಗಳ ಅರಿವನ್ನು ಮೂಡಿಸುವುದರ ಮೇಲೆ ಕೇಂದ್ರೀಕರಿಸುತ್ತವೆ ಮತ್ತು ಹೆಚ್ಚಿನ ಪ್ರೇಕ್ಷಕರ ಮುಂದೆ ಪ್ರದರ್ಶನ ನೀಡುವಲ್ಲಿ ಆತ್ಮವಿಶ್ವಾಸವನ್ನು ಬೆಳೆಸಲು ವಿದ್ಯಾರ್ಥಿಗಳಿಗೆ ವೇದಿಕೆಯನ್ನು ಒದಗಿಸುತ್ತವೆ. ನಮ್ಮ ಶಾಲೆಯಲ್ಲಿ, ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಕೆಲವು ಪ್ರದರ್ಶನಗಳು ಸಮುದಾಯದಲ್ಲಿ ಸಾಮಾಜಿಕ ಸಮಸ್ಯೆಗಳ ಕುರಿತು ಅರಿವು ಮೂಡಿಸುವ ಉದ್ದೇಶವನ್ನು ಹೊಂದಿವೆ.

- **ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಪ್ರದರ್ಶನ:** ಸ್ವಚ್ಛ ಮತ್ತು ಆರೋಗ್ಯಕರ ಸಮಾಜಗಳ ಮಹತ್ವ ಹಾಗೂ ನಿರಂತರವಾಗಿ ಸ್ಮಾರ್ಟ್‌ಫೋನ್‌ಗಳನ್ನು ಬಳಸುವುದರಿಂದ ಉಂಟಾಗುವ ದುಷ್ಪರಿಣಾಮಗಳಂತಹ ಸಂದೇಶಗಳೊಂದಿಗೆ ನಾವು ವಿವಿಧ ಗ್ರಾಮಗಳಲ್ಲಿ ಬೀದಿ ನಾಟಕಗಳನ್ನು ಪ್ರದರ್ಶಿಸಿದ್ದೇವೆ. ಈ ಪ್ರದರ್ಶನಗಳಲ್ಲಿನ ನೃತ್ಯ ಮತ್ತು ಹಾಡುಗಳು ರಾಜ್ಯದ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಪ್ರತಿಬಿಂಬಿಸುತ್ತವೆ. ಎಲ್ಲಾ ವಯೋಮಾನದವರನ್ನು ಭಾಗವಹಿಸಲು ಮತ್ತು ಆನಂದಿಸಲು ಪ್ರೋತ್ಸಾಹಿಸುವ ಆಟಗಳು ಮತ್ತು ಚಿತ್ರ ಬಿಡಿಸುವ ಚಟುವಟಿಕೆಗಳನ್ನು ಸಹ ನಾವು ನಡೆಸುತ್ತೇವೆ. ಈ ಚಟುವಟಿಕೆಗಳಲ್ಲಿ ಕೆಲವು ವೃದ್ಧರು ತಮ್ಮ ಬಾಲ್ಯವನ್ನು ನೆನಪಿಸಿಕೊಳ್ಳುತ್ತಾ ಭಾವುಕರಾಗುವುದನ್ನು ನಾವು ನೋಡಿದ್ದೇವೆ. ಈ ಕಾರ್ಯಕ್ರಮಗಳ ಮೂಲಕ, ಸಮುದಾಯವು ಶಾಲೆಯ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುತ್ತದೆ ಮತ್ತು ಅದರೊಂದಿಗೆ ಬೆರೆಯಲು ಸಂತೋಷಪಡುತ್ತದೆ.

- **ಸಮುದಾಯ ಕಲಿಕಾ ಕೇಂದ್ರ:** ನಮ್ಮ ಸಮುದಾಯದ ಪರಿಸ್ಥಿತಿಯನ್ನು ಪರಿಗಣಿಸಿ, ನಾವು ಗಮನಿಸಿದ ಒಂದು ಸವಾಲು ಎಂದರೆ ಹೆಚ್ಚಿನ ವಿದ್ಯಾರ್ಥಿಗಳು ಶಾಲಾ ಅವಧಿಯ ನಂತರ

ಯಾವುದೇ ಶೈಕ್ಷಣಿಕ ಅಥವಾ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿಲ್ಲ ಎಂಬುದು. ಸಮುದಾಯದ ಕೆಲವು ಪ್ರಭಾವಿ ಸದಸ್ಯರ ಸಹಾಯದಿಂದ ನಾವು ಗ್ರಾಮದಲ್ಲಿ ಸಮುದಾಯ ಕಲಿಕಾ ಕೇಂದ್ರವನ್ನು (Community Learning Centre) ಸ್ಥಾಪಿಸಿದೆವು. ಅಲ್ಲಿ ಮಕ್ಕಳಿಗೆ ಕಲಿಯಲು ಮತ್ತು ಸಂಜೆ ಸಮಯದಲ್ಲಿ ಕೆಲವು ಸೃಜನಶೀಲ ಚಟುವಟಿಕೆಗಳನ್ನು ಮಾಡಲು ಸ್ಥಳಾವಕಾಶ ಸಿಗುತ್ತದೆ. ಸಮುದಾಯವು ಅಂತಹ ಕೇಂದ್ರವನ್ನು ಪ್ರಾರಂಭಿಸುವ ಮಾಲೀಕತ್ವವನ್ನು ಒಪ್ಪಿಕೊಂಡಿತು ಮತ್ತು ನಾವು ಕಥೆಪುಸ್ತಕಗಳು ಮತ್ತು ಲೇಖನ ಸಾಮಗ್ರಿಗಳನ್ನು ಒದಗಿಸಿದೆವು. 3ರಿಂದ 8ನೇ ತರಗತಿಯ ಮಕ್ಕಳು ಪ್ರತಿದಿನ ಸಂಜೆ ಸುಮಾರು ಒಂದೂವರೆ ಗಂಟೆಗಳ ಕಾಲ ಕೇಂದ್ರದಲ್ಲಿ ಸೇರಿ ತಮ್ಮ ಮನೆಕೆಲಸವನ್ನು ಪೂರ್ಣಗೊಳಿಸುತ್ತಾರೆ. ಕಥೆಗಳನ್ನು ಕೇಳುತ್ತಾರೆ ಮತ್ತು ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಮಕ್ಕಳಿಗೆ ಈ ರೀತಿಯ ಸ್ಥಳವನ್ನು ಒದಗಿಸುವುದರಿಂದ ಸಹಾಯಕ-ಕಲಿಕೆಯಲ್ಲಿ ನೆರವಾಗುತ್ತದೆ ಮತ್ತು ಮಕ್ಕಳ ಬೆಳವಣಿಗೆಯಲ್ಲಿ ಸಮುದಾಯದ ಪಾತ್ರವನ್ನು ಉತ್ತೇಜಿಸಿದಂತಾಗುತ್ತದೆ.

- **ಹಳ್ಳಿಗಳಲ್ಲಿ ಬೇಸಿಗೆ ಶಿಬಿರ:** ಬೋಧನೆ-ಕಲಿಕೆ ಪ್ರಕ್ರಿಯೆಯಲ್ಲಿ ನಿರಂತರತೆಯು ವಿದ್ಯಾರ್ಥಿಗಳಿಗೆ ಮುಖ್ಯವಾಗಿದೆ ಎಂದು ನಮಗೆ ತಿಳಿದಿದೆ. ಬೋಧನೆ ಮತ್ತು ಕಲಿಕೆಯ ನಿರಂತರತೆಯನ್ನು ಕಾಪಾಡಿಕೊಳ್ಳಲು ಮತ್ತು ಸೃಜನಶೀಲ ಚಟುವಟಿಕೆಗಳಲ್ಲಿ ರಜಾದಿನದ ಸಮಯವನ್ನು ಬಳಸಲು, ನಾವು ವಿವಿಧ ಹಳ್ಳಿಗಳಲ್ಲಿ ಬೇಸಿಗೆ ಶಿಬಿರಗಳನ್ನು ಆಯೋಜಿಸುತ್ತೇವೆ. ಸಮುದಾಯದ ಸದಸ್ಯರ ಬೆಂಬಲದೊಂದಿಗೆ, ನಾವು ಪ್ರತಿ ಗ್ರಾಮದಲ್ಲಿ ಸ್ಥಳಗಳನ್ನು ಗುರುತಿಸಿದ್ದೇವೆ. ಅಲ್ಲಿ ಹಳೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಸಹಾಯದಿಂದ ನಾವು ಈ ಶಿಬಿರಗಳನ್ನು ನಡೆಸುತ್ತೇವೆ. ನಾವು ಗಣಿತ, ಭಾಷೆ, ಕಲೆ, ಸಂಗೀತ ಮತ್ತು ದೈಹಿಕ ಶಿಕ್ಷಣದ ಕುರಿತು ವಿದ್ಯಾರ್ಥಿಗಳೊಂದಿಗೆ ಬೆಳಗ್ಗೆ ಎರಡು ಗಂಟೆಗಳ ಕಾಲ ಅಭ್ಯಾಸ ಮಾಡುತ್ತೇವೆ ಮತ್ತು ರಜಾದಿನಗಳಲ್ಲಿ ಪೂರ್ಣಗೊಳಿಸಲು ಅವರಿಗೆ ಪ್ರಾಜೆಕ್ಟ್‌ಗಳನ್ನು ನಿಯೋಜಿಸುತ್ತೇವೆ. ತಮ್ಮ ಮಕ್ಕಳ ಕಲಿಕೆಯನ್ನು ಬೆಂಬಲಿಸಲು ಶಾಲೆಯ ಈ ಪ್ರಯತ್ನಗಳನ್ನು ಸಮುದಾಯವು ಮೆಚ್ಚಿಕೊಳ್ಳುತ್ತದೆ.

### ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡುವುದು

ಸಮುದಾಯ ಮತ್ತು ವಿದ್ಯಾರ್ಥಿಗಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳುವುದು ಶಿಕ್ಷಕರಿಗೆ ತಮ್ಮ ವಿದ್ಯಾರ್ಥಿಗಳನ್ನು ತಿಳಿದುಕೊಳ್ಳಲು ಮತ್ತು ಪರಿಣಾಮಕಾರಿ ಹಾಗೂ ಸ್ಪಂದಿಸುವ ಬೋಧನಾ ಯೋಜನೆಗಳನ್ನು ರಚಿಸುವ ನಿಟ್ಟಿನಲ್ಲಿ




*ಚಿತ್ರ 3. ಹಳ್ಳಿಯೊಂದರಲ್ಲಿ ವಿದ್ಯಾರ್ಥಿಗಳಿಂದ ಬೀದಿ ನಾಟಕ ಪ್ರದರ್ಶನ.*

ನಿರ್ಣಾಯಕವಾಗಿದೆ. ಶಿಕ್ಷಕರು ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಿ ಪೋಷಕರು ಮತ್ತು ಇತರ ಕುಟುಂಬ ಸದಸ್ಯರೊಂದಿಗೆ ಸಂವಹನ ನಡೆಸುತ್ತಾರೆ ಮತ್ತು ಮನೆಯಲ್ಲಿ ವಿದ್ಯಾರ್ಥಿಗಳ ಜವಾಬ್ದಾರಿಗಳು ಹಾಗೂ ಶಾಲೆಯಲ್ಲಿ ಅವರ ಕಲಿಕೆಯ ಮೇಲೆ ಪರಿಣಾಮ ಬೀರುವ ಅಂಶಗಳಂತಹ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ನಮ್ಮ ಶಾಲೆಗೆ ಸೇರುವ ಹೊಸ ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ಬರುವ ಸನ್ನಿವೇಶದ ಒಟ್ಟಾರೆ ತಿಳುವಳಿಕೆಯನ್ನು ಪಡೆಯಲು ಸಮುದಾಯಕ್ಕೆ ಭೇಟಿ ನೀಡುತ್ತಾರೆ ಮತ್ತು ಸಂವಹನ ನಡೆಸುತ್ತಾರೆ. ಇದು ಪೋಷಕರು, ಸಮುದಾಯ ಮತ್ತು ಮಕ್ಕಳೊಂದಿಗೆ ಉತ್ತಮ ಸಂಬಂಧವನ್ನು ನಿರ್ಮಿಸಲು ಸಹಾಯ ಮಾಡುವುದಷ್ಟೇ ಅಲ್ಲದೆ ಪಾಠಗಳನ್ನು ಯೋಜಿಸಲು ಕೂಡಾ ಸಹಾಯ ಮಾಡುತ್ತದೆ.

ನಿಯಮಿತ ಮತ್ತು ಯೋಜಿತ ಮಾತುಕತೆಗಳ ಮೂಲಕ ನಾವು ಪೋಷಕರು ಮತ್ತು ಸಮುದಾಯದೊಂದಿಗೆ ನಿಕಟ ಸಂಬಂಧಗಳನ್ನು ಸ್ಥಾಪಿಸಿದ್ದೇವೆ. ಪೋಷಕರು ಮತ್ತು ಸಮುದಾಯದವರನ್ನು ಭೇಟಿಮಾಡುವುದನ್ನು ವಿದ್ಯಾರ್ಥಿಗಳೊಂದಿಗಿನ ನಮ್ಮ ಕೆಲಸದ ಒಂದು ಭಾಗವನ್ನಾಗಿ ಮಾಡಿಕೊಂಡಿರುವುದರಿಂದ, ಈಗಿರುವ ಪರಸ್ಪರ ಗೌರವ ಮತ್ತು ಬೆಂಬಲ ನಮ್ಮ ಶಾಲಾ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ.

● ಅನುವಾದ: **ಅನುರೂಪ** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**



**ಅರ್ಧೇಂದು ಶೇಖರ್ ದಾಶ್** ಅವರು ಛತ್ತೀಸ್‌ಗಢದ ಧಮ್‌ತರಿಯ ಅಜೀಂ ಪ್ರೇಮ್‌ಜಿ ಶಾಲೆಯ ಪ್ರಾಂಶುಪಾಲರಾಗಿದ್ದಾರೆ. ಇದಕ್ಕೂ ಮೊದಲು ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಅವರು ಗಣಿತದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿದ್ದಾರೆ ಮತ್ತು ಗಣಿತಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಶಿಕ್ಷಕರೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿದ್ದಾರೆ. ಗಣಿತವನ್ನು ಬೋಧಿಸಲು ಬಳಸುವ ಪರಿಕಲ್ಪನಾ ತಿಳುವಳಿಕೆ ಮತ್ತು ಶಿಕ್ಷಣ ತಂತ್ರಗಳ ಕುರಿತು ಅವರು ಕಾರ್ಯಾಗಾರಗಳನ್ನು ನಡೆಸುತ್ತಾರೆ. ಅವರು ಮಕ್ಕಳೊಂದಿಗೆ ಗಣಿತದ ಅಭ್ಯಾಸವನ್ನು ಆನಂದಿಸುತ್ತಾರೆ ಮತ್ತು ತಂತ್ರಜ್ಞಾನ ಸಂಪನ್ಮೂಲಗಳನ್ನು ಅನ್ವೇಷಿಸಲು ಮತ್ತು ವಿನ್ಯಾಸಗೊಳಿಸಲು ಆಳವಾಗಿ ಆಸಕ್ತಿ ಹೊಂದಿದ್ದಾರೆ. ಅವರು ಛತ್ತೀಸ್‌ಗಢಕ್ಕೆ ಮುಕ್ತ ದೂರ ಕಲಿಕೆ ಮತ್ತು ಪಠ್ಯಪುಸ್ತಕಗಳನ್ನು ಬರೆಯುವ ಪಠ್ಯಕ್ರಮವನ್ನು ವಿನ್ಯಾಸಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಅವರನ್ನು **arddhendu@azimpremjifoundation.org** ಮೂಲಕ ಸಂಪರ್ಕಿಸಬಹುದು

# ಓದುವ ಸಂಸ್ಕೃತಿಯನ್ನು ಬೆಳೆಸುವುದು

## ಗ್ರಾಮೀಣ ಶಾಲೆಯೊಂದರ ಯಶೋಗಾಥೆ

ಮೆಲೊಡಿ ಕ್ವಲಕ್ಸೋ

VOICES

ಓದುವುದು ಕೇವಲ ಕಲಿಕೆಗಾಗಿ ಮಾಡುವಂತಹುದಲ್ಲ, ಓದುವುದರ ಮೂಲಕ ಖುಷಿ, ಮನೋರಂಜನೆಯನ್ನು ಗಳಿಸುತ್ತೇವೆ, ಹಾಗೂ ಓದುವಿಕೆಯಿಂದ ಚಿಕಿತ್ಸಾತ್ಮಕ ಪರಿಣಾಮವನ್ನು ಸಹ ನಾವು ಹೊಂದುತ್ತೇವೆ. ಓದುವುದರ ಮೂಲಕ ನಾವು ಹೊಸ ಪದಗಳನ್ನು ಹಾಗೂ ಕೌಶಲಗಳನ್ನು ಪಡೆಯಲು ಸಹಾಯಕವಾಗುತ್ತದೆ. ವಿಮರ್ಶಾತ್ಮಕವಾಗಿ ಚಿಂತಿಸುವ ಸಾಮರ್ಥ್ಯವನ್ನು ಅದು ನೀಡುವುದಲ್ಲದೆ, ನಮ್ಮ ಧೋರಣೆಗಳಿಗೆ ಸವಾಲನ್ನು ಒಡ್ಡುತ್ತದೆ, ಹೊಸ ದೃಷ್ಟಿಕೋನಗಳಿಗೆ ನಮ್ಮನ್ನು ಪರಿಚಯಿಸುತ್ತದೆ, ನಮ್ಮ ಕಲ್ಪನಾ ಶಕ್ತಿಯನ್ನು ಉದ್ದೀಪಿಸುತ್ತದೆ, ಕುತೂಹಲ ಹಾಗೂ ದೇಶದಾದ್ಯಂತ ಇರುವ ವಿಭಿನ್ನ ನಂಬಿಕೆಗಳು ಹಾಗೂ ಸಂಸ್ಕೃತಿಗಳನ್ನು ಶೋಧಿಸಲು ನಮ್ಮನ್ನು ಉತ್ತೇಜಿಸುತ್ತದೆ.

ಏಕಲವ್ಯ ಫೌಂಡೇಷನ್ ಮಕ್ಕಳ ಸಾಹಿತ್ಯದ ಪುಸ್ತಕಗಳನ್ನು ಮಧ್ಯಪ್ರದೇಶದ ಪಿಪರಿಯಾ ವಿಭಾಗದ ಗ್ರಾಮೀಣ ಪ್ರದೇಶದಲ್ಲಿರುವ ಕೆಲವು ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಹಾಗೂ ಮೊಹಲ್ಲಾ ಕಲಿಕಾ ಚಟುವಟಿಕಾ ಕೇಂದ್ರಗಳಿಗೆ (ಮೊ ಕ ಚ ಕೇ) ನೀಡುತ್ತದೆ. 1 ರಿಂದ 5ನೇ ತರಗತಿಯವರೆಗೆ ನೀಡಲಾಗಿರುವ ಈ ಪುಸ್ತಕಗಳು, ಆಯ್ದ ಹಿಂದಿ, ಇಂಗ್ಲೀಷ್ ಹಾಗೂ ದ್ವಿಭಾಷಾ ಕತೆ ಪುಸ್ತಕಗಳು ಹಾಗೂ ಕವನಗಳನ್ನು ಒಳಗೊಂಡಿದೆ. ಏಕಲವ್ಯ ಪ್ರಕಾಶನ, ಪ್ರಥಮ್ ಪುಸ್ತಕಗಳು, ಮುಸ್ಕಾನ್ ಫೌಂಡೇಷನ್, ಎಕ್ತಾರ ಪ್ರಕಾಶನ ಹೀಗೆ ಅನೇಕ ಪ್ರಕಾಶಕರು ಹೊರತಂದಿರುವ ಪುಸ್ತಕಗಳು ಮತ್ತು ಕವನಗಳಿವು.

ಮೊ ಕ ಚ ಕೇ ತಂಡದ ಭಾಗವಾಗಿ, ನಾವು ಮಧ್ಯಪ್ರದೇಶದ ಪಿಪರಿಯಾ ವಿಭಾಗದ ಸಿಲರಿ ಗ್ರಾಮದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಸಮುದಾಯದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸುವ ಕೆಲಸವನ್ನು ಕೈಗೆತ್ತಿಕೊಂಡೆವು.

### ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗಾಗಿ ಬಾಲಮೇಳ

ಈ ಮೊದಲು ಸ್ವಯಂಸೇವಕರ ಮನೆಯಲ್ಲಿ ನಡೆಸಲಾಗುತ್ತಿದ್ದ ಮೊ ಕ ಚ ಕೇಂದ್ರವನ್ನು ಈಗ ಸರ್ಕಾರಿ ಶಾಲೆಗೆ ವರ್ಗಾಯಿಸಲಾಗಿದೆ. ನಮ್ಮ ಕೆಲಸದ ಭಾಗವಾಗಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಹೆಚ್ಚು ಪುಸ್ತಕಗಳನ್ನು ಓದಲು ಪ್ರೋತ್ಸಾಹಿಸಬೇಕಾಗಿತ್ತು. ಓದುವ ಆಸಕ್ತಿಯನ್ನು ಸೃಷ್ಟಿಸಲು ನಾವು ಮೊದಲು ಕೈಗೊಂಡ ಕೆಲಸವೆಂದರೆ ಬಾಲಮೇಳವೊಂದನ್ನು ಆಯೋಜಿಸಿ, ಆ ಮೂಲಕ ಪುಸ್ತಕಗಳು ಹಾಗೂ ಓದಿನ ಸುತ್ತ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.

ಈ ಮೇಳದಲ್ಲಿ, ಅನೇಕ ಪುಸ್ತಕಗಳನ್ನು ಪ್ರದರ್ಶನಕ್ಕೆ ಇಡಲಾಯಿತು. ಅವುಗಳಲ್ಲಿ ದೊಡ್ಡ ಪುಸ್ತಕಗಳು, ಸಣ್ಣಕತೆಗಳು, ಕವನಗಳು, ಚಿತ್ರಗಳಿರುವ ಪುಸ್ತಕಗಳು, ದ್ವಿಭಾಷಾ ಪುಸ್ತಕಗಳು ಸೇರಿದಂತೆ ವಿವಿಧ ಪುಸ್ತಕಗಳು ಇದ್ದವು. ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಅವುಗಳನ್ನು ತಾವೇ ಸ್ವತಃ ನೋಡಲು ಅವರಿಗೆ ಮುಕ್ತ ಅವಕಾಶವನ್ನು ಮಾಡಿಕೊಡಲಾಯಿತು. ಇದರೊಡನೆ ನಾವು ಪುಸ್ತಕ ಕೇಂದ್ರಿತ ಅನೇಕ ಚಟುವಟಿಕೆಗಳನ್ನು ಆಯೋಜಿಸಿದೆವು, ಅವುಗಳೆಂದರೆ



*ಚಿತ್ರ 1. ಕಥೆ ಪುಸ್ತಕವೊಂದನ್ನು ಓದಿದ ನಂತರ ವಿದ್ಯಾರ್ಥಿಯೊಬ್ಬ ಬರೆದ ಚಿತ್ರ*

ಜೋರಾಗಿ ಪುಸ್ತಕಗಳನ್ನು ಓದುವುದು, ಹಾವ-ಭಾವಗಳೊಡನೆ ಹಾಡು/ಅಭಿನಯಗೀತೆ ಹೇಳುವುದು, ಕತೆ ಹೇಳುವುದು, ಪುಸ್ತಕದ ಬಗ್ಗೆ ಮಾತನಾಡುವುದು, ಚಿತ್ರ ಬಿಡಿಸುವುದು, ಕತೆಯೊಂದನ್ನು ಪೂರ್ಣಗೊಳಿಸುವುದು, ಪಾತ್ರಾಭಿನಯ, ಚಿತ್ರ ರಚಿಸಿ ಪದವೊಂದನ್ನು ಊಹಿಸುವ ಆಟ, ನಿಧಿ ಹುಡುಕುವುದು ಇತ್ಯಾದಿ. ಚಟುವಟಿಕೆಗಳು ನಡೆಯುವ ಸಮಯದಲ್ಲಿ, ಅನೇಕ ಪ್ರಶ್ನೆಗಳು ಹಾಗೂ ವಿವರಣೆಗಳನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಕೇಳಿ ಪಡೆದುಕೊಂಡರು. ಎಲ್ಲರೂ ಉತ್ಸಾಹದಿಂದ ಪ್ರತಿಯೊಂದು ಚಟುವಟಿಕೆಯಲ್ಲೂ ಸಕ್ರಿಯವಾಗಿ ಭಾಗವಹಿಸಿದರು. ಇಂತಹ ಚಟುವಟಿಕೆಗಳನ್ನು ಮೊ ಕ ಚ ಕೇ, ಬೇರೆ ಸಮಯದಲ್ಲೂ ನಡೆಸುತ್ತದೆ.

ಮೇಳ ಮುಗಿದ ನಂತರ ನಾವು ಶಿಕ್ಷಕರೊಂದಿಗೆ ನಡೆಸಿದ ಚಟುವಟಿಕೆಗಳ ಬಗ್ಗೆ ಚರ್ಚಿಸಿದೆವು, ಅವುಗಳ ಹಿಂದಿರುವ ವಿಚಾರಗಳು ಈ ಚಟುವಟಿಕೆಗಳು ಹೇಗೆ ಕಲಿಕೆ ಹಾಗೂ ಓದುವ ಪ್ರೀತಿಯನ್ನು ಬೆಳೆಸಬಲ್ಲದೆಂಬುದರ ಬಗ್ಗೆ ಪರಸ್ಪರ ಸಂವಾದ ನಡೆಸಿದೆವು. ಈ ಚಟುವಟಿಕೆಗಳನ್ನು ನಾವು ಹೇಗೆ ಯೋಜಿಸಿದೆವು, ಪ್ರತಿ ಚಟುವಟಿಕೆಗೆ ಸರಿಹೊಂದುವ ಪುಸ್ತಕಗಳನ್ನು ಹೇಗೆ ಗುರುತಿಸುವುದು ಎಂಬುದರ ಬಗ್ಗೆ ನಮ್ಮ ಒಳನೋಟಗಳನ್ನು ಸಹ ಅವರೊಂದಿಗೆ ಹಂಚಿಕೊಂಡೆವು; ಇದಲ್ಲದೆ ನಿಧಿ ಹುಡುಕುವ ಆಟಕ್ಕೆ ಬೇಕಾದ ಸುಳಿವುಗಳನ್ನು ಹೇಗೆ ಸೃಷ್ಟಿಸಬಹುದೆಂದು ಕೂಡ ಚರ್ಚಿಸಿದೆವು.

ಶಿಕ್ಷಕರು ಕುತೂಹಲ ಹಾಗೂ ಕಲಿಯುವ ಉತ್ಸಾಹದಿಂದ ಕೂಡಿದ್ದರು. ಶಾಲೆಗೆ ಪುಸ್ತಕಗಳನ್ನು ನೀಡಲಾಗಿದ್ದರೂ, ಅವುಗಳನ್ನು ಹೇಗೆ ಬಳಸಬೇಕೆಂಬುದು ನಮಗೆ ತಿಳಿದಿರಲಿಲ್ಲವೆಂಬ ಅಂಶವನ್ನು ಅವರು ಹಂಚಿಕೊಂಡರು. ವಿದ್ಯಾರ್ಥಿಗಳಿಗೆ ಈಗಾಗಲೇ ಅನೇಕ ಪಠ್ಯ ಪುಸ್ತಕಗಳು ಹಾಗೂ ಬರೆಯಲು ಅಭ್ಯಾಸ ಪುಸ್ತಕಗಳಿದ್ದು, ಬೇರೆ ಪುಸ್ತಕಗಳನ್ನು ಓದಲು, ಇಲ್ಲವೆ ಶೋಧಿಸಲು ಸಮಯವಿರುವುದಿಲ್ಲವೆಂದು ಹೇಳಿದರು. ಶಿಕ್ಷಕರಿಗೆ ಇದ್ದಂತಹ ಬಹಳ ದೊಡ್ಡ ಭಯವೇನೆಂದರೆ ಮಕ್ಕಳು ಪುಸ್ತಕಗಳನ್ನು ಸರಿಯಾಗಿ ನೋಡಿಕೊಳ್ಳದೆ ಇದ್ದಾಗ, ಅವು ಹಾಳಾಗುತ್ತವೆ, ಆಗ ಆಡಳಿತವರ್ಗದವರಿಗೆ ನಾವು ಉತ್ತರವನ್ನು ನೀಡಬೇಕಾಗುತ್ತದೆ ಎಂಬುದು. ಈ ಕಾರಣದಿಂದಲೇ ಪುಸ್ತಕಗಳನ್ನು ಒಳಗೆ ಇಟ್ಟು, ಮಕ್ಕಳು ಅದನ್ನು ಬಳಸಲು ನೀಡದೆ ಇರುವುದಾಗಿಯೂ ಹೇಳಿದರು.

ಮಕ್ಕಳು ಪುಸ್ತಕಗಳನ್ನು ಹಾಳು ಮಾಡುವುದರಿಂದ ಆಗುವ ಪರಿಣಾಮದ ಬಗ್ಗೆ ಇರುವ ಈ ಭಯವನ್ನು ಮೊದಲು ನಾವು ಹೋಗಲಾಡಿಸಬೇಕಾಯಿತು. ಆದರೆ ಇದನ್ನು ಒಮ್ಮೆಗೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ, ಶಿಕ್ಷಕರೊಡನೆ ನಾವು ಆಗಾಗ ಸಂವಾದವನ್ನು ನಡೆಸಿ, ಪುಸ್ತಕಗಳನ್ನು ಓದುವುದರಿಂದ ಆಗುವ ಅನುಕೂಲತೆಗಳು, ಮಕ್ಕಳ ಕಲಿಕೆಗೆ ಅದು ಹೇಗೆ ನೆರವಾಗುತ್ತದೆ ಎಂಬುದನ್ನು ವಿವರಿಸಿದೆವು. ನಮ್ಮ ಶಾಲಾ ಭೇಟಿಯ ಸಮಯದಲ್ಲಿ ಶಿಕ್ಷಕರಿಗೆ ಹಾಗೂ ಮುಖ್ಯ ಶಿಕ್ಷಕರಿಗೆ ಪುಸ್ತಕಗಳನ್ನು ಕುರಿತಾದ ಹೆಚ್ಚಿನ ಚಟುವಟಿಕೆಗಳನ್ನು ನಡೆಸಿ, ಪುಸ್ತಕಗಳ ಅನೇಕ ಪ್ರಕಾರಗಳು ಹಾಗೂ ವರ್ಗಗಳನ್ನು ಪರಿಚಯಿಸಿದೆವು.

ಇವೆಲ್ಲಾ ಪ್ರಯತ್ನಗಳ ಫಲಿತಾಂಶವಾಗಿ ನಾವು ಶಾಲೆಗಳಿಗೆ ಭೇಟಿ ನೀಡಿದಾಗ ಶಿಕ್ಷಕರು ನಾವು ಹಂಚಿಕೊಂಡಿರುವ ಕೆಲವು ಪುಸ್ತಕ ಚಟುವಟಿಕೆಗಳನ್ನು ಶಾಲೆಯಲ್ಲಿ ಮಾಡುತ್ತಿರುವುದನ್ನು ನೋಡಿದೆವು. ಮಕ್ಕಳು ಪುಸ್ತಕಗಳನ್ನು ಹಾಳು ಮಾಡುತ್ತಾರೆಂಬ ಚಿಂತೆಯಿಂದ ಮಕ್ಕಳು ಪುಸ್ತಕಗಳನ್ನು ಓದಲು ಬಿಡದೆ ಇರುತ್ತಿದ್ದ ಪರಿಸ್ಥಿತಿ ಈಗ ಬದಲಾಗಿದೆ. ಅವರೆಲ್ಲರೂ ಮಕ್ಕಳ ಸಾಹಿತ್ಯವನ್ನು ಆಸ್ವಾದಿಸುತ್ತಿದ್ದಾರೆ; ಮುಖ್ಯ ಶಿಕ್ಷಕರು ಮಕ್ಕಳಿಗಾಗಿ ಕತೆಗಳನ್ನು ಬರೆಯಲು ಪ್ರಾರಂಭಿಸಿದ್ದಾರೆ.

ಈಗ ವಿದ್ಯಾರ್ಥಿಗಳು ಪುಸ್ತಕ ಚಟುವಟಿಕೆಗಳನ್ನು ನಡೆಸುವ ನಾಯಕತ್ವವನ್ನೂ ಸಹ ವಹಿಸಿಕೊಂಡಿದ್ದಾರೆ. ಪುಸ್ತಕಗಳನ್ನು ಒಳ್ಳೆಯ ಸ್ಥಿತಿಯಲ್ಲಿಟ್ಟುಕೊಳ್ಳುವ ಜವಾಬ್ದಾರಿಯನ್ನೂ ತೆಗೆದುಕೊಂಡಿದ್ದಾರೆ, ಇದಲ್ಲದೆ ಹರಿದು ಹೋದ ಇಲ್ಲವೆ ಹಾಳಾದ ಪುಸ್ತಕಗಳನ್ನು ಪುನಃ ಹೊಲಿದು ಸರಿ ಪಡಿಸಲು 'ಪುಸ್ತಕ ಆಸ್ಪತ್ರೆಯನ್ನು' ಪ್ರಾರಂಭಿಸಿದ್ದಾರೆ. ಪುಸ್ತಕಗಳನ್ನು ಮನೆಗೆ ಒಯ್ಯಬೇಕಾದಲ್ಲಿ ಮೊದಲು ರಿಜಿಸ್ಟರಲ್ಲಿ ಹೆಸರಿನೊಂದಿಗೆ ತಮ್ಮ ವಿವರಗಳನ್ನು ಬರೆದು ತೆಗೆದುಕೊಂಡು ಹೋಗುವ ವ್ಯವಸ್ಥೆಯನ್ನು ಜಾರಿಗೊಳಿಸಿದ್ದಾರೆ. ಅವರು ಮಾಡಿರುವ




*ಚಿತ್ರ 2. ಸಿಲರಿಯ ಗ್ರಾಮ ಪಂಚಾಯತಿಯಲ್ಲಿ ಸಮುದಾಯಕ್ಕಾಗಿ ಓದುವ ಮೇಳ*

ಬರಹಗಳು ಹಾಗೂ ಚಿತ್ರಗಳನ್ನು ಗೋಡೆಗಳ ಮೇಲೆ ಅಂಟಿಸಿ ಪ್ರದರ್ಶಿಸಲಾಗಿದೆ. ಮಕ್ಕಳ ಶೈಕ್ಷಣಿಕ ಮುನ್ನಡೆಯು ಗೋಚರವಾಗುವ ಹಾಗೆ ಆಗಿದೆ, ಹೀಗಾಗಿ ಅವರ ಆತ್ಮಸ್ಥೈರ್ಯವೂ ಸುಧಾರಿಸಿದೆ, ಅವರ ಬರವಣಿಗೆ, ಆಲೋಚನೆಗಳು ಹಾಗೂ ಸಂವಾದದಲ್ಲಿ ಬದಲಾದ ದೃಷ್ಟಿಕೋನವನ್ನು ನೋಡಬಹುದಾಗಿದೆ. ಇದೆಲ್ಲಕ್ಕಿಂತ ಮಿಗಿಲಾಗಿ, ಮಕ್ಕಳು ಪುಸ್ತಕಗಳನ್ನು ಎರವಲು ಪಡೆದು ಮನೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ, ಮನೆಯಲ್ಲಿರುವವರೂ ಸಹ ಪುಸ್ತಕಗಳನ್ನು ಓದುವ ಅವಕಾಶವನ್ನು ಹೊಂದಿದ್ದಾರೆ.

### ಸಮುದಾಯಕ್ಕಾಗಿ ಓದಿನ ಮೇಳ

ಓದುವ ಸಂಸ್ಕೃತಿಯನ್ನು ಶಾಲೆಯನ್ನು ಮೀರಿ ಸಿಲರಿ ಗ್ರಾಮದ ಸಮುದಾಯಕ್ಕೆ ತಲುಪಿಸಲು, ವಿದ್ಯಾರ್ಥಿಗಳ ಪೋಷಕರ ಸಭೆಯೊಂದನ್ನು ನಾವು ಕರೆದೆವು. ಆ ಸಭೆಯಲ್ಲಿ ಓದಿನ ಪ್ರಾಮುಖ್ಯತೆಯನ್ನು ತಿಳಿಸುವುದಲ್ಲದೆ, ಮೊ ಕ ಚ ಕೇಂದ್ರಗಳಲ್ಲಿ ನಾವು ದಿನನಿತ್ಯ ನಡೆಸುವ ಓದಿನ ಚಟುವಟಿಕೆಗಳ ಯೋಜನೆಯನ್ನು ಅವರೊಂದಿಗೆ ಹಂಚಿಕೊಂಡೆವು, ಅವುಗಳ ಹಿಂದಿನ ಉದ್ದೇಶ ಹಾಗೂ ಪರಿಣಾಮವನ್ನು ಅವರಿಗೆ ತಿಳಿಸಿದೆವು. ಈ ಚಟುವಟಿಕೆಗಳ ಫಲವಾಗಿ ಮಕ್ಕಳಲ್ಲಾಗಿರುವ ಕಲಿಕೆ ಹಾಗೂ ಮುನ್ನಡೆಯನ್ನು ಅವರೊಂದಿಗೆ ಹಂಚಿಕೊಂಡೆವು.

ಪುಸ್ತಕಗಳ ಕುರಿತಾಗಿ ಅವರ ಆಸಕ್ತಿಯನ್ನು ಕೇಳಿದಾಗ, ಅವರ ಪ್ರತಿಕ್ರಿಯೆ (1) ನಮಗೆ ಓದುವ ಆಸಕ್ತಿ ಇದೆ ಆದರೆ ನಮಗೆ ಓದಲು ಪುಸ್ತಕಗಳು ದೊರೆಯುವುದಿಲ್ಲ (2) ನಾವು ಅನಕ್ಷರಸ್ಥರು, ನಮ್ಮ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ, ಅಷ್ಟು ಸಾಕು ನಮಗೆ (3) ನಾವು ದಿನಗೂಲಿ ಮಾಡುವವರು, ನಮಗೆ ಓದಲು ಸಮಯವಿಲ್ಲ, ಅಥವಾ (4) ಪುಸ್ತಕಗಳನ್ನು ಓದುವುದರಿಂದ ನಮಗೆ ಯಾವುದೇ ಪ್ರಯೋಜನ ಇಲ್ಲ.

ಇವುಗಳಿಗೆ ನಮ್ಮ ಬಳಿ ತಕ್ಷಣದ ಉತ್ತರಗಳಿರಲಿಲ್ಲ. ಅದರ ಬದಲು, ನಾವು 'ಓದಿನ ಮೇಳ'ವನ್ನು ಸಿಲರಿ ಗ್ರಾಮ ಪಂಚಾಯತಿ ಕಛೇರಿಯಲ್ಲಿ ಹಮ್ಮಿಕೊಂಡೆವು. ಪೋಷಕರು, ಸಮುದಾಯದವರು, ಗ್ರಾಮದ ಅಧ್ಯಕ್ಷರು ಹಾಗೂ ಸಚಿವರು ಇದರಲ್ಲಿ ಭಾಗವಹಿಸಿದರು. ಅವರು ಸುಲಭವಾಗಿ ಭಾಗವಹಿಸಬಹುದಾದ ಹಲವಾರು ಪುಸ್ತಕದ ಚಟುವಟಿಕೆಗಳನ್ನು ಅದರಲ್ಲಿ ಆಯೋಜಿಸಿದ್ದೆವು. ಜೋರಾಗಿ ಓದಿ ಹೇಳುವ ಚಟುವಟಿಕೆಗಾಗಿ ಭುಂದೇಲ್‌ಕಂಡಿನ ಜಾನಪದ ಕತೆಗಳ ಸಂಗ್ರಹವಾದ ಮಿಜ್ಬಾನ್ ಅನ್ನು ಆರಿಸಿಕೊಂಡೆವು, ಕಾರಣ ಆ ಭಾಗದಲ್ಲಿ ಅವರು ಆ ಭಾಷೆಯಲ್ಲೇ ಹೆಚ್ಚಾಗಿ ಮಾತನಾಡುತ್ತಾರೆ. ಇನ್ನೊಂದು 'ಸಹಯೋಗದ ಕಲೆ' ಎಂಬ ವಿನೋದದ ಚಟುವಟಿಕೆ, ಇದರಲ್ಲಿ ಪ್ರತಿಯೊಬ್ಬರು ಬೇರೆಯವರು ರಚಿಸಿದ ಚಿತ್ರಕ್ಕೆ ಸಂಬಂಧಿಸುವಂತೆ ಇನ್ನೊಂದು ಚಿತ್ರವನ್ನು ರಚಿಸುವಂತೆ ಹೇಳಲಾಯಿತು. ಅವರೆಲ್ಲರು ಪರಸ್ಪರ ಚರ್ಚಿಸುತ್ತಾ, ಪ್ರಶ್ನೆಗಳನ್ನು ಕೇಳುತ್ತಾ ಹಾಗೂ ಪುಸ್ತಕಗಳನ್ನು ಶೋಧಿಸುತ್ತಾ ಸಂತಸದಿಂದ ಅದರಲ್ಲಿ ಭಾಗಿಯಾಗಿದ್ದನ್ನು ನಾವು ನೋಡಿದೆವು. ಮೇಳ ಮುಗಿದ ನಂತರ, ನೀವೆಲ್ಲರೂ ಪುಸ್ತಕಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಓದುವ ಆಸಕ್ತಿ ಇದೆಯೆ? ಎಂದು ಅವರನ್ನು ಕೇಳಿದಾಗ, ಯಾರೂ ಸಹ ಮುಂದೆ ಬರಲಿಲ್ಲ.

ಕೆಲವು ತಿಂಗಳ ನಂತರ, ಪೋಷಕರ ಸಭೆಯಲ್ಲಿ ಪುನಃ ಅದೇ ಚಟುವಟಿಕೆಗಳನ್ನು ನಡೆಸಿದೆವು. ಈ ಬಾರಿ, ಪೋಷಕರೇ ಕೆಲವು ಪುಸ್ತಕಗಳನ್ನು ಮನೆಗೆ ತೆಗದುಕೊಂಡು ಹೋಗಲು ಅನುಮತಿ ಕೇಳಿದರು. ನಾನು ಕಾಯುತ್ತಿದ್ದ ಕ್ಷಣ ಕೊನೆಗೂ ನಿಜವಾಯಿತು! ಪ್ರಸ್ತುತವಾಗಿ, ಸಿಲರಿ ಗ್ರಾಮದಲ್ಲಿ ಸ್ವಯಂ ಸೇವಕರು ನಡೆಸುತ್ತಿರುವ ಸಣ್ಣದೊಂದು ಸಮುದಾಯ ಗ್ರಂಥಾಲಯವಿದೆ. ಸಮುದಾಯ ದವರು ಪುಸ್ತಕಗಳನ್ನು ಅಲ್ಲಿಂದ ಎರವಲು ಪಡೆದು ಓದುತ್ತಿದ್ದಾರೆ.

ವಿಸ್ತಾರವಾದ ಪಠ್ಯಕ್ರಮವನ್ನು ಮುಗಿಸಬೇಕು ಅಥವಾ ವಿದ್ಯಾರ್ಥಿಗಳು ಪುಸ್ತಕಗಳನ್ನು ಹಾಳು ಮಾಡುತ್ತಾರೆಂಬ ಸ್ಥಿತಿಯಿಂದ, ಓದಿನ ಪ್ರಾಮುಖ್ಯತೆಯನ್ನು ಅರಿತು, ಪುಸ್ತಕ ಚಟುವಟಿಕೆಗಳನ್ನು ನಡೆಸಲು ಮತ್ತು ನೆರವು ನೀಡುವವರೆಗೆ, ಸಿಲರಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರು ಸಾಕಷ್ಟು ಬದಲಾಗಿದ್ದಾರೆ. ಗ್ರಂಥಾಲಯಗಳನ್ನು ಪ್ರಾರಂಭಿಸುವುದು ಓದುವ ಸಂಸ್ಕೃತಿಯನ್ನು ಬೆಳೆಸುವಲ್ಲಿ ಮೊದಲ ಹೆಜ್ಜೆಯಷ್ಟೇ. ವಿವಿಧ ಕಾರ್ಯಕ್ರಮಗಳ ಮೂಲಕ ಓದುವ ಅಭ್ಯಾಸವನ್ನು ಬೆಳೆಸಿ, ಓದಿನ ಕುರಿತಾಗಿ ಅವರ ಆಸಕ್ತಿಯನ್ನು ಜೀವಂತವಾಗಿಸಿಕೊಂಡು ಬರಲು ಸಾಕಷ್ಟು ಸಮಯ ಹಾಗೂ ನಿರಂತರ ಕೆಲಸ ನಡೆಯಬೇಕಾಗುತ್ತದೆ.

**ಟಿಪ್ಪಣಿಗಳು**

i) ಏಕಲವ್ಯ ಫೌಂಡೇಷನ್ ಮಧ್ಯಪ್ರದೇಶದ ಭೋಪಾಲದಲ್ಲಿರುವ ಸರ್ಕಾರೇತರ, ಸ್ವಯಂಸೇವಾ ಸಂಸ್ಥೆಯಾಗಿದ್ದು, ಸಮುದಾಯಗಳಲ್ಲಿ ವಿನೂತನ ಶೈಕ್ಷಣಿಕ ಕಾರ್ಯಕ್ರಮಗಳ ಪ್ರಯೋಗಗಳನ್ನು ನಡೆಸುತ್ತದೆ.

ii) ಮೊಹಲ್ಲಾ ಕಲಿಕಾ ಚಟುವಟಿಕಾ ಕೇಂದ್ರಗಳನ್ನು (ಮೊ ಕ ಚ ಕೇ) ಮಧ್ಯಪ್ರದೇಶದ ನರ್ಮದಾಪುರಂ ಜಿಲ್ಲೆಯಲ್ಲಿರುವ ಕೆಲವು ಗ್ರಾಮಗಳಲ್ಲಿ ನಡೆಸಲಾಗುತ್ತಿದೆ. ಗ್ರಾಮದ ಸ್ವಯಂ-ಸೇವಕರು ಇದರ ಜವಾಬ್ದಾರಿಯನ್ನು ವಹಿಸಿಕೊಂಡು, ಶಾಲೆ ಪ್ರಾರಂಭವಾಗುವ ಎರಡು ಗಂಟೆಗಳಿಗೆ ಮುಂಚಿತವಾಗಿ ಈ ಕೇಂದ್ರವನ್ನು ತೆರೆಯುತ್ತಾರೆ. ಶೈಕ್ಷಣಿಕ ವಿಷಯಗಳಲ್ಲದೆ, ಕಲಿಕೆಯನ್ನು ವೃದ್ಧಿಸುವ ಇನ್ನಿತರ ಚಟುವಟಿಕೆಗಳು ಮತ್ತು ಆಟಗಳನ್ನು ಇಲ್ಲಿ ಹಮ್ಮಿಕೊಳ್ಳಲಾಗುತ್ತದೆ.



**ಮೆಲೊಡಿ ಕ್ಸಲಕ್ಸೋ** ಅವರು ಏಕಲವ್ಯ ಫೌಂಡೇಷನ್‌ನಲ್ಲಿ ಯೋಜನಾ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ಮಧ್ಯಪ್ರದೇಶದ ಪಿಪರಿಯಾ ವಿಭಾದಲ್ಲಿರುವ ಹೋಲಿಸ್ಟಿಕ್ ಇನಿಶಿಯೇಟ್ ಟುವರ್ಡ್ಸ್ ಎಜುಕೇಶನಲ್ ಚೇಂಜ್ ಪ್ರಾಜೆಕ್ಟ್ (HITEC) ನಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಎಂಎ ಪದವಿಯನ್ನು ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳು ಹಾಗೂ ಶಿಕ್ಷಕರೊಡನೆ ಮಕ್ಕಳ ಸಾಹಿತ್ಯವನ್ನು ಓದುವುದು ಅವರಿಗಿಷ್ಟ. ಅವರಿಗೆ ಚಿತ್ರಕಲೆ ಹಾಗೂ ಬರವಣಿಗೆಯಲ್ಲಿ ಬಹಳ ಆಸಕ್ತಿ ಇದ್ದು, ಪ್ರಕೃತಿ ಶಿಕ್ಷಣದ ಬಗ್ಗೆ ಆಳವಾದ ಒಲವಿದೆ. ಇವರನ್ನು **melody.xalxo18_mae@apu.edu.in** ಮೂಲಕ ಸಂಪರ್ಕಿಸಬಹುದು.

● ಅನುವಾದ: **ಉಷಾ ಬಿ. ಎನ್.** | ಪರಿಶೀಲನೆ: **ಲತಾ ಕೆ. ಸಿ.**

# ಎಲ್ಲ ವಿದ್ಯಾರ್ಥಿಗಳಲ್ಲೂ ತಾವು ಸುರಕ್ಷಿತರು, ಮಾನ್ಯರು ಮತ್ತು ಪರಿಗಣಿಸಲ್ಪಟ್ಟವರು ಎಂಬ ಭಾವನೆ ಮೂಡಿಸುವ ಶಾಲೆ

ಪ್ರಿಯಾಂಕಾ ಡಿ.

VOICES

ನನ್ನ ಹಿರಿಯ ಪ್ರಾಥಮಿಕ ಶಾಲಾ ಭೇಟಿಯೊಂದರಲ್ಲಿ ಪ್ರಾಥಮಿಕ ಹಂತದ ವಿದ್ಯಾರ್ಥಿನಿ ಪ್ರಣೀತಾ ತನ್ನ ತರಗತಿಯಲ್ಲಿ ಶಿಕ್ಷಕರ ಪಾತ್ರವನ್ನು ನಿರ್ವಹಿಸುತ್ತಿರುವುದನ್ನು ಗಮನಿಸಿದೆ (ಕರ್ನಾಟಕದ ಮದ್ದೂರಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ). ಆಕೆ ತನ್ನ ಶಿಕ್ಷಕಿ ಸವಿತಾ ಅವರನ್ನು  ಅನುಸರಿಸುತ್ತಿದ್ದರು. ಸವಿತಾ ಅವರ ಜೊತೆ ನಾನು ಕೆಲವು ವರ್ಷಗಳ ಕಾಲ ತುಂಬ ನಿಕಟವಾಗಿ ಕಾರ್ಯ ನಿರ್ವಹಿಸಿದ್ದೆ. ಅಲ್ಲಿ ಆಕೆ ವಿದ್ಯಾರ್ಥಿಗಳನ್ನು ಕೇಳಿದಳು, 'ಪ್ರೀತಿಯ ಮಕ್ಕಳೇ, ಇಂದು ನಾನು ನಿಮಗೆ ಹೊಸದೊಂದು ಕತೆ ಹೇಳುವೆ, ಕೇಳಲು ಸಿದ್ಧರಿದ್ದೀರಾ? ನಾವು ಈ ದಿನ ತರಗತಿಯನ್ನು ಯಾವ ರೀತಿಯಲ್ಲಿ ಶುರು ಮಾಡೋಣ? ಹಾಡು ಹಾಡುವುದರ ಮೂಲಕ? ಅಥವಾ ಏನಾದರೂ ಚಟುವಟಿಕೆ ಮಾಡೋಣವೇ? ಯಾವುದು ನಿಮಗಿಷ್ಟ?' (ಹೀಗೆ ಕೇಳುತ್ತಾ ಆಕೆ ಎಲ್ಲರ ಪ್ರತಿಕ್ರಿಯೆಗಾಗಿ ಸ್ವಲ್ಪ ಹೊತ್ತು ಕಾದಳು). ಮಕ್ಕಳಿಂದ ಬೇರೆಬೇರೆ ರೀತಿಯ ಉತ್ತರ ಬಂತು. ಅನಿಲ್ ಹೇಳಿದ, 'ಪದ್ಯದಿಂದ ಶುರು ಮಾಡೋಣ', 'ನೀವು ಕಳೆದ ಸಲ ಹಾಡಿದಿರಲ್ಲ ಆ ಹಾಡು ಕಲಿಸಿ ಮೇಡಮ್' ಪ್ರೀತಿ ಕೇಳಿದಳು. ಉಳಿದವರಲ್ಲಿ ಹೆಚ್ಚಿನವರು ನಾವು ಆಟ ಆಡಬೇಕು ಎಂದು ಹೇಳಿದರು. ಎಲ್ಲರೂ ಹೇಳುವುದನ್ನು ಕೇಳಿಸಿಕೊಂಡ ನಂತರ ಪ್ರಣೀತಾ ಹೇಳಿದಳು, 'ನಿಮ್ಮಲ್ಲಿ ಹೆಚ್ಚಿನವರು ಏನು ಹೇಳುತ್ತಾರೋ ಅದರಿಂದ ಒಂದೊಂದಾಗಿ ಪ್ರಾರಂಭಿಸೋಣ (ಹೆಚ್ಚಿನವರು ನಾವು ಆಟ ಆಡಬೇಕೆಂದು ಕೇಳಿದ್ದರು). ಹಾಗಾದರೆ ಸರಿ, ನಾವು ಆಟ ಆಡೋಣ'. ವಿದ್ಯಾರ್ಥಿಯೊಬ್ಬನ ಕಡೆಗೆ ದೃಷ್ಟಿ ಬೀರಿ ಪ್ರಣೀತಾ ಹೇಳಿದಳು, 'ರಾಜೇಶ್, ನಾನು ಹೇಳುವುದನ್ನು ಗಮನವಿಟ್ಟು ಕೇಳಿಸಿಕೊಳ್ಳಬೇಕು, ಆಯ್ತಾ ಮಗು'? ಶಾಲಾ ನಕ್ಷೆಯ ಪ್ರಾಜೆಕ್ಟ್ ಕೆಲಸ ಪ್ರಾರಂಭ ಮಾಡಿರುವೆಯಾ'? 'ಮಾಡಿದ್ದೇನೆ, ಇನ್ನೂ ಮುಗಿದಿಲ್ಲ'. 'ಸರಿ, ಪರವಾಗಿಲ್ಲ. ನಾವು ಅದನ್ನು ಸಂಜೆ ಮಾಡೋಣ'. ಶಿಕ್ಷಕರು ಬರುವವರೆಗೂ ಇದು ಮುಂದುವರೆಯಿತು. ಶಿಕ್ಷಕರ ಅನುಪಸ್ಥಿತಿಯಲ್ಲಿ ವಿದ್ಯಾರ್ಥಿಗಳು ಶಿಕ್ಷಕರ ಕುರ್ಚಿಯಲ್ಲಿ ಕುಳಿತು ಕೈಯಲ್ಲೊಂದು ಕೋಲು ಹಿಡಿದು ಕಠೋರ ದನಿಯಲ್ಲಿ ಮಾತನಾಡುತ್ತಾ ಆಜ್ಞೆಗಳನ್ನು ನೀಡುತ್ತಾ ಅಧಿಕಾರ ಚಲಾಯಿಸುವಂತೆ ಶಿಕ್ಷಕರಂತೆ ನಟಿಸುವುದು ಸಾಮಾನ್ಯವಾಗಿರುತ್ತದೆ. ಆದರೆ ಇದು ಇಲ್ಲಿ ಭಿನ್ನವಾದ ರೀತಿಯಲ್ಲಿತ್ತು. ಈ ನಿದರ್ಶನದಲ್ಲಿ ವಿದ್ಯಾರ್ಥಿನಿಯು ತನ್ನ ಸಂಭಾಷಣೆಯ ಉದ್ದಕ್ಕೂ ಆಕೆ ಸಹಪಾಠಿಗಳನ್ನು 'ಮಗು' ಎಂದು ಸಂಬೋಧಿಸಿದಳು, ಬಹುಪಾಲು ಅವರ ಅಭಿಪ್ರಾಯಗಳನ್ನು ಕೇಳಿದಳು, ಸೌಮ್ಯವಾಗಿ ನಡೆದುಕೊಂಡಳು, ಮತ್ತು ಅವರ ಪ್ರಯತ್ನಗಳಿಗೆ ಮೆಚ್ಚುಗೆ ಸೂಚಿಸಿದಳು. ವಿದ್ಯಾರ್ಥಿನಿಯು ತನ್ನ ಶಿಕ್ಷಕಿಯು ಬಳಸುವ ಪದಗಳನ್ನೇ ಬಳಸಿದಳು, ಶಿಕ್ಷಕರು ಹೇಗೆ ನಡೆದುಕೊಳ್ಳುತ್ತಾರೋ ಹಾಗೆಯೇ ವರ್ತಿಸಿದಳು. ಮಾನವೀಯವಾಗಿರುವುದು, ನ್ಯಾಯವನ್ನು ಪ್ರದರ್ಶಿಸುವುದು ಮತ್ತು ಪ್ರೀತಿ ತೋರುವುದು ಶಿಕ್ಷಕರೊಬ್ಬರ ಲಕ್ಷಣ ಎಂದು ಅವಳು ನಂಬಿದ್ದಳು.

**ಸಂಬಂಧಗಳನ್ನು ಕಟ್ಟುವುದು**

ಈ ಶಾಲೆ ಸಂಜೆ 5.30ರವರೆಗೆ ತೆರೆದಿರುತ್ತದೆ. ಸಂಜೆ 4.30ರ ನಂತರ ಶಿಕ್ಷಕರೂ ವಿದ್ಯಾರ್ಥಿಗಳೂ ಶಾಲೆಯ ಮೈದಾನದಲ್ಲಿ ಒಟ್ಟುಗೂಡಿ ವಿವಿಧ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಅವರು ಹಾಡುತ್ತಾರೆ, ಆಟವಾಡುತ್ತಾರೆ, ಹಳ್ಳಿಗಳಲ್ಲಿ ನಡೆಯುವ ವಿಷಯಗಳ ಕುರಿತು ಮಾತನಾಡಿಕೊಳ್ಳುತ್ತಾರೆ ಮತ್ತು ಪ್ರಾಜೆಕ್ಟ್‌ಗೆ ಸಂಬಂಧಿಸಿದ ಕೆಲಸ, ಕರಕುಶಲ ಕೆಲಸಗಳು ಅಥವಾ ಮನೆಗೆಲಸಗಳನ್ನು ಒಟ್ಟಿಗೆ ಸೇರಿ ಮಾಡಿಕೊಳ್ಳುತ್ತಾರೆ. ಮೂರು ಎಕರೆಗಳಷ್ಟು ವಿಸ್ತಾರವಾದ ಈ ಶಾಲಾ ಆವರಣದಲ್ಲಿ ಸಂಜೆಯ ನಡಿಗೆ ಒಂದು ಸಾಮಾನ್ಯ ಅಭ್ಯಾಸವಾಗಿರುತ್ತದೆ. ತೆಂಗು, ಹಲಸು, ಮಾವು, ತೇಗ (ಸಾಗವಾನಿ), ಹುಣಸೆ, ಬಾಳೆ, ಬೇವು ಸೇರಿದಂತೆ ನೂರಕ್ಕೂ ಹೆಚ್ಚಿನ ಮರಗಿಡಗಳಿದ್ದು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಅವುಗಳನ್ನು ನೋಡುತ್ತಾ ಸುತ್ತಾಡಲು ಹೋಗುತ್ತಾರೆ. ಉಳಿದ ಒಂದಷ್ಟು ಜಾಗದಲ್ಲಿ ವಿದ್ಯಾರ್ಥಿಗಳು ಸೊಪ್ಪು ಹಾಗೂ ತರಕಾರಿಗಳನ್ನು ಸಹ ಬೆಳೆದಿದ್ದಾರೆ. ಇವುಗಳನ್ನೆಲ್ಲ ನೋಡುತ್ತಾ ಈ ಶಾಲೆಯಲ್ಲಿ ಕೆಲವು ಸಂಜೆಗಳನ್ನು ಕಳೆಯುವ ಅವಕಾಶ ನನಗೆ ಸಿಕ್ಕಿತು. ಶಾಲೆಯಲ್ಲಿ ಈ ಸಕಾರಾತ್ಮಕ ಸಂಬಂಧವನ್ನು ನಿರ್ಮಿಸಲು ಹೇಗೆ ಸಾಧ್ಯವಾಯಿತು ಎಂದು ನಾನು ಶಿಕ್ಷಕರನ್ನು ಕೇಳಿದೆ. ಅದಕ್ಕೆ ಅವರ ಉತ್ತರ, 'ವಿದ್ಯಾರ್ಥಿಗಳಿಗೆ ಅವಕಾಶ ನೀಡಿದರೆ ಅವರು ಮಾತನಾಡುತ್ತಾರೆ, ತಮಗನಿಸಿದ್ದನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿನ ವಿದ್ಯಾರ್ಥಿಗಳು ಗಟ್ಟಿಯಾದ ದನಿಯಲ್ಲಿ ಕೂಗಿ ಮಾತನಾಡಲು, ಸುತ್ತಲೂ ಓಡಾಡಲು, ಪ್ರಶ್ನೆಗಳನ್ನು ಕೇಳಲು ಹಾಗೂ ತಮ್ಮ ಮನಸ್ಸಿಗೆ ಬಂದಿದ್ದನ್ನು ಮಾತನಾಡಲು ಹಿಂಜರಿಯುವುದಿಲ್ಲ. ಇಲ್ಲಿ ಪ್ರತಿ ಸಂಜೆಯೂ ವಿಭಿನ್ನವಾಗಿರುತ್ತದೆ, ಮಾತ್ರವಲ್ಲದೆ ನಮ್ಮನ್ನು ನಾವು ಹೊಸ ಹೊಸ ಸಂಗತಿಗಳಿಗೆ ತೆರೆದುಕೊಳ್ಳುತ್ತಿರುತ್ತೇವೆ.' ವಾಸ್ತವವಾಗಿ, ವಿದ್ಯಾರ್ಥಿಗಳು ಶಿಕ್ಷಕಿಯ ಜೊತೆಗಿದ್ದಾಗ ಬೆಚ್ಚಗಿನ ಭಾವವನ್ನು ಅನುಭವಿಸುತ್ತಾರೆ ಮತ್ತು ತಮ್ಮನ್ನು ಕೇಳಿಸಿಕೊಳ್ಳಲು ಒಬ್ಬರಿದ್ದಾರೆ ಹಾಗೂ ಅವರೊಂದಿಗಿದ್ದಾಗ ತಾವು ಸುರಕ್ಷಿತರು ಎಂಬ ಭಾವವನ್ನು ಹೊಂದಿರುತ್ತಾರೆ. ಶಿಕ್ಷಕಿ ಶಾಲೆಯಿಂದ ಹೊರಡುವವರೆಗೂ ಮಕ್ಕಳು ಶಾಲೆಯಲ್ಲಿಯೇ ಇರುತ್ತಾರೆ. ಇದು ಅಲ್ಲಿನ ನಿತ್ಯದ ಅಭ್ಯಾಸ ಮತ್ತು ಪೋಷಕರಿಗೂ ಕೂಡಾ ತಮ್ಮ ಮಕ್ಕಳು ಶಾಲೆಯಲ್ಲಿ ಸುರಕ್ಷಿತವಾಗಿದ್ದಾರೆ ಎನ್ನುವುದನ್ನು ತಿಳಿದಿರುತ್ತಾರೆ.

ಪರಸ್ಪರ ಗಲಾಟೆ ಮಾಡಿಕೊಂಡ ವಿದ್ಯಾರ್ಥಿಗಳು ಶಿಕ್ಷಕರ ಬಳಿಗೆ ಬಂದಾಗ ಅವರು ಎರಡೂ ಕಡೆಗಳಲ್ಲಿರುವವರನ್ನು ಕೇಳಿಸಿಕೊಳ್ಳುತ್ತಾರೆ, ಕಾರಣಗಳನ್ನು ಕೇಳಿ ತಿಳಿದುಕೊಳ್ಳುತ್ತಾರೆ ಮತ್ತು ತನ್ನ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಾರೆ, ಅವರಿಗೆ ಸಮಾಧಾನಕರವಾದ ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತಾರೆ. ಅವರಿಗೆ ಶಿಕ್ಷೆಯಲ್ಲಿ

ನಂಬಿಕೆಯಿಲ್ಲ, ಬದಲಿಗೆ ಅವರು ತಾವು ಎಸಗಿರುವ ಕೃತ್ಯಗಳ ಕುರಿತು ಆತ್ಮಾವಲೋಕನ ಮಾಡಿಕೊಳ್ಳಲು ನೆರವಾಗುತ್ತಾರೆ. ಶಿಕ್ಷಕಿ ಹೇಳುತ್ತಾರೆ, 'ವಿದ್ಯಾರ್ಥಿಗಳು ಶಿಕ್ಷಕರ ಮೌಲ್ಯೀಕರಣವನ್ನು ಎದುರು ನೋಡುತ್ತಾರೆ. ಆದ್ದರಿಂದ, ನಾನು ನನ್ನ ಭಾವನೆಗಳನ್ನು ಸಮತೋಲನದಲ್ಲಿರಿಸಿಕೊಳ್ಳಲು ಸಾಧ್ಯವಾದಷ್ಟು ಪ್ರಯತ್ನಿಸುತ್ತೇನೆ. ಅವರಿಗೆ ಅಹಿತಕರ ಎನಿಸುವ ಅಥವಾ ನೋವುಂಟುಮಾಡುವ ಸಂಗತಿಗಳನ್ನು ಹೇಳಲು ಹೋಗುವುದಿಲ್ಲ. ಶಿಕ್ಷಕಿಗೆ ತಿಳಿಯದಿರುವ ವಿಷಯಗಳನ್ನು ವಿದ್ಯಾರ್ಥಿಗಳು ಬಂದು ಕೇಳಿದರೆ, 'ಇದು ನನಗೆ ತಿಳಿದಿಲ್ಲ, ಅದರ ಬಗ್ಗೆ ತಿಳಿದುಕೊಂಡು ನಾಳೆ ನಿಮಗೆ ಹೇಳಿಕೊಡುತ್ತೇನೆ, ಇಲ್ಲವೇ ನಾವೆಲ್ಲರೂ ಸೇರಿ ಇದಕ್ಕೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸೋಣ' ಎನ್ನಲು ಶಿಕ್ಷಕಿ ಹಿಂಜರಿಯುವುದಿಲ್ಲ. ತಮ್ಮ ಮಕ್ಕಳು ಶಾಲೆಯಲ್ಲಿ ಏನನ್ನು ಕಲಿಯುತ್ತಿದ್ದಾರೆ ಎಂಬುದನ್ನು ಮಕ್ಕಳಲ್ಲಿ ಆಗಾಗ ಕೇಳುತ್ತಿರುವಂತೆ ಸವಿತಾ ಮೇಡಮ್ ಅವರು ಪೋಷಕರಿಗೆ ಹೇಳುತ್ತಾರೆ. ವಿದ್ಯಾರ್ಥಿಗಳಿಗೆ ಕಲಿಯಲು ಇದು ಪ್ರೇರಣೆ ನೀಡುತ್ತದೆ ಎಂದು ಅವರು ನಂಬುತ್ತಾರೆ.

**ಶಾಲೆಯು ತನ್ನ ರೂಪವನ್ನು ಬದಲಿಸಿಕೊಂಡಿದ್ದು ಹೇಗೆ?**

- ಸವಿತಾ ಮೇಡಮ್ ಈ ಶಾಲೆಗೆ ಬಂದು ಒಂಬತ್ತು ವರ್ಷಗಳಾಗಿವೆ. ಆಗ ಪರಿಸ್ಥಿತಿ ಹೀಗಿರಲಿಲ್ಲ. ವಿದ್ಯಾರ್ಥಿಗಳು ನಿತ್ಯ ಶಾಲೆಗೆ ಬರುತ್ತಿರಲಿಲ್ಲ. ಇಲ್ಲಿನ ಸಮುದಾಯದ ಬಹುದೊಡ್ಡ ಭಾಗವು ಮುಖ್ಯವಾಗಿ ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ಅಥವಾ ದಿನಗೂಲಿ ಕಾರ್ಮಿಕರಾಗಿ ಮೈಮುರಿದು ಕೆಲಸ ಮಾಡುವ ದುಡಿಯುವ ವರ್ಗದ ಜನರಾಗಿದ್ದಾರೆ. ಆದ್ದರಿಂದ ಮಕ್ಕಳ ಕಲಿಕೆಯತ್ತ ಗಮನಹರಿಸುವುದು ಅವರಿಂದ ಸಾಧ್ಯವಾಗುತ್ತಿರಲಿಲ್ಲ. ಕೆಲವೊಮ್ಮೆ, ತಮ್ಮ ಎಳೆಯ ತಮ್ಮ ತಂಗಿಯರನ್ನು ನೋಡಿಕೊಳ್ಳಲು ಮಕ್ಕಳನ್ನು ಮನೆಯಲ್ಲಿ ಉಳಿಸಿಕೊಳ್ಳಲಾಗುತ್ತಿತ್ತು. ಸವಿತಾ ಮೇಡಮ್ ವಿದ್ಯಾರ್ಥಿಗಳ ಮನೆಗಳಿಗೂ ಸಮುದಾಯಗಳಿಗೂ ಭೇಟಿ ನೀಡುತ್ತಿರುತ್ತಾರೆ. 'ಶಿಕ್ಷಕರಾದ ನಮಗೆ ವಿದ್ಯಾರ್ಥಿಗಳ ಹಿನ್ನೆಲೆ ಅರಿಯುವುದು ಅವರೊಂದಿಗೆ ಉತ್ತಮ ಸಂಬಂಧ ಬೆಳೆಸುವುದು ಪ್ರಮುಖವಾಗಿರುತ್ತದೆ. ಮಾತ್ರವಲ್ಲದೆ, ವಿದ್ಯಾರ್ಥಿಗಳ ಕುರಿತು ಹೆಚ್ಚಿಗೆ ತಿಳಿದುಕೊಂಡಷ್ಟೂ ಅವರ ಜೊತೆಗೆ ನಾವು ಸೂಕ್ಷ್ಮವಾಗಿ ವರ್ತಿಸಲು ತೊಡಗುತ್ತೇವೆ' ಎನ್ನುತ್ತಾರೆ ಆಕೆ. ಶಾಲೆಯಲ್ಲಿ ಸುರಕ್ಷತೆಯ ಸಮಸ್ಯೆಗಳು ಕೂಡ ಇದ್ದವು. ಶಾಲಾ ಅವಧಿಯ ನಂತರ, ಸಮುದಾಯದ ಅಪರಿಚಿತ ಸದಸ್ಯರು ಮತ್ತು ಹಿರಿಯ ವಿದ್ಯಾರ್ಥಿಗಳು ಶಾಲಾ ಆವರಣವನ್ನು ಹೊಕ್ಕು ಶಾಲೆಯ ಆಸ್ತಿಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದರು. ಕುಡಿತ ಮತ್ತು ಇಸ್ಪೀಟ್ ಆಟ ಇತ್ಯಾದಿಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಈ ಸಮಸ್ಯೆಗಳನ್ನು ನಿಭಾಯಿಸಲು ಶಾಲೆಯ ಮುಖ್ಯ ಶಿಕ್ಷಕರು, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (SDMC) ಸದಸ್ಯರು ಹಾಗೂ ಶಿಕ್ಷಕರು ಒಟ್ಟಾಗಿ ಕೆಲವು ಪ್ರಯತ್ನಗಳನ್ನು ಮಾಡಿದರು. ಮಕ್ಕಳ ನಡುವೆ ಈ ಸಮಸ್ಯೆಯ ಕುರಿತು ಅರಿವು ಮೂಡಿಸಲಾಯಿತು. ಮಕ್ಕಳು ತಮ್ಮ ಶಾಲೆಯ ಆಸ್ತಿಪಾಸ್ತಿಗಳಿಗೆ ಹಾನಿಮಾಡದಂತೆ ಹಾಗೂ ಶಾಲೆಯ ರಕ್ಷಣೆಗೆ ನೆರವಾಗುವಂತೆ ಪೋಷಕರ ಮನವೊಲಿಸಲು ಪ್ರಾರಂಭಿಸಿದರು. ಸಮುದಾಯದ ಬೆಂಬಲದಿಂದಾಗಿ ಅಂತಹ ಚಟುವಟಿಕೆಗಳು ನಿಂತುಹೋದವು. ಇದಲ್ಲದೆ, ಶಿಕ್ಷಣದ ಮಹತ್ವದ ಕುರಿತು ಅರಿವು ಮೂಡಿಸಲು ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ಸತತ ಪ್ರಯತ್ನ ನಡೆಸಿದರು. ಹಿರಿಯ ವಿದ್ಯಾರ್ಥಿಗಳ ಸಹಾಯದೊಂದಿಗೆ ಅವರು ಈ ಕೆಳಗಿನ ಉಪಕ್ರಮಗಳನ್ನು ಕೈಗೊಂಡರು:

- ರಾಷ್ಟ್ರೀಯ ಹಬ್ಬಗಳ ಅರ್ಥಪೂರ್ಣ ಆಚರಣೆಯನ್ನು ಆಯೋಜಿಸಲಾಯಿತು. ಈ ಸಂರ್ಭದಲ್ಲಿ ವಿದ್ಯಾರ್ಥಿಗಳು ಪೋಷಕರು, ಪಂಚಾಯತ್ ಸದಸ್ಯರು ಹಾಗೂ ಸಮುದಾಯದವರಿಗಾಗಿ ಸಂವಿಧಾನದ ಮೌಲ್ಯಗಳ ಕುರಿತ ನಾಟಕಗಳನ್ನು ಪ್ರದರ್ಶಿಸಿದರು.
- ಮುಟ್ಟಿನ ಸಮಯದಲ್ಲಿ ಹೆಣ್ಣುಮಕ್ಕಳು ಅನುಭವಿಸುವ ಸಮಸ್ಯೆಗಳ ಕುರಿತು ಸಮುದಾಯದ ಮಹಿಳೆಯರೊಂದಿಗೆ ಸಭೆಗಳನ್ನು ನಡೆಸಿದರು.
- ಸರಳವಾದ ಪ್ರದರ್ಶನದ ವ್ಯವಸ್ಥೆಯೊಂದರಲ್ಲಿ ಮಕ್ಕಳ ಕಲಿಕೆಯನ್ನು ನಿಯಮಿತವಾಗಿ ಪ್ರದರ್ಶಿಸಲಾಯಿತು.



*ಚಿತ್ರ 1: ಶಿಕ್ಷಕಿಯ ಮಾರ್ಗದರ್ಶನಲ್ಲಿ ಮಕ್ಕಳು ಪ್ರತ್ಯೇಕ ಜೋಡಿಗಳಾಗಿ ಕುಳಿತು ಹೊರಾಂಗಣ ಕಲಿಕೆಯಲ್ಲಿ ತೊಡಗಿರುವುದು*

- ಹೆಚ್ಚಿನ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಮಾದರಿಯಾಗಿರಲು ಹಲವು ವರ್ಷಗಳ
- ಕಾಲ ರಜೆಯನ್ನೇ ತೆಗೆದುಕೊಳ್ಳದಿರಲು ಪ್ರಯತ್ನಿಸಿದರು. ಇದರಿಂದಾಗಿ ಹೆಚ್ಚಿನ ವಿದ್ಯಾರ್ಥಿಗಳ ಹಾಜರಾತಿ ನೂರಕ್ಕೆ ನೂರರಷ್ಟು ಆಯಿತು.
- ಮದ್ಯವ್ಯಸನಿಗಳಾಗಿರುವ ಪೋಷಕರನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ವಿಶೇಷ ಕಾಳಜಿ ಒದಗಿಸಲಾಗಿದೆ. ಮನೆಯಲ್ಲೂ ಶಾಲೆಯಲ್ಲೂ ಅವರ ಮಾನಸಿಕ ಸ್ಥಿತಿ ಯಾವ ರೀತಿಯಲ್ಲಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಅವರಲ್ಲಿ ಪ್ರತಿಯೊಬ್ಬರೊಂದಿಗೂ ನಿಯಮಿತವಾಗಿ ಮಾತುಕತೆ ನಡೆಸಲಾಗುತ್ತದೆ.

**ಬದಲಾವಣೆಯ ಗೋಚರ ಗುರುತುಗಳು**

- ಈ ಹಿಂದೆ ಪಾಲಕರು ತರಗತಿಯ ನಡುವೆಯೇ ವಿದ್ಯಾರ್ಥಿಗಳನ್ನು ಕಿಟಕಿಗಳ ಮೂಲಕ ಕರೆಯುತ್ತಿದ್ದರು (ಕಿಟಕಿಗಳು ರಸ್ತೆಯತ್ತ ಮುಖ ಮಾಡಿವೆ). ಈಗ ಪೋಷಕರು ತರಗತಿಗೆ ಪ್ರವೇಶಿಸುವ ಮೊದಲು ಅನುಮತಿ ಪಡೆಯುತ್ತಾರೆ, ಕಿಟಕಿಗಳ ಮೂಲಕ ವಿದ್ಯಾರ್ಥಿಗಳನ್ನು ಕರೆಯುವುದನ್ನು ಸಂಪೂರ್ಣ ನಿಲ್ಲಿಸಲಾಗಿದೆ.
- ಪೋಷಕರ ಸಭೆ, 'ಸಮುದಾಯದತ್ತ ಶಾಲೆ'[ii]ಯಂತಹ ಸಭೆ ಸಮಾರಂಭಗಳು ನಡೆದಾಗ ಹಾಗೂ ತಮ್ಮ ಮಕ್ಕಳನ್ನು ಶಾಲೆಗೆ ಬಿಡಲು ಮತ್ತು ಶಾಲೆಯಿಂದ ಕರೆದೊಯ್ಯಲು ನಿಯಮಿತವಾಗಿ ಪೋಷಕರು ಶಾಲೆಗೆ ಭೇಟಿ ನೀಡುತ್ತಾರೆ. ಶಿಕ್ಷಕರು ಪೋಷಕರೊಂದಿಗೆ ಸಂವಹನ ಇರಿಸಿಕೊಂಡಿದ್ದು, ಮಕ್ಕಳ ಕಲಿಕೆ ಯಾವ ರೀತಿಯಲ್ಲಿದೆ ಎಂಬುದರ ಕುರಿತು ಅವರಿಗೆ ಮಾಹಿತಿ ನೀಡುತ್ತಿರುತ್ತಾರೆ. ಈ ಭೇಟಿಗಳಲ್ಲಿ ಶೈಕ್ಷಣಿಕ ಮಾತ್ರವಲ್ಲದೆ ಶೈಕ್ಷಣಿಕ ಪೂರಕ ಮಾಹಿತಿಗಳನ್ನು ಕೂಡ ಹಂಚಿಕೊಂಡು ಚರ್ಚಿಸಲಾಗುತ್ತದೆ.
- ಯಾರೂ ಹಿಂದೆ ಉಳಿಯದ ರೀತಿಯಲ್ಲಿ ವಿದ್ಯಾರ್ಥಿಗಳೆಲ್ಲರೂ ಭಯ ಅಥವಾ ಹಿಂಜರಿಕೆಗಳಿಲ್ಲದೆ ಪ್ರತಿ ಶಾಲಾ ಚಟುವಟಿಕೆಯಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಶಾಲಾ, ತಾಲೂಕು ಹಾಗೂ ಜಿಲ್ಲಾ ಮಟ್ಟದ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುತ್ತಿರುವುದು ಪೋಷಕರಲ್ಲಿ ಶಾಲೆಯ ಬಗ್ಗೆ ಭರವಸೆ ಮೂಡಿಸಿದೆ. ಪ್ರತಿಭಾ ಕಾರಂಜಿ[iii]ಯಲ್ಲಿ ಶಾಲೆಯು ನಿರಂತರ ಒಂಬತ್ತು ವರ್ಷಗಳಿಂದ ಸಮೂಹ ಹಾಗೂ ತಾಲೂಕು ಮಟ್ಟದಲ್ಲಿ ಉನ್ನತ ಬಹುಮಾನಗಳನ್ನು ಗೆದ್ದುಕೊಂಡಿದೆ.
- ವಿದ್ಯಾರ್ಥಿಗಳು ನಾಯಕತ್ವದ ಪಾತ್ರಗಳನ್ನು ವಹಿಸಿಕೊಳ್ಳುತ್ತಾರೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಯೋಜಿಸುತ್ತಾರೆ. ಬಹುತೇಕ ಎಲ್ಲ ವಿದ್ಯಾರ್ಥಿಗಳು ವೇದಿಕೆಯ ಕಾರ್ಯಕ್ರಮಗಳನ್ನು ನಡೆಸಿಕೊಡುವಂತಹ, ಚಟುವಟಿಕೆಗಳನ್ನು ಯೋಜಿಸುವಂತಹ ಪಾತ್ರಗಳಲ್ಲಿ ಭಾಗವಹಿಸಿದ್ದಾರೆ.
- ಹಿರಿಯ ವಿದ್ಯಾರ್ಥಿಗಳು ತಮ್ಮ ಕಿರಿಯ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವಂತಹ ಸಂಸ್ಕೃತಿಯನ್ನು ಶಾಲೆಯು ನಿರ್ಮಾಣ ಮಾಡಿದೆ.
- ರಸಪ್ರಶ್ನೆಗಳು ಹಾಗೂ ವಿದ್ಯಾರ್ಥಿಗಳು ಕಲಿತಿರುವ ಹೊಸ ಸಂಗತಿಗಳನ್ನು ನಿಯಮಿತವಾಗಿ ಬೆಳಗಿನ ಅಸೆಂಬ್ಲಿ ಸಂದರ್ಭದಲ್ಲಿ ಹಂಚಿಕೊಳ್ಳಲಾಗುತ್ತದೆ.



*ಚಿತ್ರ 2: ಪ್ರತಿ ಮಗುವಿಗೆ ಭಾಗವಹಿಸಲು ಪ್ರೋತ್ಸಾಹಿಸಲಾಗುತ್ತದೆ ಹಾಗೂ ಪ್ರತಿಯೊಬ್ಬರ ದನಿಯನ್ನೂ ಕೇಳಿಸಿಕೊಳ್ಳಲಾಗುತ್ತದೆ.*

- ಮಕ್ಕಳು ಪರಸ್ಪರ ಕಾಳಜಿ ವಹಿಸುತ್ತಾರೆ, ಪರಸ್ಪರ ಗೌರವದಿಂದ ವರ್ತಿಸುತ್ತಾರೆ ಮತ್ತು ನಿಂದನೀಯ ಭಾಷೆ ಬಳಸುವುದನ್ನು ನಿಲ್ಲಿಸಿದ್ದಾರೆ.

'ಮೌಲ್ಯಗಳು ಪರಸ್ಪರರಿಂದ ಕಲಿಯುವಂಥದ್ದು. ವಿದ್ಯಾರ್ಥಿಗಳು ಶಾಲೆಯನ್ನು ತಮಗಾಗಿಯೇ ಇರುವ, ಅಂದರೆ, ತಾವು ಬೆಳೆಯಲು, ಸಾಧನೆ ಮಾಡಲು ಹಾಗೂ ಸಂತೋಷದಿಂದ ಇರಲು ಇರುವ ಒಂದು ಸ್ಥಳಾವಕಾಶ ಎಂದು ಭಾವಿಸಬೇಕು. ಶಾಲೆಯು ಮಕ್ಕಳಲ್ಲಿ ಆತ್ಮಸ್ಥೈರ್ಯವನ್ನು ಬೆಳೆಸಲು ಮತ್ತು ಅವರಲ್ಲಿ ಸುರಕ್ಷತೆಯ ಭಾವವನ್ನು ಮೂಡಿಸಲು ನೆರವಾಗಬೇಕು. ವಿದ್ಯಾರ್ಥಿಗಳೊಂದಿಗಿನ ನಮ್ಮ ವರ್ತನೆಗಳು ಹಾಗೂ ಸಕಾರಾತ್ಮಕ ಸಂಬಂಧಗಳು ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ನಾವು ಅವರ ಬಗ್ಗೆ ಭರವಸೆ ಹೊಂದಿದ್ದೇವೆ ಎಂಬುದನ್ನು ಅವರಿಗೆ ತಿಳಿಯಪಡಿಸಬೇಕು. ಇದು ಅವರಲ್ಲಿ ಜವಾಬ್ದಾರಿಕೆಯ ಭಾವನೆಯನ್ನು ಬೆಳೆಸುವುದರೊಂದಿಗೆ ಈಗ ಮಾಡುತ್ತಿರುವುದಕ್ಕಿಂತ ಉತ್ತಮವಾದ ರೀತಿಯಲ್ಲಿ ಅವರು ಪ್ರವರ್ತಿಸುವರು. ಅವರನ್ನು ಹೇಗೆ ನಡೆಸಿಕೊಳ್ಳುತ್ತಿದ್ದೇವೆ ಎಂಬುದರ ಕುರಿತು ನಾವು ಜಾಗರೂಕರಾಗಿರಬೇಕು. ವಿದ್ಯಾರ್ಥಿಗಳು ನಾವು ಅವರನ್ನು ನಡೆಸಿಕೊಂಡಿರುವ ಬಗೆಯನ್ನು ನೆನಪಿಸಿಕೊಳ್ಳುವರು ಮತ್ತು ಅದನ್ನವರು ಆನಂತರದಲ್ಲಿ ತಮ್ಮ ಬದುಕಿನಲ್ಲಿ ಪಾಲಿಸಬೇಕು. ನಾವು ನೀಡುವ ಗೌರವಕ್ಕೆ ಅವರು ಅರ್ಹರು' ಎನ್ನುತ್ತಾರೆ ಸವಿತಾ ಮೇಡಮ್.

*ಈ ಲೇಖನವು 2018–19ರಲ್ಲಿ ಕರ್ನಾಟಕದ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನಲ್ಲಿ ನಡೆದ ಅಧ್ಯಯನವೊಂದನ್ನು ಆಧರಿಸಿದೆ.*

**ಮಕ್ಕಳ ಗುರುತನ್ನು ರಕ್ಷಿಸಲು ಅವರ ಹೆಸರುಗಳನ್ನು ಬದಲಾಯಿಸಲಾಗಿದೆ*

**ಕೊನೆಯ ಟಿಪ್ಪಣಿ**

i ಸಮುದಾಯದತ್ತ ಶಾಲೆ – ಈ ಕಾರ್ಯಕ್ರಮವು ಶಿಕ್ಷಕರು, ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಯ ಸದಸ್ಯರು, ಪೋಷಕರು ಹಾಗೂ ಸ್ವಯಂಸೇವಕರು ಶಾಲಾ ಸುಧಾರಣೆಯನ್ನು ರೂಪಿಸಲು ಒಗ್ಗೂಡಲು ನಿಗದಿಪಡಿಸಿದ ದಿನವಾಗಿದೆ.

ii ಪ್ರತಿಭಾ ಕಾರಂಜಿ – ಇದು ಶಾಲಾ ವಿದ್ಯಾರ್ಥಿಗಳಿಗಾಗಿ ಇರುವ ಒಂದು ಕಾರ್ಯಕ್ರಮವಾಗಿದ್ದು, ಕ್ಲಸ್ಟರ್, ತಾಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟಗಳಲ್ಲಿ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಸ್ಪರ್ಧೆಗಳನ್ನು ನಡೆಸಲಾಗುತ್ತದೆ.

- ಅನುವಾದ: **ಉಷಾ ಆಂಬ್ರೋಸ್** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**



**ಪ್ರಿಯಾಂಕಾ ಡಿ** ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿ 2016ರಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ಗೆ 'ಕ್ಯಾಂಪಸ್ ಅಸೋಸಿಯೇಟ್' ಆಗಿ ಸೇರಿಕೊಂಡರು. ಪ್ರಸ್ತುತ ಕರ್ನಾಟಕದ ರಾಮನಗರ ಜಿಲ್ಲೆಯಲ್ಲಿ ಫೌಂಡೇಷನ್‌ನ ಕಾರ್ಯಚಟುವಟಿಕೆಗಳ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಭಾಷಾ ಸಂಪನ್ಮೂಲ ಅಭಿವೃದ್ಧಿಪಡಿಸುವ ತಂಡದ ಭಾಗವಾಗಿದ್ದು, 'ಕಲಿಕಾ ಚೇತರಿಕೆ' ಹಾಗೂ 'ಜಾದುಯಿ ಪಿಟಾರಾ' (NCF–FS)ಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಇವರು ಶಿಕ್ಷಕರು ಹಾಗೂ ಮಕ್ಕಳೊಂದಿಗೆ ಕೆಲಸ ಮಾಡುವುದನ್ನು ಇಷ್ಟಪಡುತ್ತಾರೆ. ಭಾಷಾ ತರಗತಿಗಳಿಗಾಗಿ ಪ್ರಗತಿಶೀಲ ಕಲಿಕಾ ಬೋಧನಾ ಪ್ರಕ್ರಿಯೆಗಳನ್ನು ಯೋಜಿಸುವುದು ಮತ್ತು ಪ್ರಸ್ತುತಪಡಿಸುವುದು ಅವರ ಆಸಕ್ತಿಯ ವಿಷಯವಾಗಿದೆ ಅವರನ್ನು **Priyanka.d@azimpremjifoundation.org** ಮೂಲಕ ಸಂಪರ್ಕಿಸಬಹುದು.

# ಶಾಲಾ ಸಂಸ್ಕೃತಿಯ ಒಂದು ನಿರ್ಣಾಯಕ ಅಂಶ

## ಮಾಲೀಕತ್ವ ಹಾಗೂ ಜವಾಬ್ದಾರಿಕೆಯ ಪ್ರಜ್ಞೆ

ಶೋಭನ್ ಸಿಂಗ್ ನೇಗಿ

VOICES

ಹಲವಾರು ಶಾಲೆಗಳನ್ನು ವೀಕ್ಷಣೆ ಮಾಡುವ ಮತ್ತು ಅವುಗಳನ್ನು ಅರ್ಥ ಮಾಡಿಕೊಳ್ಳುವ ಸಾಕಷ್ಟು ಅವಕಾಶ ನನಗೆ ಸಿಕ್ಕಿದೆ. ಆ ಮೂಲಕ ನಾನು ಶಾಲೆಯೊಂದು ಉತ್ತಮವಾಗಿರಲು, ಅಲ್ಲಿನ ವಿದ್ಯಾರ್ಥಿಗಳು ಖುಷಿಯಾಗಿರಲು ಹಾಗೂ ಉತ್ತಮ ರೀತಿಯಲ್ಲಿ ಅವರು ಅಲ್ಲಿ ಕಲಿಯಲು ಆ ಶಾಲೆಯ ವಾತಾವರಣ ಅಥವಾ ಅಲ್ಲಿನ ಸಂಸ್ಕೃತಿ 'ವಿಭಿನ್ನ'ವಾಗಿರುವುದೇ ಕಾರಣ ಎಂಬುದನ್ನು ಕಂಡುಕೊಂಡಿದ್ದೇನೆ. ವಿದ್ಯಾರ್ಥಿಗಳು, ಪೋಷಕರು ಹಾಗೂ ಸಮುದಾಯವು ತಮ್ಮ ಶಾಲೆಯ ಕುರಿತು ಹೊಂದಿರುವ 'ಈ ಶಾಲೆ ನನ್ನದು' ಎಂಬ ಭಾವ ಮತ್ತು ಜವಾಬ್ದಾರಿಕೆಯ ಪ್ರಜ್ಞೆ ಇವುಗಳೇ ಈ ಸಂಸ್ಕೃತಿಯ ಪ್ರಮುಖ ಅಂಶವಾಗಿದೆ. ಅಂತಹ ಶಾಲೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಕೆಲವು ವಿಶಿಷ್ಟ ಲಕ್ಷಣಗಳನ್ನು ಈ ಲೇಖನ ಚರ್ಚಿಸುತ್ತದೆ.

### ತಮ್ಮ ವಿದ್ಯಾರ್ಥಿಗಳ ಕುರಿತ ಸಂಪೂರ್ಣ ಅರಿವು

ಮೊದಲನೆಯ ಮತ್ತು ಬಹಳ ಮುಖ್ಯವಾದ ಅಂಶವೆಂದರೆ ಈ ಶಾಲೆಗಳ ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯ ಕುರಿತು ಸರಿಯಾದ ತಿಳುವಳಿಕೆಯನ್ನು ಹೊಂದಿರುತ್ತಾರೆ. ವಿದ್ಯಾರ್ಥಿಗಳನ್ನು ಅವರ ಹೆಸರಿನಿಂದಲೇ ಕರೆದು ಮಾತನಾಡಿಸುತ್ತಾ ಅವರೊಂದಿಗೆ ಸಹಜವಾಗಿ ಸಂವಹನ ನಡೆಸುವಂತಹ ಭಯ ಮುಕ್ತ ವಾತಾವರಣವನ್ನು ಅಲ್ಲಿನ ಶಿಕ್ಷಕರು ಸೃಷ್ಟಿಸುತ್ತಾರೆ. ವಿದ್ಯಾರ್ಥಿಗಳ ಸಾಮಾಜಿಕ ಸ್ಥಾನಮಾನವು ಅವರ ವ್ಯಕ್ತಿತ್ವ ವಿಕಸನಕ್ಕೆ ಅಡ್ಡಿಯಾಗದಂತೆ ಅಥವಾ ಅವರ ಕಲಿಕೆಗೆ ಅದು ಹಿನ್ನಡೆ ಉಂಟುಮಾಡದಂತೆ ಶಿಕ್ಷಕರು ನೋಡಿಕೊಳ್ಳುತ್ತಾರೆ.

ಇಂತಹ ಶಾಲೆಗಳಲ್ಲಿ ತಮ್ಮ ವಿದ್ಯಾರ್ಥಿಗಳು ತರಗತಿಗಳಿಗೆ ಯಾವಾಗ ಮತ್ತು ಯಾಕೆ ಗೈರು ಹಾಜರಾಗುತ್ತಾರೆ ಎಂಬುದು ಕೂಡ ಶಿಕ್ಷಕರಿಗೆ ತಿಳಿದಿರುತ್ತದೆ. ಅವರು ಪೋಷಕರೊಂದಿಗೆ ನೇರವಾಗಿ ಸಂವಹನ ನಡೆಸುತ್ತಿರುತ್ತಾರೆ ಮತ್ತು ಅದು ತಾನಾಗಿಯೇ ನಡೆಯುವ ಸಹಜ ಸಂವಹನವಾಗಿರುತ್ತದೆ. ಪೋಷಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಶಿಕ್ಷಕರು ಅರಿತವರಾಗಿದ್ದು ಅವುಗಳ ಬಗ್ಗೆ ಸಂವೇದನಾಶೀಲರಾಗಿರುತ್ತಾರೆ. ಗ್ರಾಮೀಣ ಬದುಕಿನ ಸಂದರ್ಭದಲ್ಲಿ ಬಿತ್ತನೆ ಹಾಗೂ ಸುಗ್ಗಿಯ ಕಾಲಗಳಲ್ಲಿ ಮಕ್ಕಳು ಪೋಷಕರೊಂದಿಗೆ ಕೈಜೋಡಿಸಿ ಕೆಲಸ ಮಾಡುವ ಅವಶ್ಯಕತೆ ಇರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಹೀಗೆ ಮಕ್ಕಳು ತರಗತಿಗಳಿಗೆ ಗೈರು ಹಾಜರಾದ ಸಮಯಗಳಲ್ಲಿ ಶಿಕ್ಷಕರು ಮಕ್ಕಳ ಕಲಿಕೆಗೆ ಸಹಾಯ ಮಾಡಲು ಹೆಚ್ಚುವರಿ ಸಮಯವನ್ನು ಅವರಿಗಾಗಿ ಕಳೆಯುವರು.

ಇಂತಹ ಶಿಕ್ಷಕರು ವಿದ್ಯಾರ್ಥಿಗಳ ಭಾಷೆ/ನುಡಿಗಟ್ಟು, ಆಹಾರ ಕ್ರಮ, ಬದುಕಿನ ಸ್ಥಿತಿಗತಿಗಳು ಹಾಗೂ ಅವರ ಸನ್ನಿವೇಶಗಳ ಕುರಿತು ಹೆಚ್ಚಿನ ತಿಳುವಳಿಕೆ ಹಾಗೂ ಸೂಕ್ಷ್ಮತೆಯನ್ನು ಹೊಂದಿರುತ್ತಾರೆ. ಅವರು ಸ್ಥಳೀಯ ಭಾಷೆಯನ್ನು ಅರ್ಥಮಾಡಿಕೊಳ್ಳಲು ಶ್ರಮಿಸುವುದರೊಂದಿಗೆ ಸ್ಥಳೀಯ ವಸ್ತುಗಳಿಗೆ ಮಕ್ಕಳು ಏನು ಕರೆಯುತ್ತಾರೆ, ಅಲ್ಲಿನ ಸ್ಥಿತಿಗತಿಗಳೇನು ಅವರ ಅಭಿವ್ಯಕ್ತಿಗಳು ಯಾವ ರೀತಿಯಲ್ಲಿವೆ ಹಾಗೂ ಅವರ ಭಾವನೆಗಳೇನು ಎಂಬುದನ್ನು ಅರಿಯಲು ಪ್ರಯತ್ನಿಸುತ್ತಾರೆ.

### ಸಕ್ರಿಯ ಕಲಿಕೆ

ಇಂತಹ ಶಾಲೆಗಳಲ್ಲಿ ಗಮನಿಸಬಹುದಾದ ಎರಡನೆಯ ಅಂಶವೆಂದರೆ, ಮಕ್ಕಳು ತಮ್ಮ ಕಲಿಕೆಯ ಜವಾಬ್ದಾರಿಯನ್ನು ತಾವೇ ತೆಗೆದುಕೊಳ್ಳುತ್ತಾರೆ ಎನ್ನುವುದು. ಕಲಿಕಾ-ಬೋಧನಾ ಪ್ರಕ್ರಿಯೆಗಳಲ್ಲಿ ಅವರು ಶ್ರದ್ಧೆಯಿಂದ ಪರಸ್ಪರ ನೆರವಾಗುವುದನ್ನು ಕಾಣಬಹುದು. ವಿದ್ಯಾರ್ಥಿಗಳು ಪರಸ್ಪರರಿಂದ ಕಲಿಯುವ ವಾತಾವರಣವೊಂದನ್ನು ಶಿಕ್ಷಕರು ತರಗತಿಯಲ್ಲಿ ಸೃಷ್ಟಿಸುತ್ತಾರೆ. ಅಂತಹ ಶಾಲೆಗಳಲ್ಲಿ ಶಿಕ್ಷಕರಿಗೆ ತಮ್ಮ ವಿದ್ಯಾರ್ಥಿಗಳ ಆಸಕ್ತಿಗಳೇನು, ಪ್ರತಿಯೊಬ್ಬರ ವೈಶಿಷ್ಟ್ಯಗಳೇನು ಎಂಬುದರ ಕುರಿತು ದೃಢವಾದ ಒಂದು ತಿಳುವಳಿಕೆ ಇರುತ್ತದೆ ಎಂಬುದನ್ನು ನಾನು ಅರಿತುಕೊಂಡೆ. ಈ ತಿಳುವಳಿಕೆಯ ಆಧಾರದ ಮೇಲೆ ಅವರು ತಮ್ಮತಮ್ಮ ತರಗತಿಗಳಿಗಾಗಿ ಪಾಠ ಯೋಜನೆಗಳನ್ನು ಸಿದ್ಧಪಡಿಸುತ್ತಾರೆ. ತಮ್ಮ ವಿದ್ಯಾರ್ಥಿಗಳ ಕಲಿಕೆ ಯಾವ ಮಟ್ಟದಲ್ಲಿದೆ ಎಂಬುದನ್ನು ಅವರು ನಿಖರವಾಗಿ ತಿಳಿದಿರುವುದರಿಂದಾಗಿ ಈ ಆಧಾರದಲ್ಲಿ ಅವರು ಮಕ್ಕಳ ಗುಂಪುಗಳನ್ನು ಮಾಡುತ್ತಾರೆ ಹಾಗೂ ಆಗಾಗ್ಗೆ ಈ ಗುಂಪುಗಳನ್ನು ಮರು ರಚಿಸುತ್ತಿರುತ್ತಾರೆ. ಅಂತಹ ಶಿಕ್ಷಕರು ವಿದ್ಯಾರ್ಥಿಗಳು ತಮ್ಮ ಜವಾಬ್ದಾರಿಯನ್ನು ತಾವೇ ತೆಗೆದುಕೊಳ್ಳುವುದನ್ನು ಕಲಿಯಲು, ಜವಾಬ್ದಾರಿಯುತ ವ್ಯಕ್ತಿಗಳಾಗಲು, ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ಹಾಗೂ ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಲು ಸಕ್ರಿಯವಾಗಿ ಕೆಲಸ ಮಾಡುತ್ತಾರೆ. ಇಂತಹ ಶಾಲೆಗಳಲ್ಲಿ ವಿದ್ಯಾರ್ಥಿಗಳು ತಮ್ಮ ಶಿಕ್ಷಕರೊಂದಿಗೆ ಸಹಜವಾಗಿ ಬೆರೆಯುತ್ತಾರೆ ಮತ್ತು ಅವರು ತಮ್ಮ ಶಿಕ್ಷಕರ ಜೊತೆ ಇರಲು ಇಷ್ಟಪಡುವುದನ್ನು ಕಾಣಬಹುದು. ಅವರು ತಮ್ಮ ನೋಟ್ ಪುಸ್ತಕಗಳನ್ನೋ ಅಥವಾ ವರ್ಕ್ ಪುಸ್ತಕಗಳನ್ನೋ ಹಿಡಿದುಕೊಂಡು ತಮ್ಮ ಶಿಕ್ಷಕರ ಬಳಿಯಲ್ಲಿ ಇನ್ನಷ್ಟು ಕೆಲಸಗಳನ್ನು ಕೇಳುತ್ತಾ ಓಡಾಡುವುದನ್ನು ಸಾಮಾನ್ಯವಾಗಿ ಕಾಣಬಹುದಾಗಿದೆ.

### ಪೋಷಕರ ನಿರೀಕ್ಷೆಗಳ ಈಡೇರಿಕೆ

ಶಿಕ್ಷಕರಿಗೆ ಪೋಷಕರ ನಿರೀಕ್ಷೆಗಳ ಕುರಿತು ಸ್ಪಷ್ಟವಾದ ಗ್ರಹಿಕೆ ಇರುತ್ತದೆ ಮತ್ತು ಈ ನಿರೀಕ್ಷೆಗಳನ್ನು ಈಡೇರಿಸಲು ಅವರು ತಮ್ಮ ವಿದ್ಯಾರ್ಥಿಗಳ ಕಲಿಕಾ-ಬೋಧನಾ ಪ್ರಕ್ರಿಯೆಗಳ ಮೇಲೆ ಕಠಿಣ ಪರಿಶ್ರಮವಹಿಸಿ ಪ್ರಯತ್ನಪಡುತ್ತಾರೆ ಎನ್ನುವುದು ಮೂರನೆಯ ಅಂಶವಾಗಿದೆ. ಶಿಕ್ಷಕರು ಪಾಲಕ ಪೋಷಕರೊಡನೆ ಮಾಸಿಕ ಹಾಗೂ ತ್ರೈಮಾಸಿಕ ಸಭೆಗಳನ್ನು ನಡೆಸುತ್ತಾರೆ ಹಾಗೂ ತಮ್ಮ ಮಕ್ಕಳು ಶಾಲೆಯಲ್ಲಿ ಏನನ್ನು ಕಲಿಯುತ್ತಿದ್ದಾರೆ ಎಂಬುದನ್ನು ಅವರಿಗೆ ತಿಳಿಸುವುದು ತಮ್ಮ

ಜವಾಬ್ದಾರಿ ಎಂದು ಅವರು ತಿಳಿದಿರುತ್ತಾರೆ. ಮಕ್ಕಳಿಗೆ ಯಾವ ವಿಚಾರದಲ್ಲಿ ವಿಶೇಷ ಗಮನದ ಅಗತ್ಯವಿದೆ ಎಂಬುದನ್ನು ಕೂಡ ಅವರು ಆಗಾಗ್ಗೆ ತಿಳಿಸುತ್ತಿರುತ್ತಾರೆ. ಅವರ ಪ್ರಸ್ತುತ ಅಗತ್ಯಗಳು ಮತ್ತು ಪೋಷಕರಿಗೆ ತಮ್ಮ ಮಕ್ಕಳ ಕುರಿತು ಇರುವ ಕಾಳಜಿಗಳು, ಉದಾಹರಣೆಗೆ, ಇಂಗ್ಲಿಷ್ ಭಾಷೆ ಕಲಿಯಬೇಕು ಮುಂತಾದವುಗಳ ಕುರಿತು ಕೂಡ ಚರ್ಚಿಸಲಾಗುತ್ತದೆ. ಪೋಷಕರ ಶಾಲೆಯ ಕುರಿತ ಕಾಳಜಿ, ಸಹಕಾರ, ಶಾಲಾ ಕಟ್ಟಡ ನಿರ್ಮಾಣ ಹಾಗೂ ನಿರ್ವಹಣೆ ಮಾಡುವುದರಲ್ಲಿ ಮತ್ತು ಶಾಲಾ ಆವರಣವನ್ನು ಸುಂದರಗೊಳಿಸುವುದರಲ್ಲಿ– ಹೀಗೆ ವಿವಿಧ ಬಗೆಯಲ್ಲಿ ಗೋಚರವಾಗುತ್ತದೆ.

### ಸಾಂವಿಧಾನಿಕ ಮೌಲ್ಯಗಳ ಅನುಸರಣೆ

ನಾನು ಅರ್ಥ ಮಾಡಿಕೊಂಡಿರುವ ನಾಲ್ಕನೆಯ ಅಂಶವೆಂದರೆ, ನಮ್ಮ ಗ್ರಾಮೀಣ ಸಮಾಜಗಳಲ್ಲಿ ಜಾತಿ ಮತ್ತು ಲಿಂಗ ತಾರತಮ್ಯ ಅಥವಾ ಇತರ ಧರ್ಮಗಳು ಅಥವಾ ಆರ್ಥಿಕವಾಗಿ ದುರ್ಬಲ ವರ್ಗಗಳ ವಿರುದ್ಧ ಹೊಂದಿರುವ ಪೂರ್ವಾಗ್ರಹಗಳಂತಹ ಅನೇಕ ಸಾಮಾಜಿಕ ಸಮಸ್ಯೆಗಳು ಕೂಡ ಅಡಗಿವೆ. ಶಿಕ್ಷಣ ಸಂಸ್ಥೆಗಳು ನಮ್ಮ ಸಾಂವಿಧಾನಿಕ ಮೌಲ್ಯಗಳಿಗೆ ಬದ್ಧವಾಗಿರಬೇಕು ಮತ್ತು ಶಾಲೆಗಳು ಇರುವುದೇ ಸಂವೇದನಾಶೀಲರಾದ ಉನ್ನತ ಚಿಂತನೆಗಳಿರುವ ನಾಗರಿಕರನ್ನು ರೂಪಿಸುವುದಕ್ಕಾಗಿ ಹಾಗೂ ತಾರತಮ್ಯಗಳಿಂದ ಮುಕ್ತವಾದ ಪರಿಸರವೊಂದನ್ನು ಸೃಷ್ಟಿಸುವುದಕ್ಕಾಗಿ ಎಂಬುದನ್ನು ಇಂತಹ ಶಾಲೆಗಳ ಶಿಕ್ಷಕರು ಅರಿತಿರುವರು. ಈ ವಿಚಾರಗಳ ಕುರಿತ ಉತ್ತಮ ತಿಳುವಳಿಕೆಯನ್ನು ಶಿಕ್ಷಕರ ಆಲೋಚನೆಗಳಲ್ಲಿ ಮತ್ತು ವರ್ತನೆಗಳಲ್ಲಿ ಕಾಣಬಹುದಾಗಿದೆ. ಆದ್ದರಿಂದ, ಶಾಲೆಯಲ್ಲಿನ ಅವರ ಎಲ್ಲ ಆಚರಣೆ ಮತ್ತು ವ್ಯವಹಾರಗಳು ಎಲ್ಲ ಬಗೆಯ ತಾರತಮ್ಯಗಳಿಂದ ಮುಕ್ತವಾಗಿವೆ. ಅವರು ಈ ವಿಚಾರಗಳ ಕುರಿತು ಪೋಷಕರೊಂದಿಗೆ ಕೂಡ ಚರ್ಚಿಸುತ್ತಾರೆ. ಇದರ ಪರಿಣಾಮವು ಪೋಷಕರಲ್ಲಿ ಧನಾತ್ಮಕ ಬದಲಾವಣೆಗಳ ಸ್ವರೂಪದಲ್ಲಿ ಕಂಡುಬಂದರೆ, ಇದರ ಫಲವು ಸಮಾಜದಲ್ಲಿ ಗೋಚರಿಸುತ್ತದೆ.

### ಮೂಲ ಕೌಶಲಗಳ ಕಡೆಗೆ ಒತ್ತು

ನಾನು ಕಂಡುಕೊಂಡಿರುವ ಐದನೆಯ ಅಂಶವೆಂದರೆ, ಅಂತಹ ಶಾಲೆಗಳಲ್ಲಿ ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ಉರುಹೊಡೆಯುವುದರ ಬದಲಿಗೆ ಮೂಲ ಕೌಶಲಗಳು ಮತ್ತು ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದರ ಕಡೆಗೆ ತಮ್ಮ ಗಮನವನ್ನು ಕೇಂದ್ರೀಕರಿಸುತ್ತಾರೆ ಎನ್ನುವುದು. ಗಮನಾರ್ಹ ಸಂಗತಿಯೆಂದರೆ, ಓದುವುದು ಮತ್ತು ಬರೆಯುವುದು, ಆಲೋಚನೆ ಮತ್ತು ಚಿಂತನೆ, ಕಲ್ಪನೆ ಮತ್ತು ತರ್ಕ ಇತ್ಯಾದಿಗಳನ್ನು ಈ ಶಿಕ್ಷಕರು ಶಿಕ್ಷಣದ ಅಡಿಪಾಯವನ್ನು ರೂಪಿಸುವ ಕೌಶಲಗಳು ಎಂದು ಯಾವುದೇ ಸಂದೇಹವಿಲ್ಲದೆ ಸ್ಪಷ್ಟವಾಗಿ ತಿಳಿದುಕೊಂಡಿದ್ದಾರೆ ಎಂಬುದನ್ನು ನಾನು ಕಂಡುಕೊಂಡಿದ್ದೇನೆ. ಆದ್ದರಿಂದಲೇ, ಈ ಶಾಲೆಗಳಲ್ಲಿ ಅಂತಹ ಕೌಶಲಗಳನ್ನು ಬೆಳೆಸಲು ಸೂಕ್ತ ಗಮನವನ್ನು ನೀಡಲಾಗುತ್ತದೆ. ಈ ಶಾಲೆಗಳಲ್ಲಿ ಮಕ್ಕಳು ಕಲಿಯಲು ಉತ್ಸುಕರಾಗಿರುವುದನ್ನು ಮತ್ತು ಓದಲು ಬರೆಯಲು ಆಸಕ್ತಿ ಹೊಂದಿರುವುದನ್ನು ಕೂಡಾ ನಾನು ಕಂಡಿದ್ದೇನೆ. ಮಕ್ಕಳು ಯಾವುದೇ ಭಯ ಅಥವಾ ಹಿಂಜರಿಕೆಗಳಿಲ್ಲದೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಶಿಕ್ಷಕರು ಕಲಿಕೆಯ ಪ್ರಕ್ರಿಯೆಗೆ ನೆರವಾಗಲು ಮಾತ್ರ ಇರುವವರಾಗಿದ್ದು ತಮ್ಮ ಕಲಿಕೆಯ ಜವಾಬ್ದಾರಿ ಆಯಾ ವಿದ್ಯಾರ್ಥಿಗಳದ್ದೇ ಆಗಿರುತ್ತದೆ ಎಂಬುದನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ಒತ್ತಿ ಹೇಳುತ್ತಾರೆ. ಅವರ ತರಗತಿಗಳಲ್ಲಿ ಸಾಮಾನ್ಯವಾಗಿ ಮಕ್ಕಳಿಂದ ಕೇಳಿಬರುವ ಮಾತುಗಳು 'ಸರ್/ ಮೇಡಮ್, ನಾವು ಮುಂದೆ ಏನು ಓದೋಣ? ಏನು ಬರೆಯೋಣ? ಮುಂದಿನ ಪಾಠ ಓದೋಣವೆ'? ಇತ್ಯಾದಿ. ಪಾಠ ಮಾಡಿ ಆಯಾಸಗೊಂಡಿದ್ದೇನೆ ಎಂದು ಇಲ್ಲಿನ ಶಿಕ್ಷಕರು ಹೇಳುವುದನ್ನು ಕೇಳಿಯೇ ಇಲ್ಲ. ಶಾಲೆ ಮುಗಿದ ಕೂಡಲೇ ಮನೆಗೆ ಓಡಲು ಮಕ್ಕಳು ಆತುರಪಡದಿರುವುದನ್ನೂ ಇಲ್ಲಿ ನಾನು ಗಮನಿಸಿದ್ದೇನೆ.

### ವಿದ್ಯಾರ್ಥಿಗಳಲ್ಲಿ ಶಾಲೆ ನನ್ನದು ಎನ್ನುವ ಭಾವ

ನಾನು ಕಂಡುಕೊಂಡಿರುವ ಆರನೇ ಅಂಶವೆಂದರೆ, ಈ ಶಾಲೆಗಳ ನಿರ್ವಹಣೆಯಲ್ಲಿ ಮಕ್ಕಳು ಪ್ರಮುಖ ಪಾತ್ರವಹಿಸುತ್ತಾರೆ. ಶಾಲೆಯಲ್ಲಿ ಸಂಘಟಿಸಲ್ಪಡುವ ಕಾರ್ಯಕ್ರಮಗಳಲ್ಲಿ, ಮುಖ್ಯವಾಗಿ ದೈನಂದಿನ ಪ್ರಾರ್ಥನೆಯ ಅವಧಿ, ಆಟೋಟಗಳು, ಶಾಲೆಯಲ್ಲಿ ಆಯೋಜಿಸಲ್ಪಡುವ ವಿವಿಧ ಕಾರ್ಯಕ್ರಮಗಳು ಮತ್ತು ರಾಷ್ಟ್ರೀಯ ಹಬ್ಬಗಳು ಮತ್ತಿತರ ಆಚರಣೆಗಳನ್ನು ಸಂಘಟಿಸಿ ನಡೆಸಿಕೊಡುವುದರಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆ ಇರುತ್ತದೆ. ಅಂತಹ ಶಾಲೆಗಳಲ್ಲಿ ಕಟ್ಟಡಗಳು ಸ್ವಚ್ಛತೆಯಿಂದ ಕೂಡಿ ಅಚ್ಚುಕಟ್ಟಾಗಿದ್ದು, ಸುರಕ್ಷಿತವಾಗಿರುವುದರಿಂದ ಮಕ್ಕಳಿಗೆ ಈ ಶಾಲೆ ನನಗೆ ಸೇರಿದ್ದು ಎಂಬ ಭಾವನೆಯನ್ನು ಉಂಟುಮಾಡುತ್ತದೆ. ಶಾಲಾ ಅವಧಿಯ ನಂತರ ಗ್ರಾಮದ ಕೆಲವು ಸಮಾಜ ವಿರೋಧಿ ಶಕ್ತಿಗಳು ಶಾಲೆಗೆ ಬಂದು ಶಾಲಾ ಆವರಣವನ್ನು ದುರುಪಯೋಗಪಡಿಸಿಕೊಳ್ಳುತ್ತವೆ ಎಂದು ಶಿಕ್ಷಕರು ಹೇಳುವುದನ್ನು ನಾನು ಆಗಾಗ ಕೇಳಿಸಿಕೊಳ್ಳುತ್ತಿರುತ್ತೇನೆ. ಆದರೆ ಅಂತಹ ಶಾಲೆಗಳಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರು ಈ ಕುರಿತು ತೀವ್ರ ನಿಗಾ ವಹಿಸುತ್ತಾರೆ ಹಾಗೂ ಶಾಲಾ ಕಟ್ಟಡಗಳನ್ನು ಸಂರಕ್ಷಿಸಿ ಸುರಕ್ಷಿತವಾಗಿಡುವುದು ತಮ್ಮ ಜವಾಬ್ದಾರಿ ಎಂದು ಪರಿಗಣಿಸುತ್ತಾರೆ. ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಶಾಲೆಯು ತಮಗೆ ಸೇರಿದ್ದು, ಅದು ತಮ್ಮ ಗ್ರಾಮದ ಸಮುದಾಯಕ್ಕೆ ಸೇರಿದ ಆಸ್ತಿಯಾಗಿದ್ದು ಅದನ್ನು ಸುರಕ್ಷಿತವಾಗಿ ಕಾಪಾಡುವುದು ತಮ್ಮ ಜವಾಬ್ದಾರಿಯಾಗಿದೆ ಎಂದು ಭಾವಿಸುತ್ತಾರೆ.

### ಶಾಲಾ ಮುಖ್ಯಸ್ಥರ ನಾಯಕತ್ವ

ಏಳನೆಯ ಅಂಶವೆಂದರೆ, ಅಂತಹ ಶಾಲೆಗಳಲ್ಲಿನ ಶಾಲಾ ಮುಖ್ಯಸ್ಥರ ಪಾತ್ರ ಮತ್ತು ಅವರ ಸಮರ್ಥ ನಾಯಕತ್ವ. ಶಾಲಾ ಮುಖ್ಯಸ್ಥರು ಶಿಕ್ಷಣದ ಗುರಿ ಮತ್ತು ಉದ್ದೇಶಗಳ ಬಗ್ಗೆ ಸ್ಪಷ್ಟತೆಯನ್ನು ಹೊಂದಿರುತ್ತಾರೆ. ಮಕ್ಕಳಿಗೆ ವಿವಿಧ ವಿಷಯಗಳನ್ನು ಕಲಿಸುವುದು ಮಾತ್ರವಲ್ಲ, ಅವರನ್ನು ಉತ್ತಮ ನಾಗರಿಕರನ್ನಾಗಿಸುವುದು ಮತ್ತು ಉತ್ತಮ ಸಮಾಜವನ್ನು ರೂಪಿಸುವ ನಿಟ್ಟಿನಲ್ಲಿ ಕೆಲಸ ಮಾಡುವುದು ತಮ್ಮ ಜವಾಬ್ದಾರಿಯಾಗಿದೆ ಎಂದು ಅವರು ನಂಬುತ್ತಾರೆ. ಮಕ್ಕಳೊಂದಿಗೆ ಅವರ ಸಂವಹನವು ಸಹಜ ಮತ್ತು ಸ್ವಭಾವಿಕವಾಗಿದ್ದು, ಅವರು ಮಕ್ಕಳನ್ನು ಪ್ರೀತಿಯಿಂದ ಕಾಣುತ್ತಾರೆ ಹಾಗೂ ಕಾಲಕಾಲಕ್ಕೆ ಮಕ್ಕಳಿಗೆ ಸಲಹೆಗಳನ್ನು ನೀಡುತ್ತಿರುತ್ತಾರೆ.

ಅವರು ತಮ್ಮ ಶಾಲೆಗೆ ತಾವು ಮಾದರಿಯಾಗುವಂತೆ ಇರುತ್ತಾರೆ ಮತ್ತು ತಮ್ಮ ಸಹಶಿಕ್ಷಕರೊಂದಿಗೆ ಸ್ನೇಹಪರತೆಯಿಂದ ಇರುತ್ತಲೇ ವೃತ್ತಿಪರ ಸಂಬಂಧಗಳನ್ನು ಹೊಂದಿದ್ದಾರೆ. ಶಿಕ್ಷಕರು ತಮ್ಮ ಬೋಧನಾ ಕಾರ್ಯಗಳನ್ನು ಸಂತೋಷದಿಂದ ಮಾಡಲು ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕೆಂದು ಅವರು ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಬೋಧನೆಗೆ ಸಂಬಂಧಿಸಿದಂತೆ ಶಿಕ್ಷಕರು ಎದುರಿಸುತ್ತಿರುವ


ಸಮಸ್ಯೆಗಳ ಕುರಿತು ಅವರು ಎಚ್ಚರವಹಿಸುತ್ತಾರೆ ಮತ್ತು ಅಗತ್ಯವಿದ್ದರೆ ಅವುಗಳನ್ನು ಪರಿಹರಿಸಲು ಸಂಬಂಧಿಸಿದ ಇಲಾಖೆಗಳ ಅಥವಾ ಸಂಸ್ಥೆಗಳ ಸಹಾಯ ಪಡೆಯುತ್ತಾರೆ.

ಈ ಶಾಲಾ ಮಕ್ಕಳ ಕಲಿಕಾ ಸ್ಥಿತಿ ಆಯಾ ಹಂತಗಳಿಗೆ ಸೂಕ್ತವಾಗಿವೆಯೇ ಎಂಬುದನ್ನು ತಿಳಿದುಕೊಳ್ಳಲು ಈ ಶಾಲಾ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಕಾಲಕಾಲಕ್ಕೆ ಪರಿಶೀಲನೆಯನ್ನು ನಡೆಸುತ್ತಾರೆ. ಅವರು ವಿದ್ಯಾರ್ಥಿಗಳಿಗೆ ಶಾಲೆ, ಬ್ಲಾಕ್ ಮತ್ತು ಜಿಲ್ಲಾ ಮಟ್ಟದಲ್ಲಿ ವಿವಿಧ ಕ್ರೀಡೆಗಳು ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವಿಕೆಯ ಅವಕಾಶಗಳನ್ನು ಒದಗಿಸಿಕೊಡುತ್ತಾರೆ. ಶಾಲೆಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುವಾಗ ಪಾಲಕರು ಕೂಡ ತಮ್ಮನ್ನು ಶಾಲೆಯ ಜೊತೆಗಿರುವವರು ಎಂದು ಭಾವಿಸುತ್ತಾರೆ ಮತ್ತು ತಮ್ಮಿಂದ ಸಾಧ್ಯವಾದಷ್ಟು ರೀತಿಯಲ್ಲಿ ಶಾಲೆಗೆ ನೆರವಾಗಲು ಉತ್ಸಾಹದಿಂದ ಮುಂದೆ ಬರುತ್ತಾರೆ ಎಂಬುದು ಸ್ಪಷ್ಟವಾಗಿದೆ.

ಈ ಶಾಲೆಗಳಲ್ಲಿ, ಶಾಲಾ ಅಸೆಂಬ್ಲಿ, ಮಕ್ಕಳ ಗ್ರಂಥಾಲಯ, ಮಕ್ಕಳ ಆಹಾರ ಮತ್ತು ಆಸನ ವ್ಯವಸ್ಥೆಗಳು ಮತ್ತು ಕ್ರೀಡಾ ಸಲಕರಣೆಗಳನ್ನು ಇರಿಸುವಂತಹ ಸ್ಥಳಗಳ ನಿರ್ವಹಣೆಗೆ ಮಾತ್ರವಲ್ಲದೆ ಶಾಲಾ ಆವರಣವನ್ನು ಸುಂದರಗೊಳಿಸಲು ಹಾಗೂ ಸ್ವಚ್ಛವಾಗಿರಿಸಲು ಕೂಡ ಸೂಕ್ತವಾದ ಗಮನವನ್ನು ನೀಡಲಾಗುತ್ತದೆ.

### ಶಿಕ್ಷಕರಲ್ಲಿ ತಂಡವಾಗಿ ಉತ್ಸಾಹದಿಂದ ಕೆಲಸ ಮಾಡುವ ಸಹಭಾವನೆ

ನಾನು ಅರ್ಥ ಮಾಡಿಕೊಂಡಿರುವ ಕೊನೆಯ ವಿಷಯವೆಂದರೆ, ಶಿಕ್ಷಕರು ತಂಡವಾಗಿ ಒಟ್ಟಾಗಿ ಕೆಲಸ ಮಾಡುವುದು. ಓರ್ವ ಶಿಕ್ಷಕರು ವಿಷಯದ ಬೋಧನೆಯಲ್ಲಿ ವೈಯಕ್ತಿಕ ಪ್ರಯತ್ನಗಳನ್ನು ಮಾಡಬಹುದು. ಆದರೆ ಇಡೀ ಶಾಲೆಯು ಜವಾಬ್ದಾರಿಯುತ ಸಂಸ್ಥೆಯಾಗಿ ಕೆಲಸ ಮಾಡಿದಾಗ ಮಾತ್ರ ಅಲ್ಲಿನ ಸ್ಥಿತಿಗತಿ ತುಂಬಾ ಉತ್ತಮವಾಗಿರುತ್ತದೆ. ಶಿಕ್ಷಕರಿಗೆ ಶಾಲೆಯು ನಮ್ಮದು ಎಂಬ ಭಾವನೆ ಇದ್ದಾಗ ಅವರು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಕೆಲಸ ಮಾಡುತ್ತಾರೆ; ಮತ್ತು ಅವರು ಶಿಕ್ಷಣದ ವ್ಯಾಪಕವಾದ ಗುರಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡುತ್ತಾರೆ. ಇದರಿಂದಾಗಿ ಈ ಶಾಲೆಗಳಲ್ಲಿ ವಿದ್ಯಾರ್ಥಿಗಳು ಕಲಿಯುತ್ತಿರುವುದನ್ನು ಕಾಣಬಹುದು. ಶಾಲೆಯ ಎಲ್ಲ ಚಟುವಟಿಕೆಗಳಲ್ಲೂ ಅವರು ಉತ್ಸುಕತೆಯಿಂದ ಪಾಲ್ಗೊಳ್ಳುವುದನ್ನು ಕಾಣಬಹುದು. ಈ ಶಾಲೆಯಲ್ಲಿ ವಿದ್ಯಾರ್ಥಿಗಳು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆಯನ್ನು ತೋರಿದ್ದಾರೆ ಹಾಗೂ ಈ ಶಾಲೆ ನಮಗೆ ಸೇರಿದ್ದು ಎಂಬ ಗಾಢವಾದ ಭಾವನೆಯನ್ನು ಅವರು ಹೊಂದಿದ್ದಾರೆ. ಶಿಕ್ಷಣ ಇಲಾಖೆಯ ಅಧಿಕಾರಿಗಳ ಸಹಕಾರವೂ ಈ ಶಾಲೆಗಳಲ್ಲಿ ಎದ್ದು ಕಾಣುತ್ತಿದೆ.



**ಶೋಭನ್ ಸಿಂಗ್ ನೇಗಿ** ಅವರು ಉತ್ತರಾಖಂಡ್ ರಾಜ್ಯದಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್ ಕಾರ್ಯಾಚರಣೆಗಳ ಮುಖ್ಯಸ್ಥರಾಗಿದ್ದಾರೆ. ಅವರು 2010ರಿಂದ ಫೌಂಡೇಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಉತ್ತರಾಖಂಡ್ ರಾಜ್ಯದ ಕೆಲಸಗಳಿಗೂ ಮುನ್ನ ಅವರು ರಾಜಾಸ್ಥಾನದ ಬಾರ್‌ಮೇರ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಅವರನ್ನು shobhan@azimpremjifoundation.org ಮೂಲಕ ಸಂಪರ್ಕಿಸಬಹುದು.

● ಅನುವಾದ: **ಉಷಾ ಆಂಬ್ರೋಸ್** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**

ಯಾವುದೇ ಅಭ್ಯಾಸವು ಗಟ್ಟಿಯಾಗಿ ಅಡಿಪಾಯ ಹಾಕಿದ ಮೌಲ್ಯದಿಂದಲೇ ಬೆಳೆದು ಬರುತ್ತದೆ. ಉದಾಹರಣೆಗೆ, ಶಾಲೆಯ ಬೆಳಗ್ಗಿನ ಸಭೆಯಲ್ಲಿ ಜಾತ್ಯಾತೀತ ಪ್ರಾರ್ಥನೆಯನ್ನು ಸೇರಿಸಲು ನಿರ್ಧರಿಸಿದರೆ, ಅದು ಶಾಲೆಯ ಜಾತ್ಯಾತೀತ ಮೌಲ್ಯವನ್ನು ಮತ್ತು ಎಲ್ಲರ ಸಮನ್ವಯತೆಯನ್ನು ಬಯಸುವುದನ್ನು ತೋರಿಸುತ್ತದೆ. ಒಂದು ವೇಳೆ ಶಾಲೆಯು ಬೆಳಗ್ಗಿನ ಸಭೆಯಲ್ಲಿ ಪ್ರಾರ್ಥನೆಯ ಬದಲಿಗೆ ದೇಶಕ್ಕಾಗಿ ಪ್ರಮಾಣವನ್ನು ಬೋಧಿಸಿದರೆ ಅವರು ಧಾರ್ಮಿಕ ಸಂಬಂಧಕ್ಕಿಂತ ದೇಶಭಕ್ತಿಯ ಮೇಲಿನ ಒಲವನ್ನು ಪ್ರದರ್ಶಿಸುತ್ತಿದ್ದಾರೆ ಎಂಬುದು ತಿಳಿಯುತ್ತದೆ. ಅಭ್ಯಾಸದ ಮಹತ್ವವು ಅವರು ಪ್ರದರ್ಶಿಸುವ ಮೌಲ್ಯಗಳಲ್ಲಿದೆ ಮತ್ತು ಶಾಲೆಯು ಇವುಗಳಲ್ಲಿ ಮಾಡಿಕೊಳ್ಳುವ ಆಯ್ಕೆಯು ಮಕ್ಕಳಲ್ಲಿ ಅದು ಏನನ್ನು ಬಿತ್ತಲು ಬಯಸುತ್ತದೆ ಎಂಬುದನ್ನು ತೋರಿಸುತ್ತದೆ.

**ಶಾಲಾ ಸಂಸ್ಕೃತಿಯ ಸ್ವರೂಪ ಮತ್ತು ಉದ್ದೇಶ, ಪ್ರಕಾಶ್ ಅಯ್ಯರ್, ಪುಟ 10**


# ಬೆಂಬಲಪೂರಿತ ಮತ್ತು ಸಶಕ್ತರನ್ನಾಗಿಸುವ ಒಂದು ಪರಿಸರವನ್ನು ಸೃಷ್ಟಿಸುವುದು

## ಏಕ-ಶಿಕ್ಷಕರುಳ್ಳ ಗ್ರಾಮೀಣ ಶಾಲೆಯಿಂದ ಕಲಿಕೆಗಳು

ಸ್ವಾತಿ ಭಂಡಾರಿ

ಶಾಲೆಯು ಮಕ್ಕಳಿಗೆ ಎರಡನೆಯ ಮನೆಯಿದ್ದಂತೆ. ಏಕೆಂದರೆ ಅವರು ತಮ್ಮ ಬಹುಪಾಲು ಸಮಯವನ್ನು ಅಲ್ಲಿಯೇ ಕಳೆಯುತ್ತಾರೆ. ಹಾಗಾಗಿ ಬರಮಾಡಿಕೊಳ್ಳುವ, ಪ್ರೀತಿಸುವ ಮತ್ತು ಸುರಕ್ಷಿತ ಭಾವನೆ ಮೂಡುವಂತೆ ಶಿಕ್ಷಕರು ಮಾಡಬೇಕಿದೆ. ನಮ್ಮನ್ನು ಪ್ರೀತಿಸುತ್ತಿದ್ದಾರೆ ಎಂಬ ಭಾವನೆ ಬಂದಾಗ ಉತ್ತಮ ಪ್ರದರ್ಶನ ನೀಡುತ್ತೇವೆ ಎಂಬುದು ಸಾರ್ವಕಾಲಿಕ ಸತ್ಯವಾಗಿದೆ; ನಾವು ಸುರಕ್ಷತೆಯ ಭಾವನೆಯನ್ನು ಅನುಭವಿಸಿದಾಗ, ಆತ್ಮವಿಶ್ವಾಸವನ್ನು ಗಳಿಸಿಕೊಳ್ಳುತ್ತೇವೆ. ಶಿಕ್ಷಕರ ಮೇಲೆ ಕೆಲಸದ ಹೊರೆಯಿದ್ದಾಗ ಶಾಲೆಯನ್ನು ಎಲ್ಲಾ ಮಕ್ಕಳ ಸಂತೋಷದ ತಾಣವಾಗಿಸುವುದು ಸುಲಭದ ಮಾತಲ್ಲ. ಅದರಲ್ಲೂ ಏಕೋಪಾಧ್ಯಾಯ ಶಾಲೆಯಲ್ಲಂತೂ ಶಿಕ್ಷಕರು ಪ್ರತೀ ವಿದ್ಯಾರ್ಥಿಯ ಕಲಿಕೆ, ಅವರ ಯೋಗಕ್ಷೇಮದ ಬಗೆಗೆ ಗಮನ ಹರಿಸುತ್ತ ಇನ್ನೊಂದೆಡೆ ಆಡಳಿತಾತ್ಮಕ ಕೆಲಸಗಳನ್ನೂ ನಿರ್ವಹಿಸುವುದು ಇನ್ನೂ ಕಷ್ಟಸಾಧ್ಯವಾಗುತ್ತದೆ.

ನಾನು ರಾಜಸ್ಥಾನದ ಐತಿಹಾಸಿಕ ರಾಜಸ್ಮಂಡ್ ಜಿಲ್ಲೆಯ ಗ್ರಾಮೀಣ ಪ್ರದೇಶ ಕುಂಭಲ್‌ಘರ್‌ನಲ್ಲಿರುವ ಲಾಡ್ಲಾ ಕಿ ಬಗಲ್‌ನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಅಂತಹ ಓರ್ವ ಶಿಕ್ಷಕ ಪ್ರಭು ರಾಮ್ ಅವರನ್ನು ಭೇಟಿಯಾದೆ. ಆ ಶಾಲೆಗೆ ಭೇಟಿ ನೀಡುವ ಯಾರಿಗಾದರೂ ತನ್ನ ವಿದ್ಯಾರ್ಥಿಗಳ ಮೇಲೆ ಪ್ರಭು ರಾಮರಿಗಿರುವ ಪ್ರಭಾವ ಎದ್ದು ಕಾಣಿಸುತ್ತದೆ. ನಾನು ಕೊರೋನಾ ಸಾಂಕ್ರಾಮಿಕದ ಸಮಯದಲ್ಲಿ ಈ ಶಾಲೆಯನ್ನು ನೋಡಲು ಹೋದಾಗ ಈ ಶಿಕ್ಷಕರನ್ನು ಮೊದಲ ಸಾರಿ ಭೇಟಿ ಮಾಡಿದೆ. ಆ ಸಮಯದಲ್ಲಿ ನನಗೆ ಎದ್ದು ತೋರಿದ್ದೇನೆಂದರೆ ಅವರು ಥರ್ಮೋಕೋಲ್ ಹಾಳೆಗಳಿಂದ ತಯಾರಿಸಿದ್ದ ಅಮೂಲ್ಯ ಬೋಧನಾ–ಕಲಿಕಾ ಸಾಮಗ್ರಿಗಳು (Teaching–Learning Materials (TLMs)). ಮಕ್ಕಳ ಕಲಿಕೆಯ ಮಟ್ಟಗಳನ್ನು ಆಧರಿಸಿದ, ಉತ್ಸಾಹಭರಿತ ಮತ್ತು ಸಂತೋಷಕರ ಪರಿಸರವನ್ನು ಸೃಷ್ಟಿಸುವುದು ಮಕ್ಕಳನ್ನು ಕಲಿಕೆಯ ಚಟುವಟಿಕೆಗಳಲ್ಲಿ ತೊಡಗಿಸಲು ಸಹಾಯಮಾಡುತ್ತದೆ. ವಿಶಿಷ್ಟವಾಗಿ ಎದ್ದು ಕಾಣುತ್ತಿದ್ದ ಒಂದು TLM ಎಂದರೆ ಶಿಕ್ಷಕರು ಥರ್ಮೋಕೋಲಿನ ಹಾಳೆಗಳಿಂದ ಮಾಡಿದ ಒಂದು ಟಿವಿಯಾಗಿತ್ತು. ಈ ಚೌಕಟ್ಟಿನೊಳಗೆ ಕೈಗಳಿಂದಲೇ ಎಡಬದಿಯಿಂದ ಬಲಬದಿಗೆ ಸರಿಸಬಲ್ಲ ಮುದ್ರಿತ ಕಥೆಗಳ ಪ್ರದರ್ಶನ ಸಾಮಗ್ರಿಯಿತ್ತು. ಈ 'ಟಿವಿ ಪರದೆಯು' ದೊಡ್ಡ, ವರ್ಣರಂಜಿತ ಕಥೆಗಳನ್ನು ಪ್ರದರ್ಶಿಸುತ್ತಿತ್ತು ಮತ್ತು ವಿದ್ಯಾರ್ಥಿಗಳು 'ಚಾನಲ್ ಬದಲಿಸಿ' ಇತರ ಕಥೆಗಳನ್ನು 'ವೀಕ್ಷಿಸಲು' ಸಾಧ್ಯವಾಗುತ್ತಿತ್ತು. ಶಿಕ್ಷಕರು ಕಥೆಯನ್ನು ಕೈಗಳಲ್ಲೇ ಓಡಿಸುವ ಮೂಲಕ ಹಾಗೆ ಮಾಡುತ್ತಿದ್ದರು ಮತ್ತು ಕಥೆ ಮುಂದುವರಿದಂತೆ, ಶಿಕ್ಷಕರು ಪ್ರಶ್ನೆ ಕೇಳಲು ಮತ್ತು ಮುಂದೇನಾಗಬಹುದು ಎಂದು ಊಹಿಸಲು ಮಕ್ಕಳನ್ನು ತೊಡಗಿಸಿಕೊಳ್ಳಲು ಕಥೆಗೆ ವಿರಾಮ ನೀಡುತ್ತಿದ್ದರು. ಕಥೆಯ ನಂತರ, ಮಕ್ಕಳು ತಮ್ಮ ನೆಚ್ಚಿನ ಸನ್ನಿವೇಶವನ್ನು ಚಿತ್ರಿಸುವುದಕ್ಕೆ ಅಥವಾ ಆ




*ಚಿತ್ರ 1. ಶಿಕ್ಷಕರಿಂದ ನಿರ್ಮಿತವಾದ 'ಟಿವಿ ಸೆಟ್'*

ಕಥೆಯ ಸಣ್ಣ ಮುಂದುವರಿಕೆಯನ್ನು ಬರೆಯುವುದಕ್ಕೆ ಸಣ್ಣ ಗುಂಪುಗಳಾಗಿ ಒಡೆದರು. ಈ ಕೈಯಾರೆ ರಚಿಸಿದ ಟಿಎಲ್‌ಎಂನಿಂದ ದೂರದರ್ಶನದ ಅನುಭವವನ್ನು ಕೃತಕವಾಗಿ ಪ್ರಚೋದಿಸಿ, ಶಿಕ್ಷಕರು ಕ್ರಿಯಾಶೀಲವಾದ ಮತ್ತು ಪರಸ್ಪರ ಸಂವಾದಾತ್ಮಕ ಕಲಿಕೆಯ ಪರಿಸರವನ್ನು ನಿರ್ಮಿಸುವ ಮೂಲಕ ಓದುವುದು ಮತ್ತು ಕಲಿಯುವುದನ್ನು ಸಂತೋಷಕರವಾಗಿಯೂ ಶೈಕ್ಷಣಿಕವಾಗಿಯೂ ಸಾಗುವಂತೆ ಮಾಡಿದರು.

ನಾನು ಮತ್ತೊಮ್ಮೆ ಈ ಶಾಲೆಗೆ ಮಕ್ಕಳ ಮೌಲ್ಯಮಾಪನದ ಅಧ್ಯಯನಕ್ಕೋಸ್ಕರ ಭೇಟಿ ನೀಡಿದಾಗ, ನನಗೆ ಅವರೊಡನೆ ಕಳೆಯಲು ಹೆಚ್ಚಿನ ಸಮಯ ಸಿಕ್ಕಿತು ಮತ್ತು ಅವರ ಗಮನಾರ್ಹವಾದ ಕಲಿಕೆಯ ಮತ್ತು ಆತ್ಮವಿಶ್ವಾಸದ ಮಟ್ಟಗಳನ್ನು ನೋಡಿ ಮೂಕವಿಸ್ಮಿತಳಾದೆ. ನಾನು ಭೇಟಿ ನೀಡುವ ಹಲವು ಶಾಲೆಗಳಲ್ಲಿ, ಅನೌಪಚಾರಿಕ ಸಂಭಾಷಣೆಗಳಲ್ಲಿ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಕೂಡಿರುತ್ತಾರೆ. ಆದರೆ ಅವರ ಕಲಿಕೆಯ ಮಟ್ಟವನ್ನು ಪರಿಶೀಲಿಸಲು ನಾನು ಪ್ರಶ್ನೆಗಳನ್ನು ಕೇಳಿದಾಗ, ಅವರು ಧೈರ್ಯಗೆಡುವ ಲಕ್ಷಣಗಳನ್ನು ತೋರಿಸುತ್ತಾರೆ. ಇಲ್ಲಿ, ನಾನು ಅವರೊಡನೆ ಸಂವಾದ ಮಾಡುತ್ತಿರುವುದು ಇದೇ ಮೊದಲಾದರೂ ಮಕ್ಕಳು ನನ್ನ ಪ್ರಶ್ನೆಗಳಿಗೆ ಮುಕ್ತವಾಗಿ ಸ್ಪಂದಿಸಿದರು. ಶಾಲೆಯು ಅವರ ಸಂತೋಷದ ತಾಣವಾಗಿದ್ದಂತೆ ಕಂಡುಬಂದಿತು. ಹೀಗಾಗಲು ಏನು ಕಾರಣವೆಂದು ತಿಳಿಯಲು, ನಾನು ಈ ಶಾಲೆಯಲ್ಲಿ ಒಂದು ಇಡೀ ದಿನ ಕಳೆಯಲು ನಿರ್ಧರಿಸಿದೆ.

### ಪ್ರೋತ್ಸಾಹ ಮತ್ತು ಬೆಂಬಲ

ಈ ಶಾಲೆಗೆ ಎರಡೇ ತರಗತಿ ಕೊಠಡಿಗಳಿವೆ. ಹಾಗಾಗಿ ಒಂದನೇ ಮತ್ತು ಎರಡನೇ ತರಗತಿಯವರು ಒಂದೇ ಕೊಠಡಿಯಲ್ಲಿ ಜೊತೆಯಾಗಿ ಕುಳಿತರೆ, ಇನ್ನೊಂದರಲ್ಲಿ ಮೂರು, ನಾಲ್ಕು ಮತ್ತು ಐದನೇ ತರಗತಿಯವರು ಒಟ್ಟಾಗಿ ಕೂರುತ್ತಾರೆ. ಈ ವ್ಯವಸ್ಥೆಯನ್ನು ಜಾಗರೂಕತೆಯಿಂದ, ವಿದ್ಯಾರ್ಥಿಯ ಜ್ಞಾನಗ್ರಹಣ ಮತ್ತು ಶೈಕ್ಷಣಿಕ ಬೆಳವಣಿಗೆಯನ್ನು ಮನದಲ್ಲಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಎಲ್ಲಾ ಎಳೆಯ ಮಕ್ಕಳನ್ನು ಒಂದೇ ಕೊಠಡಿಯಲ್ಲಿಡುವುದರಿಂದ ಶಿಕ್ಷಕರಿಗೆ ಮಕ್ಕಳ ವೈಯಕ್ತಿಕ ಅಗತ್ಯಗಳನ್ನು ಮತ್ತು ಕಲಿಕೆಯ ಶೈಲಿಗಳನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿ, ಅವುಗಳಿಗೆ ತಕ್ಕಂತೆ ಬೋಧನೆಯನ್ನು ಒದಗಿಸಲು ಸಾಧ್ಯವಾಗುತ್ತದೆ. ಹೆಚ್ಚುವರಿಯಾಗಿ, ಈ ವ್ಯವಸ್ಥೆಯು ಶಿಕ್ಷಕರು ತರಗತಿಯಲ್ಲಿ ಹಾಜರಿಲ್ಲದ ಸಮಯದಲ್ಲಿ ಸಹಪಾಠಿಗಳ ಬೆಂಬಲವನ್ನು ಪೋಷಿಸುತ್ತದೆ. ಅಂಥ ಸಮಯಗಳಲ್ಲಿ, ಎರಡನೇ ತರಗತಿಯ ಮಕ್ಕಳು ಬಹಳ ಸಲ ಮುಂದಾಳತ್ವ ವಹಿಸಿಕೊಂಡು ಶಿಕ್ಷಕರ ಸೂಚನೆಯ ಮೇರೆಗೆ ಒಂದನೇ ತರಗತಿಗೆ ಬೆಂಬಲ ನೀಡುತ್ತಾರೆ. ಅವರು ಪರಿಣಾಮಕಾರಿಯಾಗಿ ಸಹಯೋಗ ನೀಡುವುದನ್ನು ಮತ್ತು ಪರಸ್ಪರ ಬೆಂಬಲ ಒದಗಿಸುವುದನ್ನು ನಾನು ಗಮನಿಸಿದ್ದೇನೆ.

ದಾಖಲಾತಿಗೊಳ್ಳದ ಮಕ್ಕಳು (ದಾಖಲಾದ ಮಕ್ಕಳೊಡನೆ ಬರುವವರು) ಸಹ ಒಂದನೇ ಮತ್ತು ಎರಡನೇ ತರಗತಿಗಳಲ್ಲಿ ಕೂರುತ್ತಾರೆ ಮತ್ತು ಅವರೊಡನೆ ಕಲಿಯಲು ಆರಂಭಿಸುತ್ತಾರೆ. ಒಂದು ಸಂದರ್ಭದಲ್ಲಿ, ಅಕ್ಷರಗಳನ್ನು ಗುರುತಿಸುವ ಪಾಠವೊಂದರಲ್ಲಿ, ಶಿಕ್ಷಕರು ಎಲ್ಲಾ ಅಕ್ಷರಗಳನ್ನೂ ಕರಿಹಲಗೆಯ ಮೇಲೆ ಬರೆದರು. ಅವುಗಳಲ್ಲಿ ಒಂದು ಅಕ್ಷರವನ್ನು ಹೇಳಿದ ಶಿಕ್ಷಕರು, ಅದು ಯಾವುದೆಂದು ಕರಿಹಲಗೆಯ ಬಳಿ ಬಂದು ಸೀಮೆಸುಣ್ಣದಿಂದ



*ಚಿತ್ರ 2. ಶಿಕ್ಷಕರಿಂದ ನಿರ್ಮಿತಗೊಂಡ ಮುದ್ರಣ ಸಮೃದ್ಧ ಪರಿಸರ*

ಆ ಅಕ್ಷರದ ಸುತ್ತ ಗೆರೆ ಎಳೆದು ಗುರುತಿಸುವಂತೆ ಒಬ್ಬ ವಿದ್ಯಾರ್ಥಿಯ ಹೆಸರನ್ನೂ ಸಹ ಕರೆದರು. ಸ್ವಲ್ಪ ಸಮಯದ ನಂತರ ದಾಖಲಾತಿಗೊಳ್ಳದ ಒಂದು ಮಗು ಶಿಕ್ಷಕರ ಬಳಿ ಬಂದು ತಾನು ಇದರಲ್ಲಿ ಭಾಗವಹಿಸುತ್ತೇನೆಂದು ತನಗೆ ಸೀಮೆಸುಣ್ಣ ನೀಡುವಂತೆ ವಿನಂತಿಸಿತು. ಶಿಕ್ಷಕರು ಆ ಮಗುವಿಗೆ ಸೀಮೆಸುಣ್ಣ ಕೊಟ್ಟರು ಮತ್ತು ಆ ಮಗು ಕಪ್ಪುಹಲಗೆಯ ಬಳಿ ಅಕ್ಷರಕ್ಕೆ ಸುತ್ತು ಹಾಕಲೆಂದು ಹೋಯಿತು. ಆಗ ಶಿಕ್ಷಕರು ಇಡೀ ತರಗತಿಗೆ ಚಪ್ಪಾಳೆ ತಟ್ಟುವಂತೆ ಹೇಳಿದರು. ಬಳಿಕ ಈ ಬಗ್ಗೆ ನಾನು ಶಿಕ್ಷಕರೊಡನೆ ಚರ್ಚಿಸಿದಾಗ, ಅವರು ಇದು ಆ ಮಗು ಮತ್ತು ಇತರರಿಗೆ ಕಲಿಯುವ ಮೊದಲ ಹೆಜ್ಜೆಯಾಗಿದ್ದು, ಒಳಗೊಳ್ಳುವ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ ಎಂದು ವಿವರಿಸಿದರು.

ಪ್ರಭು ರಾಮರ ಕಲಿಸುವಿಕೆಯು ಮಗು-ಕೇಂದ್ರಿತವಾಗಿದ್ದು ಅವರು ಪಠ್ಯಪುಸ್ತಕಗಳನ್ನು ಮೀರಿದ ಸಂಪನ್ಮೂಲಗಳನ್ನು ಅಳವಡಿಸಿಕೊಳ್ಳುತ್ತಾರೆ, ಕೆಲವನ್ನು ಅವರೇ ನಿರ್ಮಿಸಿದ್ದು ಅವನ್ನು ತರಗತಿಯ ಗೋಡೆಗಳ ಮೇಲೆ ಪ್ರದರ್ಶನಕ್ಕಿಡಲಾಗಿದೆ. ಅವರು ತಮ್ಮ ವಿರಾಮದ ಸಮಯದಲ್ಲಿ ನಿರ್ಮಿಸಿರುವ ಮುದ್ರಿತ ಪರಿಸರದಿಂದ ಈ ತರಗತಿಗಳು ಸಮೃದ್ಧವಾಗಿವೆ.

ಈ ಶಿಕ್ಷಕರ ಕಲಿಸುವಿಕೆಯ ಅತ್ಯುತ್ತಮ ಅಂಶಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆಯು ಒಂದಾಗಿತ್ತು. ಗೋಡೆಯ ಮೇಲೆ ಪ್ರದರ್ಶಿತಗೊಂಡ ಭಾರತದ ಮತ್ತು ರಾಜಸ್ಥಾನದ ನಕ್ಷೆಗಳ ಬಗ್ಗೆ ಚರ್ಚಿಸುವಾಗ, ಶಿಕ್ಷಕರು ವಿದ್ಯಾರ್ಥಿಗಳಿಗೆ ನಕ್ಷೆಗಳನ್ನು ಓದುವುದು ಹೇಗೆಂದು ಹೇಳಿಕೊಟ್ಟರು. ನಂತರ ಪ್ರತೀ ವಿದ್ಯಾರ್ಥಿಗೂ ಸಂಬಂಧಿತ ಪ್ರಶ್ನೆಗಳ ಮೂಲಕ ಶಿಕ್ಷಕರ ಪ್ರಚೋದನೆಯೊಡನೆ ಅವರೇನು ಕಲಿತರು ಎಂದು ಕೇಳಲಾಯಿತು. ಒಂದೊಮ್ಮೆ ವಿದ್ಯಾರ್ಥಿ

ಗೊಂದಲದಲ್ಲಿದ್ದರೆ, ಶಿಕ್ಷಕರು ಆತನಿಗೆ ಸಹಾಯ ಮಾಡಲು ಪ್ರಶ್ನೆಗಳನ್ನು ಮಾರ್ಪಾಟು ಮಾಡುತ್ತಿದ್ದರು. ಅವರು ವೃತ್ತಪತ್ರಿಕೆ, ಭೂಗೋಳದಂತಹ ಅನೇಕ ಇತರ ಸಂಪನ್ಮೂಲಗಳನ್ನು ಬಳಸಿಕೊಂಡು ಭಾಷೆಯನ್ನು ಕಲಿಸುತ್ತಿದ್ದರು. ಪ್ರಭುರಾಮರು ಪ್ರತಿಯೊಬ್ಬ ಮಗುವಿಗೂ ಸಮಾನವಾದ ಗಮನವನ್ನು ಕೊಡುತ್ತಾರೆ ಮತ್ತು ಅವರೆಲ್ಲರಿಗೂ ಸಮಾನ ಅವಕಾಶಗಳು ಸಿಗುವಂತೆ ನೋಡಿಕೊಳ್ಳುತ್ತಾರೆ. ಉದಾಹರಣೆಗೆ, ಐದನೇ ತರಗತಿಗೆ ದೇಶದ ಉತ್ಸವಗಳ ಬಗೆಗಿನ ಪಾಠವೊಂದನ್ನು ಕಲಿಸುವಾಗ, ಆ ಪಾಠದಲ್ಲಿ ಬಂದ ಉತ್ಸವಗಳನ್ನು ಆಚರಿಸಿದ ಅನುಭವವನ್ನು ಮಕ್ಕಳ ಬಾಯಲ್ಲಿ ಕೇಳಿದರು. ಅವರಿಗೆ ಚರ್ಚೆಗೆ ಅವಕಾಶವನ್ನು ನೀಡಿದರು. ಮೂರು, ನಾಲ್ಕು ಮತ್ತು ಐದನೆಯ ತರಗತಿಗಳ ಎಲ್ಲಾ ವಿದ್ಯಾರ್ಥಿಗಳೂ ಈ ಚರ್ಚೆಯಲ್ಲಿ ಭಾಗವಹಿಸಿದರು. ನಂತರ, ದರ್ಜೆಗಳಿಗೆ ತಕ್ಕಂತೆ ರೂಪಿಸಿದ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯುವಂತೆ ಶಿಕ್ಷಕರು ಅವರೆಲ್ಲರಿಗೂ ಉತ್ತೇಜಿಸಿದರು.

ತರಗತಿಯ ಕಾರ್ಯಕಲಾಪಗಳಲ್ಲಿ ಭಾಗವಹಿಸದ ಒಬ್ಬನೇ ಒಬ್ಬ ವಿದ್ಯಾರ್ಥಿಯನ್ನೂ ಸಹ ನಾನು ಅಲ್ಲಿ ನೋಡಲಿಲ್ಲ, ಮತ್ತು ಅವರ ತರಗತಿಯಲ್ಲಿ ಪ್ರತೀ ಮಗುವೂ ಸಂತೋಷವಾಗಿತ್ತು ಮತ್ತು ಆತ್ಮವಿಶ್ವಾಸದಿಂದಿತ್ತು. ಅವರು ಸ್ಪಂದಿಸುತ್ತಿದ್ದರು ಮತ್ತು ಏನಾದರೂ ಅರ್ಥವಾಗದೇ ಹೋದರೆ ಯಾವುದೇ ಹಿಂಜರಿಕೆಯಿಲ್ಲದೇ ಪ್ರಶ್ನಿಸುತ್ತಿದ್ದರು. ಚರ್ಚೆಯ ಸಮಯದಲ್ಲಿ ಅವರಿಗೇನಾದರೂ ಹೇಳಬೇಕೆನಿಸಿದಲ್ಲಿ, ಕೈ ಮೇಲೆತ್ತುತ್ತಿದ್ದರು, ತಮ್ಮ ಸರದಿಗೋಸ್ಕರ ಕಾಯುತ್ತಿದ್ದರು, ಮತ್ತು ತಮ್ಮ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಒಂದಕ್ಕಿಂತ ಹೆಚ್ಚಿನ ದರ್ಜೆಯ ಮಕ್ಕಳಿದ್ದರೂ ವಿದ್ಯಾರ್ಥಿಗಳು ತರಗತಿಯ ಸಭ್ಯತೆಯನ್ನು ಕಾಪಾಡಿಕೊಂಡಿದ್ದರು.

### ಮಾಲೀಕತ್ವ ಮತ್ತು ಜವಾಬ್ದಾರಿ

ಶಿಕ್ಷಕರು ಶಾಲೆಯಲ್ಲಿ ಸಭೆ ಸೇರುವುದು ಮತ್ತು ತರಗತಿಯ ಸಾಮಗ್ರಿಗಳನ್ನು ಜೋಪಾನ ಮಾಡುವುದೇ ಮೊದಲಾದ ದೈನಿಕ ಚಟುವಟಿಕೆಗಳಲ್ಲಿ ಮಕ್ಕಳನ್ನು ಸಕ್ರಿಯವಾಗಿ ತೊಡಗಿಸುವುದರ ಮೂಲಕ ಅವರು ಜವಾಬ್ದಾರಿಯ ಒಂದು ಬಲವಾದ ಭಾವನೆಯನ್ನು ಹೊಂದುವಂಥ ಸಕಾರಾತ್ಮಕ ಕಲಿಕೆಯ ಪರಿಸರವನ್ನು ನಿರ್ಮಿಸುತ್ತಿದ್ದಾರೆ. ಈ ವಿಧಾನವು ಮಕ್ಕಳನ್ನು ಸಶಕ್ತರನ್ನಾಗಿಸುತ್ತದೆ. ಅವರ ಕಲಿಕೆಯ ವಲಯಕ್ಕೆ ಅವರಲ್ಲಿ ಒಂದು ಜವಾಬ್ದಾರಿಯ ಭಾವನೆಯನ್ನು ಮೂಡಿಸುತ್ತದೆ.

ಮಕ್ಕಳಿಗೆ ಆಟಿಕೆಗಳು, ಪುಸ್ತಕಗಳು ಮತ್ತು ಬೋಧನಾ ಸಾಮಗ್ರಿಗಳಂತಹ ತರಗತಿಯ ಸಂಪನ್ಮೂಲಗಳನ್ನು ವ್ಯವಸ್ಥಿತಗೊಳಿಸುವ ಮತ್ತು ಕಾಪಾಡಿಕೊಳ್ಳುವಲ್ಲಿ ಭಾಗವಹಿಸಲು ಅನುವು ಮಾಡಿಕೊಡುವ ಮೂಲಕ ಶಿಕ್ಷಕರು ಮಕ್ಕಳಲ್ಲಿ ಮಾಲೀಕತ್ವದ ಒಂದು ಭಾವನೆಯನ್ನು ಬೆಳೆಸುತ್ತಾರೆ. ಇದು ಅವರಿಗೆ ಅಗತ್ಯವಾದ ಜೀವನ ಕೌಶಲಗಳನ್ನು ಕಲಿಸುವುದಷ್ಟೇ ಅಲ್ಲದೆ, ಶಾಲಾ ಸಮುದಾಯದೊಡನೆ ಅವರಿಗಿರುವ ಬಾಂಧವ್ಯವನ್ನೂ ಸಹ ಪೋಷಿಸುತ್ತದೆ.

ಮಕ್ಕಳು ಊಟದ ಸಮಯದಲ್ಲಿ ಆಟದ ಸಾಮಗ್ರಿಗಳನ್ನು ಜವಾಬ್ದಾರಿಯುತವಾಗಿ ಬಳಸಲು ಪ್ರೇರಿತರಾಗುವುದು ಮತ್ತು ನಂತರ ಅವನ್ನು ವ್ಯವಸ್ಥಿತವಾಗಿ ಜೋಡಿಸಿಡುವುದು ಇವೆರಡನ್ನೂ ಗಮನಿಸಿದಾಗ ಹಂಚಿಕೊಂಡ ಸಂಪನ್ಮೂಲಗಳನ್ನು ಗೌರವಿಸುವುದರ ಪ್ರಾಮುಖ್ಯತೆಯ ಅರಿವು ಮತ್ತು ಸ್ವಚ್ಛವಾದ ಕಲಿಕೆಯ ಪರಿಸರವನ್ನು ಕಾಪಾಡಿಕೊಳ್ಳುವುದರೆಡೆಗಿನ ಅವರ ಬದ್ಧತೆಗಳು ಪ್ರತಿಬಿಂಬಿತವಾಗುತ್ತವೆ.

ಒಟ್ಟಾರೆಯಾಗಿ, ಒಳಗೊಳ್ಳುವ ಈ ಅಭ್ಯಾಸಗಳಿಂದಾಗಿ ಮಕ್ಕಳಲ್ಲಿ ಮೆಚ್ಚುಗೆಯ ಭಾವ ತುಂಬುವ, ಗೌರವಿಸಲ್ಪಡುವ ಮತ್ತು ತಮ್ಮ ಕಲಿಕೆಯ ಅನುಭವಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಭಾವನೆಯನ್ನು ಹೊಂದುವ ಸಶಕ್ತ ಮತ್ತು ಬೆಂಬಲಪೂರಿತ ಶಾಲಾ ಪರಿಸರವನ್ನು ಶಿಕ್ಷಕರು ನಿರ್ಮಿಸುತ್ತಿದ್ದಾರೆ. ಈ ಶಾಲೆಯ ಮೂಲ ಸಂಸ್ಕೃತಿಯಾಗಿ ಮತ್ತು ಮಕ್ಕಳ ಬದುಕಿನುದ್ದಕ್ಕೂ ಅವರ ವ್ಯಕ್ತಿತ್ವದ ಭಾಗವಾಗಿ ರೂಪುಗೊಳ್ಳುವ ಅವಶ್ಯಕ ಕೌಶಲಗಳು ಮತ್ತು ಆತ್ಮವಿಶ್ವಾಸಗಳೊಂದಿಗೆ ಈ ಮಕ್ಕಳನ್ನು ಶಿಕ್ಷಕರು ಸಶಕ್ತಗೊಳಿಸುತ್ತಿದ್ದಾರೆ.

● ಅನುವಾದ: **ಸ್ವಯಂಪ್ರಭ** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**



**ಸ್ವಾತಿ ಭಂಡಾರಿ** ಅವರು ಮಧ್ಯಪ್ರದೇಶದ ಸೆಹೋರ್ ಜಿಲ್ಲೆಯ ಜಿಲ್ಲಾ ಸಂಸ್ಥೆಯಲ್ಲಿರುವ ಅಜೀಮ್ ಪ್ರೇಮ್‌ಜಿ ಸಂಸ್ಥೆಯ ಕ್ಷೇತ್ರ ಅಧ್ಯಯನ ತಂಡದ ಭಾಗವಾಗಿದ್ದಾರೆ. ಸ್ವಾತಿ ಅವರು ಈ ಸಂಸ್ಥೆಯನ್ನು 2017ರಲ್ಲಿ ಫೆಲೋ ಆಗಿ ಸೇರಿಕೊಂಡರು. ಸ್ವಾತಿ ಅವರು ಪ್ರಯಾಣ, ಹೊಸ ಸ್ಥಳಗಳು ಮತ್ತು ವಿವಿಧ ಸಂಸ್ಕೃತಿಗಳನ್ನು ಅನ್ವೇಷಿಸುವುದನ್ನು ಇಷ್ಟಪಡುತ್ತಾರೆ. ಅವರನ್ನು **swati.bhandari@azimpremjifoundation.org** ಮೂಲಕ ಸಂಪರ್ಕಿಸಬಹುದು.

# ಮಕ್ಕಳು ಹೇಗೆ ಸಾಮಾಜಿಕ ವರ್ತನೆ ಮತ್ತು ನಡೆವಳಿಕೆಗಳನ್ನು ಅಂತರ್ಗತಗೊಳಿಸಿಕೊಳ್ಳುತ್ತಾರೆ?

ಉಮಾಶಂಕರ ಪೆರಿಯೋಡಿ

VOICES

ನಾನು 1980ರಲ್ಲಿ ಮಕ್ಕಳಿಗಾಗಿ ಕಾರ್ಯಾಗಾರಗಳನ್ನು ಆಯೋಜಿಸಲು ಪ್ರಾರಂಭಿಸಿದೆ. ಆಗ ನಾನು ವಾಸಿಸುತ್ತಿದ್ದ ಮಂಗಳೂರಿನ ಅರೆ-ಪಟ್ಟಣ ಅತ್ತಾವರದಲ್ಲಿದ್ದ ಕೊಳೆಗೇರಿಯೊಂದರಲ್ಲಿ ಮೊತ್ತಮೊದಲ ಖಾಸಗಿ ಕಾರ್ಯಾಗಾರವೊಂದನ್ನು ಆಯೋಜಿಸಿದ್ದೆ. ಅದೊಂದು ಮಕ್ಕಳ ಬೇಸಿಗೆ ಶಿಬಿರವಾಗಿದ್ದು, ಸೃಜನಶೀಲತೆಯೊಂದಿಗೆ ಕರಕುಶಲ ಕಲೆ ಮತ್ತು ರಂಗಕಲೆ ಮುಖ್ಯ ವಿಷಯವಾಗಿತ್ತು. ಈ ಕಾರ್ಯಾಗಾರವು ನನಗೆ ಅನೇಕ ವಿಷಯಗಳನ್ನು ಕಲಿಸಿತು ಮತ್ತು ನಾನು ಮಕ್ಕಳಿಗಾಗಿ ನಮ್ಮ ಹಳ್ಳಿಯಲ್ಲಿ ಸರಣಿ ಕಾರ್ಯಾಗಾರಗಳನ್ನು ಏರ್ಪಡಿಸಲು ಆರಂಭಿಸಿದೆ. ಇದು ಇಂದಿಗೂ ನಡೆದು ಬರುತ್ತಿದ್ದು, ನಾವು ತರಬೇತಿ ನೀಡಿದ ಮಕ್ಕಳು ಮತ್ತು ನನ್ನ ಹೆಣ್ಣುಮಕ್ಕಳು ಕೂಡಿ ನಡೆಸಿಕೊಂಡು ಬರುತ್ತಿದ್ದಾರೆ.

ಈ ಕಾರ್ಯಾಗಾರಗಳಲ್ಲಿ ಮುಖ್ಯ ವಿಷಯಗಳ ಕಡೆ ಗಮನಹರಿಸುವುದಲ್ಲದೆ, ನಾವು ಪ್ರಜ್ಞಾಪೂರ್ವಕವಾಗಿ ಮಕ್ಕಳ ನಿರ್ದಿಷ್ಟ ನಡೆವಳಿಕೆ ಮತ್ತು ಸಾಮಾಜಿಕ ವರ್ತನೆಗಳತ್ತಲೂ ಗಮನ ಹರಿಸಿದ್ದೇವೆ. ಮಕ್ಕಳೂ ನಿಧಾನವಾಗಿ ಇವುಗಳನ್ನು ಅಳವಡಿಸಿಕೊಂಡು ಆಚರಿಸುತ್ತಿದ್ದಾರೆ. ಕಾಲಕಳೆದಂತೆ ಇವು ನಮ್ಮ ಕಾರ್ಯಾಗಾರ ಸಂಸ್ಕೃತಿಯ ಭಾಗವೇ ಆಗಿಬಿಟ್ಟಿವೆ ಮತ್ತು ಮಕ್ಕಳೂ ಅವುಗಳನ್ನು ತಮ್ಮ ದಿನನಿತ್ಯದ ಜೀವನದಲ್ಲೂ ಅಳವಡಿಸಿಕೊಂಡಿದ್ದಾರೆ.

## ಭಾಗವಹಿಸುವಿಕೆ ಮತ್ತು ಜವಾಬ್ದಾರಿ ತೆಗೆದುಕೊಳ್ಳುವಿಕೆ

ಈ ಕಾರ್ಯಾಗಾರಗಳಲ್ಲಿ ಮೊದಲಿಂದಲೂ ನಾವು ಅನುಸರಿಸಿಕೊಂಡು ಬಂದಿರುವ ಕ್ರಮವೆಂದರೆ ಇಡೀ ಕಾರ್ಯಾಗಾರದ ಕಾರ್ಯಯೋಜನೆಗಳನ್ನು ಮಕ್ಕಳೊಡನೆ ಹಂಚಿಕೊಳ್ಳುವುದು ಮತ್ತು ಚರ್ಚಿಸುವುದು. ಹೀಗೆ ನಮ್ಮ ಯೋಜನೆಯನ್ನು ಅವರೊಡನೆ ಹಂಚಿಕೊಂಡ ನಂತರ ಅವರ ಅಭಿಪ್ರಾಯಗಳನ್ನು ಆಲಿಸುತ್ತೇವೆ. ಆರಂಭದಲ್ಲಿ ಮಕ್ಕಳು ಮಾತನಾಡಲು ಹಿಂಜರಿಯುತ್ತಿದ್ದರು. ತಮ್ಮ ಮಾತುಗಳನ್ನು ಗಂಭೀರವಾಗಿ ಸ್ವೀಕರಿಸಲಾಗುತ್ತದೆ ಎಂಬ ಭಾವನೆ ಬಂದಾಗ ಮಾತ್ರ ಮಕ್ಕಳು ಮಾತನಾಡುತ್ತಾರೆ. ಅದರೊಂದಿಗೆ ಹಿರಿಯರು ಕೂಡಾ ಕೆಲವೊಮ್ಮೆ ಮಕ್ಕಳ ಅಭಿಪ್ರಾಯಗಳನ್ನು ಕೇಳಿದ ನಂತರ ಅವುಗಳನ್ನು ಏನು ಮಾಡಬೇಕೆಂದು ತಿಳಿಯದಿರುವುದರಿಂದ ಹಾಗೆ ಅಭಿಪ್ರಾಯಗಳನ್ನು ತೆಗೆದುಕೊಳ್ಳಲು ಹಿಂಜರಿಯುತ್ತಾರೆ. ಉದಾಹರಣೆಗೆ, ಕೆಲವು ಸಂದರ್ಭಗಳಲ್ಲಿ, ನಾವು ಮಕ್ಕಳ ಜೊತೆ ಕಾರ್ಯಾಗಾರ ಯೋಜನೆಯ ಬಗ್ಗೆ ಚರ್ಚಿಸಿರುತ್ತೇವೆ ಮತ್ತು ಮಕ್ಕಳು ಆ ಚಟುವಟಿಕೆಗಳ ಅನುಕ್ರಮವನ್ನು ಬದಲಾಯಿಸಲು ಸಲಹೆ ನೀಡುತ್ತಾರೆ. ಈಗ, ಕಾರ್ಯಾಗಾರದ ಆಯೋಜಕರಾಗಿ, ಈಗಾಗಲೇ ನಿರ್ದಿಷ್ಟ ರೀತಿಯಲ್ಲಿ ಯೋಜಿಸಿರುವುದನ್ನು ಬದಲಾಯಿಸುವುದು ಸುಲಭವಲ್ಲವಾದ್ದರಿಂದ, ಮಕ್ಕಳ ಸಲಹೆಗೆ ನಮ್ಮ ತತ್‌ಕ್ಷಣದ ಉತ್ತರ ಇಲ್ಲ ಎಂದಾಗಿರುತ್ತದೆ, ಅದನ್ನು ನಿರಾಕರಿಸುವುದಾಗಿರುತ್ತದೆ. ದೊಡ್ಡವರು ಏನು ಮಾಡಬಹುದೆಂದರೆ, ಅಂತಹ ಸಂದರ್ಭಗಳಲ್ಲಿ ಮಕ್ಕಳ ಆ ಸಲಹೆಗಳ ಹಿಂದಿರುವ ಕಾರಣಗಳೇನು ಎಂದು ಅವರನ್ನೇ ಕೇಳುವುದು. ಕೆಲವು ಸಲ ಮಕ್ಕಳು ಅದ್ಭುತ ಯೋಚನೆಗಳನ್ನು ಹಂಚಿಕೊಳ್ಳುತ್ತಾರೆ. ಆಗ ವಯಸ್ಕರು ಸ್ವಲ್ಪ ನಮ್ಯವಾಗಿರಬೇಕು ಮತ್ತು ಆಯೋಜಿಸಿರುವ ಕ್ರಮವನ್ನು ಬದಲಾಯಿಸುವ ಪ್ರಬುದ್ಧತೆಯನ್ನು ಪ್ರದರ್ಶಿಸಬೇಕು. ನಾವು ಮತ್ತೊಂದು ವಿಷಯವನ್ನೂ ಗಮನಿಸಿದ್ದೇವೆ; ನಾವು ಅವರ ಸಲಹೆಗಳನ್ನು ಅಳವಡಿಸಿಕೊಳ್ಳಲು ಒಪ್ಪಿಕೊಂಡ ಕೂಡಲೇ ಮಕ್ಕಳು ತಾವೇ ಕಾರ್ಯಾಗಾರದ ಜವಾಬ್ದಾರಿ ತೆಗೆದುಕೊಳ್ಳಲು ಮುಂದಾಗಿದ್ದಾರೆ; ಅವರು ಇದು ತಮ್ಮದೇ ಕಾರ್ಯಾಗಾರ ಎಂದು ಭಾವಿಸಲು ತೊಡಗಿದ್ದಾರೆ. ಆನಂತರ, ಕಾರ್ಯಾಗಾರ ನಡೆಸುವುದು ಸುಲಭವಾಗುತ್ತದೆ, ಏಕೆಂದರೆ ಮಕ್ಕಳು ಮನಪೂರ್ವಕವಾಗಿ ಭಾಗವಹಿಸುತ್ತಾರೆ.

ಈ ಎಲ್ಲಾ ವರ್ಷಗಳಲ್ಲಿ, ನಾವು ಬೆಳಗ್ಗೆ ಮತ್ತು ಸಂಜೆ ಮಕ್ಕಳೊಡನೆ ಕುಳಿತು ಚರ್ಚೆ ನಡೆಸಿದ್ದೇವೆ. ಈಗ ಚರ್ಚೆಯೆನ್ನುವುದು ನಮ್ಮ ಕಾರ್ಯಾಗಾರಗಳ ಒಂದು ಸಹಜ ಭಾಗವೇ ಆಗಿಬಿಟ್ಟಿದೆ. ನಾವು ಅವರನ್ನು ಆಲಿಸುತ್ತೇವೆ ಮತ್ತು ಅವರ ಸಲಹೆಗಳನ್ನು ಸ್ವೀಕರಿಸಿ ಪಾಲಿಸುತ್ತೇವೆ ಎನ್ನುವುದು ಮಕ್ಕಳಿಗೆ ಅರಿವಾಗಿಬಿಟ್ಟಿದೆ. ಚರ್ಚೆ ನಡೆಯುತ್ತದೆ ಮತ್ತು ನಾವೆಲ್ಲ ಭಾಗವಹಿಸಬೇಕು ಎಂದು ಎಲ್ಲರಿಗೂ ತಿಳಿದಿದೆ. ಇದು ನಮ್ಮ ಕಾರ್ಯಾಗಾರಗಳ ಸಂಸ್ಕೃತಿಯೇ ಆಗಿ ಹೋಗಿದೆ.

## ಶಿಸ್ತು

ಶಿಸ್ತು ಮತ್ತೊಂದು ಕಠಿಣವಾದ ಅಂಶ. ಇದರ ಬಗ್ಗೆಯೂ ನಾವು ಮಕ್ಕಳೊಂದಿಗೆ ಕೆಲಸ ಮಾಡಿದ್ದೇವೆ. ಇದನ್ನೂ ಕೂಡ ಸತತವಾಗಿ, ನಿರಂತರವಾಗಿ ಮಾಡುತ್ತಲೇ ಇರಬೇಕು. ಕಾರ್ಯಾಗಾರದ ಆರಂಭದಲ್ಲಿಯೇ ನಾವೆಲ್ಲ ಒಟ್ಟಿಗೆ ಕುಳಿತು, ಎಲ್ಲರೂ ಒಪ್ಪಿಕೊಂಡ ಮೇಲೆ ಕೆಲವು ನೀತಿ ನಿಯಮಗಳನ್ನು ರೂಪಿಸುತ್ತೇವೆ ಮತ್ತು ಅವುಗಳನ್ನು ಎಲ್ಲರೂ ಪಾಲಿಸಲೇಬೇಕು. ಅಲ್ಲಿ ಮುಕ್ತವಾದ ಚರ್ಚೆ ನಡೆಸಲೇಬೇಕು ಎಂಬ ನಿಯಮವಿದ್ದು, ನಡೆವಳಿಕೆಗಳ ಕುರಿತ ನಿಯಮಗಳನ್ನು ನಾವೆಲ್ಲಾ ಒಪ್ಪಿಕೊಂಡ ಬಳಿಕ ಎಲ್ಲರೂ ಅವನ್ನು ಪಾಲಿಸಬೇಕು. ಏನಾದರೂ ಬದಲಾವಣೆ ಅಗತ್ಯವಿದ್ದರೆ, ಮತ್ತೆ ಪ್ರತಿಯೊಬ್ಬರೂ ಕುಳಿತು ಮತ್ತೊಮ್ಮೆ ಚರ್ಚಿಸಿ ಬದಲಾಯಿಸುತ್ತೇವೆ. ಇಡೀ ಗುಂಪು ತೆಗೆದುಕೊಂಡ ನಿರ್ಧಾರವನ್ನು ಬದಲಾಯಿಸುವ ಹಕ್ಕು ಯಾರೊಬ್ಬರಿಗೂ ಇರುವುದಿಲ್ಲ. ಇಡೀ ಗುಂಪು ನಿರ್ಧರಿಸಿಯೇ ಬದಲಾಯಿಸಬೇಕಷ್ಟೇ. ನಾವು ಬಹಳ ಸರಳವಾದ ಮತ್ತು ಅನುಸರಿಸಲು ಸಾಧ್ಯವಾಗುವ ನಿಯಮಗಳಿಂದ ಪ್ರಾರಂಭಿಸಿದೆವು; ಉದಾಹರಣೆಗೆ, ಕೊಠಡಿಯ ಹೊರಗೆ ಚಪ್ಪಲಿಗಳನ್ನು ಒಂದರ ಪಕ್ಕ ಒಂದು ನೇರ ಸಾಲಿನಲ್ಲಿಡುವುದು. ಇಂದು ಇದು ನಮ್ಮ ಎಲ್ಲಾ

ಮಕ್ಕಳಿಗೂ ಅಭ್ಯಾಸವಾಗಿಬಿಟ್ಟಿದೆ. ಮರೆತು ಯಾರಾದರೂ ಚಪ್ಪಲಿ ಅತ್ತಿತ್ತ ಅಥವಾ ಬೇರೆಲ್ಲಾದರೂ ಬಿಟ್ಟರೆ ಒಂದಲ್ಲ ಒಂದು ಮಗು ಅದನ್ನು ತಂದು ಸರಿಯಾಗಿ ಜೋಡಿಸಿಡುತ್ತದೆ.

ನಾವು ಗಮನಕೊಟ್ಟ ಮತ್ತೊಂದು ವಿಚಾರ ನಮ್ಮ ಕಾರ್ಯಾಗಾರ ನಡೆಯುವ ಸ್ಥಳವನ್ನು ಸ್ವಚ್ಛಗೊಳಿಸುವುದು. ಇದನ್ನೂ ಎಲ್ಲರೂ ಮಾಡಬೇಕೆಂದು ನಿರ್ಧರಿಸಿದೆವು. ಕಾರ್ಯಾಗಾರ ನಡೆಯುತ್ತಿದ್ದ ಸ್ಥಳವನ್ನು ಪ್ರತಿ ಕಾರ್ಯಾಗಾರದ ಆರಂಭಕ್ಕೆ ಮೊದಲು ಮುಗಿದ ನಂತರ ಸ್ವಚ್ಛಗೊಳಿಸುತ್ತಿದ್ದೆವು. "ನಾವು ನೋಡಿದ್ದಕ್ಕಿಂತ ಇನ್ನೂ ಚೆನ್ನಾಗಿ ನಾವಿದ್ದ ಜಾಗವನ್ನು ಇಡಬೇಕು" ಎಂಬ ಆಲೋಚನೆ ಎಲ್ಲರಿಗೂ ಮನದಟ್ಟಾಗಿತ್ತು. ಹುಡುಗರು ಮತ್ತು ಹುಡುಗಿಯರು ಇಬ್ಬರೂ ಸ್ವಚ್ಛ ಮಾಡುವ ಕೆಲಸವನ್ನು ಹಂಚಿಕೊಂಡಿದ್ದರು. ಸುಗಮಕಾರರೂ ಮೇಲ್ವಿಚಾರಣೆಯಷ್ಟೇ ಮಾಡದೆ ಸ್ವಚ್ಛಗೊಳಿಸುವ ಕೆಲಸಕ್ಕೂ ಕೈಹಾಕುತ್ತಿದ್ದರು. ಇದು ಎಲ್ಲಾ ಮಕ್ಕಳಿಗೂ ಕೆಲಸ ಮಾಡಲು ಉತ್ತೇಜನ ನೀಡುತ್ತಿತ್ತು.

### ಸಂಪನ್ಮೂಲಗಳನ್ನು ಸಂರಕ್ಷಿಸುವುದು

ಸಂಪನ್ಮೂಲಗಳನ್ನು ಎಚ್ಚರಿಕೆಯಿಂದ ಬಳಸುವುದು, ವ್ಯರ್ಥ ಮಾಡದಿರುವುದು ಕೂಡ ಪ್ರಜ್ಞಾಪೂರ್ವಕವಾಗಿ ತೆಗೆದುಕೊಳ್ಳಬೇಕಾದ ನಿರ್ಧಾರ. ಸಾಮಗ್ರಿಗಳನ್ನು ಮಕ್ಕಳಿಗೆ ಹಂಚುವಾಗ, ದುಡ್ಡು ಕೊಟ್ಟು ತಂದ ಬಣ್ಣ, ಕ್ರಾಫ್ಟ್ ಪೇಪರ್, ಕತ್ತರಿ ಇತ್ಯಾದಿ ವಸ್ತುಗಳನ್ನು ಜೋಪಾನವಾಗಿ ಉಪಯೋಗಿಸಲು ಮಕ್ಕಳಿಗೆ ಸದಾ ನೆನಪಿಸುತ್ತಿದ್ದೆವು. ಮಕ್ಕಳು ವಸ್ತುಗಳನ್ನು ಬೇಕಾಬಿಟ್ಟಿ ಎಸೆದಾಗ ನಾವು ಅದರತ್ತ ಗಮನ ಸೆಳೆಯುತ್ತಿದ್ದೆವು ಮತ್ತು ಅವರ ಜೊತೆ ಹೋಗಿ ಮರು ಬಳಕೆಗಾಗಿ ಅವುಗಳನ್ನು ಸಂಗ್ರಹಿಸಿ ತರುತ್ತಿದ್ದೆವು. ಈ ರೀತಿಯಲ್ಲಿ, ನಾವು ಅವರಿಗೆ ಸಂಪನ್ಮೂಲಗಳಿಗೆ ಬೆಲೆ ಕೊಡುವುದನ್ನು ತಿಳಿಸುತ್ತಿದ್ದೆವು ಮತ್ತು ಅವುಗಳನ್ನು ಎಚ್ಚರಿಕೆಯಿಂದ ಬಳಸಲು ಸೂಚಿಸುತ್ತಿದ್ದೆವು. ಕೆಲವು ವಸ್ತುಗಳು ಉದಾ: ಕತ್ತರಿ, ಎಲ್ಲರಿಗೂ ಬೇಕಾದವಾಗಿದ್ದವು ಮತ್ತು ಅವುಗಳನ್ನು ಒಟ್ಟಿಗೆ ಬಳಸುತ್ತಿದ್ದರು. ಬಳಸಿದ ನಂತರ ಒಂದು ನಿರ್ದಿಷ್ಟ ಜಾಗದಲ್ಲಿಯೇ ಇಡಲು ಸೂಚಿಸುತ್ತಿದ್ದೆವು. ಆಗ ಅವು ಇತರರಿಗೆ ಬೇಕಾದಾಗ ಸುಲಭದಲ್ಲಿ ದೊರೆಯುತ್ತಿದ್ದವು. ಸಂಪನ್ಮೂಲಗಳು ಎಲ್ಲರಿಗೂ ಸೇರಿದಂತಹವು ಮತ್ತು ಯಾರಿಗೆ ಎಷ್ಟು ಬೇಕೋ ಅಷ್ಟು ಮಾತ್ರ ಬಳಸುವಂತೆ ನಾವು ಅವರಿಗೆ ಪದೇಪದೇ ಹೇಳುತ್ತಿದ್ದೆವು. ಸುಗಮಕಾರರಾಗಿ ನಾವೂ ಕೂಡ, ಸಂಪನ್ಮೂಲ ವಸ್ತುಗಳನ್ನು ಬಹು ಎಚ್ಚರಿಕೆಯಿಂದ ಬಳಸುತ್ತಿದ್ದೆವು. ಮಕ್ಕಳು ನಾವು ಹೇಗೆ ವಸ್ತುಗಳನ್ನು ಬಳಸುತ್ತೇವೆ ಎಂಬುದನ್ನು ನೋಡಿ ಕಲಿಯುತ್ತಾರೆ.

### ನಿರ್ಭಯತೆ ಮತ್ತು ಸೋದರತ್ವ

ಮಕ್ಕಳಿಗೆ 6–7ರ ವಯಸ್ಸಿನಿಂದಲೇ ಅದು ಮಾಡಬೇಡ, ಇದು ಮಾಡಬೇಡ, ಅದನ್ನು ಮುಟ್ಟಬೇಡ, ಇದನ್ನು ಮುಟ್ಟಬೇಡ, ಹಾಗೆ ಮಾತಾಡಬೇಡ, ಹೀಗೆ ಮಾತಾಡಬೇಡ ಎಂದು ಹೇಳಲಾಗಿರುತ್ತದೆ. ಇದು ಅವರನ್ನು ಮೌನವಾಗಿಸುವುದರ ಜೊತೆಗೆ ಅವರ ಮೇಲೆ ದುಷ್ಪರಿಣಾಮ ಬೀರುತ್ತದೆ; ಅವರು ತಾವು ತಪ್ಪು ಮಾಡಬಹುದೆಂಬ ಭಯಕ್ಕೆ ಒಳಗಾಗಿರುತ್ತಾರೆ.

ತಪ್ಪು ಮಾಡಬಹುದೆಂಬ ಭಯ ಮತ್ತು ತಾವು ಸೋಲಬಹುದೆಂಬ ಭಯ ಇವೆರಡು ಸೃಜನಶೀಲತೆಯ ದೊಡ್ಡ ಶತ್ರುಗಳು. ಇದರಿಂದ ಮಕ್ಕಳು ಪರಿಶೋಧಿಸುವ, ಪ್ರಯೋಗ ಮಾಡಿ ನೋಡುವ, ಹೊಸತನ್ನು ಮಾಡುವ ಕುತೂಹಲವನ್ನು ಕಳೆದುಕೊಳ್ಳುತ್ತಾರೆ. ನಮ್ಮ ಕಲಿಕಾ ಪರಿಸರದಲ್ಲಿ ನಾವು ಮಕ್ಕಳಿಗೆ ಮುಕ್ತ ವಾತಾವರಣವನ್ನು ಕಲ್ಪಿಸುತ್ತೇವೆ, ಗದರುವುದಿಲ್ಲ. ಅಷ್ಟೇ ಅಲ್ಲಿ ಯಾವುದೇ ರೀತಿಯ ಶಿಕ್ಷೆಯೂ ಇಲ್ಲ. ನಾವು ಧ್ವನಿ ಏರಿಸಿ ಮಾತನಾಡುವುದಿಲ್ಲ ಮತ್ತು ನಿರಂತರವಾಗಿ ಮಕ್ಕಳಿಗೂ ದನಿ ಏರಿಸಿ ಮಾತನಾಡುವ ಅಗತ್ಯವಿಲ್ಲ, ಅವರು ಇತರರಿಗೆ ಕೇಳುವಂತೆ ಮಾತಾಡಿದರೆ ಸಾಕು ಎಂದು ಹೇಳುತ್ತಿರುತ್ತೇವೆ. ಮಕ್ಕಳು ಯಾವುದೇ ಹಿಂಜರಿಕೆಯಿಲ್ಲದೆ ಅವರ ಅಭಿಪ್ರಾಯವನ್ನು ಹೇಳಲು ಅವಕಾಶ ಮಾಡಿಕೊಡುತ್ತೇವೆ. ಈ ರೀತಿಯ ವಾತಾವರಣವನ್ನು ಸೃಷ್ಟಿಸಲು ನಮಗೆ 5–6 ವರ್ಷಗಳೇ ಬೇಕಾದವು. ಆದರೆ ನಾವೀಗ ಮಕ್ಕಳು ಮುಕ್ತವಾಗಿ ತಮಗನಿಸಿದ್ದನ್ನು ಯಾವುದೇ ಭಯವಿಲ್ಲದೆ ಹೇಳುವುದನ್ನು ಕಾಣಬಹುದು.

ಮಕ್ಕಳು ತಮ್ಮತಮ್ಮೊಳಗೆ ಜಗಳವಾಡುವುದು ಸಾಮಾನ್ಯ. ಗಂಡು ಮಕ್ಕಳು ದೈಹಿಕವಾದ ಹೊಡೆದಾಟಗಳಿಗೆ ತೊಡಗಿದರೆ ಹೆಣ್ಣುಮಕ್ಕಳು ಗುಂಪುಕಟ್ಟಿಕೊಳ್ಳುತ್ತಾರೆ. ಈ ಎರಡೂ ವರ್ತನೆಗಳು ಅವರ ಬೆಳವಣಿಗೆಯನ್ನು ತಡೆಯುತ್ತವೆ. ನಾವು ಪ್ರೀತಿಯಿಂದ ಕೂಡಿದ, ಕಾಳಜಿಯುಕ್ತ ವಾತಾವರಣವನ್ನು ಸೃಷ್ಟಿಸಲು ಬಯಸಿದ್ದೆವು, ಆದರೆ ಪ್ರಾರಂಭಿಸುವುದು ಹೇಗೆಂದು ತಿಳಿಯದೆ ಒದ್ದಾಡುತ್ತಿದ್ದೆವು. ಆಗ ನಮ್ಮ ಸುಗಮಕಾರರೊಬ್ಬರು ಅದ್ಭುತವಾದ ಯೋಜನೆಯೊಂದನ್ನು ಹೇಳಿದರು. ಭ್ರಾತೃತ್ವ ನಮ್ಮಿಂದಲೇ ಶುರುವಾಗಬೇಕು ಎಂದವರು ಹೇಳಿದ್ದರು. ಹಾಗಾಗಿ ನಾವು ಪರಸ್ಪರ ಗೌರವ ಸಹಾನುಭೂತಿಯಿಂದಿರಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿದೆವು. ಜನರು ಈ ರೀತಿಯ ವರ್ತನೆಗಳನ್ನು ಕೂಡಲೇ ಗುರುತಿಸುವುದಿಲ್ಲ, ಸ್ವಲ್ಪ ಸಮಯ ಬೇಕಾಗುತ್ತದೆ. ನಾವು ಮಕ್ಕಳೊಡನೆ ಇತರರನ್ನು ಗೌರವಿಸಲು, ಕಾಳಜಿ ತೋರಿಸಲು ತಿಳಿಸುತ್ತಿದ್ದೆವು. ಇದು ಹೇಳಲು ಸುಲಭ, ಆದರೆ ಸುಗಮಕಾರರಾಗಿ ನಾವು ಹೇಗೆ ಮಕ್ಕಳನ್ನು ನಡೆಸಿಕೊಳ್ಳುತ್ತೇವೆ ಎಂಬುದು ಮುಖ್ಯವಾಗುತ್ತದೆ. ನಾವೆಲ್ಲ ಮಕ್ಕಳನ್ನು ಬಹು ಪ್ರೀತಿಯಿಂದ ಮತ್ತು ತುಂಬು ಕಾಳಜಿಯಿಂದ ನೋಡಿಕೊಳ್ಳುತ್ತಿದ್ದೆವು. ನಮಗೆ ಗೊತ್ತಿತ್ತು ಮಕ್ಕಳು ಅದನ್ನು ಅನುಭವಿಸುತ್ತಿದ್ದರೆ ಅದೇ ಭಾವನೆಗಳು ಅವರಲ್ಲೂ ಮೂಡಿಬರುತ್ತವೆಂದು. ಈಗ ನಮಗೆ ಇವೆಲ್ಲವನ್ನೂ ಮತ್ತೆ ನೆನಪಿಸಿಕೊಳ್ಳಬೇಕಾಗಿಲ್ಲ, ಯಾಕೆಂದರೆ ಪ್ರೀತಿ ಮತ್ತು ಕಾಳಜಿಗಳು ಹಿರಿಯ ಮಕ್ಕಳಿಂದ ಕಿರಿಯರಿಗೆ ವರ್ಗಾವಣೆಗೊಂಡಿವೆ.

ಒಂದು ಸಂಸ್ಕೃತಿಯನ್ನು ಹುಟ್ಟುಹಾಕುವುದು ಅಷ್ಟು ಸುಲಭವಲ್ಲ. ಅದಕ್ಕೆ ಅರ್ಥಮಾಡಿಕೊಳ್ಳುವ ಮತ್ತು ಮನಗಾಣುವ ಸಾಮರ್ಥ್ಯ ಬೇಕಾಗುತ್ತದೆ. ಆ ಆಚರಣೆಗಳನ್ನು ಅವು ಹವ್ಯಾಸವೇ ಆಗುವವರೆಗೆ ನಿರಂತರವಾಗಿ ಆಚರಣೆಗೆ ತರಬೇಕಾಗುತ್ತದೆ. ಆಚರಣೆಯ ಅಭ್ಯಾಸಗಳು ನಿಧಾನವಾಗಿ ಸಂಸ್ಕೃತಿಯಾಗಿ ರೂಪುಗೊಳ್ಳುತ್ತವೆ. ನಾವು ಒಂದು ವಿಚಾರವನ್ನು ತಿಳಿದುಕೊಳ್ಳಬೇಕು, ಸುಮ್ಮನೆ ಹೇಳುವುದು ಏನೂ ಪರಿಣಾಮ ಬೀರುವುದಿಲ್ಲ. ಯಾವುದನ್ನು

ಹೇಳುತ್ತೇವೋ ಅದನ್ನು ಕೇಳಿ ಮರೆತುಬಿಡುತ್ತಾರೆ, ಯಾವುದನ್ನು ಮಾಡಿ ತೋರಿಸುತ್ತಿರುತ್ತೇವೊ ಅದನ್ನು ಕಲಿತು ಅನುಸರಿಸುತ್ತಾರೆ. ಅದರೊಂದಿಗೆ ಮತ್ತೊಂದು ನನಗೆ ಬಹಳ ಸ್ಪಷ್ಟವಾಗಿದೆ, ಯಾವುದನ್ನು ಹೃದಯದಾಳದಿಂದ ಮಾಡದೆ ಇತರರನ್ನು ಮೆಚ್ಚಿಸಲು ಮಾಡುತ್ತಿರುತ್ತೇವೋ ಅದನ್ನು ಮಕ್ಕಳು ಬೇಗ ಗುರುತಿಸುತ್ತಾರೆ ಮತ್ತು ತಿರಸ್ಕರಿಸುತ್ತಾರೆ.

ಈ ಎಲ್ಲಾ ವರ್ಷಗಳಲ್ಲಿ, ನಾವು ಒಂದನ್ನು ಅರ್ಥ ಮಾಡಿಕೊಂಡಿದ್ದೇವೆ. ಒಂದು ಸಂಸ್ಕೃತಿಯನ್ನು ಕಟ್ಟಿ ಬೆಳೆಸುವುದು ಕಷ್ಟವೂ ಹೌದು ಸುಲಭವೂ ಹೌದು. ಕಷ್ಟ ಏಕೆಂದರೆ, ಅದು ತುಂಬಾ ಸಂಕೀರ್ಣವಾದುದು ಮತ್ತು ಪ್ರಯೋಗಮಾಡಿ ನೋಡಲು ಸಮಯ ಬೇಕಾಗುತ್ತದೆ. ಅದು ಸುಲಭ ಏಕೆಂದರೆ, ನಾವು ಆ ಸಂಸ್ಕೃತಿಯನ್ನೇ ಬದುಕಿದರೆ, ಹೆಚ್ಚಿಗೇನೂ ಮಾಡಬೇಕಾಗಿರುವುದಿಲ್ಲ, ಮಕ್ಕಳು ಏನು ಕಲಿಯಬೇಕು ಅಂತ ಬಯಸುತ್ತೇವೋ ಅದನ್ನು ಆಚರಿಸಿದಾಗ ಅವರು ಅದನ್ನು ಅನುಸರಿಸುತ್ತಾರೆ. ಅವರು ಏನನ್ನು ಕಲಿಯುತ್ತಾರೆ ಏನನ್ನು ಬಿಟ್ಟುಬಿಡುತ್ತಾರೆ ಎನ್ನುವುದು ನಮ್ಮ ಕೈಯಲಿಲ್ಲ. ಆದರೆ ಅನುಸರಿಸುವ ಸಾಧ್ಯತೆ ತುಂಬಾ ಹೆಚ್ಚಾಗಿರುತ್ತದೆ.

● ಅನುವಾದ: **ನಾಗಮಣಿ ಶಿವರ** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**

---



**ಉಮಾಶಂಕರ ಪೆರಿಯೋಡಿ** ಅವರು 2003ರಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಜೊತೆಗಿದ್ದಾರೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ದಶಕಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಸಾಮಾಜಿಕ ಕಾರ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರು ದಲಿತ ಆಂದೋಲನಗಳನ್ನು, ಬುಡಕಟ್ಟಿನ ಜನರು ಮತ್ತು ಇತರ ಅನ್ಯಾಯಕ್ಕೊಳಗಾದ ಜನಾಂಗಗಳನ್ನು ಅವರ ಹಕ್ಕುಗಳಿಗಾಗಿ ಹೋರಾಟ ಮಾಡಲು ಸಂಘಟಿಸುವುದರಲ್ಲಿ ನಿರತರಾಗಿದ್ದಾರೆ. ಕರ್ನಾಟಕ ತರಬೇತಿದಾರರ ಸಮೂಹದ ಸಂಸ್ಥಾಪಕ ಸದಸ್ಯರು. ಇವರು ಶಿಕ್ಷಕರಿಗೆ, ಕ್ಷೇತ್ರಕಾರ್ಯ ಉದ್ಯೋಗಿಗಳಿಗೆ 'ಬೇರ್ ಫೂಟ್' ಸಂಸ್ಥೆಯಡಿಯಲ್ಲಿ ತರಬೇತಿ ನೀಡಿದ್ದಾರೆ. ಅವರನ್ನು **periodi@azimpremjifoundation.org** ಮೂಲಕ ಸಂಪರ್ಕಿಸಬಹುದು.

# ಗಣಿತದ ಭೀತಿಯನ್ನು ತೊಲಗಿಸುವುದು

ರಜನಿ ದ್ವಿವೇದಿ

ಗಣಿತವು ಮಕ್ಕಳು ಮಾತ್ರವಲ್ಲದೆ ವಯಸ್ಕರನ್ನು ಸಹ ಹೆದರಿಸುತ್ತದೆ. ಎಲ್ಲಾ ಮಕ್ಕಳು ಹತ್ತನೆಯ ತರಗತಿಯವರೆಗೆ ಗಣಿತವನ್ನು ಕಲಿಯಲೇಬೇಕು. ಆದರೆ ಅವರು ಮೂರನೇ – ನಾಲ್ಕನೇ ತರಗತಿಗೆ ಬರುವಾಗ ಅದರಿಂದ ಹಿಂದಕ್ಕೆ ಸರಿಯುತ್ತಾರೆ. ಒಂದನೇ ಮತ್ತು ಎರಡನೇ ತರಗತಿಗಳಲ್ಲಿ ಗಣಿತವನ್ನು ಕಲಿಯಲು ಕುತೂಹಲ ತೋರುತ್ತಿದ್ದ ಹಾಗೂ ಅದರೊಂದಿಗೆ ತೊಡಗಿಸಿಕೊಳ್ಳಲು ಶ್ರಮ ಪಡುತ್ತಿದ್ದ ಅದೇ ಮಕ್ಕಳು ಹಿನ್ನಡೆ ಅನುಭವಿಸುತ್ತಾರೆ. ಮುಂದಿನ ತರಗತಿಗಳಿಗೆ ಹೋದಂತೆ ಅವರು ಗಣಿತದ ಹೆಸರಿನಲ್ಲಿ ಭಯ ಬೀಳುತ್ತಾರೆ. ಭಾರತದ ನೀತಿ ದಾಖಲೆಗಳು ಈ ಸಮಸ್ಯೆಯನ್ನು ಗುರುತಿಸುತ್ತಾ ಬಂದಿವೆ. ಇತ್ತೀಚೆಗೆ ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್.ಸಿ.ಎಫ್ –ಎಸ್.ಇ) 2023 ಸಹ, ಗಣಿತದ ಕುರಿತಂತೆ ಎರಡು ಪ್ರಮುಖ ಅಂಶಗಳು ಭೀತಿಯನ್ನುಂಟು ಮಾಡುತ್ತವೆ ಎಂದು ಹೇಳಿದೆ:

(i) ವಿಷಯದ ಗುಣಲಕ್ಷಣ ಮತ್ತು ಅದನ್ನು ಯಾವ ರೀತಿ ಕಲಿಸಲಾಗುತ್ತದೆ ಮತ್ತು ಮೌಲ್ಯಮಾಪನ ಮಾಡಲಾಗುತ್ತದೆ; ಮತ್ತು (ii) ಅದನ್ನು ಸಮಾಜದಲ್ಲಿ ಹೇಗೆ ಗ್ರಹಿಸಲಾಗುತ್ತದೆ. (ಎನ್.ಸಿ. ಎಫ್–ಎಸ್.ಇ 2023, ಪು. 271)

ಈ ಲೇಖನದಲ್ಲಿ, ಮೊದಲಿಗೆ ಗಣಿತಕ್ಕೆ ಸಂಬಂಧಿಸಿದಂತೆ ಈ ಭೀತಿಯನ್ನುಂಟು ಮಾಡುವ ಪ್ರಕ್ರಿಯೆಗಳು ಮತ್ತು ಅಭ್ಯಾಸಗಳ ಕುರಿತು ಸಂಕ್ಷಿಪ್ತವಾಗಿ ಮಾತನಾಡಲಿದ್ದೇವೆ. ನಂತರ, ಗಣಿತದಲ್ಲಿ ಆಸಕ್ತಿ ಮತ್ತು ಅರಿವನ್ನು ಬೆಳೆಸಿಕೊಳ್ಳಬೇಕಾದರೆ ಅದನ್ನು ತರಗತಿಯಲ್ಲಿ ಹೇಗೆ ನಿರ್ವಹಿಸಬೇಕು ಎಂಬ ಕುರಿತು ಚರ್ಚಿಸಲಿದ್ದೇವೆ. ಇದು ನಾನು ಎರಡನೇ, ಮೂರನೇ ಮತ್ತು ನಾಲ್ಕನೇ ತರಗತಿಗಳಲ್ಲಿ ಮಾಡುತ್ತಿರುವ ಕೆಲಸವನ್ನು ಆಧರಿಸಿದೆ.

### ಗಣಿತವನ್ನು ಹೇಗೆ ಕಲಿಸಲಾಗುತ್ತದೆ

ಆರಂಭಿಕ ತರಗತಿಗಳು (ನಾಲ್ಕನೇ ತರಗತಿಯ ತನಕವೂ) ಎಣಿಕೆ ಮತ್ತು ಅಂಕಗಣಿತದ ನಾಲ್ಕು ಕ್ರಿಯೆಗಳನ್ನು ಹೊರತುಪಡಿಸಿ ಬೇರೆ ಯಾವುದರ ಮೇಲೆಯೂ ಗಮನ ಹರಿಸುವುದಿಲ್ಲ. ಪ್ರಶ್ನೆಗಳಿಗೆ ಹಂತವಾರು ಪರಿಹಾರಗಳನ್ನು ಕರಿಹಲಗೆಯ ಮೇಲೆ ಬರೆಯಲಾಗುತ್ತದೆ ಮತ್ತು ಪ್ರತಿ ಹಂತವನ್ನು ವಿವರಿಸಲಾಗುತ್ತದೆ. ತದನಂತರ, ಮಕ್ಕಳು ಉತ್ತರವನ್ನು ಕರಿಹಲಗೆಯಿಂದ ನಕಲು ಮಾಡಬೇಕು. ಇನ್ನೊಂದು ಕೆಲಸವೆಂದರೆ ಅಂಕಗಣಿತದ ಅಂಶಗಳು, ನಿರೂಪಣೆಗಳು ಮತ್ತು ಲೆಕ್ಕ ಮಾಡುವಿಕೆಯನ್ನು ಬಾಯಿಪಾಠ ಮಾಡುವುದು. ಮಕ್ಕಳು ಇದನ್ನು ನೆನಪಿಡಲು ಯತ್ನಿಸುತ್ತಾರೆ. ಆದರೆ ಅವರು ಮುಂದೆ ಸಾಗಿದಂತೆ 'ಅರ್ಥರಹಿತವೆಂದು ಕಾಣುವ ನಿರೂಪಣೆಗಳು ಮತ್ತು ಪ್ರಕ್ರಿಯೆಗಳ' ಮತ್ತು ಅವುಗಳನ್ನು ಸಂಪೂರ್ಣವಾಗಿ ನೆನಪಿಟ್ಟುಕೊಂಡು ಸರಿಯಾದ ಸ್ಥಳದಲ್ಲಿ ಸೂಕ್ತವಾಗಿ ಅನ್ವಯಿಸುವ ಹೊರೆಯು ಹೆಚ್ಚಾಗುತ್ತದೆ. ಮಕ್ಕಳು ನಿಭಾಯಿಸಬೇಕಾದ ಸಂಖ್ಯೆಗಳ ಗಾತ್ರವು ಹೆಚ್ಚಾದಂತೆ, ಈ ಗಾತ್ರವನ್ನು ಗ್ರಹಿಸುವುದು ಮಕ್ಕಳಿಗೆ ಅಸಾಧ್ಯವೆನಿಸುತ್ತದೆ ಮತ್ತು ಉತ್ತರವನ್ನು ಪಡೆಯುವುದಕ್ಕಾಗಿ ಕ್ರಮಾವಳಿ, ಸಮೀಪಮಾರ್ಗ ಮತ್ತು ತಂತ್ರವನ್ನು ಬಳಸುವುದು ಅವರ ಪಾಲಿಗೆ ಕಷ್ಟಕರವೆನಿಸುತ್ತದೆ. ಅವರು ಉತ್ತರವಾಗಿ ಯಾವ ಸಂಖ್ಯೆಯನ್ನು ಪಡೆಯಬೇಕು ಎಂಬ ಕುರಿತು ಅವರಿಗೆ ಯಾವುದೇ ಕಲ್ಪನೆಯು ಇರದ ಕಾರಣ, ಪ್ರತಿ ಸಂಖ್ಯೆಯು ಸಹ ಅವರ ಪಾಲಿಗೆ ಒಂದೇ ರೀತಿ ಸರಿಯಾಗಿ (ಅಥವಾ ತಪ್ಪಾಗಿ) ಕಾಣಿಸುತ್ತದೆ. ಇದು ಗಣಿತಕ್ಕೆ ಸಂಬಂಧಿಸಿದ ಭೀತಿ, ಆತಂಕ ಮತ್ತು ಅಸಹಾಯಕತೆಯ ಪ್ರಜ್ಞೆಯನ್ನು ಹೆಚ್ಚಿಸುತ್ತದೆ.

ಇಲ್ಲಿ ಎದುರಾಗುವ ಪ್ರಶ್ನೆಯೆಂದರೆ, ಮಕ್ಕಳು ಗಣಿತದ ಪ್ರಕ್ರಿಯೆಗಳನ್ನು ಕಲಿಯಲು ಮತ್ತು ಅದೇ ವೇಳೆ ಅವರು ಕಲಿಯುವುದನ್ನು ಆನಂದಿಸಲು ಸಹಾಯ ಮಾಡುವ ಯಾವುದಾದರೂ ಪ್ರಕ್ರಿಯೆಗಳು ಮತ್ತು ಅಭ್ಯಾಸಗಳು ಇವೆಯೇ? ಎನ್.ಸಿ.ಎಫ್–ಎಸ್.ಇ 2023ರ ಪ್ರಕಾರ, 'ಗಣಿತ ಶಿಕ್ಷಣದ ಪಠ್ಯಕ್ರಮವು ಮಕ್ಕಳಲ್ಲಿ ಬುನಾದಿ ಸಂಖ್ಯಾಜ್ಞಾನ ಮತ್ತು ಸಮಸ್ಯೆಯನ್ನು ಬಗೆಹರಿಸುವುದನ್ನು ಕಲಿಸುವ ಉದ್ದೇಶವನ್ನು ಹೊಂದಿದೆ ಮಾತ್ರವಲ್ಲದೆ, ಇಂದು ಗಣಿತದ ಬಗ್ಗೆ ವ್ಯಾಪಕವಾಗಿ ಹಬ್ಬಿರುವ ಭೀತಿಯನ್ನು ತೊಲಗಿಸುವ ಜೊತೆಗೆ ಅವರು ಗಣಿತವನ್ನು ಆನಂದಿಸುವಂತೆ, ಅಚ್ಚರಿಪಡುವಂತೆ ಮತ್ತು ಕುತೂಹಲವನ್ನು ಬೆಳೆಸುವಂತೆ ಮಾಡಿ, ಮಾದರಿಗಳನ್ನು ನೋಡಿ ಗಣಿತದ ಪ್ರಕ್ರಿಯೆಗಳ ಸೊಬಗು ಮತ್ತು ಸೌಂದರ್ಯವನ್ನು ಮೆಚ್ಚಿಕೊಳ್ಳುವಂತೆ ಮಾಡುವ ಉದ್ದೇಶವನ್ನು ಹೊಂದಿದೆ.' (ಎನ್.ಸಿ.ಎಫ್–ಎಸ್.ಸಿ, 2023, ಪು. 37)

### ಗಣಿತದ ಕುರಿತು ಭೀತಿ ಪಡಲು ಯಾವುದೇ ಕಾರಣಗಳಿಲ್ಲ

ಶಿಕ್ಷಕರ ವರ್ತನೆ ಮತ್ತು ತರಗತಿಯ ಸಹಜ ವಾತಾವರಣವು ಮಕ್ಕಳಲ್ಲಿ ಆರಾಮದಾಯಕತೆಯ ಭಾವನೆಯನ್ನುಂಟು ಮಾಡುತ್ತದೆ ಎಂದು ಹೇಳಲಾಗುತ್ತದೆ. ಅಲ್ಲದೆ ಗಣಿತವನ್ನು ಒಂದು ಭಯಾನಕ ವಿಷಯವಾಗಿ ಶಿಕ್ಷಕರು ಪರಿಗಣಿಸದೆ ಇದ್ದರೆ ಮಕ್ಕಳು ಈ ಕುರಿತು ಸ್ತಂಭೀಭೂತರಾಗುವ ಯಾವುದೇ ಅವಶ್ಯತೆ ಇಲ್ಲ. ನೀವು ಹಲ್ಲಿಗಳ ಕುರಿತು ಭೀತಿಯನ್ನು ಹೊಂದಿದ್ದರೆ ಮಕ್ಕಳು ಸಹ ಇವುಗಳ ಕುರಿತು ಹೆದರುವುದು ಸಹಜ ತಾನೆ?

ನನ್ನ ಅನುಭವದ ಪ್ರಕಾರ, ಸಾಮಾನ್ಯವಾಗಿ ಒಂದನೇ ಮತ್ತು ಎರಡನೇ ತರಗತಿಯ ಮಕ್ಕಳು ಗಣಿತದ ಕುರಿತು ಭೀತಿಯನ್ನು ಹೊಂದಿರುವುದಿಲ್ಲ. ನಾವು ಅವರಿಗೆ ಅವಕಾಶವನ್ನು ನೀಡಿದರೆ, ಅವರು ಆಸಕ್ತಿ ವಹಿಸಿ ಪರಿಕಲ್ಪನೆಗಳನ್ನು ಅರಿತುಕೊಳ್ಳಲು ಯತ್ನಿಸುತ್ತಾರೆ. ಹೀಗಾಗಿ, ಆರಂಭಿಕ ತರಗತಿಗಳಲ್ಲೇ ಗಣಿತವನ್ನು ಮಕ್ಕಳಿಗೆ ಆಸಕ್ತಿಯ ವಿಷಯವಾಗಿ ರೂಪಿಸುವ ಪ್ರಕ್ರಿಯೆಗಳಿಗೆ ಚಾಲನೆ ನೀಡಬೇಕು. ಆ ಹಂತಕ್ಕೆ ಸೂಕ್ತವೆನಿಸುವ ಸವಾಲುಗಳನ್ನು ಒದಗಿಸಲು ಮತ್ತು ಉತ್ತರಗಳನ್ನು ಕಂಡುಕೊಳ್ಳಲು ಅವಕಾಶಗಳನ್ನು ಒದಗಿಸಲು ಯತ್ನಿಸಬೇಕು. ಆದರೆ ಪ್ರಯೋಗಗಳಲ್ಲಿ ಹೆಚ್ಚಿನ ಸಮಯವು ಕಳೆದು ಹೋಗುತ್ತಿದೆಯೇ ಹೊರತು ಕಲಿಕೆಯ ಸುಲಭ ವಿಧಾನವನ್ನು ಕಲಿತುಕೊಳ್ಳಲು ನೀಡಬೇಕಾದ ಪರಿಹಾರದಲ್ಲಲ್ಲ.

ಎರಡನೇ, ಮೂರನೇ ಮತ್ತು ನಾಲ್ಕನೇ ತರಗತಿಯ ಮಕ್ಕಳ ಗಣಿತದ ಬೋಧನೆ – ಕಲಿಕೆಯ ಸಂವಾದದಲ್ಲಿ, ಗಣಿತವನ್ನು ಕಲಿಯುವಾಗ ಪಠ್ಯವನ್ನು ಓದುವುದಕ್ಕಾಗಿ ಮಕ್ಕಳೊಂದಿಗೆ ಸಾಕಷ್ಟು ಪ್ರಯತ್ನವನ್ನು ಮಾಡಲಾಗಿಲ್ಲ ಎಂಬುದನ್ನು ನಾನು ಗಮನಿಸಿದೆ. ನೀಡಲಾದ ಅಭ್ಯಾಸದಲ್ಲಿ ಮಕ್ಕಳು ಸಂಖ್ಯೆಗಳು, ಚಿಹ್ನೆಗಳು, ಸಂಕೇತಗಳು ಮತ್ತು ಪ್ರಶ್ನೆಯ ಕ್ರಮಾಂಕವನ್ನು ನೋಡುತ್ತಾರೆ ಮತ್ತು ಅವರು ಯಾಕೆ ಕೂಡಿಸಬೇಕು ಅಥವಾ ಇತರ ಕ್ರಿಯೆಯನ್ನು ಯಾಕೆ ಮಾಡಬೇಕು ಎಂಬುದನ್ನು ಊಹಿಸುತ್ತಾರೆ. ಅವರಿಗೆ ಸೂಚನೆಗಳು, ಮೌಖಿಕ ಸಮಸ್ಯೆಗಳು, ಉದಾಹರಣೆಗಳು ಮತ್ತು ಪುಸ್ತಕದಲ್ಲಿ ನೀಡಲಾದ ಇತರ ಪಠ್ಯಗಳನ್ನು ಓದಲು ಬರುವುದಿಲ್ಲ. ಅವರು ಉನ್ನತ ತರಗತಿಗಳಿಗೆ ಸಾಗಿದಂತೆ ಓದುವ ಮತ್ತು ಗ್ರಹಿಸುವ ಈ ಕೆಲಸವು ಇನ್ನಷ್ಟು ಜಟಿಲವಾಗುತ್ತದೆ. ಕಾಲಕ್ರಮೇಣ ಅವರು ಗಣಿತದಿಂದ ಇನ್ನಷ್ಟು ದೂರಕ್ಕೆ ಸಾಗುತ್ತಾರೆ. ಹೀಗಾಗಿ ಅವರು ಆರಂಭದಿಂದಲೇ ಗಣಿತವನ್ನು ಓದಲು ಕಲಿಯುವುದು ಅಗತ್ಯ. ಅವರು ಸೂಚನೆಗಳನ್ನು ಓದಬೇಕು. ಅವರಿಗೆ ಅರ್ಥವಾಗದೆ ಇದ್ದಲ್ಲಿ, ಈ ಕುರಿತು ತರಗತಿಯಲ್ಲಿ ಚರ್ಚೆ ನಡೆಯಬೇಕು. ಗಣಿತ ಮತ್ತು ಗಣಿತದ ಕುರಿತ ಯೋಚನೆಗೆ ಪರಿಚಿತರಾಗುವುದಕ್ಕಾಗಿ ಅವರು ತಾವಾಗಿಯೇ ಪದ ಪ್ರಶ್ನೆಗಳನ್ನು ಓದಬೇಕು ಮತ್ತು ತಾವಾಗಿಯೇ ಹೊಸ ಪದ ಪ್ರಶ್ನೆಗಳನ್ನು ರಚಿಸಬೇಕು (ಮೊದಲಿಗೆ ಮೌಖಿಕವಾಗಿ ಮತ್ತು ನಂತರ ಲಿಖಿತವಾಗಿ). ಉದಾಹರಣೆಗೆ ಒಂದು ಬುಟ್ಟಿಯಲ್ಲಿ 10 ಮಾವಿನಹಣ್ಣುಗಳಿದ್ದು ಅವುಗಳಿಗೆ ಇನ್ನೂ 5 ಮಾವಿನಹಣ್ಣುಗಳನ್ನು ಸೇರಿಸಿದಾಗ ಬುಟ್ಟಿಯಲ್ಲಿ ಈಗ ಎಷ್ಟು ಮಾವಿನಹಣ್ಣುಗಳಿವೆ; ಒಂದು ವೇಳೆ ಒಂದು ಮೇಜಿಗೆ 4 ಕಾಲುಗಳಿದ್ದರೆ 4 ಮೇಜುಗಳು ಎಷ್ಟು ಕಾಲುಗಳನ್ನು ಹೊಂದಿರುತ್ತಿವೆ? ಇತ್ಯಾದಿ ಪ್ರಶ್ನೆಗಳು. ಇವೆರಡನ್ನೂ ಸಹ ಸಂಕಲನದ ಪ್ರಶ್ನೆಗಳಾಗಿ ನೋಡಬಹುದು. ಅದರೆ ಅವುಗಳ ಗುಣಲಕ್ಷಣವು ಭಿನ್ನವಾಗಿದೆ.

ಓದಲು ಕಲಿಸಿದರೆ ಇದು ಮಕ್ಕಳಿಗೆ ಅನೇಕ ರೀತಿಯಲ್ಲಿ ಸಹಾಯ ಮಾಡುತ್ತದೆ. ಮೊದಲನೆಯದಾಗಿ ಇದು ಕಲಿಕೆಗೆ ಸಂಬಂಧಿಸಿದಂತೆ ಆತ್ಮವಿಶ್ವಾಸವನ್ನು ಬೆಳೆಸುತ್ತದೆ. ಎರಡನೆಯದಾಗಿ, ಓದುವಾಗ ಮಕ್ಕಳು ಬೇರೆಬೇರೆ ವಿಧದ ಪ್ರಶ್ನೆಗಳ ನಡುವಿನ ಭಿನ್ನತೆಯನ್ನು ಅರಿತುಕೊಳ್ಳಲು ಪ್ರಾರಂಭಿಸುತ್ತಾರೆ. ಅಂದರೆ ಅವರು ಸಹ ಗಣಿತದ ಪರಿಕಲ್ಪನೆಗಳನ್ನು ಇನ್ನೂ ಚೆನ್ನಾಗಿ ಅರಿತುಕೊಳ್ಳಲು ಪ್ರಾರಂಭಿಸುತ್ತಾರೆ.

ನಾನು ಈ ಎರಡನೇ ತರಗತಿಯೊಂದಿಗೆ ಸುಮಾರು ಒಂದೂವರೆ ತಿಂಗಳುಗಳಿಂದ ಕೆಲಸ ಮಾಡುತ್ತಿದ್ದೇನೆ. ನಾವು ಸಂಕ್ಷಿಪ್ತವಾದ ಸೂಚನೆಗಳು ಮತ್ತು ಪದ ಪ್ರಶ್ನೆಗಳನ್ನು ಓದುತ್ತೇವೆ. ಪ್ರತಿ ಮಗುವೂ ಸಹ ಅವುಗಳನ್ನು ಅರಿತುಕೊಳ್ಳಲು ಸಹಾಯ ಮಾಡುತ್ತದೆ. ಕೆಲವೊಮ್ಮೆ ಕೆಲವು ಮಕ್ಕಳಿಗೆ ಓದಲು ಇನ್ನೂ ಹೆಚ್ಚಿನ ಸಹಾಯ ಬೇಕಾಗುತ್ತದೆ. ಅವರೊಂದಿಗೆ ನಾವು ವೈಯಕ್ತಿಕವಾಗಿ ಕೆಲಸ ಮಾಡಬೇಕಾಗುತ್ತದೆ. ಇನ್ನು ಕೆಲವೊಮ್ಮೆ ಅವರ ಗೆಳೆಯರೇ ಅವರಿಗೆ ಓದಲು ಸಹಾಯ ಮಾಡುತ್ತಾರೆ. ಕೆಲವು ಬಾರಿ ಅವರು ಪ್ರಶ್ನೆಯನ್ನು ಹಲಗೆಯ ಮೇಲೆ ಬರೆಯುತ್ತಾರೆ ಹಾಗೂ ಪರಸ್ಪರರ ಸಹಾಯದಿಂದ ಓದುತ್ತಾರೆ. ಆದರೆ ಈಗ ಎಲ್ಲಾ ಮಕ್ಕಳು ಓದಲು ಪ್ರಾರಂಭಿಸಿದ್ದಾರೆ. ನಾವೀಗ ಓದಬೇಕು ಮತ್ತು ಈ ಪ್ರಕ್ರಿಯೆಯಲ್ಲಿ ಅವರಿಗೆ ಸಹಾಯ ಮಾಡಬೇಕು ಎಂದು ನಾನು ಅವರಿಗೆ ಹೇಳಿದಾಗ, ಓದುವುದು ಅತ್ಯಗತ್ಯ ಹಾಗೂ ಅವರು ಇದನ್ನು ಖಂಡಿತವಾಗಿಯೂ ಮಾಡಬಹುದು ಎಂದು ಅವರು ಅರ್ಥೈಸಿಕೊಳ್ಳುತ್ತಾರೆ.

ಓದುವ ಮತ್ತು ಬರೆಯುವ ಕೆಲಸವು ಏಕಕಾಲದಲ್ಲಿ ನಡೆಯುತ್ತದೆ ಎಂದು ಹೇಳಲಾಗುತ್ತದೆ. ಅವರು ಓದುವ ಕಾರಣ ನೀಡಲಾದ ಪ್ರಶ್ನೆಗಳನ್ನು ಎಚ್ಚರಿಕೆಯಿಂದ ಓದುತ್ತಾರೆ. ತಮ್ಮದೇ ಆದ ಪ್ರಶ್ನೆಗಳನ್ನು ರಚಿಸಲು ಹೇಳಿದಾಗ ಅವರು ತಾವಾಗಿಯೇ ಇದನ್ನು ಮಾಡುತ್ತಾರೆ. ಕಾಲ ಕಳೆದಂತೆ, ಅವರಿಗೆ ಕೇಳದಿದ್ದರೂ ಸಹ ಅವರು ಈ ರೀತಿ ಮಾಡುತ್ತಾರೆ. ಹೆಚ್ಚಿನದಾಗಿ ಅವರ ವಾಕ್ಯಗಳ ರಚನೆಯು ಕಾರ್ಯಹಾಳೆ ಅಥವಾ ಪಠ್ಯಪುಸ್ತಕದಲ್ಲಿರುವ ವಾಕ್ಯಗಳಂತೆಯೇ ಇರುತ್ತದೆ. ಆದರೆ ಇದು ಹೊಸ ಸಂಖ್ಯೆಗಳು ಮತ್ತು ಕೆಲವು ಹೊಸ ಪದಗಳನ್ನು ಹೊಂದಿರುತ್ತದೆ. 'ನಮ್ಮದೇ ಪ್ರಶ್ನೆಗಳನ್ನು ನಾವು ರಚಿಸಬೇಕೇ?' ಎಂದು ಅವರು ಈಗ ಆಗಾಗ್ಗೆ ಕೇಳುತ್ತಾರೆ. ಅವರು ತಮ್ಮ ಕೆಲಸವನ್ನು ಆನಂದಿಸುತ್ತಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ.

ಯಾವುದೇ ತರಗತಿ ಇರಲಿ, ಅವರು ತೊಡಗಿಸಿಕೊಳ್ಳಬಹುದಾದಂತಹ ಕೆಲಸಗಳನ್ನು ಮಕ್ಕಳಿಗೆ ನೀಡಬೇಕಾದುದು ಅಗತ್ಯ. ಮೂರನೇ ತರಗತಿಯಲ್ಲಿ ಈ ರೀತಿಯ ಪ್ರಶ್ನೆಯೊಂದಿತ್ತು: ಒಟ್ಟು 3500 ಅನ್ನು ಪಡೆಯುವುದಕ್ಕಾಗಿ ಬೇರೆಬೇರೆ ಮೊತ್ತಗಳನ್ನು ರಚಿಸಿ. ಅವರ ಭಾಷೆಯಲ್ಲಿಯೇ ವಿವರಿಸಿದ ನಂತರವೂ ಹಾಗೂ ಉದಾಹರಣೆಗಳನ್ನು ನೀಡಿದ ನಂತರವೂ ಅನೇಕ ಮಕ್ಕಳಿಗೆ ಇದು ಅರ್ಥವಾಗಲೇ ಇಲ್ಲ. ಆದರೆ ಒಟ್ಟು 20 ಅನ್ನು ಪಡೆಯುವುದಕ್ಕಾಗಿ ಬೇರೆಬೇರೆ ಮೊತ್ತಗಳನ್ನು ರಚಿಸುವ ಕೆಲಸವನ್ನು ಅವರಿಗೆ ನೀಡಿದಾಗ ಹಾಗೂ ಕೆಲವೊಂದು ಉದಾಹರಣೆಗಳನ್ನು ಅವರೊಂದಿಗೆ ಚರ್ಚಿಸಿದಾಗ ಅವರು ಇದನ್ನು ಅರ್ಥ ಮಾಡಿಕೊಂಡರು ಹಾಗೂ ಅನೇಕ ಹೊಸ ಪ್ರಶ್ನೆಗಳನ್ನು ರಚಿಸಿದರು. ಶಿಕ್ಷಕರಿಗೆ ಉಪಯುಕ್ತವೆನಿಸುವ ಕೆಲವು ಇತರ ಪ್ರಮುಖ ಅಂಶಗಳನ್ನು ನಾನಿಲ್ಲಿ ಉಲ್ಲೇಖಿಸಲು ಬಯಸುತ್ತೇನೆ.

### ಕೆಲವು ಒಳ್ಳೆಯ ಅಭ್ಯಾಸಗಳು

ಮೊದಲನೆಯದಾಗಿ, ಮಕ್ಕಳಿಗೆ ಗಣಿತವನ್ನು ಕಲಿಸುವಾಗ ಅವರಿಗೆ ಅನುಕೂಲಕರವೆನಿಸುವ ಭಾಷೆಯನ್ನು ನಾವು ಬಳಸಬೇಕು. ಎರಡನೆಯದಾಗಿ, ಗಣಿತದ ಮಾದರಿಯು ಅದರ ವಿಶೇಷ ಗುಣಲಕ್ಷಣವಾಗಿರುತ್ತದೆ. ಒಟ್ಟು 3500 ಅನ್ನು ಪಡೆಯುವುದಕ್ಕಾಗಿ

ವಿವಿಧ ಮೊತ್ತಗಳನ್ನು ರಚಿಸಲು ಮಕ್ಕಳನ್ನು ಕೇಳಲಾದ ಪ್ರಶ್ನೆಯತ್ತ ಒಮ್ಮೆ ಗಮನ ಹರಿಸೋಣ. ದೊಡ್ಡ ಸಂಖ್ಯೆಯನ್ನು ನೀಡಿದಾಗ ಕೆಲವೊಂದು ವಿಚಾರಗಳೊಂದಿಗೆ ತೊಡಗಿಸಿಕೊಳ್ಳಲು ಮಕ್ಕಳಿಗೆ ಅಸಾಧ್ಯವಾದಾಗ, ಸಣ್ಣ ಸಂಖ್ಯೆಗಳನ್ನು ಬಳಸುವ ಮೂಲಕ ಅದೇ ಪರಿಕಲ್ಪನೆಯನ್ನು ಪ್ರಸ್ತುತಪಡಿಸಬಹುದು. ಮೂರನೆಯದ್ದು ಅಭ್ಯಾಸದ ಗುಣಲಕ್ಷಣಕ್ಕೆ ಸಂಬಂಧಿಸಿದೆ. ಒಂದೆಡೆ, ಈ ಕೆಲಸದಲ್ಲಿ ಮಕ್ಕಳು ಸಂಕಲನ, ವ್ಯವಕಲನ ಮತ್ತು ದೊಡ್ಡ – ಸಣ್ಣ ಸಂಖ್ಯೆಗಳಿಗೆ ಗಮನ ನೀಡುತ್ತಿದ್ದರು. ಇನ್ನೊಂದೆಡೆ ಅವರು ಇತರ ಸಂಖ್ಯೆಗಳಿಗೆ ಸಂಬಂಧಿಸಿದಂತೆ ಸಂಖ್ಯೆಗಳನ್ನು ಗಮನಿಸುವುದನ್ನು ಕಲಿಯುತ್ತಿದ್ದರು. ಆಗ ಅಂತಹ ಪ್ರಶ್ನೆಗಳು ಅನೇಕ ಉತ್ತರಗಳನ್ನು ಹೊಂದಿರುತ್ತವೆ. ಅಲ್ಲದೆ ಎಲ್ಲಾ ಉತ್ತರಗಳು ಸರಿಯಾಗಿರುತ್ತವೆ. ನಾಲ್ಕನೆಯದು ಸಾಧ್ಯತೆಗಳ ಶ್ರೇಣಿಗಳಿಗೆ ಸಂಬಂಧಿಸಿದೆ. ಈ ಪ್ರಕಾರದ ಅನೇಕ ಪ್ರಶ್ನೆಗಳನ್ನು ರಚಿಸಬಹುದು. ಪ್ರತಿ ಪ್ರಶ್ನೆಯು ಅನೇಕ ಉತ್ತರಗಳನ್ನು ಹೊಂದಿರುತ್ತದೆ. ಮಕ್ಕಳು ಅನೇಕ ಪ್ರಶ್ನೆಗಳನ್ನು ರಚಿಸಿದಾಗ, ಇಂತಹ ಇನ್ನಷ್ಟು ಪ್ರಶ್ನೆಗಳನ್ನು ರಚಿಸಬಹುದು ಎನ್ನುವುದು ಅವರಿಗೆ ಅರಿವಾಗುತ್ತದೆ. ಅಂತಿಮವಾಗಿ ಇದು ಅವರ ಪಾಲಿಗೆ ಒಂದು ಆಟವೆನಿಸುತ್ತದೆ. ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಅವರು ಈ ಆಟವನ್ನು ಆಡಲು ಯತ್ನಿಸುತ್ತಾರೆ.

ಗಣಿತದ ತರಗತಿಯು ಹೇಗಿರಬೇಕೆಂದರೆ, ನೀಡಲಾದ ಪ್ರಶ್ನೆಗಳ ಕುರಿತು, ತಾವು ಅದನ್ನು ಹೇಗೆ ಅರ್ಥ ಮಾಡಿಕೊಂಡಿದ್ದೇವೆ ಮತ್ತು ಅದನ್ನು ಸರಿಯಾಗಿ ಅಥವಾ ತಪ್ಪಾಗಿ ಬಗೆಹರಿಸಿದ್ದರೂ ಸಹ ಹೇಗೆ ಬಗೆಹರಿಸಿದ್ದೇವೆ ಎಂಬ ಕುರಿತು ಮಾತನಾಡಲು ಮಕ್ಕಳಿಗೆ ಅವಕಾಶವಿರಬೇಕು. ಅನೇಕ ಬಾರಿ, ಅವರಿಗೆ 'ನೀನು ಈ ಪ್ರಶ್ನೆಯನ್ನು ಹೇಗೆ ಬಗೆಹರಿಸಿದೆ?' ಮತ್ತು ಅವರು ಅನುಸರಿಸಿದ ಪ್ರಕ್ರಿಯೆಯನ್ನು ಕೇಳಿದಾಗ, ತಾವೆಲ್ಲಿ ತಪ್ಪು ಮಾಡಿದ್ದೇವೆ ಮತ್ತು ಇದನ್ನು ಹೇಗೆ ಸರಿಪಡಿಸಬೇಕು ಎಂಬುದನ್ನು ಅವರಾಗಿಯೇ ಅರಿತುಕೊಳ್ಳುತ್ತಾರೆ. ಉದಾಹರಣೆಗೆ, ಮೂರನೇ ತರಗತಿಯಲ್ಲಿ ಒಂದು ಪ್ರತಿಕ್ರಿಯೆಯು ಹೀಗಿತ್ತು: 'ಬಿಡಿಯ ಸ್ಥಾನದಲ್ಲಿ ಒಂದು ಮತ್ತು ಹತ್ತರ ಸ್ಥಾನದಲ್ಲಿ ಎರಡನ್ನು ಹೊಂದಿರುವ ಸಂಖ್ಯೆಯನ್ನು ಬರೆಯಿರಿ' ಎಂದು ಹೇಳಿದಾಗ 12 ಅನ್ನು ಬರೆಯಲಾಗಿತ್ತು. ಮಗುವಿಗೆ ಅದನ್ನು ಇನ್ನೊಮ್ಮೆ ಓದಲು ಹೇಳಿದಾಗ ಮಗುವು ಇದನ್ನು ತಕ್ಷಣವೇ ಸರಿಪಡಿಸಿತು.

ಇದೇ ರೀತಿ ಏರಿಕೆ ಮತ್ತು ಇಳಿಕೆ, ಬಿಡಿ ಮತ್ತು ಹತ್ತರ ಸ್ಥಾನ, ಹಿಂದಿನ ಮತ್ತು ಮುಂದಿನ ಸಂಖ್ಯೆಗಳು ಇತ್ಯಾದಿ ಅನೇಕ ಪದಗಳ ಕುರಿತು ತರಗತಿಯಲ್ಲಿ ಸಂವಾದವು ನಡೆದರೆ ಮಕ್ಕಳು ಸುಲಭವಾಗಿ ಇವುಗಳನ್ನು ಗ್ರಹಿಸುತ್ತಾರೆ. ಉದಾಹರಣೆಗೆ, ಏರಿಕೆ ಎಂಬ ಪದವನ್ನು ಮೂರನೇ ತರಗತಿಯ ಮಕ್ಕಳು ಬೇರೆ ಬೇರೆ ರೀತಿಯಲ್ಲಿ ವಿವರಿಸಿದರು. ಕೆಲವರು ಇದನ್ನು ಹೆಚ್ಚುವ ಕ್ರಮಾಂಕ ಎಂದು ಹೇಳಿದರೆ ಇನ್ನು ಕೆಲವರು ಇದನ್ನು 1 ರಿಂದ 10 ಎಂದು ಹೇಳಿದರು. ಇನ್ನಷ್ಟು ವಿದ್ಯಾರ್ಥಿಗಳು ಕಡಿಮೆ ಸಂಖ್ಯೆಯಿಂದ ಹೆಚ್ಚಿನ ಸಂಖ್ಯೆಯ ತನಕ – ಹೀಗೆ ನಾನಾ ರೀತಿಗಳಲ್ಲಿ ವಿವರಿಸಿದರು. ಅದೇ ರೀತಿ, ಯಾಕೆ ಒಂದು ಸಂಖ್ಯೆಯು ಒಂದರ ಮೊದಲು ಅಥವಾ ನಂತರ ಬರುತ್ತದೆ ಎಂಬುದನ್ನು ನಾವು ಚರ್ಚಿಸಿದೆವು. ಇಂತಹ ಚರ್ಚೆಗಳು ಮಕ್ಕಳಿಗೆ ಪರಿಕಲ್ಪನೆಗಳನ್ನು ಗ್ರಹಿಸಿಕೊಳ್ಳಲು ಮತ್ತು ತಮ್ಮದೇ ಆದ ವ್ಯಾಖ್ಯಾನಗಳನ್ನು ರಚಿಸಲು ಸಹಾಯ ಮಾಡುತ್ತವೆ. ತಾವಾಗಿಯೇ ಏನಾದರೂ ರಚಿಸುವ ಕಾರ್ಯವು ಸಾಕಷ್ಟು ಆತ್ಮತೃಪ್ತಿ ಮತ್ತು ಆತ್ಮವಿಶ್ವಾಸವನ್ನು ನೀಡುತ್ತದೆ.

ಗಣಿತವನ್ನು ರೇಖೀಯ ವಿಧಾನದಲ್ಲಿ ಮತ್ತು ನಿರ್ದಿಷ್ಟ ಕಾಲಾವಧಿಯಲ್ಲಿ ಕಲಿಯಲಾಗುತ್ತದೆ ಎನ್ನುವ ನಂಬಿಕೆಯು ಸಹ ಭೀತಿಯನ್ನುಂಟು ಮಾಡುತ್ತದೆ. ಮಕ್ಕಳು ಅಮೂರ್ತ ಕಲ್ಪನೆಯನ್ನು ಕಲಿಯಲು ಮತ್ತು ಗ್ರಹಿಸಲು ಕಲಿಯಬೇಕಾದರೆ, ನಾವು ಪ್ರತಿ ಪರಿಕಲ್ಪನೆಗೂ ಸಹ, ಮಕ್ಕಳು ಅದನ್ನು ಗ್ರಹಿಸಲು ಬೇಕಾಗುವಷ್ಟು ಸಮಯವನ್ನು ನೀಡಬೇಕು. ಕೆಲ ದಿನಗಳ ನಂತರ ಶಿಕ್ಷಕರು ಮತ್ತೆ ಅದೇ ಪರಿಕಲ್ಪನೆಯತ್ತ ಗಮನ ನೀಡಬೇಕು. ಅವಸರದಿಂದ ಒಂದು ಪರಿಕಲ್ಪನೆಯನ್ನು ಕಲಿಸುವುದು ಮತ್ತು 'ಒಮ್ಮೆ ಕಲಿಸಿದರೆ ಅಥವಾ ಪೂರ್ಣಗೊಳಿಸಿದರೆ' ಇದು ಮುಗಿದು ಹೋಗುತ್ತದೆ ಎನ್ನುವ ಭಾವನೆಯು ಪಠ್ಯಕ್ರಮವನ್ನು ಪೂರ್ಣಗೊಳಿಸಬಹುದಲ್ಲದೆ ಬೇರೆ ಏನನ್ನೂ ಸಾಧಿಸದು. ಗಣಿತದ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳಲು ಮಕ್ಕಳು ಹೆಣಗಾಡುತ್ತಿರುವಾಗಲೇ ಇನ್ನೊಂದು ಪರಿಕಲ್ಪನೆಯನ್ನು ಪರಿಚಯಿಸಿದರೆ, ಈ ಪ್ರಕ್ರಿಯೆಯಲ್ಲಿ ಅನೇಕ ಮಕ್ಕಳು ತಾವಿದ್ದಲ್ಲಿಯೇ ಉಳಿದುಕೊಳ್ಳುತ್ತಾರೆ. ಹೀಗಾಗಿ ಮಕ್ಕಳಿಗೆ ಗಣಿತದೊಂದಿಗೆ ತೊಡಗಿಸಿಕೊಳ್ಳಲು, ಅರಿತುಕೊಳ್ಳಲು ಮತ್ತು ಲೆಕ್ಕಾಚಾರವನ್ನು ಮಾಡಲು ಸಾಕಷ್ಟು ಸಮಯವಕಾಶವನ್ನು ನೀಡಬೇಕು. ಉದಾಹರಣೆಗೆ, ಸಂಖ್ಯಾ ರೇಖೆಗಳೊಂದಿಗೆ ವ್ಯವಹರಿಸುವಾಗ, 0ಯಿಂದ 10 ಅಥವಾ 0 ಯಿಂದ 100ರ ಸಂಖ್ಯಾ ರೇಖೆಗಳನ್ನು ರಚಿಸಿ ಇವುಗಳಲ್ಲಿ ಕೆಲವು ಸಂಖ್ಯೆಗಳನ್ನು ತೋರಿಸಿದರೆ ಮಕ್ಕಳು ಈ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ ಎಂದು ಭಾವಿಸಿದರೆ ತಪ್ಪಾದೀತು. ಸಂಖ್ಯಾ ರೇಖೆಯನ್ನು ಅರ್ಥ ಮಾಡಿಕೊಳ್ಳುವುದು ಎಂದರೆ ಮಕ್ಕಳು ಬೇರೆಬೇರೆ ಸಂಖ್ಯೆಗಳನ್ನು ತಾವಾಗಿಯೇ ಇರಿಸುವ ಸಾಮರ್ಥ್ಯವನ್ನು ಪಡೆಯುವುದು ಎಂದರ್ಥ. ಒಂದು ಸಂಖ್ಯೆಯನ್ನು ಇನ್ನೊಂದು ಸಂಖ್ಯೆಯೊಂದಿಗೆ ಹೋಲಿಸಿದಾಗ ಅದು ಎಷ್ಟು ದೊಡ್ಡದಾಗಿದೆ ಅಥವಾ ಸಣ್ಣದಾಗಿದೆ ಹಾಗೂ ಈ ಕಾರಣಕ್ಕಾಗಿ ಇದನ್ನು ರೇಖೆಯಲ್ಲಿ ಎಲ್ಲಿ ಇರಿಸಬೇಕು ಎಂಬುದನ್ನು ಅವರು ಅರಿತುಕೊಳ್ಳಬೇಕು. ಸಂಖ್ಯಾ ರೇಖೆಯ ಪರಿಕಲ್ಪನೆಯು ದೊಡ್ಡ ಮತ್ತು ಸಣ್ಣ ಸಂಖ್ಯೆಗಳು ಮತ್ತು ಸಂಕಲನ ಮತ್ತು ವ್ಯವಕಲನದ ಕ್ರಿಯೆಗಳೊಂದಿಗೆ ಸಂಬಂಧವನ್ನು ಹೊಂದಿದ್ದು, ಇದು ಪ್ರತ್ಯೇಕ ಪರಿಕಲ್ಪನೆಯಲ್ಲ ಎಂಬುದನ್ನು ಅವರು ಅರಿತುಕೊಳ್ಳುವುದು ಅಗತ್ಯ.

ಪರಿಕಲ್ಪನೆಗಳನ್ನು ಕೆಲವೊಮ್ಮೆ ಅವು ಒಂದಕ್ಕೊಂದು ಸಂಬಂಧವೇ ಇಲ್ಲವೆನ್ನುವ ರೀತಿಯಲ್ಲಿ ರೇಖೀಯ ವಿಧಾನದಲ್ಲಿ ಒಂದರ ನಂತರ ಒಂದರಂತೆ ಕಲಿಸಲಾಗುತ್ತದೆ. ಗಣಿತದ ಪರಿಕಲ್ಪನೆಗಳು ಪರಸ್ಪರ ಸಂಬಂಧವನ್ನು ಹೊಂದಿದ್ದು, ಕಲಿಯುವವನ ಮನಸ್ಸಿನಲ್ಲಿ ಇವುಗಳನ್ನು ಸಂಪೂರ್ಣ ವಿಷಯವೊಂದರ ಅಂಗವಾಗಿ ಕಲಿತಾಗ ಇನ್ನಷ್ಟು ಚೆನ್ನಾಗಿ ಅರ್ಥವಾಗುತ್ತದೆ. ಆದರೆ ಬೋಧನೆಯ ವೇಳೆ ಇದನ್ನು ಮರೆಯಲಾಗುತ್ತದೆ. ಹೀಗಾಗಿ ಎಣಿಕೆ, ಸಂಖ್ಯೆಗಳು, ಅಂಕಿಗಳು, ಸಂಕಲನ, ವ್ಯವಕಲನ, ಸ್ಥಾನದ ಮೌಲ್ಯ ಮತ್ತು ಏರಿಕೆ ಹಾಗೂ ಇಳಿಕೆ ಕ್ರಮದಲ್ಲಿ ಬರೆಯುವುದು – ಈ ಎಲ್ಲಾ ಪರಿಕಲ್ಪನೆಗಳು ಮನಸ್ಸಿನಲ್ಲಿರುತ್ತವೆ. ಆದರೆ ಪ್ರತಿಯೊಂದು ಪ್ರತ್ಯೇಕವಾಗಿದ್ದು ಯಾವುದೇ ಸಂಬಂಧವನ್ನು ಹೊಂದಿರುವುದಿಲ್ಲ. ಇದರಿಂದಾಗಿಯೇ ನೋಡುವುದು, ಗ್ರಹಿಸುವುದು, ಮಾದರಿಗಳನ್ನು ರಚಿಸಿ

ಅವುಗಳೊಂದಿಗೆ ಆಟವಾಡುವುದು ಇವೆಲ್ಲವೂ ಕಷ್ಟಕರವೆನಿಸುತ್ತದೆ. ಹೀಗಾಗಿಯೇ ತಮಗೆ ಈಗಾಗಲೇ ತಿಳಿದಿರುವ ಪರಿಕಲ್ಪನೆಗಳ ಅರಿವನ್ನು ಬಳಸಲು ಪ್ರಯತ್ನಿಸಿ ಮಾಡಬಹುದಾದ ಅಂತಹ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಬೇಕು ಅಥವಾ ಕೆಲಸಗಳನ್ನು ನೀಡಬೇಕು.

'ಗಣಿತೀಯವಾಗಿ ವ್ಯಾಖ್ಯಾನಿಸಲು' ಮತ್ತು ತಾರ್ಕಿಕವಾಗಿ ಯೋಚಿಸುವಂತಾಗಲು ಮಕ್ಕಳು ಕಲಿಯುವಂತೆ ಮಾಡುವುದು ಗಣಿತದ ಒಂದು ಪ್ರಮುಖ ಉದ್ದೇಶವಾಗಿದೆ. ಸಾಮಾನ್ಯವಾಗಿ ಮಕ್ಕಳನ್ನು ಗಣಿತಕ್ಕೆ ಹೆಚ್ಚಾಗಿ ಒಡ್ಡಲಾಗುವುದಿಲ್ಲ. ಹೀಗಾಗಿಯೇ ಅವರು ಇದನ್ನು ಆಸಕ್ತಿಕರವಲ್ಲದ ಮತ್ತು ಹುರುಪಿಲ್ಲದ ವಿಷಯವಾಗಿ ಪರಿಗಣಿಸುತ್ತಾರೆ. ಮಾದರಿಗಳನ್ನು ರಚಿಸುವುದು, ಶೋಧನೆ ಮತ್ತು ಅನ್ವೇಷಣೆ, ಒಂದೇ ಪ್ರಶ್ನೆಗೆ ಅನೇಕ ರೀತಿಗಳಲ್ಲಿ ಉತ್ತರವನ್ನು ಕಂಡುಹಿಡಿಯಲು ಯತ್ನಿಸುವುದು, ಗಣಿತದ ಪ್ರಶ್ನೆಗಳನ್ನು ರಚಿಸುವುದು ಇತ್ಯಾದಿಗಳೆಲ್ಲವೂ ಸಹ ಗಣಿತೀಯವಾಗಿ ವ್ಯಾಖ್ಯಾನಿಸುವ ಕ್ರಿಯೆಯ ಅಂಗವಾಗಿದ್ದು, ಇದನ್ನು ಎಲ್ಲಾ ಮಕ್ಕಳು ಆನಂದಿಸಬೇಕು.

● ಅನುವಾದ: **ಮೆಲ್ವಿನ್ ಮೆಂಡೋನ್ಸ** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**

---



**ರಜನಿ ದ್ವಿವೇದಿ** ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದೊಂದಿಗೆ ಗುರುತಿಸಿಕೊಂಡಿದ್ದು ವಿಶ್ವವಿದ್ಯಾಲಯದ 'ಪಾಠಶಾಲಾ – ಭೀತರ್ ಔರ್ ಬಾಹರ್' ನಿಯತಕಾಲಿಕದ ಸಂಪಾದಕೀಯ ಮಂಡಳಿಯ ಸದಸ್ಯರಾಗಿದ್ದಾರೆ. ಅವರನ್ನು **rajni.dwivedi@azimpremjifoundation.org** ಮೂಲಕ ಸಂಪರ್ಕಿಸಬಹುದು.

# ಶಾಲಾ ಸಂಸ್ಕೃತಿ | ಸಮಯ ಮತ್ತು ಸನ್ನಿವೇಶ ಆಧಾರಿತ ಭಿನ್ನತೆಗಳು

ರಾಹುಲ್ ಮುಖ್ಯೋಪಾಧ್ಯಾಯ

ಶಾಲಾ ಸಂಸ್ಕೃತಿ ಎಂದರೆ ಇದರ ಭಾಗೀದಾರಿಗಳಲ್ಲಿ ಶಿಕ್ಷಣದ ಉದ್ದೇಶವನ್ನು ನೆಲೆಗೊಳಿಸುವುದಾಗಿದೆ. ಈ ಭಾಗೀದಾರರಲ್ಲಿ ಶಾಲಾಡಳಿತ, ಆಡಳಿತ ಮಂಡಳಿ, ಶಿಕ್ಷಕರು, ಮಕ್ಕಳು, ಪೋಷಕರು ಮತ್ತು ಸಮುದಾಯವು ಒಳಗೊಂಡಿದ್ದು, ಇಲ್ಲಿ ಶೈಕ್ಷಣಿಕ ಅರ್ಹತೆಯ ಮೇಲೆ ನಂಬಿಕೆ, ಕೌಶಲ ಸೃಷ್ಟಿ, ಉದ್ಯೋಗ ನೇಮಕ ಯೋಗ್ಯತೆ ಮತ್ತು ಜ್ಞಾನದ ಸೃಷ್ಟಿಯ ನಿರಂತರತೆ ಇಂತಹ ಸಂಕುಚಿತ ವ್ಯಾವಹಾರಿಕ ಗುರಿಗಳನ್ನು ಮೀರಿ ಮುಂದೆ ಸಾಗಲಾಗುತ್ತದೆ. ಆದರೆ ಇದು ಶಾಲೆಯು ಸಾಧಿಸಬೇಕಾದ ಗುರಿಯಲ್ಲ ಎಂದು ಹೇಳಲಾಗದು. ಒಂದು ವೇಳೆ ಈ ಗುರಿಗಳೇ ಶಾಲೆಯ ಅಸ್ತಿತ್ವವನ್ನು ನಿರ್ಣಯಿಸುವ ಮುಖ್ಯ ಕಾರಣಗಳೆನಿಸಿದರೆ, ನಾವು ಈ ನಿಟ್ಟಿನಲ್ಲಿ ಚಿಂತಿಸ ಬೇಕಾಗುತ್ತದೆ. ಒಂದು ವೇಳೆ ವೈವಿಧ್ಯತೆಯನ್ನು ಗೌರವಿಸುವುದು, ನ್ಯಾಯಪರತೆ, ಜವಾಬ್ದಾರಿ ಮತ್ತು ಪ್ರಾಮಾಣಿಕತೆ, ಕಾನೂನಿನ, ನೈತಿಕ, ಸಾಮಾಜಿಕ ಮತ್ತು ಪರಿಸರದ ಮೇಲಿನ ಪರಿಣಾಮಗಳನ್ನು ಆಧರಿಸಿ ಸರಿ ಮತ್ತು ತಪ್ಪುಗಳನ್ನು ಗುರುತಿಸುವ ವಿವೇಚನೆ ಹಾಗೂ ಸಬಲೀಕರಿಸುವ, ಆರೈಕೆಯ ಮತ್ತು ವಿಮರ್ಶಾತ್ಮಕವಾಗಿ ಪರ್ಯಾಲೋಚಿಸುವ ರೀತಿಯಲ್ಲಿ ಬೇರೆಯವರಿಗೆ ಸಂಬಂಧಿಸಿದಂತೆ ನಮ್ಮನ್ನು ನಾವು ಅರಿತುಕೊಳ್ಳುವುದು ಮುಂತಾದ ಮೂಲಭೂತ ಮಾನವೀಯ ಮೌಲ್ಯಗಳನ್ನು ಶಾಲೆಗಳು ನಮಗೆ ಕಲಿಸದೆ ಇದ್ದರೆ, ನಾವು ಶಿಕ್ಷಣದ ಅತ್ಯಂತ ಮೂಲಭೂತ ಉದ್ದೇಶವನ್ನೇ ಕಳೆದುಕೊಳ್ಳುತ್ತೇವೆ.

> ಸಂಸ್ಕೃತಿ ಎಂದರೆ ನಾವು ಒಂದು ಶಾಲೆಯ ಆಚರಣೆಗಳು, ದೈನಂದಿನ ಅಭ್ಯಾಸಗಳು ಅಥವಾ ನಂಬಿಕೆಗಳೆಂದು ಕರೆಯುವ, ಗುರುತಿಸುವಿಕೆಗಾಗಿ 'ನೀಡಲಾದ' ಗಣಗಳಲ್ಲ. ಸಂಸ್ಕೃತಿಯನ್ನು ಶಾಲೆಯ ಘಟಕಗಳು ರಚಿಸುತ್ತವೆ ಮತ್ತು ಪುನಾರಚಿಸುತ್ತವೆ. ಹಾಗೂ ಇದು ತಾತ್ಕಾಲಿಕವಾಗಿ ಅಸ್ಥಿರವಾಗಿರುತ್ತವೆ. ಅಂದರೆ ಒಂದು ಶಾಲೆಯು ನಿರ್ದಿಷ್ಟ ಕಾಲಾವಧಿಯಲ್ಲಿ ನಿರ್ದಿಷ್ಟ ಘಟಕಗಳೊಂದಿಗೆ ಒಂದು ಸಂಸ್ಕೃತಿಯನ್ನು ಹೊಂದಿರಬಹುದು (ಇದರ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು, ಶಿಕ್ಷಕರು ಅಥವಾ ವಿದ್ಯಾರ್ಥಿಗಳ ವ್ಯಕ್ತಿಚಿತ್ರಣ) ಹಾಗೂ ಇನ್ನೊಂದು ಕಾಲಾವಧಿಯಲ್ಲಿ ಘಟಕಗಳ ವಿಭಿನ್ನ ಗಣಗಳೊಂದಿಗೆ ವಿಶಿಷ್ಟವಾಗಿ ವಿಭಿನ್ನ ಸಂಸ್ಕೃತಿಯನ್ನು ಹೊಂದಿರಬಹುದು. ಭಾರತೀಯ ಸನ್ನಿವೇಶದಲ್ಲಿ ನಾವು ಮಾಡುವ ಇನ್ನೊಂದು ತಪ್ಪು ಎಂದರೆ, ಸಂಪೂರ್ಣವಾಗಿ ಬೇರೆಬೇರೆ ಸಾಂಸ್ಥಿಕ ಪರಿಸರಗಳಿಗೆ ಸೇರಿದ ಶಾಲೆಗಳ ನಡುವೆ ಸಮಾನತೆಯನ್ನು ಹುಡುಕಲು ಯತ್ನಿಸುತ್ತೇವೆ. ಇದನ್ನು ವಿವರಿಸಲು ನಾವು ಎರಡು ಕಲ್ಪಿತ ಉದಾಹರಣೆಗಳನ್ನು ತೆಗೆದುಕೊಳ್ಳೋಣ. ಕಲ್ಪಿತವಾಗಿದ್ದರೂ, ಇವು ಭಾರತದ ಶಾಲಾ ಶಿಕ್ಷಣ ವ್ಯವಸ್ಥೆಯ ಸಮಕಾಲೀನ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ವಾಸ್ತವಿಕತೆಗಳನ್ನು ತೆರೆದಿಡುತ್ತವೆ.

**ಶಾಲೆ A**

ಈ ಸರ್ಕಾರಿ ಪ್ರಾಥಮಿಕ ಶಾಲೆಯನ್ನು 1970ರ ಆರಂಭದಲ್ಲಿ ಸಮೃದ್ಧ ಗ್ರಾಮೀಣ ಪರಿಸರವೊಂದರಲ್ಲಿ ಸ್ಥಾಪಿಸಲಾಗಿತ್ತು. ಇದು ಜಿಲ್ಲಾ ಕೇಂದ್ರದಿಂದ ಹೆಚ್ಚು ದೂರದಲ್ಲಿ ಇಲ್ಲದಿದ್ದರೂ, ಸಾರ್ವಜನಿಕ ಸಾರಿಗೆ ಸೌಲಭ್ಯದ ಕೊರತೆಯನ್ನು ಎದುರಿಸುತ್ತಿತ್ತು ಹಾಗೂ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು ಇಲ್ಲಿನ ಕುಟುಂಬಗಳ ಪ್ರಮುಖ ವೃತ್ತಿ ಎನಿಸಿದ್ದವು. ಈ ಶಾಲೆಯು ಪಂಚಾಯತ್‌ನ ಸುಮಾರು ಆರು ಹಳ್ಳಿಗಳಿಗೆ ತನ್ನ ಸೇವೆಯನ್ನು ನೀಡುತ್ತಿತ್ತು ಹಾಗೂ ಮೊದಲ ಎರಡು ದಶಕಗಳಲ್ಲಿ, ಹಸಿರು ಕ್ರಾಂತಿಯ ಪ್ರಯೋಜನವನ್ನು ಪಡೆದ ಹಾಗೂ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡುವ ಆಕಾಂಕ್ಷೆಯನ್ನು ಹೊಂದಿದ್ದ, ಆ ಪಂಚಾಯತ್‌ನ ಪ್ರಬಲ ಜಾತಿಯ ಮಕ್ಕಳಿಗೆ ತನ್ನ ಸೇವೆಯನ್ನು ಒದಗಿಸುತ್ತಿತ್ತು. ಆ ಪ್ರದೇಶದ ಪರಿಶಿಷ್ಟ ಜಾತಿ (ಎಸ್.ಸಿ.) ಮತ್ತು ಪರಿಶಿಷ್ಟ ಪಂಗಡದ (ಎಸ್.ಟಿ.) ಕುಟುಂಬದವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಸ್ಥಿತಿಯಲ್ಲಿರಲಿಲ್ಲ. ಏಕೆಂದರೆ ಅವರ ಪಾಲಿಗೆ ಅವಕಾಶ ವೆಚ್ಚವು [i] ಅಧಿಕವಾಗಿತ್ತು. ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸುವುದು ಸಹ ಅವರ ಆರ್ಥಿಕ ಸಾಮರ್ಥ್ಯವನ್ನು ಮೀರಿದ ನೇರ ಆರ್ಥಿಕ ಪರಿಣಾಮವನ್ನುಂಟು ಮಾಡುತ್ತಿತ್ತು.

ಆ ಶಾಲೆಯಲ್ಲಿ ಸಾಕಷ್ಟು ಶಿಕ್ಷಕರಿದ್ದರು. ಕ್ರಿಯಾಶೀಲ ಮುಖ್ಯೋಪಾಧ್ಯಾಯರೊಂದಿಗೆ ಸೇರಿಕೊಂಡು ಅವರು, ಸ್ವಲ್ಪ ಮಟ್ಟಿಗೆ ಶೈಕ್ಷಣಿಕ ಹಿನ್ನೆಲೆಯನ್ನು ಹೊಂದಿದ್ದ ಮನೆಗಳಿಂದ ಬಂದ ಪ್ರಬಲ ಜಾತಿಯ ಮಕ್ಕಳೊಂದಿಗೆ ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳುತ್ತಿದ್ದರು. ಈ ಮಕ್ಕಳ ಪೋಷಕರು ಮೂಲಭೂತ ಶಿಕ್ಷಣವನ್ನು ಪೂರ್ಣಗೊಳಿಸಿದ್ದರು ಹಾಗೂ ಶಾಲಾ ಸಮಯಕ್ಕೆ ಮೀರಿ ವಿನಿಯೋಗಿಸಬೇಕಾದ ಸಮಯ, ಅವಕಾಶಗಳು ಮತ್ತು ಸೌಲಭ್ಯಗಳೊಂದಿಗೆ ತಮ್ಮ ಮಕ್ಕಳಿಗೆ ನೆರವನ್ನು ಒದಗಿಸುವ ಆಸಕ್ತಿಯನ್ನು ಇವರು ಹೊಂದಿದ್ದರು. ಸಮಾಜದ ಕೆಳವರ್ಗಗಳಿಂದ ಬಂದ ಕೆಲವು ಮಕ್ಕಳನ್ನು ಇಲ್ಲಿ ನಿರ್ಲಕ್ಷಿಸಲಾಗುತ್ತಿತ್ತು. ಶಿಕ್ಷಕರು ತಮ್ಮ ಆಚರಣೆಯಲ್ಲಿ, ಸುತ್ತಮುತ್ತಲಿನ ಹಳ್ಳಿಗಳಲ್ಲಿ ಚಾಲ್ತಿಯಲ್ಲಿದ್ದ ಸಾಮಾಜಿಕ ಎಲ್ಲೆಗಳನ್ನು ಕಾಪಾಡುತ್ತಿದ್ದರು. ಸಾಧನೆಯ ವಿಚಾರದಲ್ಲಿ ಹೇಳುವುದಾದರೆ, ಈ ಶಾಲೆಯ ಪ್ರಬಲ ಜಾತಿಯವರ ಕಡೆಯಿಂದ ಅತ್ಯಧಿಕ ಪ್ರಮಾಣದಲ್ಲಿ ಮಕ್ಕಳು ಮುಂದಿನ ಹಂತದ ಶಾಲಾ ಶಿಕ್ಷಣಕ್ಕೆ ಸಾಗಿದರೆ, ಅನನುಕೂಲ ಸ್ಥಿತಿಯಲ್ಲಿರುವ ಪಂಗಡಗಳ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣದ ಆರಂಭದ ವರ್ಷಗಳಲ್ಲಿಯೇ ಅಥವಾ ಪ್ರಾಥಮಿಕ ಹಂತವನ್ನು ಪೂರ್ಣಗೊಳಿಸಿದಾಗ ಶಾಲೆಯನ್ನು ಬಿಡುವುದು ಸಾಮಾನ್ಯವಾಗಿತ್ತು.

ದಶಕಗಳು ಕಳೆದಂತೆ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರಲ್ಲಿ ಬದಲಾವಣೆಯಾಯಿತು. ಆಡಳಿತಾತ್ಮಕ ವರ್ಗಾವಣೆ ಮತ್ತು ಭಡ್ತಿಗಳು ನಡೆದವು. ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗಳಿಗೆ ಕಳುಹಿಸುವ ಆಕಾಂಕ್ಷೆಯನ್ನು ಈಡೇರಿಸುವುದಕ್ಕಾಗಿ ಕೆಲವು ಸಣ್ಣಸಣ್ಣ ಖಾಸಗಿ ಶಾಲೆಗಳು ತಲೆಯೆತ್ತಿದವು. ತಮ್ಮ ಮಕ್ಕಳಿಗೆ

ಬೇಕಾಗುವ ಶಿಕ್ಷಣವನ್ನು ನೀಡುವಲ್ಲಿ ಸರ್ಕಾರಿ ಶಾಲೆಗಳು ನ್ಯಾಯವನ್ನು ಒದಗಿಸುತ್ತಿಲ್ಲ ಎಂಬ ಒಟ್ಟಾರೆ ಗ್ರಹಿಕೆಯು ಉಂಟಾಯಿತು. ಪ್ರಬಲ ಜಾತಿಯ ಅನೇಕ ಮಕ್ಕಳು ಈ ಖಾಸಗಿ ಶಾಲೆಗಳಲ್ಲಿ ಪ್ರವೇಶ ಪಡೆದರು. ಇನ್ನೊಂದೆಡೆ ಎಸ್.ಸಿ., ಎಸ್.ಟಿ. ಮತ್ತು ಇತರ ಹಿಂದುಳಿದ ವರ್ಗಗಳ (ಒಬಿಸಿಗಳು) ಮಕ್ಕಳು ಮತ್ತು ಈ ವರ್ಗಗಳ ಹೆಚ್ಚಿನ ಹುಡುಗಿಯರು ಸರ್ಕಾರಿ ಶಾಲೆಗಳಿಗೆ ಬಂದರು.

ಏಕೆಂದರೆ ಕೇಂದ್ರ ಮತ್ತು ರಾಜ್ಯ ಮಟ್ಟಗಳ ಸರ್ಕಾರಿ ಯೋಜನೆಗಳು, ಸರ್ಕಾರಿ ಶಾಲೆಗಳ ಅವಕಾಶ ವೆಚ್ಚಗಳು ಮತ್ತು ನೇರ ಆರ್ಥಿಕ ವೆಚ್ಚವನ್ನು ಈ ಹಿಂದಿಗಿಂತಲೂ ಸಾಕಷ್ಟು ತಗ್ಗಿಸಿದವು. ಶಾಲೆಗೆ ಹೋಗುತ್ತಿರುವ ಮೊದಲ ತಲೆಮಾರಿನವರಿಗೆ ಶಿಕ್ಷಣ ಒದಗಿಸುವುದು ಮತ್ತು ಮನೆಯಲ್ಲಿ ಶಿಕ್ಷಣಕ್ಕೆ ತೀರಾ ಕಡಿಮೆ ನೆರವು ಪಡೆಯುತ್ತಿರುವ ಮಕ್ಕಳು – ಇಂತಹ ಸಂಕ್ರಮಣದ ಸಂದರ್ಭದಲ್ಲಿ ಶಿಕ್ಷಕರು ನಿಜಕ್ಕೂ ಹೆಣಗಾಡಬೇಕಾಯಿತು. ಆದರೆ ತಮ್ಮ ಕೆಲಸದ ಬಗ್ಗೆ ಬದ್ಧತೆ ಇರುವ ಹಾಗೂ ಶಾಲೆಯ ಕುರಿತು ಯೋಚಿಸುವ ಯೋಗ್ಯ ಮುಖ್ಯ ಶಿಕ್ಷಕರು ಅಥವಾ ಒಂದಷ್ಟು ಶಿಕ್ಷಕರ ಉಪಸ್ಥಿತಿಯು ಹಾಗೂ ಪರಂಪರೆಯ ರೂಪದಲ್ಲಿ ಅವರಿಗೆ ಹಸ್ತಾಂತರಿಸಲ್ಪಟ್ಟ ಹಿಂದಿನ ಸಾಧನೆಯು, ಹೊಸ ಶೈಕ್ಷಣಿಕ ಕಾರ್ಯಕ್ರಮಗಳನ್ನು ಶಾಲೆಯಲ್ಲಿ ಪ್ರಾಮಾಣಿಕತೆಯೊಂದಿಗೆ ಜಾರಿಗೊಳಿಸುವಂತೆ ಮಾಡಿತು. ಶಿಕ್ಷಕರ ನಡುವೆ ಜಾತಿ ವಿಂಗಡಣೆಯ ಕುರಿತ ನಂಬಿಕೆಗಳಿದ್ದವು. ಅಲ್ಲದೆ ಇವುಗಳನ್ನು ಆಗಾಗ್ಗೆ ಶಾಲಾ ವಾತಾವರಣದ ವಿವಿಧ ಮಗ್ಗಲುಗಳಲ್ಲಿ ಕಾಣಬಹುದಾಗಿತ್ತು. ಆದರೂ ಶಾಲಾ ಕಲಿಕೆ, ನಿರಂತರ ಹಾಜರಾತಿ ಮತ್ತು ಮಕ್ಕಳ ಶಿಕ್ಷಣಕ್ಕಾಗಿ ಮನೆಯಲ್ಲಿ ಸಿಗಬೇಕಾದ ಅಗತ್ಯ ನೆರವಿನ ರೂಪಗಳು ಇತ್ಯಾದಿಗಳ ಪ್ರಯೋಜನಗಳ ಕುರಿತು ಸಮುದಾಯದಲ್ಲಿ ಜಾಗೃತಿ ರೂಪಿಸಬೇಕಾದುದನ್ನು ಶಿಕ್ಷಕರು ಅರಿತುಕೊಂಡರು. ಪ್ರಸ್ತುತ ದಾಖಲಾತಿಯ (ಮುಖ್ಯವಾಗಿ ಕಡಿಮೆ ಸವಲತ್ತಿನ ವರ್ಗಗಳಿಂದ ಬಂದವರು) ಮುಂದಿನ ಹಂತದ ಕಲಿಕೆಯಲ್ಲಿ ಸರಿಸುಮಾರು ಸಂಪೂರ್ಣ ಪರಿವರ್ತನೆಯನ್ನು ಸಾಧಿಸುವಲ್ಲಿ ಶಾಲೆಯು ಯಶಸ್ವಿಯಾಯಿತು.

ಶಾಲಾ ಅಭ್ಯಾಸದ ಕುರಿತು ಹೇಳುವುದಾದರೆ, ಶಾಲಾ ಸಭೆಯಲ್ಲಿ ಅನೇಕ ವರ್ಷಗಳಿಂದ ಏನು ನಡೆದುಕೊಂಡು ಬಂದಿದೆಯೋ ಅದನ್ನು ಮುಂದುವರಿಸಲಾಯಿತು. ಮಕ್ಕಳು ಬೇರೆಬೇರೆ ತರಗತಿಗೆ ಅನುಗುಣವಾಗಿ ಹಾಗೂ ತಮ್ಮ ಲಿಂಗವನ್ನು ಆಧರಿಸಿ ಬೇರೆಬೇರೆ ಸಾಲಿನಲ್ಲಿ ನಿಂತರು. ಆದರೆ ಸಭೆಯ ಅಂಗವೆನಿಸುವ ವಿವಿಧ ಚಟುವಟಿಕೆಗಳಲ್ಲಿ ಹುಡುಗಿಯರು ಹಾಗೂ ಹುಡುಗರಿಬ್ಬರಿಗೂ ಯಾವಾಗಲೂ ಸಮಾನ ಅವಕಾಶಗಳನ್ನು ನೀಡಲಾಯಿತು. ನಾಡಗೀತೆ ಮತ್ತು ರಾಷ್ಟ್ರಗೀತೆಯನ್ನು ಹಾಡುವುದು, ತರಗತಿಯ ಅವಧಿಯಲ್ಲಿ ವಿದ್ಯಾರ್ಥಿಗಳು ಮಾಡಿದ ಕೆಲಸವನ್ನು ಪ್ರಸ್ತುತಪಡಿಸುವುದು ಮತ್ತು ಹಂಚಿಕೊಳ್ಳುವುದು, ಶಿಕ್ಷಕರ ಮಾರ್ಗದರ್ಶನದಲ್ಲಿ ಮಕ್ಕಳು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರಮುಖ ವಿಚಾರಗಳನ್ನು ಹಂಚಿಕೊಳ್ಳುವುದು ಇತ್ಯಾದಿಗಳಲ್ಲಿ ಸಮಾನತೆಯನ್ನು ಕಾಯ್ದುಕೊಳ್ಳಲಾಯಿತು. ಶಿಕ್ಷಕರು ತಮ್ಮ ನಡುವೆ ವೃತ್ತಿಪರ ಒಡನಾಟವನ್ನು ಸಹ ಕಾಪಾಡಿಕೊಂಡರು. ವಾರದ ಅರ್ಧ ದಿನವನ್ನು ಅವರು ತರಗತಿಯಲ್ಲಿ ಎದುರಿಸುವ ಸವಾಲುಗಳನ್ನು ಚರ್ಚಿಸಲು, ಈ ಸವಾಲುಗಳನ್ನು ಬಗೆಹರಿಸಲು ಅವರು ಬಳಸಿಕೊಂಡ ವಿಧಾನವನ್ನು ಹಂಚಿಕೊಳ್ಳಲು ಮತ್ತು ಪರಸ್ಪರ ಸಲಹೆಗಳನ್ನು ಕೇಳಲು ಮೀಸಲಿಟ್ಟರು. ಈ ಪ್ರಕ್ರಿಯೆಯನ್ನು ಪ್ರಾರಂಭಿಸುವಲ್ಲಿ ಮೊದಲು ಮುಖ್ಯ ಶಿಕ್ಷಕರು ಪ್ರಮುಖ ಪಾತ್ರ ವಹಿಸಿದ್ದರೂ ಸಹ, ಅವರ ಪಾಲ್ಗೊಳ್ಳುವಿಕೆಯು ಇರಲಿ ಅಥವಾ ಇರದಿರಲಿ, ಈ ಪ್ರಕ್ರಿಯೆಯು ಮುಂದುವರಿಯುತ್ತಲೇ ಹೋಯಿತು.

### ಶಾಲೆ B

ಈ ಖಾಸಗಿ ಅನುದಾನರಹಿತ ಶಾಲೆಯು 1960ರ ದಶಕದ ಕೊನೆಯಲ್ಲಿ, ಅಂದರೆ ಶಾಲೆ Aಯು ಪ್ರಾರಂಭಗೊಂಡ ಸಮಯದಲ್ಲಿಯೇ ಆರಂಭವಾಯಿತು. ಅನೇಕ ವ್ಯಾವಹಾರಿಕ ಹಿತಾಸಕ್ತಿಗಳನ್ನು ಹೊಂದಿದ್ದ, ಆದರೂ ಬೇರೆಬೇರೆ ತಾಣಗಳಲ್ಲಿ ಶಿಕ್ಷಣ ಮತ್ತು ಆರೋಗ್ಯ ಸೇವೆಯಲ್ಲಿ ಸಾಕಷ್ಟು ಪರೋಪಕಾರಿ ಹೂಡಿಕೆಗಳನ್ನು ಮಾಡಿದ್ದ ಪ್ರಸಿದ್ಧ ಕಾರ್ಪೊರೇಟ್ ಸಂಸ್ಥೆಯ ಅಡಿಯಲ್ಲಿ ಟ್ರಸ್ಟ್ ಆಗಿ ಈ ಶಾಲೆಯು ಸ್ಥಾಪನೆಯಾಯಿತು. ಮಧ್ಯಮ ಮತ್ತು ಮೇಲ್ವರ್ಗದ ಜನರಿಂದ ತುಂಬಿ ಹೋಗಿರುವ ಟಯರ್ – 1 ನಗರದ ಹೃದಯ ಭಾಗದಲ್ಲಿ ಈ ಶಾಲೆಯು ತಲೆಯೆತ್ತಿತು. ಆರಂಭಿಕ ದಾಖಲಾತಿಗಳು ಈ ವರ್ಗಕ್ಕೆ ಸೇರಿದ ಜನರಿಂದಲೇ ಬಂದವು. ಮುಂದೆ ಬಾಯಿ ಮಾತಿನ ಶಿಫಾರಸ್ಸಿನ ಕಾರಣ ಇದೇ ವರ್ಗದ ಜನರಿಂದ ಇನ್ನಷ್ಟು ದಾಖಲಾತಿಗಳು ಬಂದವು. ತನ್ನ ಬಳಿ ಸಾಕಷ್ಟು ಸಂಪನ್ಮೂಲಗಳು ಇದ್ದ ಕಾರಣ ಈ ಶಾಲೆಯು ತನ್ನ ಆರಂಭಿಕ ಹಂತದಿಂದಲೇ ಅತ್ಯಾಧುನಿಕ ಮೂಲಸೌಕರ್ಯಗಳನ್ನು ರಚಿಸಿತು ಹಾಗೂ ನಗರದ ಮಧ್ಯಮ ವರ್ಗದ ಹಿನ್ನೆಲೆಯಿಂದ ಬಂದ ಅರ್ಹ ಶಿಕ್ಷಕರನ್ನು ನೇಮಿಸಿಕೊಂಡಿತು. ಕಾಲ ಕಳೆದಂತೆ ಈ ಮಾನದಂಡಗಳನ್ನು ಕಾಪಾಡುತ್ತಾ ಬರಲಾಯಿತು ಮತ್ತು ಅಗತ್ಯ ಬಿದ್ದಾಗಲೆಲ್ಲ ಪರಿಷ್ಕರಿಸಲಾಯಿತು. ಶಾಲೆಯಲ್ಲಿ ಕಲಿಯಲು ಅವಕಾಶ ಪಡೆಯುವ ಕುಟುಂಬಗಳು/ ಮಕ್ಕಳು ಮತ್ತು ಇಲ್ಲಿ ಕಲಿಸಲು ಬರುವ ಶಿಕ್ಷಕರ ಕುರಿತು ಶಾಲೆಯಲ್ಲಿ ಸ್ವಯಂ ಆಯ್ಕೆ ಪ್ರಕ್ರಿಯೆಯನ್ನು ಮುಂದುವರಿಸಲಾಯಿತು. ವಿದ್ಯಾರ್ಥಿಗಳು – ಶಿಕ್ಷಕರ ನಡುವಿನ ಕಡಿಮೆ ಅಂತರ, ಪಠ್ಯಕ್ರಮದ ಕುರಿತ ಸಮಗ್ರ ಮನೋಭಾವ (ಪಠ್ಯೇತರ ಚಟುವಟಿಕೆಗಳು ಸೇರಿದಂತೆ), ಹೊಸ ಶಿಕ್ಷಣಶಾಸ್ತ್ರೀಯ ವಿಚಾರಗಳೊಂದಿಗೆ ಪ್ರಯೋಗ ನಡೆಸಲು ಶಿಕ್ಷಕರಿಗೆ ನೀಡಲಾದ ಸ್ವಾತಂತ್ರ್ಯ ಮತ್ತು ಮುಕ್ತತೆಯು ಮಕ್ಕಳಿಗೆ ಮುಖ್ಯವಾಹಿನಿಯ ಶಾಲೆಗಳಲ್ಲಿ ಮಾಮೂಲಿ ಶಿಸ್ತೀಯ ವಿಧಾನಗಳಿಂದ ಹೊರಬಂದು ಅಭಿವೃದ್ಧಿ ಸಾಧಿಸಲು ಅವಕಾಶವನ್ನು ನೀಡಿತು ಹಾಗೂ ವಿಷಯಗಳ ಎಲ್ಲೆಯನ್ನು ನಿರ್ಧರಿಸಿತು. ಹೀಗೆ ಅವರು ಶಾಲೆಯಿಂದ ಪರಿವರ್ತನೆಗೊಂಡಂತೆ ಹೆಚ್ಚು ಆತ್ಮವಿಶ್ವಾಸ ಮತ್ತು ಸಾಮರ್ಥ್ಯವನ್ನು ಗಳಿಸುವುದನ್ನು ಇದು ಖಾತರಿಪಡಿಸಿತು.

ಇದರ ಒಟ್ಟಾರೆ ಬೋಧನೆ – ಕಲಿಕೆಯ ಪರಿಸರಕ್ಕೆ ಅನುಗುಣವಾಗಿ ಇತರ ಶಾಲಾ ಅಭ್ಯಾಸಗಳು ಸಹ ವಿಶಿಷ್ಟ ರೀತಿಯಲ್ಲಿ ಅಭಿವೃದ್ಧಿಗೊಂಡವು. ಶಾಲೆಯಲ್ಲಿ ಶಾಸ್ತ್ರೀಯ ಸಂಗೀತದಲ್ಲಿ ತರಬೇತಿಯನ್ನು ಪಡೆಯುವ ವಿದ್ಯಾರ್ಥಿಗಳು ಸ್ವಯಂಪ್ರೇರಿತವಾಗಿ ಹಾಡುವ ಮೂಲಕ ಅಸೆಂಬ್ಲಿಯನ್ನು ನಡೆಸಲಾಯಿತು. ತರಗತಿ ಅಥವಾ ಲಿಂಗ ಆಧರಿಸಿ ವಿದ್ಯಾರ್ಥಿಗಳನ್ನು ಪ್ರತ್ಯೇಕಿಸದೆ ವೃತ್ತಾಕಾರದ ಏಕಕೇಂದ್ರಕ ವ್ಯವಸ್ಥೆಯಲ್ಲಿ ಇದನ್ನು ನಡೆಸಲಾಯಿತು. ಅಲ್ಲದೆ ಸಲಹಾ ಪೆಟ್ಟಿಗೆಯಲ್ಲಿ ತಾವು ಸಲ್ಲಿಸಲಾದ ವಿವಿಧ ವಿಚಾರಗಳ ಕುರಿತು ಚರ್ಚೆ ನಡೆಸುವುದಕ್ಕಾಗಿ, ಹಾಡಿನ ನಂತರ ನೀಡಲಾದ ಸಮಯವನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಬಳಸಿಕೊಳ್ಳುತ್ತಿದ್ದರು. ಮಕ್ಕಳ ದನಿಗೆ ಅವಕಾಶ ನೀಡಲಾಯಿತು. ಇದರ ಜೊತೆಗೆ, ಅಂತಹ ಚರ್ಚೆಗಳಿಗಾಗಿ ಹಿರಿಯ ವಿದ್ಯಾರ್ಥಿಗಳೊಂದಿಗೆ ಸೇರಿಕೊಂಡು ಶಿಕ್ಷಕರು ಅಭಿವೃದ್ಧಿ ಪಡಿಸಿರುವ ರೂಢಿಗಳನ್ನು ಗಮನದಲ್ಲಿಟ್ಟುಕೊಂಡು ವಿವಾದಾಸ್ಪದ

ವಿಷಯಗಳನ್ನು ಚರ್ಚಿಸಲಾಗುತ್ತಿತ್ತು. ಇಂತಹ ಕೆಲವು ವಿವಾದಾಸ್ಪದ ವಿಷಯಗಳನ್ನು, ಶಿಕ್ಷಕರ ಮಾರ್ಗದರ್ಶನದಲ್ಲಿ, ಪ್ರಾಜೆಕ್ಟ್ ರೂಪದಲ್ಲಿ ಮುಂದುವರಿಸುವುದಕ್ಕಾಗಿ ವಿದ್ಯಾರ್ಥಿಗಳ ನೇತೃತ್ವದ ಕ್ಲಬ್‌ಗಳಲ್ಲಿ ಕೈಗೆತ್ತಿಕೊಳ್ಳಲಾಗುತ್ತಿತ್ತು.

ಆದರೆ 1990ರ ಆರಂಭದ ತನಕ ಮಾತ್ರವೇ ಈ ಸನ್ನಿವೇಶವು ಮುಂದುವರಿಯಿತು. ಆರ್ಥಿಕ ಪರಿಸ್ಥಿತಿ ಬದಲಾದಂತೆ ಹಾಗೂ ಅದೇ ನಗರದಲ್ಲಿ ಸಮಾನ ಮಟ್ಟದ ಅಥವಾ ಹೆಚ್ಚಿನ ವರ್ಚಸ್ಸಿನ ಇನ್ನಷ್ಟು ಖಾಸಗಿ ಶಾಲೆಗಳು ತಲೆ ಎತ್ತಿದಂತೆ, ಸ್ಪರ್ಧಾತ್ಮಕ ಜಗತ್ತಿಗೆ ತಮ್ಮ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ಕುರಿತ ಪ್ರಶ್ನೆಗಳಲ್ಲೇ ಈ ಶಾಲೆಯು ತೃಪ್ತಿಪಡಬೇಕಾಯಿತು. ಟ್ರಸ್ಟಿಗಳು ತಾಂತ್ರಿಕ ಪರಿಷ್ಕರಣೆಗೆ ಕೈ ಹಾಕಿದ ಕಾರಣ ಆಡಳಿತ ಮಂಡಳಿಯಲ್ಲಿ ಬದಲಾವಣೆ ತರಲಾಯಿತು ಹಾಗೂ ಶಾಲೆಯ ಪ್ರಕ್ರಿಯೆ ಮತ್ತು ಅಭ್ಯಾಸಗಳಲ್ಲಿ ಸಂಪೂರ್ಣವಾಗಿ ಹೊಸತನವನ್ನು ಯೋಜಿಸಲಾಯಿತು. ಸಾರ್ವಜನಿಕ ಪರೀಕ್ಷೆಗಳ ಫಲಿತಾಂಶಗಳು, ನಗರದಾದ್ಯಂತ ನಡೆಯುವ ಪಠ್ಯ ಸಂಬಂಧಿತ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಸಾಧನೆ, ತಮ್ಮ ಉನ್ನತ ಶಿಕ್ಷಣಕ್ಕೆ ಕಾಲಿಟ್ಟ ನಂತರ ವಿದ್ಯಾರ್ಥಿಗಳ ಎದುರಿರುವ ದಾರಿಗಳು ಮತ್ತು ವೃತ್ತಿಪರ ಬದುಕು ಇತ್ಯಾದಿಗಳು ಮುಖ್ಯ ಚಾಲನಾ ಅಂಶಗಳೆನಿಸಿದವು. ಉದ್ದೇಶಿತ ಜಾಗತಿಕ ಮಾನದಂಡಗಳೊಂದಿಗೆ ಸರಿಹೊಂದಿಸುವುದಕ್ಕಾಗಿ ಮೂಲಸೌಕರ್ಯದಲ್ಲಿ ಬದಲಾವಣೆಯನ್ನು ತರುವುದಕ್ಕಾಗಿ ಬೇಕಾಗುವ ಆರ್ಥಿಕ ಕಾರ್ಯಸಾಧ್ಯತೆಯನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಈ ಹಿಂದೆ ಇದ್ದ ಕಡಿಮೆ ವಿದ್ಯಾರ್ಥಿ – ಶಿಕ್ಷಕ ಅನುಪಾತದ ಬದಲಿಗೆ ದೊಡ್ಡ ಗಾತ್ರದ ತರಗತಿಗಳನ್ನು ಪರಿಚಯಿಸಲಾಯಿತು. ಇದೇ ರೀತಿ ಶಿಕ್ಷಕರ ಸ್ವಾಯತ್ತತೆಯ ಬದಲಿಗೆ ಆಡಳಿತಾತ್ಮಕ ಹೊಣೆಗಾರಿಕೆಗೆ ನಾಂದಿ ಹಾಡಲಾಯಿತು. ಅಲ್ಲದೆ ಶಿಕ್ಷಕರ ಸಾಧನೆಯ ಮೇಲೆ ತೀವ್ರ ನಿಗಾ ಇರಿಸುವ ಕಠಿಣ ಶ್ರೇಣೀಕೃತ ಶಾಲಾ ಆಡಳಿತ ವ್ಯವಸ್ಥೆಯು ಜಾರಿಗೆ ಬಂತು. ಶಿಕ್ಷಕರ ಸಾಧನೆಯನ್ನು ಶಾಲೆಯಲ್ಲಿ ಅವರ ಮುಂದುವರಿಕೆ ಮತ್ತು ಬೆಳವಣಿಗೆಯೊಂದಿಗೆ ತಳಕು ಹಾಕಲಾಯಿತು.

### ಶಾಲಾ ಸಂಸ್ಕೃತಿ: ವಿವಿಧ ಸಾಂಸ್ಥಿಕ ಸನ್ನಿವೇಶಗಳು

ಈ ಎರಡು ಉದಾಹರಣೆಗಳ ಕುರಿತು ಗಮನಿಸಬೇಕಾದ ಮೊದಲ ಅಂಶವೆಂದರೆ, ಈ ಎರಡೂ ಶಾಲೆಗಳು ಕಳೆದ ನಾಲ್ಕು ದಶಕಗಳಲ್ಲಿ ತಮ್ಮ ಶಾಲಾ ಸಂಸ್ಕೃತಿಯಲ್ಲಿ ಬದಲಾವಣೆಯನ್ನು ಕಂಡಿವೆ. ಶಾಲೆ Aಯಲ್ಲಿ ಶಿಕ್ಷಕರ ಮೇಲೆ ಅವರ ಸುತ್ತಮುತ್ತಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರವು ಬಲವಾದ ಪರಿಣಾಮವನ್ನು ಹೊಂದಿದ್ದರೂ ಸಹ ಆ ಶಾಲೆಯು ಎಲ್ಲರನ್ನು ಒಳಗೊಳ್ಳುವ ಪರಿಸರವನ್ನು ಮೈಗೂಡಿಸಿಕೊಂಡಿತ್ತು. ಅದೇ ರೀತಿ, ಶಾಲೆ Bಯು, ಶಿಕ್ಷಣ ವ್ಯವಸ್ಥೆಯಲ್ಲಿ ಮಧ್ಯಮ ಮತ್ತು ಮೇಲ್ವರ್ಗದ ಮಹತ್ವಾಕಾಂಕ್ಷೆಗಳು ಮತ್ತು ಬೇಡಿಕೆಗಳ ಮೇಲೆ ಪರಿಣಾಮವನ್ನು ಹೊಂದಿದ್ದ, ಬದಲಾದ ಆರ್ಥಿಕ ಚಿತ್ರಣದ ಬಾಹ್ಯ ಒತ್ತಡಕ್ಕೆ ಮಣಿಯಬೇಕಾಯಿತು. ಶಾಲೆ Aಗೆ ಹೋಲಿಸಿದರೆ ಶಾಲೆ Bಯು, ಪ್ರಮಾಣಕ ಶಾಲಾ ಸಂಸ್ಕೃತಿಯಿಂದ (ಹೆಚ್ಚಾಗಿ ಶಿಕ್ಷಣದ ಮೌಲ್ಯ ಮತ್ತು ಉದ್ದೇಶಗಳನ್ನು ಆಧರಿಸಿದ) ವ್ಯಾವಹಾರಿಕ ಶಾಲಾ ಸಂಸ್ಕೃತಿಯತ್ತ (ಕೇವಲ ಆರ್ಥಿಕ ಸಿದ್ಧತೆಯ ಮೇಲೆ ಗಮನ ಕೇಂದ್ರೀಕರಿಸುವ ಶಿಕ್ಷಣದ ಗುರಿಯನ್ನು ಆಧರಿಸಿದ) ಸರಿಯಿತು. ಹೀಗೆ ಕಾಲ ಕಳೆದಂತೆ ಶಾಲಾ ಸಂಸ್ಕೃತಿಗಳು ಬದಲಾಗುತ್ತವೆ. ಎರಡನೆಯ ಅಂಶವೆಂದರೆ, ಬೇರೆಬೇರೆ ಸಾಂಸ್ಥಿಕ ಸನ್ನಿವೇಶಗಳಲ್ಲಿ ಇರುವ ಶಾಲೆಗಳ ಸಂಸ್ಕೃತಿಗಳನ್ನು ಹೋಲಿಸುವ ತಪ್ಪನ್ನು ನಾವು ಆಗಾಗ್ಗೆ ಮಾಡುತ್ತೇವೆ. ಉದಾಹರಣೆಗೆ ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳೊಂದಿಗೆ (ಹೆಚ್ಚಾಗಿ ಮಧ್ಯಮ ಮತ್ತು ಮೇಲ್ವರ್ಗದವರಿಗೆ ಪ್ರವೇಶ ಕಲ್ಪಿಸುವ ಖಾಸಗಿ ಶಾಲೆಗಳೊಂದಿಗೆ) ಹೋಲಿಸುವುದು. ಸರ್ಕಾರಿ ಶಾಲೆಗಳು ಈಗಲೂ ಸಹ ಸೂಕ್ಷ್ಮ ಸನ್ನಿವೇಶದಲ್ಲಿ (ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ) ಬಲವಾಗಿ ನೆಲೆಯಾಗಿವೆ ಹಾಗೂ ಈ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಭೇದ್ಯ ಗಡಿಗಳನ್ನು ಹೊಂದಿವೆ. ಈ ಶಾಲೆಗಳು ಸೂಕ್ಷ್ಮ ಸನ್ನಿವೇಶಗಳನ್ನು ಸ್ಪಷ್ಟವಾಗಿ ಮತ್ತು ಸೂಚ್ಯವಾಗಿ ಆಗಾಗ್ಗೆ ಮರುಸೃಷ್ಟಿಸುತ್ತವೆ ಅಥವಾ ಅವುಗಳಿಗೆ ಗಮನ ನೀಡಬೇಕಾಗುತ್ತದೆ. ಈ ಗುಣಲಕ್ಷಣವು ಸರ್ಕಾರಿ ಶಾಲೆಗಳ ಸ್ವಭಾವದೊಂದಿಗೆ ಹಾಸುಹೊಕ್ಕಿದೆ. ಇವು ಶಿಕ್ಷಣದ ಕಲ್ಪನೆಯನ್ನು 'ಸಾರ್ವಜನಿಕ ಸರಕಾಗಿ' ಪರಿಗಣಿಸುತ್ತೇವೆ ಹಾಗೂ ಇಲ್ಲಿಯತನಕ ಶಾಲಾ ಶಿಕ್ಷಣದಿಂದ ಹೊರಗಿಡಲಾಗಿದ್ದ, ಉಪೇಕ್ಷಿತ ಜನರಿಗೆ ಹೆಚ್ಚಾಗಿ ಇದು ದೊರೆಯುವಂತೆ ಮಾಡುತ್ತವೆ. ತಮ್ಮನ್ನು ಆವರಿಸಿರುವ ಸಾಂಸ್ಥಿಕ ವ್ಯವಸ್ಥೆಯ ನೆಲೆಗಟ್ಟು (ಒಟ್ಟಾರೆಯಾಗಿ ಶಾಲಾಡಳಿತ ವ್ಯವಸ್ಥೆ), ಮಾತ್ರವಲ್ಲದೆ ಆ ನಿರ್ದಿಷ್ಟ ರಾಜ್ಯದ ಆಡಳಿತದ ಸಂಸ್ಕೃತಿಯನ್ನು ಪರಿಗಣಿಸದೆ ಸರ್ಕಾರಿ ಶಾಲೆಗಳ ಶಾಲಾ ಸಂಸ್ಕೃತಿಗಳನ್ನು ನೋಡಲಾಗದು.

ಇನ್ನೊಂದೆಡೆ ಖಾಸಗಿ ಶಾಲೆಗಳು ಇದೇ ರೀತಿಯ ತತ್ತ್ವವನ್ನು ಅನುಸರಿಸಿದರೂ ಸಹ (ಇಂತಹ ಶಾಲೆಗಳ ಸಂಖ್ಯೆ ತೀರಾ ಕಡಿಮೆ) ಅವುಗಳಿಗೆ ಇಂತಹ ಯಾವುದೇ ಜವಾಬ್ದಾರಿ ಇರಲಿಲ್ಲ. ಒಂದಷ್ಟು ಮಟ್ಟಿಗೆ ವಿವಿಧ ಪ್ರಕಾರದ ಖಾಸಗಿ ಶಾಲೆಗಳು 'ನಿರ್ಬಂಧಿತ ಸಮುದಾಯ'ದ ಗುಣಲಕ್ಷಣವನ್ನು ಹೊಂದಿವೆ. ಇವು ತಮ್ಮ ಸೂಕ್ಷ್ಮ ಸನ್ನಿವೇಶದಿಂದ ದೂರ ಸರಿದು ಮಕ್ಕಳಲ್ಲಿ ವಿಶಿಷ್ಟ ಶಾಲಾ ಸಂಸ್ಕೃತಿಯನ್ನು[ii] ಬೆಳೆಸುವ ಪ್ರಕ್ರಿಯೆಯನ್ನು ಆರಿಸಿಕೊಳ್ಳಬಹುದು. ಈ ರೋಹಿತದ ಒಂದು ತುದಿಯಲ್ಲಿ, ಮೇಲ್-ಮಧ್ಯಮ ಮತ್ತು ಮೇಲ್ವರ್ಗಕ್ಕೆ ತಮ್ಮ ಸೇವೆಯನ್ನು ಒದಗಿಸುವ ಉನ್ನತ ಬೋರ್ಡಿಂಗ್ ಶಾಲೆಗಳು ಮತ್ತು ವಿವಿಧ ಪೂರಕ ಶಾಲೆಗಳನ್ನು ನಾವು ಕಾಣಬಹುದು, ಇದರ ಇನ್ನೊಂದು ತುದಿಯಲ್ಲಿ ಹಣ ಪಾವತಿಸಲು ಒಂದಷ್ಟು ಸಾಮರ್ಥ್ಯವನ್ನು ಹೊಂದಿರುವ, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ತುಲನಾತ್ಮಕವಾಗಿ ಬಡತನದಲ್ಲಿರುವ ಜನರಿಗೆ ಸೇವೆಯನ್ನು ನೀಡುತ್ತಿರುವ ಸಣ್ಣ ಖಾಸಗಿ ಶಾಲೆಗಳನ್ನು ನಾವು ನೋಡುತ್ತೇವೆ. ಈ ರೋಹಿತದ ಉದ್ದಕ್ಕೂ ಶಾಲಾ ಸಂಪ್ರದಾಯಕ್ಕಾಗಿ ಕಾರ್ಪೊರೇಟ್‌ನಂತಹ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳುವ ಬಿಗಿಯಾದ ಆಡಳಿತ ವ್ಯವಸ್ಥೆಯನ್ನು ನಾವು ಒಟ್ಟಾರೆಯಾಗಿ ಕಾಣಬಹುದು. ಈ ಶಾಲೆಗಳ ಸ್ಥೂಲ ಸಾಂಸ್ಥಿಕ ಪರಿಧಿಯು ಅವುಗಳ ಆಡಳಿತ ಸಂಸ್ಥೆಗಳನ್ನು ದಾಟಿ ಹೋಗುವುದಿಲ್ಲ. ಹೀಗೆಯೇ ಅವುಗಳ ಉದ್ದೇಶವೂ ಸಹ ತಮ್ಮಿಂದ ಸೇವೆಯನ್ನು ಪಡೆಯುತ್ತಿರುವ ತುಲನಾತ್ಮಕವಾಗಿ ಏಕರೂಪದ ವಿಸ್ತರಿತ ಮಧ್ಯಮ ಮತ್ತು ಮೇಲ್ವರ್ಗದವರನ್ನು ಗುರಿ ಮಾಡಿರುತ್ತದೆಯೇ ಹೊರತು ಸೌಲಭ್ಯವಂಚಿತ ವರ್ಗವನ್ನಲ್ಲ.

### ಶಾಲಾ ಸಂಸ್ಕೃತಿ: ಇದು ಹೇಗೆ ಪ್ರಮುಖವೆನಿಸುತ್ತದೆ?

ಶಾಲೆ A ಮತ್ತು ಶಾಲೆ Bಯನ್ನು ಉಲ್ಲೇಖಿಸಿ ಈ ಹಿಂದಿನ ವಿಭಾಗದಲ್ಲಿ ನೀಡಲಾದ ಉದಾಹರಣೆಗಳು, ಸ್ಪಂದನಶೀಲ, ಧನಾತ್ಮಕ ದೃಷ್ಟಿಕೋನವನ್ನು ಹೊಂದಿರುವ ಶಾಲಾ ಸಂಸ್ಕೃತಿಗಾಗಿ ಅಗತ್ಯ ಎಂಬುದಾಗಿ ಶಿಕ್ಷಣಶಾಸ್ತ್ರಜ್ಞರು ಪರಿಗಣಿಸಿರುವ ಅಂಶಗಳನ್ನು ಹೊಂದಿವೆ. ಆದರೆ ಶಾಲಾ ಸಂಸ್ಕೃತಿಯಲ್ಲಿ ಯಾವ ವಿಷಯವು ಪ್ರಮುಖವೆನಿಸುತ್ತದೆ ಎಂಬ ಪ್ರಶ್ನೆಗೆ ಸರಳ ಮತ್ತು ಗೊಂದಲರಹಿತ

ಉತ್ತರವನ್ನು ನೀಡುವುದು ಕಷ್ಟಕರ. ಉದಾಹರಣೆಗೆ, ಪಠ್ಯಕ್ರಮ, ಪಠ್ಯಪುಸ್ತಕಗಳು, ಬೋಧನ-ಕಲಿಕಾ ಸಾಧನಗಳು, ಶಿಕ್ಷಣಶಾಸ್ತ್ರ ಮತ್ತು ಮೌಲ್ಯಮಾಪನ ಇತ್ಯಾದಿಗಳಿಗೆ ಸಂಬಂಧಿಸಿದ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಶಾಲಾ ಮಟ್ಟದಲ್ಲಿರುವ ಸ್ವಾಯತ್ತತೆಯು, ಧನಾತ್ಮಕ ಶಾಲಾ ಸಂಸ್ಕೃತಿಯ ಸಂಕೇತವೆಂದು ವ್ಯಾಪಕವಾಗಿ ಪರಿಗಣಿಸಲಾಗಿದ್ದರೂ ಸಹ, ತನ್ನ ಆರಂಭಿಕ ವರ್ಷಗಳಲ್ಲಿ ಇದನ್ನು ಅಳವಡಿಸಿಕೊಳ್ಳುವುದು ಖಾಸಗಿ ಶಾಲೆಯ ಪಾಲಿಗೆ ಕಷ್ಟಕರವೆನಿಸಬಹುದು. ಏಕೆಂದರೆ, ಶಾಲೆಗೆ ಮಾರ್ಗದರ್ಶನವನ್ನು ನೀಡುವುದಕ್ಕಾಗಿ ಕಲ್ಪಿಸಲಾದ ಮೂಲ ಸಿದ್ಧಾಂತ, ತತ್ವಗಳು ಮತ್ತು ಪ್ರಕ್ರಿಯೆಗಳನ್ನು ಅರಿತುಕೊಳ್ಳಲು ಶಿಕ್ಷಕರಿಗೆ ಹೆಚ್ಚಿನ ನೆರವು ಮತ್ತು ಸಲಹೆಯ ಅಗತ್ಯವಿರುತ್ತದೆ. ಆದರೆ ಸರ್ಕಾರಿ ಶಾಲೆಯಲ್ಲಿ, ಅಂತಹ ಸ್ವಾಯತ್ತತೆಯನ್ನು ಪೋಷಿಸಬೇಕೆಂದು ಹೇಳುವ ಉತ್ತೇಜನಕಾರಿ ಮುಖ್ಯೋಪಾಧ್ಯಾಯರು ಮತ್ತು ಆಡಳಿತ ವ್ಯವಸ್ಥೆಯ ಅನುಪಸ್ಥಿತಿಯಲ್ಲಿ ಇದನ್ನು ಜಾರಿಗೊಳಿಸುವುದು ಕಷ್ಟಕರ ಕೆಲಸವೆನಿಸುತ್ತದೆ.

ಈ ದ್ವಂದ್ವದ ಹಿನ್ನೆಲೆಯಲ್ಲಿ, ನಾವೆಲ್ಲಿಂದ ಪ್ರಾರಂಭಿಸಿದ್ದೇವೋ ಅಲ್ಲಿಗೆಯೇ ಸಾಗುವುದು (ಶಾಲೆಯ ಉದ್ದೇಶ) ಸರಿಯಾದ ನಡೆ ಅನಿಸುತ್ತದೆ. ಒಂದು ವೇಳೆ ನಾವು ಶಿಕ್ಷಣದ ಪ್ರಮಾಣಿಕ ಕಲ್ಪನೆಯನ್ನು, ಶಾಲೆಯ ಆಚರಣೆಗಳು, ನಂಬಿಕೆ ವ್ಯವಸ್ಥೆಗಳು ಮತ್ತು ದೈನಂದಿನ ಅಭ್ಯಾಸಗಳಲ್ಲಿ ವ್ಯಕ್ತವಾಗುವ ಸಾರ್ವಜನಿಕ ಸರಕು ಎಂಬುದಾಗಿ ಪರಿಗಣಿಸಿದರೆ, ಶಿಕ್ಷಣ ಶಾಸ್ತ್ರಜ್ಞರು ಶಾಲಾ ಸಂಸ್ಕೃತಿಯ ಕುರಿತು ತಮ್ಮ ಅಧ್ಯಯನಗಳಲ್ಲಿ ಪ್ರಮುಖವೆಂದು ಪರಿಗಣಿಸಿದ ಅಂಶಗಳನ್ನು ಹೊಂದಿರುವ ಶಾಲಾ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸಲು ಆ ಶಾಲೆಯು ಯತ್ನಿಸುವ ಸಾಧ್ಯತೆಗಳು ಹೆಚ್ಚು. ಅಂದರೆ ವೈವಿಧ್ಯತೆ, ಪ್ರಾಮಾಣಿಕತೆ, ಪರಿಶ್ರಮ, ಸ್ಥಿತಿಸ್ಥಾಪಕತ್ವ, ಸ್ವಾಯತ್ತತೆ, ಜವಾಬ್ದಾರಿ ಮತ್ತು ಸ್ವಾಭಿಮಾನ (ಇವೆಲ್ಲವೂ ಸಹ ಶಾಲಾ ಪರಿಸರ ಮತ್ತು ವಿವಿಧ ಭಾಗೀದಾರಿಗಳೊಂದಿಗೆ ಹೊಂದಿರುವ ಇದರ ಕೊಂಡಿಯೊಂದಿಗೆ ಒಳವ್ಯಾಪಿಸಿರುತ್ತದೆ) ಮುಂತಾದ ಅಗತ್ಯ ಮಾನವ ಮೌಲ್ಯಗಳಿಗೆ ಸಂಬಂಧಿಸಿದ, ವಿಮರ್ಶಾತ್ಮಕವಾಗಿ ಪರ್ಯಾಲೋಚಿಸುವ ಪದ್ಧತಿಗಳನ್ನು ಗೌರವಿಸುವುದಾಗಿದೆ.

**ಅಡಿಟಿಪ್ಪಣಿಗಳು**

i ಒಂದು ಪರ್ಯಾಯವನ್ನು ಆರಿಸಿಕೊಂಡಾಗ ಇನ್ನೊಂದು ಪರ್ಯಾಯವನ್ನು ಕಳೆದುಕೊಳ್ಳುವುದು.

ii ಸರ್ಕಾರಿ ಶಾಲೆಗೆ ಹೋಲಿಸಿದರೆ, ದೈಶಿಕವಾಗಿ ಹಂಚಿ ಹೋಗಿರುವ ಜನಸಂಖ್ಯೆಯಿಂದ ಕುಟುಂಬಗಳನ್ನು ಆಕರ್ಷಿಸುವ ಖಾಸಗಿ ಶಾಲೆಗಳ ಸಾಮರ್ಥ್ಯವು, ಖಾಸಗಿ ಶಾಲೆಗಳ ಸ್ಥೂಲ ಸನ್ನಿವೇಶದಿಂದ ನೈಸರ್ಗಿಕ ಪ್ರತ್ಯೇಕತಾ (dis-embedding) ಪ್ರಕ್ರಿಯೆಯಾಗಿ ಕಾರ್ಯ ನಿರ್ವಹಿಸುತ್ತದೆ.

---

**ರಾಹುಲ್ ಮುಖ್ಯೋಪಾಧ್ಯಾಯ** ಅವರು ಭೋಪಾಲದಲ್ಲಿರುವ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಯಾಗಿದ್ದಾರೆ. ಅವರನ್ನು **rahul.mukhopadhyay@azimpremjifoundation.org** ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೋನ್ಸ** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**

ತರಗತಿಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದ ಯಾವುದೇ ವಿದ್ಯಾರ್ಥಿಯು ನನಗೆ ಕಾಣಸಿಕ್ಕಿಲ್ಲ. ಅವರ ತರಗತಿಯಲ್ಲಿದ್ದ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಹ ಸಂತಸ ಮತ್ತು ಆತ್ಮವಿಶ್ವಾಸದಿಂದ ಕೂಡಿದ್ದರು. ಅವರಿಗೆ ಅರ್ಥವಾಗದೆ ಇದ್ದಾಗ ಯಾವುದೇ ಹಿಂಜರಿಕೆಯಿಲ್ಲದೆ ಪ್ರತಿಕ್ರಿಯಿಸಿದರು ಮತ್ತು ಪ್ರಶ್ನೆಗಳನ್ನು ಕೇಳಿದರು. ಚರ್ಚೆಯ ವೇಳೆ ಅವರಿಗೆ ಏನಾದರೂ ಹೇಳಲು ಇದ್ದರೆ, ಕೈ ಮೇಲೆತ್ತಿ ತಮ್ಮ ಸರದಿಗಾಗಿ ಕಾದರು ಮತ್ತು ತಮ್ಮ ಕೆಲಸದಲ್ಲಿ ತೊಡಗಿಸಿಕೊಂಡರು. ಒಂದಕ್ಕಿಂತ ಹೆಚ್ಚಿನ ತರಗತಿಯ ಮಕ್ಕಳು ಒಟ್ಟಿಗೆ ಕುಳಿತಿದ್ದರೂ ಸಹ ಶಾಲೆಯ ಸಭ್ಯಾಚಾರವನ್ನು ಕಾಪಾಡಲಾಗಿತ್ತು.

ಸಹಾಯಕ ಮತ್ತು ಸಬಲೀಕರಣದ ಪರಿಸರವನ್ನು ಸೃಷ್ಟಿಸುವುದು |ಏಕಶಿಕ್ಷಕ ಗ್ರಾಮೀಣ ಶಾಲೆಯಿಂದ ಪಡೆದ ಕಲಿಕೆಗಳು, ಸ್ವಾತಿ ಭಂಡಾರಿ, ಪು. 35

# ಶಿಶು-ಸ್ನೇಹಿ ಶಾಲಾ ಉಪಕ್ರಮ | ಶಾಲಾ ಸಂಸ್ಕೃತಿಯ ಮೇಲೆ ಶಾಶ್ವತವಾದ ಪ್ರಭಾವ

ರುದ್ರೇಶ್ ಎಸ್.

ಗುಣಮಟ್ಟದ ಸಾರ್ವಜನಿಕ ಶಿಕ್ಷಣವು ಭಾರತದ ಅಭಿವೃದ್ಧಿಗೆ ನಿರ್ಣಾಯಕವಾಗಿದೆ. ಅದರಲ್ಲೂ ಈಗ ವಿಶೇಷವಾಗಿ ದೇಶವು ತ್ವರಿತ ಆರ್ಥಿಕ, ತಾಂತ್ರಿಕ ಮತ್ತು ಸಾಮಾಜಿಕ ಬದಲಾವಣೆಯತ್ತ ದಾಪುಗಾಲಿಡುತ್ತಿರುವ ಹಂತದಲ್ಲಿ ಇದು ಬಹು ಮುಖ್ಯವಾಗಿದೆ. ವಿಶೇಷವಾಗಿ ದುರ್ಬಲ ಮತ್ತು ಹಿಂದುಳಿದ ಕುಟುಂಬಗಳ ಮಕ್ಕಳು ಪ್ರಾಥಮಿಕವಾಗಿ ಸರ್ಕಾರಿ ಶಾಲೆಗಳಿಗೆ ದಾಖಲಾಗುತ್ತಿರುವಾಗ ಸಾರ್ವಜನಿಕ ಶಿಕ್ಷಣವು ಅತ್ಯಗತ್ಯವಾಗಿದೆ. ಪ್ರತಿ ಮಗುವಿಗೆ ಗುಣಮಟ್ಟದ ಶಿಕ್ಷಣ ನೀಡುವುದು ಸರ್ಕಾರದ ಸಾಂವಿಧಾನಿಕ ಆದೇಶವಾಗಿದೆ. ಕೆಲವು ಶಾಲಾ ಆಚರಣೆಗಳ ಸಂಸ್ಕೃತಿಯನ್ನು ಉಳಿಸುವುದು ಮತ್ತು ಬೆಳೆಸುವುದು ದೀರ್ಘಾವಧಿಯಲ್ಲಿ ಬೋಧನಾ ವಿಭಾಗ ಮತ್ತು ಆಡಳಿತದಲ್ಲಿನ ಬದಲಾವಣೆಗಳ ಹೊರತಾಗಿಯೂ–ಗುಣಮಟ್ಟದ ಶಿಕ್ಷಣವನ್ನು ಒದಗಿಸುತ್ತದೆ.

ವಿದ್ಯಾರ್ಥಿಗಳು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಬೆಳವಣಿಗೆ ಹೊಂದುವ ವಾತಾವರಣವನ್ನು ಬೆಳೆಸಲು ಸಮರ್ಥವಾದ ಶಾಲಾ ಸಂಸ್ಕೃತಿಯನ್ನು ರಚಿಸುವುದು ಅತ್ಯಗತ್ಯ. ಈ ಲೇಖನವು ಸುಸ್ಥಿರ ಶಾಲಾ ಸಂಸ್ಕೃತಿಗೆ ಕೊಡುಗೆ ನೀಡುವ ಅಗತ್ಯ ಅಭ್ಯಾಸಗಳನ್ನುಕಲಿಕೆ–ಸಕ್ರಿಯಗೊಳಿಸುವ ಪರಿಸರ, ಭಯ–ಮುಕ್ತ ಮತ್ತು ಮಕ್ಕಳ–ಕೇಂದ್ರಿತ ಕಲಿಕೆಯ ಪ್ರಕ್ರಿಯೆಗಳು, ಬಲವಾದ ಶಾಲಾ–ಸಮುದಾಯ ಸಂಬಂಧಗಳು ಮತ್ತು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಬೆಂಬಲವನ್ನು ಕೇಂದ್ರೀಕರಿಸುವ ಮೂಲಕ ಪರಿಶೋಧಿಸುತ್ತದೆ, ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಶಿಶು–ಸ್ನೇಹಿ ಶಾಲೆಯ ಉಪಕ್ರಮದ (Child–Friendly School Initiative) ಅಡಿಯಲ್ಲಿ ಶಾಲೆಗಳಲ್ಲಿ ರಚನಾತ್ಮಕ ಅಭ್ಯಾಸಗಳನ್ನು ಬೆಳೆಸುವ ಪ್ರಯತ್ನಗಳು ನಡೆದವು.

*ಕೋಷ್ಟಕ 1. ಶಿಶು–ಸ್ನೇಹಿ ಶಾಲಾ ಉಪಕ್ರಮದ ಐದು ವಲಯಗಳು*

| ಕ್ರ.ಸಂ | ಶಾಲಾ ಅಭ್ಯಾಸದ ವಲಯಗಳು | ಉದ್ದೇಶ | ಬೆಳವಣಿಗೆಯ ಸೂಚಕಗಳು |
|---|---|---|---|
| 1 | ಸುರಕ್ಷಿತ ಶಾಲಾ ಪರಿಸರ | ಮಕ್ಕಳನ್ನು ಆಕರ್ಷಿಸಿ ಶಾಲೆಯಲ್ಲಿ ದಾಖಲಿಸುವುದು | ಸಾಕಷ್ಟು ಗಾಳಿ ಮತ್ತು ಬೆಳಕನ್ನು ಹೊಂದಿರುವ ತರಗತಿ ಕೊಠಡಿಗಳು, ಬಳಸಬಹುದಾದ ಸ್ಥಿತಿಯಲ್ಲಿರುವ ಗ್ರಂಥಾಲಯ, ಆಟದ ಸ್ಥಳ, ವಿದ್ಯಾರ್ಥಿ ಸಂಪುಟ, ಹಸಿರುಮನೆ, ಅರ್ಥಪೂರ್ಣ ಶಾಲಾ ಸಭೆ, ಬಳಸಬಹುದಾದ ಸ್ಥಿತಿಯಲ್ಲಿರುವ ಶೌಚಾಲಯಗಳು, ಶಾಲೆಗೆ ಸುರಕ್ಷಿತ ಪ್ರವೇಶ ರಸ್ತೆ ಇತ್ಯಾದಿ. |
| 2 | ತರಗತಿಯ ಪರಿಸರ | ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳಲು ಮತ್ತು ನಿಯಮಿತ ಹಾಜರಾತಿಯನ್ನು ಖಚಿತಪಡಿಸಿಕೊಳ್ಳುವುದು. | ವಿದ್ಯಾರ್ಥಿಗಳಿಗೆ ಉಚಿತವಾಗಿ ಕಲಿಕೆಯ ಸಂಪನ್ಮೂಲಗಳನ್ನು ಒದಗಿಸುವುದು; ಶೈಕ್ಷಣಿಕ ಪ್ರದರ್ಶನಗಳ ಸದ್ಬಳಕೆ, ಮಕ್ಕಳ ಕೆಲಸದ ಪ್ರದರ್ಶನ, ಕೆಳಗಿನ ತರಗತಿಯಲ್ಲಿ ಕಲಿಕಾ ಚಪ್ಪರವನ್ನು ಕಲಿಯುವುದು, ಮಕ್ಕಳಿಗಾಗಿ ಇರುವ ರನ್ನಿಂಗ್ ಕಪ್ಪುಹಲಗೆ ಒದಿಸುವುದು, ತರಗತಿಯಲ್ಲಿ ದೈಹಿಕ ಶಿಕ್ಷೆ ನೀಡದಿರುವುದು ಇತ್ಯಾದಿ. |
| 3 | ಬೋಧನಾ ಪ್ರಕ್ರಿಯೆ | ವಿದ್ಯಾರ್ಥಿಗಳ ನೈದಾನಿಕ ಮೌಲ್ಯಮಾಪನಗಳ ಆಧಾರದ ಮೇಲೆ ಕಲಿಕೆಯನ್ನು ಬಲಪಡಿಸಲು ಮತ್ತು ವೈವಿಧ್ಯಮಯ ಅಗತ್ಯಗಳನ್ನು ಪೂರೈಸುವುದು | ಗುಂಪು ಕಲಿಕೆ, ಗ್ರಂಥಾಲಯ ಮತ್ತು ಪ್ರಯೋಗಾಲಯದ ಬಳಕೆಯನ್ನು ಪ್ರೋತ್ಸಾಹಿಸುವುದು; ಚಟುವಟಿಕೆ ಆಧಾರಿತ, ಪ್ರಾಜೆಕ್ಟ್–ಆಧಾರಿತ ಕಲಿಕೆ ಮತ್ತು ಹ್ಯಾಂಡ್ಸ್ ಆನ್ ಕಲಿಕೆ; ಅಮೂರ್ತ ವಸ್ತುಗಳು ಮತ್ತು ವಿದ್ಯಾರ್ಥಿಗಳ ಅನುಭವಗಳು ಇತ್ಯಾದಿಗಳನ್ನು ಬಳಸಿಕೊಂಡು ನಿಜ–ಜೀವನದ ಸನ್ನಿವೇಶಗಳು ಮತ್ತು ಪಾಠಗಳ ನಡುವೆ ಸಂಬಂಧ ಕಲ್ಪಿಸುವುದು. |
| 4 | ಶಿಕ್ಷಕರ ಬೆಳವಣಿಗೆ | ಅವರ ಕಲಿಕೆಯ ಅಗತ್ಯಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ಮತ್ತು ವಿವಿಧ ಬೋಧನಾ ವಿಧಾನಗಳನ್ನು ಬಳಸಿಕೊಳ್ಳುವುದು | ಶಿಕ್ಷಕರು ನಿಯಮಿತವಾಗಿ ಪಾಠ ಯೋಜನೆಗಳು ಮತ್ತು ಕಲಿಕೆಯ ಸಂಪನ್ಮೂಲಗಳನ್ನು ಸಿದ್ಧಪಡಿಸುತ್ತಾರೆ, ಕ್ಲಸ್ಟರ್ ಮಟ್ಟದ ಸಮಾಲೋಚನೆ ಸಭೆಗಳಿಗೆ ಹಾಜರಾಗುತ್ತಾರೆ ಮತ್ತು ಚರ್ಚೆಗೆ ಕೊಡುಗೆ ನೀಡುತ್ತಾರೆ; SSA ನಡೆಸುವ ವಾರ್ಷಿಕ ಕಾರ್ಯಾಗಾರಗಳಿಗೆ ಹಾಜರಾಗುವುದು; ಮಾಸ್ಟರ್ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸಿ, ಮತ್ತು ಅಗತ್ಯಗಳ ಆಧಾರದ ಮೇಲೆ ಶಾಲಾ–ಮಟ್ಟದ/ಕ್ಲಸ್ಟರ್–ಮಟ್ಟದ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರಗಳನ್ನು ಆಯೋಜಿಸುವುದು ಆಯೋಜಿಸಿ; ತರಗತಿಯ ಸವಾಲುಗಳನ್ನು ಇತರ ಶಿಕ್ಷಕರೊಂದಿಗೆ ಚರ್ಚಿಸಿ ಇತ್ಯಾದಿ. |
| 5 | ಸಮುದಾಯ ಮತ್ತು ಪೋಷಕರ ಪಾಲ್ಗೊಳ್ಳುವಿಕೆ | ಶಾಲಾ ಸಂಸ್ಕೃತಿ ಮತ್ತು ವಿಕಸನಶೀಲ ಅಭ್ಯಾಸಗಳನ್ನು ಮುಂದುವರೆಸುವುದು | ಆಗಾಗ ಪೋಷಕ–ಶಿಕ್ಷಕ ಸಭೆಗಳನ್ನು ಆಯೋಜಿಸುವುದು; ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಲ್ಲಿ ಎಲ್ಲ ಸಾಮಾಜಿಕ ಗುಂಪುಗಳಿಂದ ಸದಸ್ಯರಿರುವುದು ಮತ್ತು ಶೇ. 33% ಸ್ತ್ರೀಯರು ಇರುವುದನ್ನು ಖಚಿತಪಡಿಸಿಕೊಳ್ಳುವುದು; ಕಲಿಕಾ ಪ್ರದರ್ಶನಗಳು, ಶಾಲಾ ವಾರ್ಷಿಕೋತ್ಸವಗಳು, ದಾಖಲಾತಿ ಆಂದೋಲನಗಳು, ಮತ್ತು ಶಾಲಾ ಅಭಿವೃದ್ಧಿ ಯೋಜನೆಯ ಅನುಷ್ಠಾನ ಮುಂತಾದ ವಿಶೇಷ ಸಂದರ್ಭಗಳಲ್ಲಿ ಸಮುದಾಯ, ಪಂಚಾಯತಿ, ಮತ್ತು ಹಳೆಯ ವಿದ್ಯಾರ್ಥಿಗಳು ಭಾಗವಹಿಸಲು ವೇದಿಕೆಗಳನ್ನು ಸೃಷ್ಟಿಸುವುದು ಇತ್ಯಾದಿ |

### ಶಿಶುಸ್ನೇಹಿ ಶಾಲಾ ಉಪಕ್ರಮ

ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಿಂದ ಶಿಶುಸ್ನೇಹಿ ಶಾಲಾ ಉಪಕ್ರಮವನ್ನು ಸುರಪುರದಲ್ಲಿ (ಕರ್ನಾಟಕದ ಯಾದಗಿರಿ ಜಿಲ್ಲೆಯ ಉಪವಿಭಾಗ) 2005 ಮತ್ತು 2012ರ ನಡುವೆ ಜಾರಿಗೆ ತರಲಾಯಿತು. ಈ ಮಧ್ಯಪ್ರವೇಶವು ಐದು ವಲಯಗಳಲ್ಲಿ ಶಾಲಾ ಅಭ್ಯಾಸಗಳನ್ನು ಅಭಿವೃದ್ಧಿ ಪಡಿಸುವತ್ತ ಗಮನ ಹರಿಸಿತು: ಶಾಲಾ ಪರಿಸರ, ತರಗತಿಯ ಪರಿಸರ, ಬೋಧನಾ-ಕಲಿಕೆ ಪ್ರಕ್ರಿಯೆ, ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಮತ್ತು ಸಮುದಾಯದ ಭಾಗವಹಿಸುವಿಕೆ. ಆರಂಭದಲ್ಲಿ, ಈ ಐದು ವಲಯಗಳಿಗೆ ಸಂಬಂಧಿಸಿದ 214 ಅಭಿವೃದ್ಧಿಯ ಸೂಚ್ಯಂಕಗಳನ್ನು ಬಳಸಲಾಯಿತಾದರೂ ನಂತರ ಇವನ್ನು 60ಕ್ಕೆ ಪರಿಷ್ಕರಿಸಲಾಯಿತು. ಈ ಸೂಚ್ಯಂಕಗಳನ್ನು ಲೇಖನದ ಕೊನೆಯಲ್ಲಿ ಕೊಡಲಾಗಿದೆ.

6 – 7 ವರ್ಷಗಳ ಈ ಮಧ್ಯಪ್ರವೇಶಿಕೆಯ ಪರಿಣಾಮವಾಗಿ ಸುರಪುರದ ಶಾಲೆಗಳಲ್ಲಿ ದಾಖಲಾತಿಯ ಹೆಚ್ಚಳ, ಶಾಲೆ ತೊರೆಯುವವರ ಸಂಖ್ಯೆಯಲ್ಲಿ ಇಳಿಕೆ, ವಿದ್ಯಾರ್ಥಿಗಳ ಹಾಜರಾತಿ ಮತ್ತು ಕಲಿಕೆಯಲ್ಲಿ ಸುಧಾರಣೆ, ಮತ್ತು ಶಾಲಾ ಹಂತಕ್ಕಿಂತ ನಂತರವೂ ಶಿಕ್ಷಣದ ಮುಂದುವರಿಕೆ – ಹೀಗೆ ಹಲವು ಗಮನಾರ್ಹವಾದ ಧನಾತ್ಮಕವಾದ ಬದಲಾವಣೆಗಳು ಕಂಡುಬಂದವು. ಅನೇಕ ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಗಳಲ್ಲಿ ಯಶಸ್ವಿಯಾಗಿ ಉತ್ತೀರ್ಣರಾಗಿದ್ದಾರೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಜವಾಹರ್ ನವೋದಯ ವಿದ್ಯಾಲಯ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಯಂತಹ ಸಂಸ್ಥೆಗಳಿಗೆ ದಾಖಲಾದರು.

ಶಿಶುಸ್ನೇಹಿ ಶಾಲಾ ಉಪಕ್ರಮವು 2012-13ರಲ್ಲಿ ಕೊನೆಗೊಂಡರೂ, ಶಾಲೆಗಳು ಅಭಿವೃದ್ಧಿಪಡಿಸಿದ ಐದು ಕಾರ್ಯಕ್ಷೇತ್ರಗಳ ಅಭ್ಯಾಸಗಳು 10 ವರ್ಷಗಳ ನಂತರವೂ ಶಾಲಾ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಉಳಿದಿವೆ. ಈ ಲೇಖನವು ವಿವಿಧ ಶಾಲೆಗಳಲ್ಲಿ ಅಭಿವೃದ್ಧಿಪಡಿಸಿದ ಮತ್ತು ಉಳಿಸಿಕೊಂಡಿರುವ ಕೆಲವು ಅಭ್ಯಾಸಗಳು ಮತ್ತು ದೀರ್ಘಾವಧಿಯಲ್ಲಿ ಅವುಗಳ ಪರಿಣಾಮಗಳನ್ನು ಪರಿಶೋಧಿಸುತ್ತದೆ.

### ಶಾಲೆಯಲ್ಲಿ ಕಲಿಕೆಗೆ ಪೂರಕವಾದ ಪರಿಸರ

ವಿದ್ಯಾರ್ಥಿಗಳ ಶೈಕ್ಷಣಿಕ ಯಶಸ್ಸು ಮತ್ತು ವೈಯಕ್ತಿಕ ಬೆಳವಣಿಗೆಗೆ ಕಲಿಕೆಗೆ ಪೂರಕವಾದ ಪರಿಸರವು ಮೂಲಭೂತವಾಗಿದೆ. ಈ ಪರಿಸರವು ಭೌತಿಕ ಸ್ಥಳಕ್ಕೆ ಸೀಮಿತವಾಗಿಲ್ಲದೆ, ವಿದ್ಯಾರ್ಥಿಗಳಿಗೆ ಭಯ-ಮುಕ್ತ, ತಾವು ಭಾಗವಹಿಸಲು ಅವಕಾಶವಿರುವ, ಮತ್ತು ಅಗತ್ಯ-ಆಧಾರಿತ ಕಲಿಕೆಗೆ ಅವಕಾಶಗಳನ್ನು ಸೃಷ್ಟಿಸುತ್ತದೆ. ಇದು ವೈವಿಧ್ಯಮಯ ಕಲಿಕೆಯ ಅಗತ್ಯತೆಗಳು ಮತ್ತು ಆಸಕ್ತಿಗಳನ್ನು ಪೂರೈಸುವ, ಕುತೂಹಲ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಉತ್ತೇಜಿಸುವ ಕಲಿಕಾ ಸಾಮಗ್ರಿಗಳು ಮತ್ತು ಅನುಭವಗಳ ಸಮೃದ್ಧ ಶ್ರೇಣಿಯನ್ನು ಒದಗಿಸಬೇಕು.

*ಕೇಸ್ ಸ್ಟಡಿ: ವಲಸೆಯನ್ನು ನಿಭಾಯಿಸುವುದು*

ಜುಮಾಲಾಪುರ ದೊಡ್ಡ ತಾಂಡಾವು ದೂರದ ಗ್ರಾಮವಾಗಿದ್ದು, ಇಲ್ಲಿನ ಜನರು ಕೆಲಸಕ್ಕಾಗಿ ವಲಸೆ ಹೋಗುತ್ತಾರೆ. ಮಕ್ಕಳು ತಮ್ಮ ಪೋಷಕರೊಂದಿಗೆ ಪುಣೆ, ಗೋವಾ ಮತ್ತು ಬೆಂಗಳೂರಿಗೆ ವಲಸೆ ಹೋಗುತ್ತಿದ್ದರು. ಇದು ಅನಿಯಮಿತ ಶಾಲಾ ಹಾಜರಾತಿಗೆ ಕಾರಣವಾಗುತ್ತದೆ ಮತ್ತು ಅಂತಿಮವಾಗಿ ಶಾಲೆಯನ್ನು ಬಿಡುವಂತೆ ಮಾಡುತ್ತದೆ. ಮುಖ್ಯ ಶಿಕ್ಷಕ ಅಚ್ಚಪ್ಪ ಗೌಡ ಮತ್ತು ತಂಡದವರು ಮಕ್ಕಳಿಗೆ ಶಾಲೆಯಲ್ಲಿ ರಾತ್ರಿಯ ಊಟ ಮತ್ತು ಬೆಳಗಿನ ಉಪಹಾರದೊಂದಿಗೆ ಉಳಿಯುವ ವ್ಯವಸ್ಥೆ ಮಾಡಿದರು. ಇದಕ್ಕೆ ಪೂರಕವಾಗಿ ಮಧ್ಯಾಹ್ನದ ಬಿಸಿಯೂಟ (MDM) ಯೋಜನೆ ಮತ್ತು ಪೋಷಕರು ಮತ್ತು ಶಿಕ್ಷಕರ ವೈಯಕ್ತಿಕ ಹೂಡಿಕೆಯಿಂದ ಸಿಕ್ಕ ಬೆಂಬಲವೂ ಇತ್ತು. ಶಾಲೆಯಲ್ಲೇ ಉಳಿಯುತ್ತಿದ್ದ ವಿದ್ಯಾರ್ಥಿಗಳನ್ನು ನೋಡಿಕೊಳ್ಳಲು ಶಿಕ್ಷಕರು ಶಾಲೆಯಲ್ಲೇ ವಾಸವಾಗಿದ್ದರು.

ಈ ಉಪಕ್ರಮದಿಂದ ಮಕ್ಕಳ ಹಾಜರಾತಿಯು ಉತ್ತಮಗೊಂಡು, ಅದರ ಪರಿಣಾಮವಾಗಿ ಮಕ್ಕಳ ಕಲಿಕೆಯೂ ಉತ್ತಮಗೊಂಡಿತು. ಐದನೇ ತರಗತಿಯ ಶೇ. 50ರಷ್ಟು ಮಕ್ಕಳು ಮೊರಾರ್ಜಿ ದೇಸಾಯಿ ಶಾಲೆಯ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿ 12ನೇ ತರಗತಿಯವರೆಗೆ ತಮ್ಮ ಶಿಕ್ಷಣವನ್ನು ಮುಂದುವರೆಸಿದರು. ಈ ಸಕಾರಾತ್ಮಕ ಫಲಿತಾಂಶಗಳು ಶಿಕ್ಷಣದ ಪ್ರಾಮುಖ್ಯತೆಯನ್ನು ಪೋಷಕರಿಗೆ ಮನವರಿಕೆ ಮಾಡಿಕೊಟ್ಟ ಪರಿಣಾಮ ಪ್ರಸ್ತುತ ಸುಮಾರು 590 ವಿದ್ಯಾರ್ಥಿಗಳ ದಾಖಲಾತಿಗೆ ಸಾಧ್ಯವಾಯಿತು. ಅದರಲ್ಲಿ ಸುಮಾರು 470 ವಿದ್ಯಾರ್ಥಿಗಳು, ಶಾಲೆಯಲ್ಲೀಗ ವಸತಿ ವ್ಯವಸ್ಥೆ ಇಲ್ಲದೆಯೂ ನಿಯಮಿತವಾಗಿ ಹಾಜರಾಗುತ್ತಾರೆ.

*ಕೇಸ್ ಸ್ಟಡಿ: ಭಾಷಾ ತೊಡಕನ್ನು ನಿವಾರಿಸಿ ಹೊರಬರುವಿಕೆ.*

ವಲಸೆ ಪ್ರಮಾಣ ಹೆಚ್ಚಿರುವ ಕುಗ್ರಾಮ ಗಡ್ಡದ ನಾರಾಯಣ ತಾಂಡಾದಲ್ಲಿ ಮಕ್ಕಳ ಮನೆ ಭಾಷೆ ಲಂಬಾಣಿಯಾದರೂ ಶಾಲೆಯಲ್ಲಿ ಬೋಧನಾ ಮಾಧ್ಯಮ ಕನ್ನಡವಾಗಿರುವುದರಿಂದ ಭಾಷಾ ತೊಡಕು ಎದುರಾಯಿತು. ಸಮರ್ಪಣಾ ಮನೋಭಾವದ ಶಿಕ್ಷಕಿಯಾದ ಕಾಶಿಬಾಯಿ ಅವರು ತಾಂಡಾದ ಮನೆಗಳಿಗೆ ಮತ್ತು ಅನೇಕ ಬಾರಿ ಅವರ ಕೃಷಿ ಕ್ಷೇತ್ರಗಳಿಗೆ ಭೇಟಿ ನೀಡಿ ತಮ್ಮ ಮಕ್ಕಳನ್ನು ನಿಯಮಿತವಾಗಿ ಶಾಲೆಗೆ ಕಳುಹಿಸುವಂತೆ ಪೋಷಕರಿಗೆ ಮನವರಿಕೆ ಮಾಡಿದರು. ಅವರು ವಿದ್ಯಾರ್ಥಿಗಳ ಭಾಷೆಯನ್ನು ಕಲಿಯುವ ಮೂಲಕ ಮತ್ತು ಹಿರಿಯ ವಿದ್ಯಾರ್ಥಿಗಳು ಕಿರಿಯರಿಗೆ ಸಹಾಯ ಮಾಡುವ ಮೂಲಕ ಭಾಷೆಯ ತಡೆಗೋಡೆಯನ್ನು ನಿವಾರಿಸಿದರು.

ಶಾಲೆಯು ಸ್ವಯಂಕಲಿಕೆ ಮತ್ತು ಗುಂಪು ಕಲಿಕೆಯ ಸಂಸ್ಕೃತಿಯನ್ನು ಬೆಳೆಸಿತು. ಇದು ಶಿಕ್ಷಕರ ಅನುಪಸ್ಥಿತಿಯಲ್ಲಿ ವಿದ್ಯಾರ್ಥಿಗಳು ತರಗತಿಗಳನ್ನು ಸ್ವತಃ ನಿರ್ವಹಿಸುವ ಸಾಮರ್ಥ್ಯವನ್ನು ನೀಡಿತು. ತಂಡವಾಗಿ ಮಾಡುವ ಕೆಲಸ ಮತ್ತು ಗುಂಪು ಕಲಿಕೆಯ ಕಾರ್ಯವಿಧಾನಗಳು ಸಾಮಾಜಿಕ ಕೌಶಲಗಳನ್ನು ಉತ್ತಮಗೊಳಿಸಿ ಸಹಯೋಗದ ಮೂಲಕ ತಿಳುವಳಿಕೆಯನ್ನು ಹೆಚ್ಚಿಸಿದವು. ಅವರು ಗೆಳೆಯರ ಬೆಂಬಲದೊಂದಿಗೆ ಗುಂಪುಗಳಲ್ಲಿ ಕಲಿಯಲು ಪ್ರಾರಂಭಿಸಿದರು.

ಶಾಲೆಯನ್ನು ಮುಚ್ಚಿದ ನಂತರ ಆಟದ ಮೈದಾನದಲ್ಲಿ ಮನೆ ಕೆಲಸವನ್ನು ಪೂರ್ಣಗೊಳಿಸುವುದು, ಮೂರ್ತ ಸಾಮಗ್ರಿಗಳು ಮತ್ತು ಚಟುವಟಿಕೆ ಆಧಾರಿತ ಕಲಿಕಾ ವಿಧಾನದ ಬಳಕೆ, ಹಣಕಾಸಿನ

ಸಾಕ್ಷರತೆಗಾಗಿ ವಿದ್ಯಾರ್ಥಿಗಳೇ ನಡೆಸುವ ಬ್ಯಾಂಕ್ ಅನ್ನು ನಿರ್ವಹಿಸುವುದು, ಮತ್ತು ಗ್ರಂಥಾಲಯದ ಬಳಕೆ; ತರಗತಿಗಳಲ್ಲಿ ಡೈನಾಮಿಕ್ ಕಲೆ, ಪೇಂಟ್ ಮತ್ತು ಒರಿಗಮಿ ಪ್ರದರ್ಶನಗಳು – ಇವು ಒಂದು ದಶಕದ ನಂತರವೂ ನಿರೀಕ್ಷಿತ ಕಲಿಕಾ ಫಲಗಳನ್ನು ಸಾಧಿಸಲು ಶಾಲೆಯ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಸಹಾಯ ಮಾಡಿವೆ. ಕಾಶಿಬಾಯಿಯವರ ಸ್ಥಾನಕ್ಕೆ ಬಂದಿರುವ ಭಾಗ್ಯಶ್ರೀ ಅವರು ಈ ಹಿಂದೆ ಪ್ರಾರಂಭಿಸಿದ ಎಲ್ಲಾ ಆಚರಣೆಗಳನ್ನು ವಿಶೇಷವಾಗಿ ಸಮುದಾಯ ಸಂಬಂಧಗಳನ್ನು ಮುಂದುವರೆಸುತ್ತಿದ್ದಾರೆ.ಈ ಅಭ್ಯಾಸಗಳಿಂದ ವಿದ್ಯಾರ್ಥಿಗಳು ಎಲ್ಲ ಹಂತಗಳಲ್ಲೂ ನಿರೀಕ್ಷಿತ ಕಲಿಕಾ ಫಲಗಳನ್ನು ಪಡೆಯಲು ಸಾಧ್ಯವಾಯಿತಲ್ಲದೆ, ಪ್ರತಿ ವರ್ಷ 5ನೇ ತರಗತಿಯ ಶೇ. 80–85 ವಿದ್ಯಾರ್ಥಿಗಳು ಜವಾಹರ್‌ನವೋದಯ ವಿದ್ಯಾಲಯ ಅಥವಾ ಮೊರಾರ್ಜಿ ದೇಸಾಯಿ ಶಾಲೆಗಳಿಗೆ ಪ್ರವೇಶ ಪಡೆಯುತ್ತಿದ್ದಾರೆ. ಈ ಅಭ್ಯಾಸಗಳನ್ನು ದೃಢೀಕರಿಸಿಕೊಳ್ಳುವುದು, ಸಮುದಾಯದ ಬೆಂಬಲದಿಂದ ಅವುಗಳನ್ನು ಕ್ರಮಬದ್ಧ ಗೊಳಿಸುವುದು, ಎಲ್ಲ ಭಾಗೀದಾರರಲ್ಲಿ ಒಂದು ಸಾಮಾನ್ಯ ಗ್ರಹಿಕೆಯನ್ನು ಅಭಿವೃದ್ಧಿಪಡಿಸುವುದು, ವಿದ್ಯಾರ್ಥಿಗಳ ಕಲಿಕೆ ಮತ್ತು ಶಾಲಾ ಹಂತದ ನಂತರವೂ ಶಿಕ್ಷಣದ ಮುಂದವರಿಕೆಯ ರೂಪದಲ್ಲಿ ಈ ಅಭ್ಯಾಸಗಳ ಫಲಿತಗಳನ್ನು ತೋರಿಸುವುದಕ್ಕೆ ಸಾಧ್ಯವಾಗಿರುವುದು – ಇವೇ ಮುಂತಾದ ಅಂಶಗಳು, ಒಂದು ದಶಕದ ನಂತರವೂ ಈ ಅಭ್ಯಾಸಗಳು ಶಾಲೆಯ ಸಂಸ್ಕೃತಿಯ ಅವಿಭಾಜ್ಯ ಅಂಗಗಳನ್ನಾಗಿ ಉಳಿದಿರುವುದಕ್ಕೆ ಕಾರಣವಾಗಿವೆ. ಈ ಶಾಲೆಯ ಎಲ್ಲಾ ಹಳೆಯ ವಿದ್ಯಾರ್ಥಿಗಳು ಹನ್ನೆರಡನೆ ಯತರಗತಿಯನ್ನು ಪೂರ್ಣ ಗೊಳಿಸಿದ್ದಾರೆ ಮತ್ತು ಅವರಲ್ಲಿ ಹೆಚ್ಚಿನವರು ವಿಶ್ವವಿದ್ಯಾಲಯ ಗಳಲ್ಲಿದ್ದಾರೆ.

**ಭಯ–ಮುಕ್ತ/ಬೆದರಿಕೆಯಿಲ್ಲದ ಬೋಧನಾ–ಕಲಿಕೆ ಪ್ರಕ್ರಿಯೆ**

ಭಯ–ಮುಕ್ತ, ಬೆದರಿಕೆಯಿಲ್ಲದ ಕಲಿಕೆಯ ವಾತಾವರಣವನ್ನು ಒದಗಿಸುವುದು ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ, ಸುರಕ್ಷಿತವಾಗಿ ತಮ್ಮನ್ನು ತಾವು ವ್ಯಕ್ತಪಡಿಸುವ ನಿಟ್ಟಿನಲ್ಲಿ ಅತ್ಯಗತ್ಯ. ಇದು ತಪ್ಪುಗಳನ್ನು ಕಲಿಕೆಯ ಅವಕಾಶಗಳಾಗಿ ನೋಡುವ ಮತ್ತು ಎಲ್ಲ ವಿದ್ಯಾರ್ಥಿಗಳೂ ಬೆಂಬಲದ ಭರವಸೆ ಹೊಂದಿರುವ ಸಂಸ್ಕೃತಿಯನ್ನು ತರಗತಿಯ ಒಳಗಡೆ ಸ್ಥಾಪಿಸುವುದನ್ನು ಒಳಗೊಂಡಿದೆ. ಶಿಶು ಕೇಂದ್ರಿತ ಶಿಕ್ಷಣಶಾಸ್ತ್ರವು ಬೋಧನಾ–ಕಲಿಕೆ ಪ್ರಕ್ರಿಯೆಯನ್ನು ವೈಯಕ್ತಿಕ ಅಗತ್ಯಗಳು, ಆಸಕ್ತಿಗಳು ಮತ್ತು ಸಾಮರ್ಥ್ಯಗಳಿಗೆ ಸರಿಹೊಂದಿಸುತ್ತದೆ, ಪ್ರತಿ ಮಗುವೂ ವಿಶಿಷ್ಟವಾಗಿದೆ ಮತ್ತು ವಿಭಿನ್ನವಾಗಿ ಕಲಿಯುತ್ತದೆ ಎಂದು ಗುರುತಿಸುತ್ತದೆ. ಪ್ರಶ್ನೆಗಳನ್ನು ಕೇಳಲು, ಅನ್ವೇಷಿಸಲು ಮತ್ತು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದರ ಜೊತೆಗೆ ಅವರಲ್ಲಿ ಕುತೂಹಲವನ್ನು ಹುಟ್ಟುಹಾಕುತ್ತದೆ.

ಮೇಲೆ ವಿವರಿಸಿದ ಗಡ್ಡದ ನಾರಾಯಣ ತಾಂಡಾ ಶಾಲೆಯು ಅಪಾಯರಹಿತ ವಾತಾವರಣ ಮತ್ತು ಶಿಶು ಸ್ನೇಹಿ ಶಿಕ್ಷಣದ ಹೆಚ್ಚಿನ ವೈಶಿಷ್ಟ್ಯಗಳನ್ನು ಹೊಂದಿದೆ. ಭಾಷೆ ಮತ್ತು ಕಲಿಕೆಯ ತೊಂದರೆಗಳಿಗೆ ಸ್ಪಂದಿಸುವ, ಪ್ರತಿಯೊಂದು ಮಗುವನ್ನೂ ಅದರ ಅನನ್ಯ ಸಾಮರ್ಥ್ಯಗಳಿಗೆ ಗೌರವಿಸುವ, ವಿದ್ಯಾರ್ಥಿಗಳಿಗೆ ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು ಮತ್ತು ಪ್ರಶ್ನೆಗಳನ್ನು ಕೇಳವು, ಮತ್ತು ಮಾರ್ಗದರ್ಶನದಲ್ಲಿ ಮಾಡುವ ಪ್ರಾಜೆಕ್ಟ್‌ಗಳ ಮೂಲಕ ಶಾಲೆಯು ಅಭ್ಯಾಸಗಳನ್ನು ಸಂಸ್ಕೃತೀಕರಣಗೊಳಿಸಿತು. ಶಿಶು ಸ್ನೇಹಿ ವಾತಾವರಣಕ್ಕೆ ಮತ್ತು ಬೋಧನಾ–ಕಲಿಕೆಯ ಪ್ರಕ್ರಿಯೆಯಲ್ಲಿ ಮಕ್ಕಳ ಕೇಂದ್ರಿತ ಮಾದರಿಗೆ ಕಾರಣವಾದ ಇಂತಹ ಹಲವು ಅಭ್ಯಾಸಗಳನ್ನು ಅಭಿವೃದ್ಧಿಪಡಿಸಿದ ಇತರ ಶಾಲೆಗಳೂ ಇವೆ.

*ಕೇಸ್ ಸ್ಟಡಿ: ವಿದ್ಯಾರ್ಥಿ ನಾಯಕತ್ವ*

ಹೂವಿನಹಳ್ಳಿಯ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿ ನವನಿ ಅವರು ಶಾಲಾ ಸಂಪುಟ ರಚನೆಯ ಮೂಲಕ ವಿದ್ಯಾರ್ಥಿಗಳ ನಾಯಕತ್ವ ಮತ್ತು ಜವಾಬ್ದಾರಿಯನ್ನು ಹೆಚ್ಚಿಸಲು ವಿನೂತನ ಉಪಕ್ರಮವನ್ನು ಅಭಿವೃದ್ಧಿಪಡಿಸಿದರು. ಪ್ರಮುಖ ಮಂತ್ರಿ ಸ್ಥಾನಗಳಿಗೆ ಚುನಾಯಿತರಾದ ವಿದ್ಯಾರ್ಥಿಗಳು – ಪ್ರಧಾನ ಮಂತ್ರಿ, ಶಿಕ್ಷಣ ಸಚಿವರು, ಆರೋಗ್ಯ ಸಚಿವರು, ಪರಿಸರ ಸಚಿವರು ಮತ್ತು ಕ್ರೀಡಾ ಮತ್ತು ಸಂಸ್ಕೃತಿ ಸಚಿವರು – ಸರ್ಕಾರದ ರಚನೆಯ ಸೂಕ್ಷ್ಮತೆಯನ್ನು ಪ್ರತಿಬಿಂಬಿಸುತ್ತಾರೆ. ಪ್ರಧಾನ ಮಂತ್ರಿ ಒಟ್ಟಾರೆ ಸಮನ್ವಯವನ್ನು ನೋಡಿಕೊಳ್ಳುತ್ತಾರೆ; ಶಿಕ್ಷಣ ಸಚಿವರು ಶೈಕ್ಷಣಿಕ ಪ್ರಕ್ರಿಯೆಗಳು ಮತ್ತು ತರಗತಿಗಳ ಮೇಲೆ ಕೇಂದ್ರೀಕರಿಸುತ್ತಾರೆ, ಗ್ರಂಥಾಲಯದಲ್ಲಿ ಸಹಾಯ ಮಾಡುತ್ತಾರೆ, ಶಿಕ್ಷಕರ ಅನುಪಸ್ಥಿತಿಯಲ್ಲಿ ತರಗತಿಗಳನ್ನು ನಿರ್ವಹಿಸುತ್ತಾರೆ ಮತ್ತು ವಿದ್ಯಾರ್ಥಿಗಳಿಗೆ ಮನೆಕೆಲಸದಲ್ಲಿ ಸಹಾಯ ಮಾಡುತ್ತಾರೆ; ಮಧ್ಯಾಹ್ನದ ಬಿಸಿಯೂಟದ ಸಮಯದಲ್ಲಿ ಶಾಲಾ ಆವರಣದಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಆರೋಗ್ಯ ಸಚಿವರು ಜವಾಬ್ದಾರರಾಗಿರುತ್ತಾರೆ, ಜೊತೆಗೆ ವಿದ್ಯಾರ್ಥಿಗಳಲ್ಲಿ ಆರೋಗ್ಯ ಜಾಗೃತಿಯನ್ನು ಉತ್ತೇಜಿಸುವುದೂ ಇವರ ಕೆಲಸ; ಪರಿಸರ ಸಚಿವರು ತೋಟವನ್ನು ಅಭಿವೃದ್ಧಿ ಪಡಿಸುವುದು, ರಜಾದಿನಗಳಲ್ಲಿ ಹಸಿರನ್ನು ಉಳಿಸಿಕೊಳ್ಳುವುದು ಮತ್ತು ಪರಿಸರ ಶಿಕ್ಷಣವನ್ನು ಉತ್ತೇಜಿಸುವಲ್ಲಿ ಕೆಲಸ ಮಾಡುತ್ತಾರೆ; ಕ್ರೀಡೆ ಮತ್ತು ಸಂಸ್ಕೃತಿ ಸಚಿವರು ಕ್ರೀಡಾಕೂಟಗಳಿಗೆ ಜವಾಬ್ದಾರರು. ಸಾಂಸ್ಕೃತಿಕ ಚಟುವಟಿಕೆಗಳನ್ನು ಆಯೋಜಿಸುವುದು ಮತ್ತು ವಿವಿಧ ಪಠ್ಯೇತರ ಚಟುವಟಿಕೆಗಳಲ್ಲಿ ಪ್ರತಿಭೆಯನ್ನು ಬೆಳೆಸುವುದೂ ಅವರ ಹೊಣೆ.

ಪ್ರತಿಯೊಬ್ಬ ಸಚಿವರೂ ತಮ್ಮ ಚಟುವಟಿಕೆಗಳನ್ನು ಕೈಗೊಳ್ಳಲು ವಿದ್ಯಾರ್ಥಿಗಳ ಗುಂಪಿನೊಂದಿಗೆ ಕೆಲಸ ಮಾಡುತ್ತಾರೆ. ಸಾಪ್ತಾಹಿಕ ಸಂಪುಟ ಸಭೆಗಳು ಮತ್ತು ಮಾಸಿಕ ವರದಿಗಳು ವಿದ್ಯಾರ್ಥಿಗಳ ಪ್ರಸ್ತುತಿ ಮತ್ತು ಅಭಿವ್ಯಕ್ತಿ ಕೌಶಲ ಮತ್ತು ಆತ್ಮವಿಶ್ವಾಸವನ್ನು ಬೆಳೆಸುತ್ತವೆ.ನಿರಂತರ ಕಾರ್ಯಕ್ರಮಗಳು ಮತ್ತು ಶಿಕ್ಷಕರ ಸಹಕಾರದಿಂದ, ಈ ಉಪಕ್ರಮಗಳ ಮೂಲಕ ಶಾಲೆಯು ತನ್ನ ಆವರಣದಲ್ಲಿ ಹಸಿರನ್ನು ಉಳಿಸಿಕೊಳ್ಳಲು, ಕಲಿಕಾ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಲು, ಮತ್ತು ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಸಾಧ್ಯವಾಗಿದೆ. ಈ ಕ್ಯಾಬಿನೆಟ್ ಅಭ್ಯಾಸದ ಸುಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು, ಹೂವಿನಹಳ್ಳಿ ಶಾಲೆಯು ಚಟುವಟಿಕೆಗಳನ್ನು ಕ್ರಮಬದ್ಧಗೊಳಿಸಿದೆ ಮತ್ತು ಅವುಗಳನ್ನು ಶಾಲಾ ದಿನಚರಿಯಲ್ಲಿ ಸಂಯೋಜಿಸಿದೆ. ಪ್ರತಿಯೊಬ್ಬ ಸಚಿವರು ನಿರ್ದಿಷ್ಟ ಜವಾಬ್ದಾರಿಗಳೊಂದಿಗೆ ಉತ್ತಮವಾಗಿ ವ್ಯಾಖ್ಯಾನಿಸಲಾದ ಪಾತ್ರವನ್ನು ಹೊಂದಿದ್ದಾರೆ. ಅದನ್ನು ಶಿಕ್ಷಕರು ಮೇಲ್ವಿಚಾರಣೆ ಮಾಡುತ್ತಾರೆ ಮತ್ತು ಬೆಂಬಲಿಸುತ್ತಾರೆ. ಪ್ರಗತಿಯನ್ನು ಚರ್ಚಿಸಲು, ಭವಿಷ್ಯದ ಚಟುವಟಿಕೆಗಳನ್ನು ಯೋಜಿಸಲು ಮತ್ತು ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸಲು ನಿಯಮಿತ ಸಭೆಗಳನ್ನು ನಡೆಸಲಾಗುತ್ತದೆ. ಕಳೆದ 10 ವರ್ಷಗಳಿಂದ ಈ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತಿದೆ.

## ಬೋಧನಾ ಯೋಜನೆಗಳು ಮತ್ತು ಶೈಕ್ಷಣಿಕ ಸಭೆಗಳು

ಹುಣಸಗಿ ಕ್ಯಾಂಪ್‌ನ ಹುಣಸಗಿಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಎರಡು ಪ್ರಮುಖ ಉಪಕ್ರಮಗಳು ಶೈಕ್ಷಣಿಕ ಅನುಭವವನ್ನು ಗಣನೀಯವಾಗಿ ಪರಿವರ್ತಿಸಿವೆ: ವಿದ್ಯಾರ್ಥಿಗಳ ಅಗತ್ಯತೆಗಳ ಆಧಾರದ ಮೇಲೆ ತರಗತಿಯಲ್ಲಿ ತೊಡಗಿಸಿ ಕೊಳ್ಳುವುದಕ್ಕಾಗಿ ಶಿಕ್ಷಕರು ಯೋಜನೆಗಳನ್ನು ನಿರೂಪಿಸುವುದು ಮತ್ತು ಆಗಾಗ ಶೈಕ್ಷಣಿಕ ಸಭೆಗಳನ್ನು ನಡೆಸುವುದು. ಮುಖ್ಯ ಶಿಕ್ಷಕ ಬಸವನಗೌಡ ಅವರು ಪ್ರಾರಂಭಿಸಿದ ಈ ಅಭ್ಯಾಸಗಳು ಬೋಧನೆ ಮತ್ತು ಕಲಿಕೆಯ ಗುಣಮಟ್ಟವನ್ನು ಗಮನಾರ್ಹವಾಗಿ ಸುಧಾರಿಸಿದೆ. ವಿದ್ಯಾರ್ಥಿಗಳ ದಾಖಲಾತಿಯನ್ನು ಹೆಚ್ಚಿಸಲು ಮತ್ತು ಒಟ್ಟಾರೆ ಶಾಲಾ ಅಭಿವೃದ್ಧಿಗೆ ಕೊಡುಗೆ ನೀಡಿವೆ.

ತರಗತಿಯ ಪ್ರಕ್ರಿಯೆಗೆ ಶಿಕ್ಷಕರ ಯೋಜನೆಯ ಅಭಿವೃದ್ಧಿಗೆ ವ್ಯವಸ್ಥಿತ ಪ್ರಯತ್ನ ಮಾಡುವುದು ಈ ಪರಿವರ್ತನೆಯ ಹಿಂದಿನ ಮುಖ್ಯ ಕಾರಣಗಳಲ್ಲಿ ಒಂದು. ಎಲ್ಲಾ ಶಿಕ್ಷಕರು ವಿವರವಾದ ಪಾಠದ ಯೋಜನೆಗಳನ್ನು ಸಿದ್ಧಪಡಿಸುತ್ತಾರೆ ಮತ್ತು ಅವುಗಳನ್ನು ನಿಯಮಿತವಾಗಿ ಮುಖ್ಯ ಶಿಕ್ಷಕರಿಂದ ಪರಿಶೀಲಿಸಿಕೊಳ್ಳುತ್ತಾರೆ. ಈ ಯೋಜನೆಗಳನ್ನು ತಮ್ಮ ವಿದ್ಯಾರ್ಥಿಗಳ ನಿರ್ದಿಷ್ಟ ಅಗತ್ಯಗಳನ್ನು ಪೂರೈಸಲು ಅನುವಾಗುವಂತೆ ವಿನ್ಯಾಸಗೊಳಿಸಲಾಗುತ್ತದೆ. ಯೋಜನೆಗಳನ್ನು ವಿದ್ಯಾರ್ಥಿಗಳ ನಿರ್ದಿಷ್ಟ ಅಗತ್ಯಗಳನ್ನು ಪೂರೈಸುವ ಉದ್ದೇಶದಿಂದ ವಿನ್ಯಾಸಗೊಳಿಸಲಾಗಿದ್ದು, ಪ್ರತಿಯೊಂದು ಪಾಠವೂ ಪ್ರಸ್ತುತವಾಗಿದ್ದು, ವಿದ್ಯಾರ್ಥಿಗಳು ತೊಡಗಿಸಿ ಕೊಳ್ಳುವಂತಿದ್ದು, ಪಠ್ಯಕ್ರಮಕ್ಕೆ ಪೂರಕವಾಗಿರುವಂತೆ ಖಚಿತಪಡಿಸಿ ಕೊಳ್ಳಲಾಗುತ್ತದೆ. ಯೋಜನೆಯ ಅನುಷ್ಠಾನದ ಅನುಭವದ ಆಧಾರದ ಮೇಲೆ ಇವುಗಳನ್ನು ಪರಿಷ್ಕರಿಸಲಾಗುವುದು.

ವೈಯಕ್ತಿಕ ಪಾಠ ಯೋಜನೆಗೆ ಪೂರಕವಾಗಿ, ಶಾಲೆಯ ಮುಖ್ಯ ಶಿಕ್ಷಕರ ನೇತೃತ್ವದಲ್ಲಿ ಹದಿನೈದು ದಿನಗಳ ಶೈಕ್ಷಣಿಕ ಸಭೆಗಳನ್ನು ಸಹ ನಡೆಸುತ್ತದೆ. ಈ ಸಭೆಗಳು ಶಿಕ್ಷಕರಿಗೆ ಉತ್ತಮ ಅಭ್ಯಾಸಗಳು, ನವೀನ ಬೋಧನಾ ವಿಧಾನಗಳು ಮತ್ತು ಕಲಿಕೆಯ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆಯನ್ನು ಹಂಚಿಕೊಳ್ಳಲು ವೇದಿಕೆಯನ್ನು ಒದಗಿಸುತ್ತವೆ.

ಈ ಸಹಯೋಗದ ವಾತಾವರಣವು ವೃತ್ತಿಪರ ಬೆಳವಣಿಗೆ ಮತ್ತು ಬೋಧನಾ ತಂತ್ರಗಳ ನಿರಂತರ ಸುಧಾರಣೆಯನ್ನು ಉತ್ತೇಜಿಸುತ್ತದೆ. ಶಿಕ್ಷಕರು ಅವರು ಎದುರಿಸುತ್ತಿರುವ ವಿವಿಧ ತೊಂದರೆಗಳನ್ನು ಚರ್ಚಿಸುತ್ತಾರೆ. ಅವು ಪರಿಕಲ್ಪನೆಗಳಿಗೆ ಸಂಬಂಧಿಸಿದ್ದಾಗಿರಬಹುದು, ವಿದ್ಯಾರ್ಥಿಗಳ ತೊಡಗಿಕೊಳ್ಳುವಿಕೆ ಅಥವಾ ತರಗತಿಯ ನಿರ್ವಹಣೆಗೆ ಸಂಬಂಧಿಸಿದ ವಿಚಾರಗಳಾಗಿರಬಹುದು. ಸಭೆಗಳು ಗೈರುಹಾಜರಿ, ಶಾಲೆ ಬಿಡುವುದು ಮತ್ತು ಶೈಕ್ಷಣಿಕ ಕಾರ್ಯಕ್ಷಮತೆ ಮೊದಲಾದ ವಿದ್ಯಾರ್ಥಿ-ಸಂಬಂಧಿತ ಸಮಸ್ಯೆಗಳ ಮೇಲೆ ಕೇಂದ್ರೀಕರಿಸುತ್ತವೆ. ಇದು ಶೈಕ್ಷಣಿಕ ಮತ್ತು ಇತರ ಸಮಸ್ಯೆಗಳನ್ನು ಪರಿಹರಿಸಲು ಉದ್ದೇಶಿತ ಮಧ್ಯಪ್ರವೇಶಿಕೆಯನ್ನು ಅಭಿವೃದ್ಧಿಪಡಿಸಲು ಅನುವು ಮಾಡಿಕೊಡುತ್ತದೆ.

## ಉಪಸಂಹಾರ

ಸುಸ್ಥಿರ ಶಾಲಾ ಸಂಸ್ಕೃತಿಯನ್ನು ರಚಿಸಲು ಭೌತಿಕ ಪರಿಸರ, ಸಂಪನ್ಮೂಲ ಲಭ್ಯತೆ, ಭಾವನಾತ್ಮಕ ಸುರಕ್ಷತೆ, ವೈಯಕ್ತಿಕಗೊಳಿಸಿದ ಕಲಿಕೆ, ಶಿಕ್ಷಕರ ಬೆಳವಣಿಗೆ ಮತ್ತು ಸಮುದಾಯದ ತೊಡಗಿಸಿಕೊಳ್ಳುವಿಕೆಯನ್ನು ತಿಳಿಸುವ ಬಹುಮುಖಿ ವಿಧಾನದ ಅಗತ್ಯವಿದೆ. ಈ ಅಭ್ಯಾಸಗಳನ್ನು ಅನುಷ್ಠಾನಗೊಳಿಸುವ ಮೂಲಕ, ಶಾಲೆಗಳು ವಿದ್ಯಾರ್ಥಿಗಳಿಗೆ ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ತಲುಪಲು ಅಗತ್ಯವಿರುವ ಸಮೃದ್ಧ ಮತ್ತು ಪೂರಕ ವಾತಾವರಣವನ್ನು ಒದಗಿಸಿಕೊಡುತ್ತದೆ.



*ಶಿಶು ಸ್ನೇಹಿ ಶಾಲಾ ಪರಿಸರವು ಎಲ್ಲ ಮಕ್ಕಳ ಕಲಿಕೆ ಮತ್ತು ಸರ್ವಾಂಗೀಣ ಅಭಿವೃದ್ಧಿಯನ್ನು ಪೋಷಿಸುತ್ತದೆ.*

ಈ ಮೇಲೆ ಚರ್ಚಿಸಿದ ಉದಾಹರಣೆಗಳಲ್ಲಿ, ಮುಖ್ಯ ಶಿಕ್ಷಕರು ನಿರ್ಣಾಯಕ ಪಾತ್ರವನ್ನು ವಹಿಸಿದ್ದಾರೆ, ಶಿಕ್ಷಕರು ತಂಡವಾಗಿ ಕೆಲಸ ಮಾಡಿದ್ದಾರೆ ಮತ್ತು ಶಾಲಾ-ಸಮುದಾಯ ಸಂಬಂಧವನ್ನು ಪ್ರಜ್ಞಾಪೂರ್ವಕವಾಗಿ ನಿರ್ಮಿಸಲಾಗಿದೆ. ಈ ಎಲ್ಲಾ ಶಾಲೆಗಳಲ್ಲೂ, ಕೆಲವು ಅಭ್ಯಾಸಗಳನ್ನು ಸಂದರ್ಭೋಚಿತವಾಗಿ ದೃಢೀಕರಿಸಿ, ಎಲ್ಲ ಭಾಗೀದಾರರಲ್ಲೂ ಒಂದು ಸಾಮಾನ್ಯ ಗ್ರಹಿಕೆಯನ್ನು ಬೆಳೆಸಿ, ಅನುಷ್ಠಾನಕ್ಕೆ ಮತ್ತು ಪರಿಶೀಲನೆಗೆ ಪ್ರಕ್ರಿಯೆಗಳನ್ನು ಸ್ಥಾಪಿಸಿ, ಮತ್ತು ಅಂತಿಮವಾಗಿ, ಸಮುದಾಯ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಈ ಅಭ್ಯಾಸಗಳ ಫಲಿತಗಳಿಗೆ ಬೆಲೆ ಕೊಡುವುದರಿಂದ, ಅವುಗಳನ್ನು ಮುಂದುವರೆಸಿಕೊಂಡು ಹೋಗಲು ಸಾಧ್ಯವಾಗುತ್ತದೆ.

---

**ಸಿ.ಎಫ್.ಎಸ್.ಐ. ಯೋಜನೆಯಲ್ಲಿ ಬಳಸಲಾದ ಅಭಿವೃದ್ಧಿ ಸೂಚಕಗಳ ಪಟ್ಟಿ.**

**ಶಿಶು-ಸ್ನೇಹಿ ಶಾಲಾ ಉಪಕ್ರಮ, ಶೋರಾಪುರ**

ಶಾಲಾ ಸುಧಾರಣಾ ಯೋಜನೆಯ ಬೇಸ್ ಲೈನ್ ಸೆಪ್ಟೆಂಬರ್-ನವೆಂಬರ್, 2009

ಕ್ಲಸ್ಟರ್ ಹೆಸರು:

ಶಾಲೆಯ ಹೆಸರು:

| ಕ್ರ.ಸಂ. | ಪಾಕ್ಷಿಕ ಸೂಚ್ಯಂಕಗಳು |
|---|---|
| F1 | SDMC ಮತ್ತು ಸಮುದಾಯವು ಮಧ್ಯಾಹ್ನದ ಬಿಸಿಯೂಟದಲ್ಲಿ ನೀಡಲಾಗುವ ಆಹಾರದ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡುತ್ತದೆ. |
| F2 | ತರಗತಿಗಳು ಸ್ವಚ್ಛವಾಗಿವೆ ಮತ್ತು ನೈರ್ಮಲ್ಯದಿಂದ ಕೂಡಿವೆ |
| F3 | ಪ್ರಾಜೆಕ್ಟ್ ವರ್ಕ್, ಪೇಂಟಿಂಗ್, ಕ್ರಾಫ್ಟ್‌ನಂತಹ ಮಕ್ಕಳು ಮಾಡಿದ ವಿಭಿನ್ನ ಕೆಲಸಗಳನ್ನು ಆಕರ್ಷಕವಾಗಿ ಪ್ರದರ್ಶಿಸಲಾಗುತ್ತದೆ ಮತ್ತು ಲಿಖಿತ ವಸ್ತುಗಳನ್ನು ಸೂಚನಾ ಫಲಕಗಳು ಮತ್ತು ಗೋಡೆಗಳ ಮೇಲೆ ಪ್ರದರ್ಶಿಸಲಾಗುತ್ತದೆ. |
| F4 | ಸಂಪನ್ಮೂಲಗಳ ಮೂಲೆ- ಪುಸ್ತಕಗಳು, ಟಿಎಲ್‌ಎಂಗಳು, ಮಕ್ಕಳಿಗೆ ಸುಲಭವಾಗಿ ಸಿಗಬಹುದಾದ ಉಪಕರಣಗಳನ್ನು ಒದಗಿಸಲಾಗುತ್ತದೆ. |
| F5 | ತರಗತಿಯಲ್ಲಿ ಬೆತ್ತ ಕಾಣುತ್ತಿಲ್ಲ |
| F6 | ಶಾಲೆಯ ಎಲ್ಲ ಪ್ರದೇಶಗಳನ್ನು ಸ್ವಚ್ಛವಾಗಿ ನಿರ್ವಹಿಸಲಾಗಿದೆ.(ಜೇಡರ ಬಲೆಗಳಿಲ್ಲ, ಕಾಗದದ ತುಂಡುಗಳು ಬಿದ್ದಿಲ್ಲ, ಪ್ಲಾಸ್ಟಿಕ್ ಟೀ ಲೋಟಗಳನ್ನು ಕಿಟಕಿಯಿಂದ ಹೊರಗೆ ಎಸೆದಿಲ್ಲ, ಕಸವನ್ನು ಸುತ್ತಮುತ್ತ ಎಸೆದಿಲ್ಲ ಇತ್ಯಾದಿ) |
| F7 | ಶಾಲೆಯ ಆವರಣದ ಸುತ್ತಲೂ ಉದ್ಯಾನ, ಗಿಡ ಮತ್ತು ಮರಗಳು. |
| F8 | ಮಕ್ಕಳಿಗೆ ಶುದ್ಧ ಕುಡಿಯುವ ನೀರು ಲಭ್ಯವಾಗುವಂತೆ ಮಾಡಲಾಗಿದೆ. |
| F9 | ಉಪಯೋಗಿಸಬಹುದಾದ ಮತ್ತು ಸರಿಯಾಗಿ ನಿರ್ವಹಿಸಲಾಗಿರುವ ಬಾಲಕ-ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳು (ನೀರಿನ ಸೌಲಭ್ಯ, ಚೊಂಬು, ಮಳೆಯಿಂದ ರಕ್ಷಣೆ, ಕೀಲಿ ಕೈ ಇರುವ ಬೀಗಗಳು.) |
| F10 | ಗೊತ್ತು ಮಾಡಿದ ಜಾಗದಲ್ಲಿ ದಾಖಲೆಗಳನ್ನು ಅಚ್ಚುಕಟ್ಟಾಗಿ ಜೋಡಿಸಲಾಗಿದೆ. |
| F11 | ಗೊತ್ತು ಮಾಡಿದ ಜಾಗದಲ್ಲಿ ಕ್ರೀಡಾ ವಸ್ತುಗಳನ್ನು ಅಚ್ಚುಕಟ್ಟಾಗಿ ಜೋಡಿಸಲಾಗಿದೆ. |
| F12 | ಸ್ವಚ್ಛವಾದ ಅಡುಗೆ ಮನೆ |
| F13 | ಮಧ್ಯಾಹ್ನದ ಊಟಕ್ಕೆ ದಿನಸಿ ವಸ್ತುಗಳನ್ನು ಸಂಗ್ರಹಿಸಲು ಸಾಕಷ್ಟು ಮತ್ತು ಪ್ರತ್ಯೇಕ ಸ್ಥಳವನ್ನು ಗುರುತಿಸಲಾಗಿದೆ. (ಬೋಧನೆ-ಕಲಿಕೆ ಪ್ರದೇಶವನ್ನು ಇದು ಆಕ್ರಮಿಸಿಕೊಳ್ಳಬಾರದು) |
| F14 | ಮುಖ್ಯ ಶಿಕ್ಷಕ ಸೇರಿದಂತೆ ಎಲ್ಲ ಶಿಕ್ಷಕರೂ ಸಮಯಕ್ಕೆ ಸರಿಯಾಗಿ ಬರುತ್ತಾರೆ. (ಶಾಲೆ ಶುರುವಾಗುವ ಮುನ್ನ) |
| F15 | ಮುಖ್ಯ ಶಿಕ್ಷಕ ಸೇರಿದಂತೆ ಎಲ್ಲ ಶಿಕ್ಷಕರೂ ಸಮಯಕ್ಕೆ ಸರಿಯಾಗಿ ಹೊರಡುತ್ತಾರೆ. (ಶಾಲೆ ಮುಗಿದ ನಂತರ) |
| F16 | ಆಟದ ಸಮಯದಲ್ಲಿ ಮಕ್ಕಳು ಶಿಕ್ಷಕರ ಮಾರ್ಗದರ್ಶನದಲ್ಲಿ ಆಡುತ್ತಾರೆ. |
| F17 | ಮಾರ್ಗದರ್ಶಿ ಮೂಲಕ ಶಾಲೆಯಲ್ಲಿ ದಾಖಲಾದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ. |
| F18 | ಕೆಲಸ ಮಾಡುತ್ತಿರುವ ಒಟ್ಟು ಶಿಕ್ಷಕರ ಸಂಖ್ಯೆ ಮತ್ತು ಹಾಜರಿರುವ ಶಿಕ್ಷಕರ ಸಂಖ್ಯೆ |
| F19 | ಸರಿಯಾಗಿ ನಿರ್ವಹಿಸಲಾದ ಮತ್ತು ಮಕ್ಕಳು ಸಕ್ರಿಯವಾಗಿ ಬಳಸುತ್ತಿರುವ ಗ್ರಂಥಾಲಯ |
| F20 | ಪ್ರಥಮ ಚಿಕಿತ್ಸಾ ಕಿಟ್ ಲಭ್ಯವಿದೆ ಮತ್ತು ಬಳಸಬಹುದಾಗಿದೆ. |

| | |
|---|---|
| | **ಮಾಸಿಕ** |
| M1 | ಎಸ್.ಡಿ.ಎಮ್.ಸಿ ಸಭೆಗಳನ್ನು ಅಗತ್ಯವಿರುವ ಕೋರಂನೊಂದಿಗೆ ನಿಗದಿತವಾಗಿ ನಡೆಸಲಾಗಿದೆ. |
| M2 | ಎಸ್.ಡಿ.ಎಮ್.ಸಿ ಸಭೆಯ ನಿರ್ಣಯಗಳು ಶಾಲೆಗೆ ಸಂಬಂಧಿಸಿದ ಚರ್ಚೆಗಳನ್ನು ಸೂಚಿಸುತ್ತವೆ. (ದಾಖಲಾತಿ, ಧಾರಣ, ಮಕ್ಕಳ ಕಲಿಕೆ, ಶಾಲೆ ಬಿಡುವ ಮಕ್ಕಳಿಗಾಗಿ ಕಾರ್ಯತಂತ್ರಗಳು ಇತ್ಯಾದಿ.) |
| M3 | ತರಗತಿಗಳಲ್ಲಿ ಅತ್ಯಾಕರ್ಷಕ ಕಲಿಕಾ ಪೆಂಡಾಲ್ ಇದೆ |
| M4 | ಶಿಕ್ಷಕರ ವಾರದ ಸಭೆಗಳ ನಡಾವಳಿಗಳನ್ನು ದಾಖಲಿಸಲಾಗುತ್ತದೆ ಮತ್ತು ಅನುಸರಿಸಲಾಗುತ್ತದೆ. |
| M5 | ಪ್ರತಿಯೊಬ್ಬ ಶಿಕ್ಷಕರೂ ಪ್ರತಿ ವಿಷಯ ಘಟಕಕ್ಕೆ ಸ್ಪಷ್ಟವಾಗಿ ಸಿದ್ಧಪಡಿಸಿದ ಪಾಠ ಯೋಜನೆಯನ್ನು ಹೊಂದಿರುತ್ತಾರೆ. |
| M6 | ದಿನದ ಚಟುವಟಿಕೆ/ಕಾರ್ಯಕ್ರಮದ ಟಿಪ್ಪಣಿಗಳನ್ನು ಮಾಡಲು ಡೈರಿಯೊಂದನ್ನು ಹೊಂದಿದ್ದಾರೆ. |
| | **ತ್ರೈಮಾಸಿಕ** |
| Q1 | ಸಮುದಾಯವು ಕೊಡುಗೆಗಳನ್ನು ನೀಡಿದೆ. ಉದಾಹರಣೆಗೆ, ಬೋಧನೆ/ಟಿ.ಎಲ್.ಎಮ್ ರಚಿಸಲು ನೆರವು, / ಇನ್ನಿತರ ನೆರವು |
| Q2 | ಶಾಲೆಯ ಶೈಕ್ಷಣಿಕ ಮತ್ತು ಆಡಳಿತ ಸಮಸ್ಯೆಗಳನ್ನು ಗ್ರಾಮ ಪಂಚಾಯತ್ ಸದಸ್ಯರೊಂದಿಗೆ ಕಾಲಕಾಲಕ್ಕೆ ಚರ್ಚಿಸಲಾಗಿದೆ ಮತ್ತು ಚರ್ಚೆಯ ದಾಖಲೆಗಳನ್ನು ನಿರ್ವಹಿಸಲಾಗಿದೆ. |
| Q3 | ವಿದ್ಯಾರ್ಥಿಗಳಿಗೆ ಪ್ರತಿ ತರಗತಿಯಲ್ಲಿ ಪ್ರಶ್ನೆ ಪೆಟ್ಟಿಗೆ ಲಭ್ಯವಿದೆ. |
| Q4 | ಉನ್ನತ ತರಗತಿಗಳ ಮಕ್ಕಳಿಗಾಗಿ ಸುಸಜ್ಜಿತ ಪ್ರಯೋಗಾಲಯವಿದೆ. |
| Q5 | ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಗುರುತಿಸಲಾಗಿದೆ ಮತ್ತು ಪಟ್ಟಿಯು ಶಾಲೆಯಲ್ಲಿ ಲಭ್ಯವಿದೆ |
| Q6 | ವಿದ್ಯಾರ್ಥಿ ಕ್ಯಾಬಿನೆಟ್ ಅಸ್ತಿತ್ವದಲ್ಲಿದೆ ಮತ್ತು ಸಕ್ರಿಯವಾಗಿದೆ. |
| Q7 | ಶಾಲಾ ಸುಧಾರಣಾ ಯೋಜನೆಯ ಪ್ರಗತಿಯನ್ನು ದಾಖಲಿಸಲಾಗಿದೆ |
| Q8 | ತ್ರೈಮಾಸಿಕದಲ್ಲಿ ಶಾಲೆ ಬಿಟ್ಟ ವಿದ್ಯಾರ್ಥಿಗಳು ಯಾರೂ ಇಲ್ಲ |
| | **ವಾರ್ಷಿಕ** |
| A1 | ಸರಕಾರಿ ನಿಯಮಗಳ ಪ್ರಕಾರ ಎಸ್.ಡಿ.ಎಮ್.ಸಿ ರಚಿಸಲಾಗಿದೆ. (ನಿರ್ಣಾಯಕ ಸೂಚಕಗಳು: 9 ಚುನಾಯಿತ ಸದಸ್ಯರು. ಎಲ್ಲರೂ ಪೋಷಕರು.) |
| A2 | ಸಮುದಾಯವು ಕಳೆದ ವರ್ಷ ದೇಣಿಗೆಗಳನ್ನು ನೀಡಿದೆ. (ಹಣ/ವಸ್ತು/ಶ್ರಮ) |
| A3 | ನಿಯಮಗಳ ಪ್ರಕಾರ ಪೋಷಕರ ಸಭೆ ಕರೆಯಲಾಗಿದೆ (ವರ್ಷಕ್ಕೆ ಎರಡು ಬಾರಿ) |
| A4 | ಮಕ್ಕಳಿಗೆ ತರಗತಿಯ ಒಳಗೆ ಬಿಸಿಲಿನಿಂದ ಮತ್ತು ಮಳೆಯಿಂದ ಸಾಕಷ್ಟು ರಕ್ಷಣೆ ಇದೆ. (ಸರಿಯಾದ ಛಾವಣಿ, ಬಾಗಿಲು, ಕಿಟಕಿ ಇತ್ಯಾದಿ.) |
| A5 | ತರಗತಿಯ ಒಳಗೆ ಸಾಕಷ್ಟು ಬೆಳಕು ಮತ್ತು ಗಾಳಿ ಇದೆ |
| A6 | ತರಗತಿಯ ಒಳಗೆ ಮುಕ್ತವಾಗಿ ಕುಳಿತುಕೊಳ್ಳಲು ಮತ್ತು ಚಲಿಸಲು ಸಾಕಷ್ಟು ಸ್ಥಳಾವಕಾಶ ಇದೆ. |
| A7 | ತರಗತಿಯ ಕೊಠಡಿಗಳು ಸರಿಯಾದ ಮತ್ತು ಸ್ಪಷ್ಟವಾಗಿ ಕಾಣುವ ಕಪ್ಪು ಹಲಗೆಯನ್ನು ಹೊಂದಿದ್ದು ಅದು ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಗೋಚರಿಸುತ್ತದೆ. |
| A8 | ಒಂದು ಮತ್ತು ಎರಡನೆಯ ತರಗತಿಯಲ್ಲಿ ರನ್ನಿಂಗ್ ಬ್ಲಾಕ್ ಬೋರ್ಡ್ ಲಭ್ಯವಿದೆ |
| A9 | ತರಗತಿಯಲ್ಲಿ ವಿವಿಧ ಗೋಡೆ ಬರಹಗಳಿದ್ದು ಎಲ್ಲ ವಿಷಯಗಳನ್ನು ಒಳಗೊಂಡಿದೆ. |
| A10 | ಶಾಲೆಯ ಸುತ್ತಲೂ ಗೇಟ್‌ನ ಜೊತೆಗೆ ಕಂಪೌಂಡ್ ಇದೆ. (ಬೇಲಿಯೂ ಆಗಿರಬಹುದು, ಆದರೆ ಸುತ್ತಲೂ ಇರಬೇಕು) |
| A11 | ಗೋಡೆಗಳು ಸ್ವಚ್ಛವಾಗಿವೆ ಮತ್ತು ಬಣ್ಣ ಬಳಿಯಲಾಗಿದೆ. |
| A12 | ಕನಿಷ್ಟ ಪ್ರತಿ 40 ಮಕ್ಕಳಿಗೆ ಒಂದು ಕೊಠಡಿ ಇದೆ. |
| A13 | ಮಕ್ಕಳಿಗೆ ಆಟವಾಡಲು ಅಗತ್ಯವಿರುವಷ್ಟು ಆಟದ ಮೈದಾನವಿದೆ. |
| A14 | ವಾರ್ಷಿಕ ಕ್ರೀಡಾಕೂಟವನ್ನು ನಡೆಸಲಾಗುತ್ತದೆ. |

| | |
|---|---|
| A15 | ಮಕ್ಕಳ ವಿಶೇಷ ಕೌಶಲಗಳನ್ನು ಗುರುತಿಸಲಾಗುತ್ತದೆ ಮತ್ತು ದಾಖಲಿಸಲಾಗುತ್ತದೆ. |
| A16 | ಸಾಂಸ್ಕೃತಿಕ ಕಾರ್ಯಕ್ರಮಗಳು (ರಸಪ್ರಶ್ನೆ/ನಾಟಕ/ಕತೆ ಹೇಳುವಿಕೆ ಇತ್ಯಾದಿ) |
| A17 | ಶಾಲೆಯಲ್ಲಿ ಮುಖ್ಯ ಶಿಕ್ಷಕ, ಶಿಕ್ಷಕ, ಎಸ್.ಡಿ.ಎಮ್.ಸಿಗೆ ವಹಿಸಿರುವ ಪಾತ್ರ ಮತ್ತು ಜವಾಬ್ದಾರಿಯ ಪಟ್ಟಿಯು ಸುಲಭ ಲಭ್ಯವಿದೆ. |
| A18 | ಶಾಲಾ ಅಭಿವೃದ್ಧಿ ಯೋಜನೆಯನ್ನು ತಯಾರಿಸಲಾಗಿದೆ ಮತ್ತು ಲಭ್ಯವಿದೆ. |
| A19 | ಎಲ್ಲಾ ತರಗತಿಗಳು ಮತ್ತು ವಿಷಯಗಳ ಸಾಮರ್ಥ್ಯವಿರುವ ಪಟ್ಟಿ ಮುಖ್ಯ ಶಿಕ್ಷಕರ ಮತ್ತು ಸಂಬಂಧ ಪಟ್ಟ ಶಿಕ್ಷಕರ ಬಳಿ ಲಭ್ಯವಿದೆ. |
| A20 | ಎಲ್ಲ ತರಗತಿಗಳಿಗೂ ವೇಳಾಪಟ್ಟಿ ತಯಾರಿಸಲಾಗಿದೆ ಮತ್ತು ಮುಖ್ಯ ಶಿಕ್ಷಕರ ಬಳಿ ಲಭ್ಯವಿದೆ. |
| A21 | ಪುಸ್ತಕ ಮತ್ತು ಸಮವಸ್ತ್ರಗಳನ್ನು ಸರಿಯಾದ ಸಮಯಕ್ಕೆ ವಿದ್ಯಾರ್ಥಿಗಳಿಗೆ ಹಂಚಲಾಗಿದೆ. |
| A22 | ವಾರ್ಷಿಕ ಶಾಲಾ ದಿನಾಚರಣೆ ಕಾರ್ಯಕ್ರಮ ನಡೆದಿದೆ. |
| A23 | ಮೆಟ್ರಿಕ್ ಮೇಳದಂತಹ ವಾರ್ಷಿಕ ಕಾರ್ಯಕ್ರಮಗಳನ್ನು ನಡೆಸಲಾಗಿದೆ. |
| A24 | KSQAO* ಮತ್ತಿತರ ಶಾಲಾ ಸಾಧನೆಗಳ ದಾಖಲೆಗಳನ್ನು ಸರಿಯಾಗಿ ಪ್ರದರ್ಶಿಸಲಾಗಿದೆ. |
| A25 | ಎಲ್ಲ ಶಿಕ್ಷಕರು ಕಳೆದ ವರ್ಷ ಎಸ್.ಎಸ್.ಎ ತರಬೇತಿ ಪಡೆದುಕೊಂಡಿದ್ದಾರೆ. |
| A26 | ಶಿಕ್ಷಕರು ಕಳೆದ ವರ್ಷ ಸಂಶೋಧನೆ ನಡೆಸಿದ್ದಾರೆ |

*Karnataka School Quality Assessment Organisation

**ಅಡಿಟಿಪ್ಪಣಿ**

i ಕಲಿಕಾ ಚಪ್ಪರದಲ್ಲಿ ಮಕ್ಕಳ ಕೃತಿಗಳನ್ನು ಒಂದು ಚಪ್ಪರದಿಂದ ನೇತು ಹಾಕಿ ಪ್ರದರ್ಶಿಸಲಾಗುತ್ತದೆ. ನಲಿ ಕಲಿ ತರಗತಿಗಳಲ್ಲೂ ಇದೇ ರೀತಿ ವ್ಯವಸ್ಥೆ ಇರುತ್ತದೆ.

● ಅನುವಾದ: **ಕಿರಣ್ ಮಂಜುನಾಥ್** | ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**



**ರುದ್ರೇಶ್ ಎಸ್,** ಅವರು ಕಳೆದ 20 ವರ್ಷಗಳಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿದ್ದು, ಪ್ರಸ್ತುತ ಪುದುಚೇರಿ ರಾಜ್ಯದಲ್ಲಿ ಕಾರ್ಯಾಚರಣೆಗಳ ಮುಖ್ಯಸ್ಥರಾಗಿದ್ದಾರೆ. 15 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಇವರು, ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ಆರಂಭಿಕ ಭಾಷಾ ಕಲಿಕೆ, ಗಣಿತ ಶಿಕ್ಷಣ, ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಉಪಕ್ರಮ ಮುಂತಾದ ಪ್ರಯತ್ನಗಳಲ್ಲಿ ಜೊತೆಯಾಗಿದ್ದಾರೆ. ರುದ್ರೇಶ್ ಅವರನ್ನು **rudresh@azimpremjifoundation.org** ಮೂಲಕ ಸಂಪರ್ಕಿಸಬಹುದು.

Azim Premji Foundation

# Opportunities to help children learn better and build fulfilling careers in education.

Azim Premji Foundation is hiring
**Resource Persons** and **Schoolteachers.**

## *Eligibility*

**Resource Persons:**

- Graduation with a minimum 5 years of teaching experience OR Postgraduation with a minimum 2 years of teaching experience.
- Candidates with relevant on-field experience in the social sector may also apply.

**Schoolteachers:**

- Bachelor's degree in your subject and teaching degree (B.Ed., D. Ed or D.El. Ed) with at least 2 years of teaching experience.
- An ability to teach in English coupled with knowledge of the local language.

## Job location:

**Chhattisgarh, Jharkhand, Karnataka, Madhya Pradesh, Rajasthan and Uttarakhand**

Scan to know more



**Apply Now!**

To apply now, visit https://azimpremjifoundation.org/content/school-education

Earlier issues of the Learning Curve are available at
https://azimpremjiuniversity.edu.in/learning-curve

Hindi and Kannada issues are available at
https://anuvadasampada.azimpremjiuniversity.edu.in/

To subscribe to the Learning Curve, please fill out this form:
https://bit.ly/4czcJ6a

For suggestions, comments and to share your personal experiences, write to us at:
learningcurve@apu.edu.in

Printed and Published by Sharad Sure, Registrar, on behalf of Azim Premji University, Survey No. 66,
Burugunte Village, Bikkanahalli Main Road, Sarjapura, Bengaluru, Karnataka 562 125

**ಪ್ರಕಟಣೆ**

**ಶಾಲಾ ನಿಯತಕಾಲಿಕೆಗಳ ಮರುರೂಪಿಸುವಿಕೆ**

ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಭಾಗವಾದ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಸಾರ್ವಜನಿಕ ಶಾಲಾ ಶಿಕ್ಷಣಕ್ಕೆ ಮೀಸಲಾಗಿದೆ ಮತ್ತು ಭಾರತದಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ವಿಧಾನಗಳನ್ನು ನಿರಂತರವಾಗಿ ಅನ್ವೇಷಿಸುತ್ತಿದೆ. ಈ ಬದ್ಧತೆಯ ಭಾಗವಾಗಿ, ಶಾಲಾ ಶಿಕ್ಷಕರು, ಶಿಕ್ಷಣ ತಜ್ಞರು ಮತ್ತು ಸಂಪರ್ಕ ಕೊಂಡಿಯಂತೆ ಕಾರ್ಯ ನಿರ್ವಹಿಸುವ ಅನೇಕರಿಗಾಗಿ ಶಿಕ್ಷಣಶಾಸ್ತ್ರ, ಪ್ರಕ್ರಿಯೆಗಳು ಮತ್ತು ವಿದ್ಯಾರ್ಥಿಗಳ ಯೋಗಕ್ಷೇಮದ ಬಗ್ಗೆ ಅಮೂಲ್ಯ ಒಳನೋಟಗಳು, ಅಭಿಪ್ರಾಯಗಳು ಮತ್ತು ದೃಷ್ಟಿಕೋನಗಳನ್ನು ಒದಗಿಸುವ ಗುರಿ ಹೊಂದಿರುವ ನಿಯತಕಾಲಿಕೆಗಳ ಸರಣಿಯನ್ನು ನಾವು ತಯಾರಿಸುತ್ತೇವೆ.ಪ್ರಸ್ತುತ, ವಿಶ್ವವಿದ್ಯಾಲಯ ಶಾಲಾ ಶಿಕ್ಷಣದ ಕುರಿತ, ಅಟ್ ರೈಟ್ ಆಂಗಲ್ಸ್ (ಗಣಿತದ ಬಗ್ಗೆ), ಐ ವಂಡರ್... (ವಿಜ್ಞಾನದ ಬಗ್ಗೆ), ಪಾಠಶಾಲಾ (ಹಿಂದಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣದ ಸಾಮಾನ್ಯ ನಿಯತಕಾಲಿಕೆ) ಮತ್ತು ಲರ್ನಿಂಗ್ ಕರ್ವ್ (ಇಂಗ್ಲಿಷ್, ಹಿಂದಿ ಮತ್ತು ಕನ್ನಡದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣದ ಸಾಮಾನ್ಯ ನಿಯತಕಾಲಿಕೆ) ಎಂಬ ನಾಲ್ಕು ನಿಯತಕಾಲಿಕೆಗಳನ್ನು ಪ್ರಕಟಿಸುತ್ತಿದೆ.

ಡಿಸೆಂಬರ್ 2024 ರ ಮುಂದಿನ ಸಂಚಿಕೆಯಿಂದ, 'ಲರ್ನಿಂಗ್ ಕರ್ವ್', ಸಾರ್ವಜನಿಕ ಶಿಕ್ಷಣದ ಇತರ ಪ್ರಮುಖ ಅಂಶಗಳಾದ ನೀತಿ, ಅದರ ಪರಿಣಾಮ ಮತ್ತು ಅನುಷ್ಠಾನ, ಪಠ್ಯಕ್ರಮ, ಹಣಕಾಸು ಮತ್ತು ಶೈಕ್ಷಣಿಕ ಕ್ಷೇತ್ರದ ಇತರ ಬೆಳವಣಿಗೆಗಳಿಗೆ ಒತ್ತು ನೀಡುತ್ತದೆ. ತನ್ನ ಹೊಸ ಸ್ವರೂಪದಲ್ಲಿ, 'ಲರ್ನಿಂಗ್ ಕರ್ವ್', ಈ ಕ್ಷೇತ್ರಗಳಲ್ಲಿನ ವೈವಿಧ್ಯಮಯ ದೃಷ್ಟಿಕೋನಗಳು, ಹೊಸ ಮತ್ತು ತಿಳುವಳಿಕೆಯುಳ್ಳ ನಿಲುವುಗಳು ಮತ್ತು ಚಿಂತನಶೀಲ ದೃಷ್ಟಿಕೋನಗಳಿಗೆ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

ಪ್ರಾಥಮಿಕ ಶಾಲಾ ಶಿಕ್ಷಣಕ್ಕೆ ಮೀಸಲಾಗಿರುವ ವಿಶ್ವವಿದ್ಯಾಲಯದ ಏಕೈಕ ಸಮಗ್ರ ನಿಯತಕಾಲಿಕವಾದ 'ಪಾಠಶಾಲಾ', ದೇಶಾದ್ಯಂತದ ಓದುಗರಿಗಾಗಿ ಹಿಂದಿ, ಇಂಗ್ಲಿಷ್ ಮತ್ತು ಕನ್ನಡದಲ್ಲಿ ಪ್ರಕಟಣೆಗೊಳ್ಳಲಿದೆ. ಅಲ್ಲದೆ ಈ ನಿಯತಕಾಲಿಕೆ, ಈ ಹಿಂದೆ 'ಲರ್ನಿಂಗ್ ಕರ್ವ್'ನಲ್ಲಿ ಸೇರಿಸಲಾದ ವಿವಿಧ ವಿಷಯಗಳನ್ನೂ ಒಳಗೊಂಡಿರುತ್ತದೆ.

'ಲರ್ನಿಂಗ್ ಕರ್ವ್'ಗಾಗಿ ಓದುಗರ ಸಮುದಾಯವನ್ನು ಬೆಳೆಸುವುದರ ಜೊತೆಗೆ, ಮುಂಬರುವ ವಾರಗಳಲ್ಲಿ, 'ಲರ್ನಿಂಗ್ ಕರ್ವ್'ನ ಓದುಗರು, ಚಂದಾದಾರರು ಮತ್ತು ಪೋಷಕರಿಗೆ 'ಪಾಠಶಾಲಾ' ನಿಯತಕಾಲಿಕೆ ಸುಲಭವಾಗಿ ಲಭ್ಯವಾಗುವಂತೆ ಅವಕಾಶ ಕಲ್ಪಿಸಲಾಗುವುದು.

ನಮ್ಮೆಲ್ಲಾ ನಿಯತಕಾಲಿಕೆಗಳಿಗೆ ನಿಮ್ಮ ನಿರಂತರ ಬೆಂಬಲವನ್ನು ಕುತೂಹಲದಿಂದ ನಿರೀಕ್ಷಿಸುತ್ತೇವೆ.

**ಲರ್ನಿಂಗ್ ಕರ್ವ್**
**ಬದಲಾಗುತ್ತಿದೆ!**
**ಪ್ರಕಟಣೆಗಾಗಿ**
**ಒಳಪುಟ ನೋಡಿ!**

**ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ**
ಸರ್ವೇ ಸಂ. 66, ಬೂರುಗುಂಟೆ ಗ್ರಾಮ
ಬಿಕ್ಕನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ
ಬೆಂಗಳೂರು – 562125

azimpremjiuniversity.edu.in

**ಫೇಸ್‌ಬುಕ್: /azimpremjiuniversity** **ಇನ್‌ಸ್ಟಾಗ್ರಾಂ: @azimpremjiuniv** **X: @azimpremjiuniv**